ಪರವಾನಗಿ ನವೀಕರಿಸದೇ ಸರ್ಕಾರದಿಂದಲೇ ಆ್ಯಪ್ ಅಭಿವೃದ್ಧಿಪಡಿಸಲು ಒತ್ತಾಯ

‘ಒಲಾ, ಉಬರ್ ಬದಲು ಸರ್ಕಾರವೇ ಆ್ಯಪ್ ನಿರ್ವಹಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿರುವ ಒಲಾ ಮತ್ತು ಉಬರ್ ಸಂಸ್ಥೆಗಳ ಪರವಾನಗಿ ನವೀಕರಣ ಅರ್ಜಿ ಸಾರಿಗೆ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ. ಇದೇ ವೇಳೆ ಪರವಾನಗಿ ನವೀಕರಣ ಮಾಡದೆ ಸರ್ಕಾರದಿಂದಲೇ ಆ್ಯಪ್ ಅಭಿವೃದ್ಧಿಪಡಿಸಿ ನಿರ್ವಹಿಸಲು ಚಾಲಕರ ಸಂಘಟನೆಗಳು ಒತ್ತಡ ಹೇರಿವೆ.

ಒಲಾ ಕಂಪನಿಗೆ ನೀಡಿದ್ದ ಪರವಾನಗಿ ಕಳೆದ 2021ರ ಫೆಬ್ರುವರಿಯಲ್ಲಿ ಮುಗಿದಿದ್ದು, ಉಬರ್ ಕಂಪನಿಯ ಪರವಾನಗಿ ಅವಧಿ ಡಿಸೆಂಬರ್‌ನಲ್ಲಿ ಮುಕ್ತಾಯಗೊಂಡಿದೆ. ಶುಲ್ಕ ಪಾವತಿಸಿ ನವೀಕರಣ ಮಾಡಿಕೊಳ್ಳದೆ ಎರಡೂ ಕಂಪನಿಗಳು ಸೇವೆ ಮುಂದುವರಿಸಿದ್ದವು. ಕಂಪನಿಗಳ ಕಚೇರಿಗಳಿಗೆ ನೋಟಿಸ್ ಕಳಿಸಿದ್ದರೂ ಉತ್ತರಗಳು ಬಂದಿರಲಿಲ್ಲ. ಸಾರಿಗೆ ಇಲಾಖೆ ಅಧಿಕಾರಿಗಳ ಕೈಗೆ ಎರಡೂ ಕಂಪನಿಗೆ ಸಂಬಂಧಿಸಿದವರು ಸಿಗದಂತಾಗಿದ್ದರು. ಆದ್ದರಿಂದ ಕಾರುಗಳನ್ನು ಅಡ್ಡಗಟ್ಟಿ ಆ್ಯಪ್ ಆಧಾರಿತ ಸೇವೆ ಒದಗಿಸುತ್ತಿದ್ದ ಚಾಲಕರಿಗೆ ದಂಡ ವಿಧಿಸುವ ಕಾರ್ಯವನ್ನು ಸಾರಿಗೆ ಇಲಾಖೆ ಆರಂಭಿಸಿತ್ತು.

> **ಒಲಾ ಮತ್ತು ಉಬರ್ ಸಂಸ್ಥೆಗಳು ಪರವಾನಗಿ ನವೀಕರಣಕ್ಕೆ ಅರ್ಜಿ ಸಲ್ಲಿಸಿವೆ. ಪರಿಶೀಲನೆ ನಡೆಸಿ ವರದಿ ನೀಡಲು ಅಧಿಕಾರಿಗಳಿಗೆ ತಿಳಿಸಿದ್ದೇನೆ**
> **ಎನ್.ಶಿವಕುಮಾರ್,** ಸಾರಿಗೆ ಆಯುಕ್ತ

ಬಳಿಕ ಪರವಾನಗಿ ನವೀಕರಣಕ್ಕೆ ಕಂಪನಿಗಳು ಅರ್ಜಿ ಸಲ್ಲಿಸಿವೆ. ಅವುಗಳನ್ನು ಪರಿಶೀಲನೆ ನಡೆಸುತ್ತಿರುವ ಸಾರಿಗೆ ಇಲಾಖೆ, ಕೆಲವು ಷರತ್ತುಗಳನ್ನು ವಿಧಿಸಿದೆ. ಆ್ಯಪ್ ನಿರ್ವಹಣೆ, ದರ ನಿಗದಿ, ಚಾಲಕರಿಗೆ ನೀಡುವ ಪಾಲು, ಪ್ರೋತ್ಸಾಹಧನ ವಿಷಯದಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಬಾರದು ಎಂದು ತಿಳಿಸಿದೆ. ಅಲ್ಲದೇ, ಸಾರಿಗೆ ನಿಯಮಗಳನ್ನು ಪಾಲಿಸಲಾಗುತ್ತಿದೆಯೋ, ಇಲ್ಲವೋ ಎಂಬುದರ ಕುರಿತು ತಪಾಸಣೆ ನಡೆಸಿ ವರದಿ ನೀಡಲು ಅಧಿಕಾರಿಗಳ ತಂಡವನ್ನು ನಿಯೋಜಿಸಿದೆ.

ಈ ನಡುವೆ, ಈ ಸಂಸ್ಥೆಗಳ ಪರವಾನಗಿಯನ್ನೇ ನವೀಕರಣ ಮಾಡಬಾರದು ಎಂಬ ಒತ್ತಾಯವನ್ನು ಒಲಾ ಮತ್ತು ಉಬರ್ ಚಾಲಕರ ಸಂಘಟನೆಗಳು ಮಾಡುತ್ತಿವೆ. ‘ಈ ಸಂಸ್ಥೆಗಳು ಕಾರು ಮಾಲೀಕರು ಮತ್ತು ಚಾಲಕರನ್ನು ಶೋಷಣೆ ಮಾಡುತ್ತಿವೆ. ಮನ ಬಂದಂತೆ ದರ ನಿಗದಿ ಮಾಡಲಾಗುತ್ತದೆ. ಕಂಪನಿ ನಡೆಸುವವರು ಕುಳಿತಲ್ಲೇ ಹಣ ಮಾಡಿಕೊಳ್ಳುತ್ತಿದ್ದಾರೆ. ಹಗಲು– ರಾತ್ರಿ ಎನ್ನದೆ ಕಾರು ಚಾಲನೆ ಮಾಡುವ ಚಾಲಕರಿಗೆ ಅರೆಹೊಟ್ಟೆಯಾಗಿದೆ’ ಎಂಬುದು ಟ್ಯಾಕ್ಸಿ ಚಾಲಕರ ಅಳಲು.

‘ಆದ್ದರಿಂದ ಪರವಾನಗಿ ನವೀಕರಣ ಮಾಡುವ ಬದಲು ಸರ್ಕಾರವೇ ಆ್ಯಪ್ ಅಭಿವೃದ್ಧಿಪಡಿಸಿ ನಿರ್ವಹಿಸುವುದು ಸೂಕ್ತ. ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು (ಕೆಎಸ್‌ಟಿಡಿಸಿ) ವಿಮಾನ ನಿಲ್ದಾಣದ ಟ್ಯಾಕ್ಸಿ ಸೇವೆ ನಿರ್ವಹಣೆ ಮಾಡುತ್ತಿದೆ. ಅದೇ ರೀತಿಯಲ್ಲಿ ನಗರದಲ್ಲಿನ ಟ್ಯಾಕ್ಸಿ ಸೇವೆಯನ್ನೂ ನಿರ್ವಹಣೆ ಮಾಡುವುದು ಸೂಕ್ತ. ಪ್ರಯಾಣಿಕರು ಮತ್ತು ಟ್ಯಾಕ್ಸಿ ಚಾಲಕರಿಗೆ ಅನುಕೂಲ ಆಗಲಿದೆ. ಖಾಸಗಿ ಕಂಪನಿಗಳ ಶೋಷಣೆ ತಪ್ಪುತ್ತದೆ’ ಎಂದು ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ಅಭಿಪ್ರಾಯಪಟ್ಟರು.

‘ಟ್ಯಾಕ್ಸಿ ಚಾಲಕರ ಅಭಿವೃದ್ಧಿ ನಿಗಮ ತೆರೆಯಬೇಕು ಎಂಬ ಮನವಿಯನ್ನೂ ಸರ್ಕಾರಕ್ಕೆ ಸಲ್ಲಿಸಿದ್ದೇವೆ. ನಿಗಮ ರಚನೆಯಾದರೆ ಅದರ ಮೂಲಕವೇ ಕಾಲ್ ಸೆಂಟರ್ ತೆರೆದು ಆ್ಯಪ್ ಆಧಾರಿತ ಟ್ಯಾಕ್ಸಿ ಸೇವೆ ಒದಗಿಸಲು ಸಾಧ್ಯ. ಈ ಎಲ್ಲ ವಿಷಯಗಳ ಬಗ್ಗೆ ಸಾರಿಗೆ ಸಚಿವ ಶ್ರೀರಾಮುಲು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ನಮ್ಮ ಸಲಹೆಯನ್ನು ಅವರು ಪರಿಗಣಿಸಿದ್ದಾರೆ’ ಎಂದು ಪಾಷಾ ಹೇಳಿದರು.

‘ಸಾರಿಗೆ ಇಲಾಖೆಯಿಂದ ಆ್ಯಪ್ ಅಭಿವೃದ್ಧಿಪಡಿಸಿ ನಿರ್ವಹಿಸುವ ಪ್ರಸ್ತಾಪ ಇಲ್ಲ. ಸರ್ಕಾರದ ಬೇರೆ ಸಂಸ್ಥೆಗಳು ಆ್ಯಪ್ ಆಧಾರಿತ ಸೇವೆ ಒದಗಿಸಲು ಮುಂದೆ ಬಂದರೆ ಪರವಾನಗಿ ನೀಡಲಾಗುವುದು’ ಎನ್ನುತ್ತಾರೆ ಸಾರಿಗೆ ಇಲಾಖೆ ಅಧಿಕಾರಿಗಳು.

ದಲಿತ ಸಂಘರ್ಷ ಸಮಿತಿ ಒಕ್ಕೂಟದಿಂದ ಪ್ರತಿಭಟನೆ

‘ಜನಸಂಖ್ಯೆಗೆ ತಕ್ಕಂತೆ ಅನುದಾನ ನಿಗದಿಪಡಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ (ಎಸ್.ಸಿ, ಎಸ್.ಟಿ) ಜನಸಂಖ್ಯೆಗೆ ಅನುಗುಣವಾಗಿ 2022–23ನೇ ಸಾಲಿನ ಬಜೆಟ್‌ನಲ್ಲಿ ಅನುದಾನ ನಿಗದಿಪಡಿಸಬೇಕು’ ಎಂದು ಒತ್ತಾಯಿಸಿ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಯಿತು.

ದಲಿತ ಸಂಘರ್ಷ ಸಮಿತಿ ಒಕ್ಕೂಟದಿಂದ ’ಹಕ್ಕೊತ್ತಾಯ ಧರಣಿ’ ಹಮ್ಮಿಕೊಳ್ಳಲಾಗಿತ್ತು. ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು ಸೇರಿದ್ದ ಪ್ರತಿಭಟನಕಾರರು, ನೀಲಿ ಶಾಲು ಧರಿಸಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

‘ಬಾಕಿ ಇರುವ ಎಲ್ಲ ಹಂತದ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ಕೂಡಲೇ ಬಿಡುಗಡೆ ಮಾಡಬೇಕು.

ದಲಿತ ಸಂಘರ್ಷ ಸಮಿತಿ ಒಕ್ಕೂಟದ ಸದಸ್ಯರು ನಗರದ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಎದುರು ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ದಲಿತ ವಿದ್ಯಾರ್ಥಿಗಳ ಆದಾಯ ಮಿತಿ ಸದ್ಯ ₹ 2.50 ಲಕ್ಷವಿದ್ದು, ಇದನ್ನು ₹ 10 ಲಕ್ಷಕ್ಕೆ ಏರಿಕೆ ಮಾಡಬೇಕು’ ಎಂದೂ ಆಗ್ರಹಿಸಿದರು.

‘ದಲಿತ ಸಮುದಾಯದ ಅಭಿವೃದ್ಧಿಗಾಗಿ ವಿವಿಧ ಇಲಾಖೆಗಳಲ್ಲಿ ಮೀಸಲಿಟ್ಟ ಹಣವನ್ನೆಲ್ಲ ಸಮಾಜ ಕಲ್ಯಾಣ ಇಲಾಖೆಗೆ ವರ್ಗಾಯಿಸಬೇಕು. ಏಕ ಗವಾಕ್ಷಿ ವ್ಯವಸ್ಥೆ ಮೂಲಕ ಅಂಥ ಹಣವನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಬೇಕು. ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಸಮರ್ಪಕವಾಗಿ ಖರ್ಚು ಮಾಡದ ಅಧಿಕಾರಿಗಳ ವಿರುದ್ಧ ದೂರು ದಾಖಲಿಸುವ ಸಂಬಂಧ ‘ದೂರು ಸಲ್ಲಿಕೆ ಪ್ರಾಧಿಕಾರ’ ರಚಿಸಬೇಕು. ದಲಿತ ಸಂಘಟನೆಗಳ ಕನಿಷ್ಠ ಇಬ್ಬರು ಮುಖಂಡರನ್ನು ಸದಸ್ಯರನ್ನಾಗಿ ಮಾಡಬೇಕು’ ಎಂದೂ ಅವರು ಒತ್ತಾಯಿಸಿದರು.

‘ಅನುಸೂಚಿತ ಜಾತಿಗಳ ಉಪ ಯೋಜನೆ (ಎಸ್‌ಸಿಪಿ) ಮತ್ತು ಬುಡಕಟ್ಟು ಉಪಯೋಜನೆ (ಟಿಎಸ್‌ಪಿ) ಕಾಯ್ದೆ– 2013ರಲ್ಲಿರುವ ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಿಸುವ 7 (ಡಿ) ನಿಯಮ ತೆಗೆದು ಹಾಕಬೇಕು’ ಎಂದೂ ಪ್ರತಿಭಟನಕಾರರು ಆಗ್ರಹಿಸಿದರು.

‘ಡಿ ಬಾಸ್’ ಘೋಷಣೆಗೆ ಸಿ.ಎಂ ಪೆಚ್ಚು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರಾಭಿಮಾನ, ಅಭಿಮಾನಿಗಳ ಜೈಕಾರ, ರಾಜಕೀಯ ಮೇಳ, ಬೇಡಿಕೆಗಳ ಪಟ್ಟಿ ಮತ್ತು ಭರವಸೆಗಳ ಮಹಾಪೂರಗಳ ನಡುವೆ 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಗುರುವಾರ ಚಾಲನೆ ಸಿಕ್ಕಿತು.

ಕೃಷಿ ವಿಶ್ವವಿದ್ಯಾಲಯದ ಡಾ.ಬಾಬು ರಾಜೇಂದ್ರ ಪ್ರಸಾದ್ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 4.30ಕ್ಕೆ ಆರಂಭವಾಗಬೇಕಿದ್ದ ಕಾರ್ಯಕ್ರಮ ಸುಮಾರು ಒಂದು ಗಂಟೆಯಷ್ಟು ತಡವಾಗಿ ಆರಂಭವಾಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾಷಣ ಆರಂಭಿಸಿದ ಕೆಲ ಕ್ಷಣಗಳಲ್ಲಿ ನಟ ದರ್ಶನ್ ಬಂದರು. ಆ ವೇಳೆಗೆ ಸಭಾಂಗಣದಲ್ಲಿದ್ದ ಅಭಿಮಾನಿಗಳೆಲ್ಲಾ ‘ಡಿ ಬಾಸ್... ಡಿ ಬಾಸ್...’ ಎಂದು ಜೈಕಾರ ಹಾಕಲಾರಂಭಿಸಿದರು. ದರ್ಶನ್ ವೇದಿಕೆಯಲ್ಲಿ ಕುಳಿತರೂ ಕೂಗು ಕಡಿಮೆಯಾಗಲಿಲ್ಲ. ಪೆಚ್ಚಾದ ಮುಖ್ಯಮಂತ್ರಿ ತಮ್ಮ ಭಾಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿ ವಾಪಸ್ ತಮ್ಮ ಆಸನದಲ್ಲಿ ಕುಳಿತರು.

ಬಳಿಕ, ಮೈಕ್ ಬಳಿ ತೆರಳಿದ ದರ್ಶನ್, ‘ಕರ್ನಾಟಕದ ಮುಖ್ಯಮಂತ್ರಿ ನಮ್ಮೆಲ್ಲರಿಗಿಂತ ದೊಡ್ಡವರು. ಅವರು ಮಾತನಾಡುವಾಗ ಮರ್ಯಾದೆ ಕೊಡಬೇಕು. ಎಲ್ಲರೂ ಸುಮ್ಮನಿರಬೇಕು’ ಎಂದು ಅಭಿಮಾನಿಗಳಿಗೆ ಸೂಚಿಸಿದರು. ಆ ಬಳಿಕ ಮುಖ್ಯಮಂತ್ರಿ ಮಾತು ಮುಂದುವರಿಸಿದರು.



ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಾತನಾಡಿದರು –ಪ್ರಜಾವಾಣಿ ಚಿತ್ರ

‘ದರ್ಶನ್ ನಮ್ಮ ಹುಡುಗ. ನಿಮಗಿಂತ ನನಗೆ ಆತನ ಬಗ್ಗೆ ಚೆನ್ನಾಗಿ ಗೊತ್ತು. ಅವನಿಗಿರುವ ವನ್ಯಜೀವಿಗಳ ಮೇಲಿನ ಕಾಳಜಿ, ಅವನ ವನ್ಯಜೀವಿ ಛಾಯಾಗ್ರಹಣ ನನಗೆ ತುಂಬಾ ಇಷ್ಟ’ ಎಂದು ಮುಖ್ಯಮಂತ್ರಿ ಹೇಳಿದರು.

ಸಚಿವ ಮುನಿರತ್ನ ಮಾತನಾಡಿ, ‘ರಾಜ್ಯ ಬಜೆಟ್‌ನಲ್ಲಿ ಚಿತ್ರೋದ್ಯಮಕ್ಕೆ ಎಂದೂ ಮರೆಯಲಾಗದ ಕೊಡುಗೆ ಸಿಗಲಿದೆ’ ಎಂದು ಹೇಳಿದರು.

ಕಾರ್ಯಕ್ರಮ ನಡೆಯುವ ವೇಳೆ ಸಭಾಂಗಣದಲ್ಲಿ ಒಂದು ಗುಂಪು ಸಿ.ಎಂಗೆ ಜೈ ಎನ್ನುತ್ತಲೂ, ಇನ್ನೊಂದು ಗುಂಪು ವಿಷ್ಣುವರ್ಧನ್‌ಗೆ ಜೈಕಾರ ಹಾಕುತ್ತಲೂ ಮತ್ತೊಂದು ಗುಂಪು ಡಿ... ಬಾಸ್ ಎಂದು ಕೂಗುತ್ತಲೂ ಪೈಪೋಟಿಗಿಳಿದಿದ್ದವು. ನಟ ದಿವಂಗತ ಪುನೀತ್ ರಾಜ್‌ಕುಮಾರ್ ಪ್ರಸ್ತಾಪ ಬಂದಾಗಲಂತೂ ಗೌರವಪೂರ್ಣವಾದ ನೀರವ ಮೌನ ಸಭಾಂಗಣದಲ್ಲಿ ಆವರಿಸುತ್ತಿತ್ತು.

ಸಭಾಂಗಣದ ಹೊರಗೆ ಜಗ್ಗಲಿಗೆ ಮೇಳ, ಬೇಡರ ಕುಣಿತ, ಗೊರವರ ಕುಣಿತ, ಯಕ್ಷಗಾನದ ವೇಷಗಳು ಕಲಾ ಪ್ರದರ್ಶನದ ಮೂಲಕ ಗಣ್ಯರನ್ನು ಸ್ವಾಗತಿಸಿದವು. ಸಭಾ ಕಾರ್ಯಕ್ರಮದ ಬಳಿಕ ಕನ್ನಡದ ಸೂಪರ್‌ಹಿಟ್ ಹಾಡುಗಳಿಗೆ ಕಲಾವಿದರು ಹೆಜ್ಜೆ ಹಾಕಿದರು. ವೇದಿಕೆಯ ತೆರೆಯ ಮೇಲೆ ಆಯಾ ಚಿತ್ರಗಳ ದೃಶ್ಯ, ವರ್ಣವೈಭವ ಮೂಡಿತು. ಪ್ರತಿ ಹಾಡಿನಲ್ಲಿ ತಮ್ಮ ನೆಚ್ಚಿನ ನಟ ನಟಿಯರನ್ನು ಕಂಡಷ್ಟೇ ಪುಳಕಗೊಂಡ ಅಭಿಮಾನಿಗಳು ಶಿಳ್ಳೆ, ಚಪ್ಪಾಳೆ ಹೊಡೆಯುತ್ತಿದ್ದರು.

ಚಿತ್ರೋತ್ಸವದಲ್ಲಿ ಇಂದು

ಒರಾಯನ್ ಮಾಲ್: ಇಲ್ಲಿನ 11 ತೆರೆಗಳ ಪೈಕಿ ಮೊದಲ ಮೂರು ತೆರೆಗಳಲ್ಲಿ ತೀರ್ಪುಗಾರರಿಗಾಗಿ ಸ್ಪರ್ಧಾತ್ಮಕ ಚಿತ್ರಗಳ ಪ್ರದರ್ಶನ ನಡೆಯಲಿದೆ. ಬೆಳಿಗ್ಗೆ 10ರಿಂದ, 4ರಿಂದ 10ನೇ ತೆರೆಯಲ್ಲಿ ‘ಪಡ್ಡಾಯಿ’, ‘ಶಿವಾಜಿ ಸುರತ್ಕಲ್’, ‘ಪೊಗರು’, ‘ಬಡವ ರಾಸ್ಕಲ್’, ‘ರತ್ನನ್ ಪ್ರಪಂಚ’ ಸೇರಿದಂತೆ ವಿವಿಧ ಭಾಷೆಗಳ ಅತ್ಯುತ್ತಮ ಚಿತ್ರಗಳ ಪ್ರದರ್ಶನ. ಮಧ್ಯಾಹ್ನ 3ರಿಂದ ತೆರೆ ಸಂಖ್ಯೆ 11ರಲ್ಲಿ ತುಳು ಚಿತ್ರರಂಗಕ್ಕೆ 50 ವರ್ಷದ ಅವಲೋಕನ ವಿಚಾರಗೋಷ್ಠಿ, ಸಂಜೆ 5ಕ್ಕೆ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ಪುಸ್ತಕ ಬಿಡುಗಡೆ. 5.45ರಿಂದ ಚಿತ್ರಗಳ ಪ್ರದರ್ಶನ.

ಸುಚಿತ್ರಾ ಸಿನಿ ಅಕಾಡೆಮಿ: ಬೆಳಿಗ್ಗೆ 10ಕ್ಕೆ ಸಾರಾ ವಜ್ರ, ಮಧ್ಯಾಹ್ನ 1ಗಂಟೆಗೆ ಮಾನ (ಕನ್ನಡ) ಚಿತ್ರಗಳ ಪ್ರದರ್ಶನ. ಮಧ್ಯಾಹ್ನ 3.30 ರಿಂದ ವಿಶ್ವ ಸಿನಿಮಾಗಳ ಪ್ರದರ್ಶನ

ಕಲಾವಿದರ ಸಂಘ ಚಾಮರಾಜಪೇಟೆ (ಡಾ.ರಾಜ್‌ಕುಮಾರ್ ಭವನ): ಮಧ್ಯಾಹ್ನ 1ರಿಂದ ‘ಮುನ್ನುಡಿ’, ‘ಕೇಕ್’, ‘ಗವಿಸಿದ್ಧ’ ಚಿತ್ರಗಳ ಪ್ರದರ್ಶನ

ಬಿಎಂಟಿಸಿ: ₹1 ಸಾವಿರ ಕೋಟಿ ಅನುದಾನ ನೀಡಲು ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಿಳೆಯರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು ಮತ್ತು ತೃತೀಯ ಲಿಂಗಿ ಸಮುದಾಯದವರು ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಅವಕಾಶ ಕಲ್ಪಿಸಬೇಕು. ಅದಕ್ಕಾಗಿ ಬಜೆಟ್‌ನಲ್ಲಿ ಬಿಎಂಟಿಸಿಗೆ ₹1 ಸಾವಿರ ಕೋಟಿ ಅನುದಾನ ನಿಗದಿ ಮಾಡಬೇಕು’ ಎಂದು ಮುಖ್ಯಮಂತ್ರಿಗೆ ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ ಮನವಿ ಸಲ್ಲಿಸಿತು.

ಭಾರತದ ಯಾವುದೇ ನಗರಗಳಲ್ಲಿ ಇರುವ ಬಸ್ ಟಿಕೆಟ್ ದರಕ್ಕಿಂತ ಬಿಎಂಟಿಸಿ ಬಸ್‌ನಲ್ಲಿ ದುಬಾರಿ ದರ ಇದೆ. ಪುಣೆ ಮತ್ತು ದೆಹಲಿಯಲ್ಲಿ ಐದು ಕಿಲೋ ಮೀಟರ್ ದೂರಕ್ಕೆ ಪ್ರಯಾಣ ದರ ₹10 ಇದ್ದರೆ, ಮುಂಬೈನಲ್ಲಿ ₹5, ಚೆನ್ನೈನಲ್ಲಿ ₹6 ಇದೆ. ಆದರೆ, ಬೆಂಗಳೂರಿನಲ್ಲಿ ₹15 ಇದೆ ಎಂದು ಪ್ರಯಾಣಿಕರ ವೇದಿಕೆ ಅಂಕಿ– ಅಂಶ ನೀಡಿತು.

‘ಸಾರಿಗೆ ವೆಚ್ಚ ದುಬಾರಿ ಆಗಿರುವುದರಿಂದ ಆರೋಗ್ಯ, ಪೌಷ್ಟಿಕ ಆಹಾರ ಹಾಗೂ ಶಿಕ್ಷಣದ ವೆಚ್ಚಗಳನ್ನು ಅನಿವಾರ್ಯವಾಗಿ ಜನ ಕಡಿತ ಮಾಡಬೇಕಾಗುತ್ತಿದೆ. ಖಾಸಗಿ ವಾಹನ ಬಿಟ್ಟು ಬಸ್ ಉಪಯೋಗಿಸುವಂತೆ ಮಾಡಲು ದರ ಕಡಿಮೆ ಮಾಡಬೇಕು ಎಂಬ ಸಾರ್ವಜನಿಕರ ಅಭಿಪ್ರಾಯವಿದೆ. ಇತರ ರಾಜ್ಯಗಳಂತೆ ಬೆಂಗಳೂರಿನಲ್ಲೂ ಮಹಿಳೆಯರಿಗೆ ಬಸ್ ಸೇವೆ ಉಚಿತ ಇರಬೇಕು. ಬಿಎಂಟಿಸಿ ಸಂಸ್ಥೆಯನ್ನು ಲಾಭ– ನಷ್ಟದ ದೃಷ್ಟಿಯಿಂದ ನೋಡಬಾರದು’ ಎಂದು ಮನವಿಯಲ್ಲಿ ತಿಳಿಸಿದೆ.

ಈ ಸಂಬಂಧ ಸಾರ್ವಜನಿಕರ ಅಭಿಪ್ರಾಯ ಸಂಗ್ರಹ ಮಾಡಿದಾಗ 6 ಸಾವಿರಕ್ಕೂ ಹೆಚ್ಚು ಜನ ಈ ಬೇಡಿಕೆಗಳನ್ನು ಒಪ್ಪಿ ಸಹಿ ಹಾಕಿದ್ದಾರೆ. ಬಿಎಂಟಿಸಿ ಬಸ್ ಟಿಕೆಟ್ ದರಗಳನ್ನು ಸಾಮಾನ್ಯ ಜನರಿಗೆ ಅರ್ಧದಷ್ಟು ಕಡಿಮೆಗೊಳಿಸಬೇಕು. ವಿದ್ಯಾರ್ಥಿಗಳಿಗೆ ಉಚಿತ ಪಾಸ್ ನೀಡಿ ನಗರದ ಯಾವ ಭಾಗಕ್ಕಾದರೂ ಸಂಚರಿಸಲು ಅವಕಾಶ ನೀಡಬೇಕು. ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಮನವಿ ಮಾಡಿದೆ.

ಶಾಸಕ ಪರಮೇಶ್ವರ್ ನಾಯ್ಕ್‌ಗೆ ಸಮನ್ಸ್

ಬೆಂಗಳೂರು: ಕೋವಿಡ್ ನಿಯಮ ಉಲ್ಲಂಘಿಸಿ 2020ರ ಜೂನ್‌ನಲ್ಲಿ ಪುತ್ರನ ಮದುವೆ ಮಾಡಿದ್ದ ಹೂವಿನಹಡಗಲಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಪಿ.ಟಿ. ಪರಮೇಶ್ವರ್ ನಾಯ್ಕ ಮತ್ತು ಅವರ ಪುತ್ರ ಪಿ.ಟಿ. ಭರತ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಸರ್ಕಾರಿ ಅಧಿಕಾರಿ ಕೆ.ಶ್ರೀಧರ್ ಸಲ್ಲಿಸಿದ್ದ ದೂರಿನ ವಿಚಾರಣೆ ನಡೆಸಿದ್ದ, 62ನೇ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹಾಗೂ ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಪ್ರೀತ್. ಜೆ ಆದೇಶಿಸಿದ್ದಾರೆ.

ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 188 ಮತ್ತು 269 ಹಾಗೂ ವಿಪತ್ತು ನಿರ್ವಹಣಾ ಕಾಯ್ದೆಯ ಕಲಂ 51(ಬಿ) ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸಲಾಗಿದ್ದು, ಮಾರ್ಚ್ 21ರಂದು ಹಾಜರಾಗುವಂತೆ ಸಮನ್ಸ್ ಜಾರಿಗೊಳಿಸಲಾಗಿದೆ.

ಹರಪನಹಳ್ಳಿ ತಾಲ್ಲೂಕಿನ ಲಕ್ಷ್ಮೀಪುರದಲ್ಲಿ ನಡೆದಿದ್ದ ಭರತ್ ವಿವಾಹದಲ್ಲಿ ಸಚಿವರು ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು. ಕೋವಿಡ್ ಮಾರ್ಗಸೂಚಿಯ ಪ್ರಕಾರ 50ಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತಿರಲಿಲ್ಲ.

16ರಂದು ನಂಜನಗೂಡು ದೊಡ್ಡಜಾತ್ರೆ

ಪ್ರಜಾವಾಣಿ ವಾರ್ತೆ

ನಂಜನಗೂಡು: ಇಲ್ಲಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಮಾರ್ಚ್ 16ರ ಬುಧವಾರ ಗೌತಮ ರಥೋತ್ಸವ, ದೊಡ್ಡ ಜಾತ್ರೆಯು ನಡೆಯಲಿದೆ.

ದೇವಾಲಯದ ದಾಸೋಹ ಭವನದಲ್ಲಿ ಜಾತ್ರೆ ಸಂಬಂಧ ಶಾಸಕ ಹರ್ಷವರ್ಧನ್ ನೇತೃತ್ವದಲ್ಲಿ ಗುರುವಾರ ಪೂರ್ವಭಾವಿ ಸಭೆ ನಡೆಯಿತು. ಅಗತ್ಯ ಸಿದ್ಧತೆ, ರಥದ ಸುರಕ್ಷತೆ, ದಾಸೋಹ ಹಾಗೂ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು.

ಕೋವಿಡ್ ಕಾರಣ ಎರಡು ವರ್ಷಗಳಿಂದ ಜಾತ್ರೆಯನ್ನು ಸರಳವಾಗಿ ನಡೆಸಲಾಗಿತ್ತು. ಮಾರ್ಗಸೂಚಿ ಅನ್ವಯ ಈ ಬಾರಿ ಅದ್ಧೂರಿಯಾಗಿ ಜಾತ್ರೆ ನಡೆಯಲಿದೆ.

ಶುಕ್ರವಾರ, ಮಾರ್ಚ್ 4, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಾಣಿ ಪ್ರೀತಿ

ಯುದ್ಧಪೀಡಿತ ಉಕ್ರೇನ್‌ನಿಂದ ಹಂಗೆರಿಯ ಜಹೋನಿ ಪಟ್ಟಣಕ್ಕೆ ಗುರುವಾರ ವಲಸೆ ಬಂದಿದ್ದ ವ್ಯಕ್ತಿಯೊಬ್ಬರು ಸಾಕುನಾಯಿಯನ್ನು ಬೆನ್ನಿಗೇರಿಸಿಕೊಂಡಿದ್ದರು



ಮಹಾಶಿವರಾತ್ರಿ ಅಂಗವಾಗಿ ಗುರುವಾರ ಮಲೇಬೆನ್ನೂರು ಸಮೀಪದ ಉಕ್ಕಡಗಾತ್ರಿ ಕರಿಬಸವೇಶ್ವರ ರಥೋತ್ಸವ ನೆರವೇರಿತು. ನಂದಿಗುಡಿ ವೃಷಭಪುರಿ ಸಂಸ್ಥಾನದ ಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ರಥಪೂಜೆ ನೆರವೇರಿಸಿದರು (ಮೊದಲನೇ ಚಿತ್ರ). ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಮಹದೇಶ್ವರ ಸ್ವಾಮಿ ರಥೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡರು (ಎರಡನೇ ಚಿತ್ರ) ಗೋಕರ್ಣದಲ್ಲಿ ಮಹಾಬಲೇಶ್ವರನ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು. ಸ್ಥಳೀಯರೊಂದಿಗೆ ಅನೇಕ ವಿದೇಶಿಯರೂ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು(ಮೂರನೇ ಚಿತ್ರ) –ಪ್ರಜಾವಾಣಿ ಚಿತ್ರಗಳು

ಮೇಕೆದಾಟು ಪಾದಯಾತ್ರೆ ಅಂತ್ಯ; ಹೋರಾಟ ಆರಂಭ– ಕಾಂಗ್ರೆಸ್

ಚುನಾವಣಾ ಸಮರಾಭ್ಯಾಸಕ್ಕೆ 'ಕೈ' ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಗೆ ಇನ್ನೂ ವರ್ಷ ಬಾಕಿ ಇರುವಾಗಲೇ ತಿಕ್ಕಾಟ– ತಿರುಗೇಟಿನ 'ರಾಜಕೀಯ' ಆಯಾಮಗಳನ್ನು ಪಡೆದ ಕಾಂಗ್ರೆಸ್ಸಿನ 'ಮೇಕೆದಾಟು ಪಾದಯಾತ್ರೆ' ಗುರುವಾರ ಭರ್ಜರಿಯಾಗಿ ಸಮಾಪ್ತಿಗೊಂಡಿದೆ. 'ನಮ್ಮ ನೀರು ನಮ್ಮ ಹಕ್ಕು' ಎಂದು ಎರಡು ಹಂತಗಳಲ್ಲಿ ಉರಿ ಬಿಸಿಲಿನಲ್ಲಿ ಬೆವರಿಳಿಸಿದ 'ಕೈ' ನಾಯಕರ ಈ ನಡಿಗೆ, ಮುಂದಿನ ಚುನಾವಣೆಯ 'ಸಮರಾಭ್ಯಾಸ'ಕ್ಕೂ ಚಾಲನೆ ಕೊಡುವ ರೀತಿಯಲ್ಲಿ ಮುಕ್ತಾಯಗೊಂಡಿದೆ.

ಸಮಾವೇಶದ ಬೃಹತ್ ವೇದಿಕೆಯಲ್ಲಿ ಪರಸ್ಪರ 'ಕೈ' ಹಿಡಿದು, ಎತ್ತಿ ಒಗ್ಗಟ್ಟಿನ ಸಂಕೇತ ತೋರಿಸಿದ ಕಾಂಗ್ರೆಸ್ ನಾಯಕರು, 'ಯೋಜನೆ ಅನುಷ್ಠಾನ ವಿಳಂಬಕ್ಕೆ ಡಬ್ಬಲ್ ಎಂಜಿನ್ (ರಾಜ್ಯ– ಕೇಂದ್ರ) ಸರ್ಕಾರವೇ ಕಾರಣ' ಎಂದು ಗುಡುಗಿದರು. 'ಅಧಿಕಾರಕ್ಕಾಗಿ ಅಲ್ಲ, ನೀರಿನ ಹಕ್ಕಿಗಾಗಿ ಹಮ್ಮಿಕೊಂಡ ಈ ಹೋರಾಟವಿದು. ಈ ಹೋರಾಟ ನಿರಂತರವಾಗಿ ಮುಂದುವರಿಯಲಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆಯಾದಿ ನಾಯಕರು ರೊಚ್ಚಿಗೆದ್ದು, ಬಿಜೆಪಿ ವಿರುದ್ಧ ಅಬ್ಬರಿಸಿದರು.

ಕಾವೇರಿ– ಅರ್ಕಾವತಿ ನದಿ 'ಸಂಗಮ'ದಿಂದ ಜ. 9ರಂದು ಆರಂಭಗೊಂಡಿದ್ದ ಪಾದಯಾತ್ರೆ, ಕೋವಿಡ್ ಮೂರನೇ ಅಲೆ ನಿಯಂತ್ರಿಸಲು ರಾಜ್ಯ ಸರ್ಕಾರ ವಿಧಿಸಿದ್ದ ರಾತ್ರಿ, ಕರ್ಫ್ಯೂ, ಕಠಿಣ ನಿರ್ಬಂಧ, ಹೈಕೋರ್ಟ್ ಸೂಚನೆಯ ಕಾರಣಕ್ಕೆ ಐದನೇ ದಿನದಲ್ಲಿ ರಾಮನಗರದಲ್ಲಿ ಸ್ಥಗಿತಗೊಂಡಿತ್ತು. 'ಪಾದಯಾತ್ರೆ ಹತ್ತಿಕ್ಕಲೆಂದೇ ಬಿಜೆಪಿ ನಿರ್ಬಂಧಗಳನ್ನು ವಿಧಿಸಿದೆ' ಎಂಬ ಕಾಂಗ್ರೆಸ್ ಆರೋಪ ಕೆಲವು ದಿನ ರಾಜಕೀಯ ಬಣ್ಣ ಪಡೆದು ವಾಕ್ಸಮರವನ್ನೇ ಸೃಷ್ಟಿಸಿತ್ತು. ರಾಮನಗರದಿಂದ ಮತ್ತೆ ಫೆ. 27ರಂದು ಆರಂಭಗೊಂಡ ಎರಡನೇ ಹಂತ 'ಮೇಕೆದಾಟು ಪಾದಯಾತ್ರೆ 2.0' ಐದು ದಿನಗಳ ಸುತ್ತಾಟದ ಬಳಿಕ ಅಂತ್ಯ ಕಂಡಿದೆ.ಮೇಕೆದಾಟು ಯೋಜನೆಯ ಅನುಷ್ಠಾನಕ್ಕೆ ಆಗ್ರಹಿಸಿ ಪಾದಯಾತ್ರೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್– ಬಿಜೆಪಿ ಪರಸ್ಪರ ಕೆಸರೆರಚಾಟಕ್ಕೆ ಇಳಿದಿದ್ದವು. ಯೋಜನೆಜಾರಿ ವಿಚಾರದಲ್ಲಿ ಪಾದಯಾತ್ರೆಯುದ್ದಕ್ಕೂ ಬಿಜೆಪಿ ವಿರುದ್ಧ ವಾಕ್ಸಮರವನ್ನೇ ನಡೆಸಿದ್ದ ಕಾಂಗ್ರೆಸ್ ನಾಯಕರು, ಬಸವನಗುಡಿಯ ನ್ಯಾಷನಲ್ ಮೈದಾನದಲ್ಲಿ ನಡೆದ ಗುರುವಾರ ನಡೆದ ಸಮಾರೋಪ ಸಮಾವೇಶಕ್ಕೆ ಸೇರಿದ್ದ 10 ಸಾವಿರಕ್ಕೂ ಹೆಚ್ಚು ಜನರು ಉದ್ದೇಶಿಸಿ ಮಾತನಾಡುವ ವೇಳೆ ಮತ್ತಷ್ಟು ಆಕ್ರೋಶಭರಿತರಾದರು.

ಬೆಂಗಳೂರಿಗೆ ಕುಡಿಯುವ ನೀರಿನ ಅವಶ್ಯಕತೆಯ ಬಗ್ಗೆ ಭಾವನಾತ್ಮಕವಾಗಿ ಉಲ್ಲೇಖಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಈ ಹೋರಾಟ ಇಂದಿಗೇ ಅಂತ್ಯವಾಗುವುದಿಲ್ಲ. ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ, ಕರಾವಳಿ ಕರ್ನಾಟಕ, ಮಲೆನಾಡು ಕರ್ನಾಟಕದಲ್ಲೂ ಚಳವಳಿ ಆರಂಭಿಸುತ್ತೇವೆ' ಎಂದರು.

ನಗಾರಿ ಬಾರಿಸುವ ಮೂಲಕ ಮೇಕೆದಾಟು ಪಾದಯಾತ್ರೆ ಸಮಾರೋಪ ಸಮಾರಂಭಕ್ಕೆ ಚಾಲನೆ ನೀಡಿದ ಕಾಂಗ್ರೆಸ್ ನಾಯಕರು. ಕಾರ್ಯಕ್ರಮದಲ್ಲಿ ನಂಜಾವಧೂತ ಸ್ವಾಮೀಜಿ ಹಾಗೂ ವಚನಾನಂದ ಸ್ವಾಮೀಜಿ ಇದ್ದರು– ಪ್ರಜಾವಾಣಿ ಚಿತ್ರ

'ಪ್ರತಿಷ್ಠೆ ಬೇಡ; ಅವಶ್ಯಕತೆ ವಿಚಾರ'

ವೇದಿಕೆಯಲ್ಲಿದ್ದ ಪಟ್ಟನಾಯಕನಹಳ್ಳಿ ಸ್ಪಟಿಕಪುರಿ ನಂಜಾವಧೂತ ಸ್ವಾಮೀಜಿ ಮತ್ತು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಮೇಕೆದಾಟು ಯೋಜನೆ ಅನುಷ್ಠಾನ ಆಗಲೇಬೇಕು ಎಂದು ಪ್ರತಿಪಾದಿಸಿದರು.

'ನಾಡು, ನುಡಿ, ನೆಲ, ಜಲ ವಿಷಯಗಳು ಬಂದಾಗ ಇತರ ರಾಜ್ಯಗಳು ಎಲ್ಲ ಪ್ರತಿಷ್ಠೆಗಳನ್ನು ಬದಿಗಿಟ್ಟು, ಇಡೀ ನಾಡೇ ಒಂದು ಪಕ್ಷವಾಗಿ ತಮ್ಮ ಪಾಲಿಗಾಗಿ ಹೋರಾಟ ಮಾಡುವುದನ್ನು ನೋಡಿದ್ದೇವೆ. ಅದೇ ರೀತಿ ಈ ನಾಡಿನಲ್ಲೂ ನಮ್ಮ ಹಕ್ಕಿಗಾಗಿ, ನಮ್ಮ ಪಾಲಿಗಾಗಿ ಹೋರಾಟ ಆಗಬೇಕಿದೆ. ಮೋದಿ ಮೇಲೆ ವಿಶೇಷ ಪ್ರೀತಿ ಇಟ್ಟು 25 ಜನ ಸಂಸದರನ್ನ ಜನರು ಕಳುಹಿಸಿದ್ದಾರೆ' ಎಂದು ನಂಜಾವಧೂತ ಸ್ವಾಮೀಜಿ ಹೇಳಿದರು.

'ನೀರು ಪ್ರತಿಷ್ಠೆಯ ವಿಚಾರವಲ್ಲ. ಅವಶ್ಯಕತೆಯ ವಿಚಾರ. ವ್ಯಕ್ತಿ, ಪಕ್ಷ ಯಾವುದೇ ಇರಲಿ. ಇಂಥ ಹೋರಾಟಕ್ಕೆ ನಮ್ಮ ಸಹಕಾರ (ಸ್ವಾಮೀಜಿಗಳ) ಇದ್ದೇ ಇರುತ್ತದೆ' ಎಂದು ವಚನಾನಂದ ಸ್ವಾಮೀಜಿ ಹೇಳಿದರು.

ಮೇಕೆದಾಟು ಯೋಜನೆ ಶೀಘ್ರದಲ್ಲಿ ಜಾರಿಗೊಳಿಸಬೇಕು. ಇಲ್ಲದೇ ಇದ್ದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಜನ ಅಧಿಕಾರದಿಂದ ಕಿತ್ತೊಗೆಯುವ ದಿನ ದೂರವಿಲ್ಲ
ರಣದೀಪ್ ಸಿಂಗ್ ಸುರ್ಜೇವಾಲಾ
ಕಾಂಗ್ರೆಸ್ ರಾಜ್ಯ ಉಸ್ತುವಾರಿ

ರಾಜ್ಯದಲ್ಲಿರುವ ಬಿಜೆಪಿ ಸರ್ಕಾರಕ್ಕೆ ಪ್ರಧಾನಿ ಮೋದಿ ಮುಂದೆ ನಿಂತು ಮಾತನಾಡುವ ಧಮ್ ಇಲ್ಲ. ಹೇಡಿಗಳ ಸರ್ಕಾರವಿದು. ದ್ವೇಷದ ರಾಜಕಾರಣ ಮಾಡುತ್ತಿದೆ
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಮೇಕೆದಾಟು ಯೋಜನೆಗೆ ಪರಿಸರ ಸಚಿವಾಲಯದ ನಿರಕ್ಷೇಪಣಾ ಪತ್ರವಷ್ಟೇ ಬೇಕಿದೆ. ಆದರೆ, ಅದನ್ನು ತರಲು ಡಬಲ್ ಎಂಜಿನ್ ಸರ್ಕಾರಕ್ಕೆ ಆಗುತ್ತಿಲ್ಲ.
ಮಲ್ಲಿಕಾರ್ಜುನ ಖರ್ಗೆ
ರಾಜ್ಯ ಸಭೆ ವಿರೋಧ ಪಕ್ಷದ ನಾಯಕ

ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರ ಅವಕಾಶ

ಪ್ರತಿಭಟನೆಗೆ ಹೈಕೋರ್ಟ್ ಲಗಾಮು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಸ್ವಾತಂತ್ರ್ಯ ಉದ್ಯಾನ (ಫ್ರೀಡಂ ಪಾರ್ಕ್) ಹೊರತುಪಡಿಸಿ ಬೇರಾವುದೇ ಭಾಗದಲ್ಲಿ, ರಾಜಕೀಯ ಅಥವಾ ರಾಜಕೀಯೇತರ ಸಂಘಟನೆಗಳು ಮೆರವಣಿಗೆ, ಪ್ರತಿಭಟನೆ, ಬಹಿರಂಗ ಸಭೆ ನಡೆಸದಂತೆ ಸರ್ಕಾರ ಖಾತರಿಪಡಿಸಬೇಕು' ಎಂದು ಹೈಕೋರ್ಟ್ ಮಹತ್ವದ ಆದೇಶ ಹೊರಡಿಸಿದೆ.

ಈ ಕುರಿತಂತೆ ಹೈಕೋರ್ಟ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ, 'ತಕ್ಷಣವೇ ರಾಜ್ಯ ಸರ್ಕಾರ ಈ ಆದೇಶವನ್ನು ಜಾರಿಗೆ ತರಬೇಕು. ಆದೇಶದ ಪರಿಪಾಲನೆ ಕುರಿತಂತೆ ಕೈಗೊಂಡ ಕ್ರಮಗಳ ಬಗ್ಗೆ ಕೋರ್ಟ್‌ಗೆ ವರದಿ ಸಲ್ಲಿಸಬೇಕು' ಎಂದು ನಿರ್ದೇಶಿಸಿದೆ.

'ಸ್ವಾತಂತ್ರ್ಯ ಉದ್ಯಾನದಲ್ಲಿ ಸಂಘಟಿತ ರೂಪದಲ್ಲಿ ಪ್ರತಿಭಟನೆ, ಧರಣಿ, ಸಭೆ ನಡೆಸುವ ಮೂಲಕ ವಾಹನ ಸಂಚಾರ ಹೆಚ್ಚಿರುವ ಸಮಯದಲ್ಲಿ ಯಾವುದೇ ರೀತಿಯ ಸಮಸ್ಯೆಯಾಗದಂತೆ ಸರ್ಕಾರ ನೋಡಿಕೊಳ್ಳಬೇಕು. ಒಂದೊಮ್ಮೆ ಅಂತಹ ಬೆಳವಣಿಗೆ ಕಂಡುಬಂದರೆ ತಕ್ಷಣವೇ ಅದಕ್ಕೆ ನಿರ್ಬಂಧ ವಿಧಿಸಬೇಕು' ಎಂದು ನ್ಯಾಯಪೀಠ ತಾಕೀತು ಮಾಡಿದೆ.

'ಕರ್ನಾಟಕ ಪೊಲೀಸ್ ಕಾಯ್ದೆ-1963ರ ಕಲಂ 103 ಮತ್ತು ಭಾರತೀಯ ದಂಡ ಸಂಹಿತೆ (ಐಪಿಸಿ) ಕಲಂ 188ರ ಅಡಿ ಇ-ಗೆಜೆಟೆಡ್ ನಿಯಮಗಳನ್ನು ಜಾರಿಗೊಳಿಸುವ ಹೊಣೆ ಸಂಬಂಧಪಟ್ಟ ಪೊಲೀಸ್ ಇನ್‌ಸ್ಪೆಕ್ಟರ್ ಮೇಲಿದೆ. ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಇನ್‌ಸ್ಪೆಕ್ಟರ್ ಕ್ರಮ ಕೈಗೊಳ್ಳಬಹುದು' ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಏಪ್ರಿಲ್ 5ಕ್ಕೆ ಮುಂದೂಡಿದೆ.

ಮೆರವಣಿಗೆ, ಪ್ರತಿಭಟನೆಗಳಿಂದ ಸಂಚಾರ ದಟ್ಟಣೆ ಪರಿಣಾಮ ಸಾರ್ವಜನಿಕರಿಗೆ ಸಮಸ್ಯೆಯಾಗುತ್ತಿರುವ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಬರೆದಿದ್ದ ಪತ್ರದ ಅನುಸಾರ ಈ ಪಿಐಎಲ್ ದಾಖಲಿಸಿಕೊಳ್ಳಲಾಗಿದೆ.

'ಉಪಟಳ ನಿಯಂತ್ರಿಸಲು ಇದು ಸಕಾಲ'

'ನಗರದಲ್ಲಿ ಎಲ್ಲೆಂದರಲ್ಲಿ ಪ್ರತಿಭಟನೆ ನಡೆಸುವುದನ್ನು ನಿಷೇಧಿಸಬೇಕು. ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತ್ರವೇ ಪ್ರತಿಭಟನೆ ನಡೆಸುವಂತಾಗಬೇಕು. ಸುಗಮ ಸಂಚಾರಕ್ಕೆ ಅಡ್ಡಿಯುಂಟು ಮಾಡುವ ಇಂತಹ ಪ್ರತಿಭಟನೆಗಳ ಉಪಟಳ ನಿಯಂತ್ರಿಸಲು ಇದು ಸಕಾಲ' ಎಂದು ನ್ಯಾಯಮೂರ್ತಿ ಕೃಷ್ಣಕುಮಾರ್ ಅಭಿಪ್ರಾಯಪಟ್ಟರು.

ವಿಚಾರಣೆ ಆರಂಭಿಸುತ್ತಿದ್ದಂತೆಯೇ ಅವರು ಸರ್ಕಾರಿ ವಕೀಲರನ್ನು ಉದ್ದೇಶಿಸಿ, 'ನಾನು ಇಂದು ನ್ಯಾಯಗ್ರಾಮದಿಂದ ಮೇಖ್ರಿ ವೃತ್ತ, ಅರಮನೆ ಮೈದಾನ ಮಾರ್ಗವಾಗಿ ಕೋರ್ಟ್‌ಗೆ ಬರಲು ಒಂದು ಗಂಟೆ ಸಮಯ ಹಿಡಿಯಿತು. ಪಾದಯಾತ್ರೆ ಹಾಗೂ ಇತರ ಚಟುವಟಿಕೆಗಳನ್ನು ನಿಯಂತ್ರಿಸಲು ಸಾಧ್ಯವಿಲ್ಲವೇ, ಇದಕ್ಕೆ ಏನಾದರೂ ಮಾಡಬೇಕು. ಇಲ್ಲವಾದರೆ ಏನು ಪ್ರಯೋಜನ' ಎಂದು ಪ್ರಶ್ನಿಸಿದರು.

ಸರ್ಕಾರದ ಪರ ಹಾಜರಿದ್ದ ವಿಜಯಕುಮಾರ್ ಪಾಟೀಲ್, 'ಹೋರಾಟ, ಧರಣಿ ನಿಯಂತ್ರಿಸಲು ಹಾಗೂ ಇವುಗಳಿಗೆ ಅನುಮತಿ ನೀಡುವ ಸಂಬಂಧ ಕರ್ನಾಟಕ ಪೊಲೀಸ್ ಕಾಯ್ದೆ-1963ರ ಅಡಿಯಲ್ಲಿ ಹೊಸ ಆದೇಶ ಮಾಡಲಾಗಿದೆ. ಕಾಯ್ದೆಯ ಕಲಂ 31.1(ಒ) ಪ್ರಕಾರ ಈ ಆದೇಶ ಹೊರಡಿಸಲು ಪೊಲೀಸ್ ಆಯುಕ್ತರು ಅಧಿಕಾರ ಹೊಂದಿದ್ದಾರೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ತಕ್ಷಣವೇ ಆದೇಶ ಜಾರಿಗೆ ತಾಕೀತು
- ಪರಿಪಾಲನಾ ವರದಿ ಸಲ್ಲಿಸಲು ನಿರ್ದೇಶನ

ಪ್ರತಿಭಟನಾಕಾರರು ನಿಗದಿಪಡಿಸಿದ ಸ್ಥಳಕ್ಕೆ ಹೋಗಿ ಪ್ರತಿಭಟನೆ ನಡೆಸಲಿ. ಪ್ರತಿಭಟನೆಗೆ ನಿರ್ದಿಷ್ಟ ಸ್ಥಳ ಗೊತ್ತುಪಡಿಸಲು ಸರ್ಕಾರಕ್ಕೆ ಏಕೆ ಸಾಧ್ಯವಿಲ್ಲ?
ಋತುರಾಜ್ ಅವಸ್ಥಿ
ಮುಖ್ಯ ನ್ಯಾಯಮೂರ್ತಿ

ಆಗುಂಬೆ ಘಾಟಿ: ನಾಳೆಯಿಂದ ಹಗಲು ಸಂಚಾರ ಬಂದ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರಸ್ತೆ ದುರಸ್ತಿ ಕಾಮಗಾರಿಯ ಕಾರಣ ಮಾರ್ಚ್ 5ರಿಂದ 15ರವರೆಗೆ ಪ್ರತಿದಿನ ಬೆಳಿಗ್ಗೆ 7ರಿಂದ ಸಂಜೆ 7ರ ವರೆಗೆ ಆಗುಂಬೆ ಘಾಟ್ ಮೂಲಕ ಸಾಗುವ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಿ ಜಿಲ್ಲಾಧಿಕಾರಿ ಸೆಲ್ವಮಣಿ ಆದೇಶ ಹೊರಡಿಸಿದ್ದಾರೆ.

ಆಗುಂಬೆ ಘಾಟಿಯ ತಪಾಸಣಾ ಕೇಂದ್ರದಿಂದ ಹೆಬ್ರಿಯವರೆಗೆ ₹5.25 ಕೋಟಿ ವೆಚ್ಚದಲ್ಲಿ 20 ಕಿ.ಮೀ. ಡಾಂಬರೀಕರಣ ಕಾಮಗಾರಿ ಆರಂಭಿಸಲಾಗುತ್ತಿದೆ. ಸಂಜೆ 7ರಿಂದ ಬೆಳಿಗ್ಗೆ 7ರವರೆಗೆ ವಾಹನಗಳ ಸಂಚಾರಕ್ಕೆ ಅವಕಾಶ ನೀಡಲಾಗಿದೆ.

ಶಿವಮೊಗ್ಗದಿಂದ ತೀರ್ಥಹಳ್ಳಿ, ಆಗುಂಬೆ, ಉಡುಪಿ, ಮಂಗಳೂರು ಹೆದ್ದಾರಿಯಲ್ಲಿ ಸಂಚರಿಸುವ ಲಘು ವಾಹನಗಳು ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ, ಮಾಳಾ ಘಾಟಿ, ಕಾರ್ಕಳ ಮೂಲಕ ಉಡುಪಿ ತಲುಪಬಹುದು. ಭಾರಿ ವಾಹನಗಳು ಆಯನೂರು, ಆನಂದಪುರ, ಸಾಗರ, ಹೊನ್ನಾವರ ಮೂಲಕ ಸಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

'ಶಿರಾಡಿ ಘಾಟ್ ರಸ್ತೆ ಬಂದ್; ಶೀಘ್ರ ನಿರ್ಧಾರ'

ಹಾಸನ: 'ಚತುಷ್ಪಥ ಕಾಂಕ್ರೀಟ್ ರಸ್ತೆ ನಿರ್ಮಿಸುವ ಸಲುವಾಗಿ ಶಿರಾಡಿ ಘಾಟ್ ರಸ್ತೆ ಬಂದ್ ಮಾಡುವುದು ಹಾಗೂ ಹಾಲಿ ರಸ್ತೆ ದುರಸ್ತಿ ಕುರಿತು ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಚರ್ಚಿಸಿದ್ದು, ದಿಶಾ ಸಭೆಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಆರ್.ಗಿರೀಶ್ ತಿಳಿಸಿದರು.

ನಗರದಲ್ಲಿ ಗುರುವಾರ ಮಾತನಾಡಿದ ಅವರು, '2–3 ತಿಂಗಳಲ್ಲಿ ಮಳೆಗಾಲ ಆರಂಭವಾಗಲಿದ್ದು, ಅಷ್ಟರೊಳಗೆ ರಸ್ತೆ ದುರಸ್ತಿ ಮುಗಿಸುವಂತೆ ಸೂಚಿಸಲಾಗಿದೆ. ಕಾಮಗಾರಿಗೆ ಬೇಕಾದ ಅಗತ್ಯ ಸೌಕರ್ಯದ ಬಗ್ಗೆ ಗುತ್ತಿಗೆದಾರರು ಮಾಹಿತಿ ನೀಡಿದ ನಂತರ ಮುಂದಿನ ನಡೆಯನ್ನು ನಿರ್ಧರಿಸಲಾಗುವುದು' ಎಂದರು.

ಹರಿಪ್ರಸಾದ್ ವಿರುದ್ಧ ಹರಿಹಾಯ್ದ ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ವಿಧಾನಸಭಾ ಚುನಾವಣೆಯ ಟಿಕೆಟ್ ಅನ್ನು ಹರ್ಷ ಅವರ ಕುಟುಂಬಕ್ಕೆ ನೀಡಿದರೆ ಕಾಂಗ್ರೆಸ್ ಅಭ್ಯರ್ಥಿಯನ್ನೇ ಕಣಕ್ಕೆ ಇಳಿಸುವುದಿಲ್ಲ ಎಂಬ ಹೇಳಿಕೆ ನೀಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ವಿರುದ್ಧ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹರಿಹಾಯ್ದರು.

'ಮೊದಲು ರಾಜ್ಯದ 224 ವಿಧಾನ ಸಭಾ ಕ್ಷೇತ್ರಗಳಲ್ಲಿ ಯಾವುದಾದರೂ ಒಂದು ಕ್ಷೇತ್ರದ ಟಿಕೆಟ್ ಪಡೆದು ಗೆದ್ದು ಬರಲಿ. ಹಿಂಬಾಗಿಲ ಮೂಲಕ ರಾಜಕೀಯ ಪ್ರವೇಶ ಮಾಡುವವರಿಗೆ ಬಿಜೆಪಿ ಟಿಕೆಟ್ ವಿಚಾರದಲ್ಲಿ ಮಾತನಾಡುವ ಅರ್ಹತೆ ಏನಿದೆ?' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಕುಟುಕಿದರು.

ಹರ್ಷ ಅವರ ತಾಯಿಗೆ ಲೋಕಸಭಾ ಚುನಾವಣಾ ಟಿಕೆಟ್ ನೀಡಬೇಕು ಎಂದಿದ್ದ ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ವಿರುದ್ಧವೂ ಏಕವಚನದಲ್ಲೇ ಈಶ್ವರಪ್ಪ ಆಕ್ರೋಶ ವ್ಯಕ್ತಪಡಿಸಿದರು. 'ಹರ್ಷ ಹತ್ಯೆ ಮಾಡಿದ್ದು ಕೆಲವು ಮುಸಲ್ಮಾನ್ ಗೂಂಡಾಗಳು' ಎಂದು ಪುನರುಚ್ಚರಿಸಿದರು. 'ಎಲ್ಲ ಮುಸ್ಲಿಮರೂ ಕೆಟ್ಟವರಲ್ಲ' ಎಂದ ಅವರು, 'ಮುಸ್ಲಿಂ ಮುಖಂಡರು ಕೂಡ ಇಂತಹ ಘಟನೆಗಳು ನಡೆದಾಗ ಎಚ್ಚರಿಕೆಯಿಂದಿರಬೇಕು' ಎಂಬ ಸಲಹೆಯನ್ನೂ ನೀಡಿದರು. 'ಏಳು ವರ್ಷಗಳ ಹಿಂದೆ ಹತ್ಯೆಯಾಗಿದ್ದ ವಿಶ್ವನಾಥ್ ಶೆಟ್ಟಿ ಕುಟುಂಬಕ್ಕೆ ಅಂದು ₹ 18 ಲಕ್ಷ ನೆರವು ನೀಡಲಾಗಿತ್ತು. ಅವರ ತಾಯಿ ಇಂದು ಚಿಂದಿ ಆಯ್ದು ಬದುಕು ನಡೆಸುತ್ತಿರುವ ವಿಷಯ ಗಮನಕ್ಕೆ ಬಂದಿರಲಿಲ್ಲ. ಘಟನೆಯನ್ನು ಕೆಲವರು ರಾಜಕೀಯಗೊಳಿಸುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹತ್ಯೆ ಪ್ರಕರಣ: ಹಿರಿಯ ಅಧಿಕಾರಿಗಳಿಂದ ಪರಿಶೀಲನೆ

ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಸೂಚನೆಯಂತೆ ಸಿಸಿಬಿ ಜಂಟಿ ಆಯುಕ್ತ ರಮಣಗುಪ್ತ ಸೇರಿ ಕೆಲ ಹಿರಿಯ ಅಧಿಕಾರಿಗಳು ಶಿವಮೊಗ್ಗಕ್ಕೆ ಭೇಟಿ ನೀಡಿ ಹರ್ಷ ಹತ್ಯೆ ಪ್ರಕರಣದ ತನಿಖೆಯ ವಿವರಗಳ ಮಾಹಿತಿ ಪಡೆದರು. ಹರ್ಷ ಹತ್ಯೆಯ ಆರೋಪಿಗಳ ಹಿನ್ನೆಲೆ, ಅವರಿಗೆ ಪೂರೈಕೆಯಾದ ಹಣಕಾಸಿನ ಮೂಲಗಳು, ಸಂಘಟನೆಗಳ ಪಾತ್ರ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್, ತನಿಖಾಧಿಕಾರಿಗಳ ಬಳಿ ಚರ್ಚಿಸಿದರು.

₹ 25 ಲಕ್ಷ ಸರ್ಕಾರದ ನೆರವು

'ಮೃತ ಹರ್ಷ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ ₹ 25 ಲಕ್ಷ ನೆರವು ಘೋಷಿಸಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾರ್ಚ್ 6ರಂದು ಅವರ ಮನೆಗೆ ಭೇಟಿ ನೀಡಿ ಚೆಕ್ ನೀಡುವರು. ಶವಯಾತ್ರೆ ವೇಳೆ ನಡೆದ ಗಲಭೆಯಲ್ಲಿ ಆದ ಆಸ್ತಿಪಾಸ್ತಿ ನಷ್ಟಕ್ಕೂ ಪರಿಹಾರ ನೀಡಲಾಗುವುದು' ಎಂದು ಈಶ್ವರಪ್ಪ ತಿಳಿಸಿದರು.

ಪೋತೆ ಸೇರಿ ಮೂವರಿಗೆ 'ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ'

ಬೆಂಗಳೂರು: ಡಾ. ಬರಗೂರು ಪ್ರತಿಷ್ಠಾನ ನೀಡುವ 'ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ'ಗೆ ಎಚ್.ಟಿ. ಪೋತೆ ಅವರ 'ದಲಿತ ಅಸ್ಮಿತೆ' ಮತ್ತು ಕೆ. ಕೇಶವ ಶರ್ಮ ಅವರ 'ಕಾರಣವಾದ' ಕೃತಿ ಆಯ್ಕೆಯಾಗಿದೆ.

ಕಾದಂಬರಿ ವಿಭಾಗದಲ್ಲಿ ಮಲ್ಲಿಕಾರ್ಜುನ ಹಿರೇಮಠ ಅವರ 'ಹಾವಳಿ' ಕಾದಂಬರಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರತಿಷ್ಠಾನವು ವಿಚಾರ, ವಿಮರ್ಶೆ ಮತ್ತು ಕಾದಂಬರಿ ಪ್ರಕಾರದಲ್ಲಿ ಪ್ರತಿ ವರ್ಷ ಪ್ರಶಸ್ತಿ ನೀಡುತ್ತಿದೆ. ಈ ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಬಹುಮಾನ, ಫಲಕವನ್ನು ಹೊಂದಿದೆ.

ರಾಜಲಕ್ಷ್ಮಿ ಅವರ ಜನ್ಮದಿನವಾದ ಮಾ.12ರಂದು ಬೆಂಗಳೂರಿನ ಗಾಂಧಿಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲಾಗುವುದು ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿಗಳಾದ ಸುಂದರರಾಜ ಅರಸ್ ಹಾಗೂ ರಾಜಪ್ಪ ದಳವಾಯಿ ತಿಳಿಸಿದ್ದಾರೆ.



ಮಲ್ಲಿಕಾರ್ಜುನ ಹಿರೇಮಠ

ಎಚ್.ಟಿ.ಪೋತೆ



ಕೆ. ಕೇಶವ ಶರ್ಮ

ಕೋಮು ದ್ವೇಷ: ಕೃಷಿಕ ವೆಂಕಟೇಶ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸಹಜ ಸ್ಥಿತಿಯತ್ತ ಮರಳಿದ್ದ ಶಿವಮೊಗ್ಗ ನಗರದಲ್ಲಿ ಗುರುವಾರ ಮತ್ತೆ ಹಲ್ಲೆ ಪ್ರಕರಣ ನಡೆದಿದೆ. ಗೋಪಾಳದ ವೆಂಕಟೇಶ್ (48) ಅವರ ಮೇಲೆ ದುಷ್ಕರ್ಮಿಗಳ ಗುಂಪು ದಾಳಿ ನಡೆಸಿದ್ದು, ಗಾಯಗೊಂಡಿರುವ ಅವರನ್ನು ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣದ ಬಳಿ ಜಮೀನು ಹೊಂದಿರುವ ವೆಂಕಟೇಶ್ ಅವರು ಕೃಷಿ ಕೆಲಸ ಮುಗಿಸಿಕೊಂಡು ಪದ್ಮಾ ಚಿತ್ರಮಂದಿರದ ಮೊದಲನೇ ತಿರುವಿನ ಬಳಿ ಇರುವ ತಮ್ಮ ಮನೆಗೆ ಮರಳಿದ್ದರು. ಸಂಜೆ 7ರ ಸುಮಾರಿಗೆ ನಾಯಿ ಜೊತೆ ವಾಯುವಿಹಾರಕ್ಕೆ ಹೊರಟ ಅವರ ಮೇಲೆ ಕೆಲವು ಮುಸ್ಲಿಂ ಯುವಕರು ಹಲ್ಲೆ ನಡೆಸಿದ್ದಾರೆ. ತಲೆಗೆ ಪೆಟ್ಟು ಬಿದ್ದಿದ್ದ ಅವರನ್ನು ಸ್ಥಳೀಯರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಪಾಯದಿಂದ ಅವರು ಪಾರಾಗಿದ್ದಾರೆ.

'ಹಲ್ಲೆಗೆ ಕಾರಣ ತಿಳಿದುಬಂದಿಲ್ಲ. ಘಟನೆ ನಡೆದ ಸ್ಥಳದ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗಿದೆ. ಹಲ್ಲೆ ಮಾಡಿದ ಐದಾರು ಆರೋಪಿಗಳ ಪೈಕಿ ಇಬ್ಬರನ್ನು ಗುರುತಿಸಲಾಗಿದೆ. ಶೀಘ್ರವೇ ಬಂಧಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀಪ್ರಸಾದ್ ಪ್ರತಿಕ್ರಿಯಿಸಿದರು.ಘಟನೆ ನಡೆದ ಪ್ರದೇಶದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ ಸೇರಿದಂತೆ ಹೆಚ್ಚುವರಿ ಪೊಲೀಸನ್ನು ನಿಯೋಜಿಸಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಬಜರಂಗದಳ, ವಿಶ್ವಹಿಂದೂ ಪರಿಷತ್ ಹಾಗೂ ಬಿಜೆಪಿ ಮುಖಂಡರು ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು. ಆರೋಪಿಗಳನ್ನು ಶೀಘ್ರ ಬಂಧಿಸುವಂತೆ ಒತ್ತಾಯಿಸಿದರು.

ಫೆಬ್ರುವರಿ 20ರಂದು ರಾತ್ರಿ ಶಿವಮೊಗ್ಗ ನಗರದಲ್ಲಿಯೇ ಬಜರಂಗದಳದ ಕಾರ್ಯಕರ್ತ ಹರ್ಷನ ಹತ್ಯೆಯಾಗಿತ್ತು. ಆ ನಂತರ ನಗರದಲ್ಲಿ ಗಲಭೆ ಉಂಟಾಗಿ, ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿತ್ತು.

'ನೀಟ್' ವಿರೋಧ ಧನದಾಹವೇ'

ಬೆಂಗಳೂರು: 'ನೀಟ್ ವಿರೋಧಿಸುವವರು ದ್ರೋಹಿಗಳು, ಧನದಾಹಿಗಳು ಎಂದು ಟೀಕಿಸಿರುವ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರು ತಮ್ಮ ನಾಲಿಗೆ ಚಲಾಯಿಸಿ, ತಮ್ಮ ಉನ್ನತ ಗುಣವನ್ನು ಜಗಜ್ಜಾಹೀರು ಮಾಡಿಕೊಂಡಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದಾರೆ.

ನೀಟ್ ವ್ಯವಸ್ಥೆ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಉನ್ನತ ಶಿಕ್ಷಣ ಸಚಿವರು ಕಟ್ಟಿರುವ ಈ ಹಣೆಪಟ್ಟಿಗೆ ಏನು ಹೇಳಬೇಕೋ ಗೊತ್ತಿಲ್ಲ. ಯಾರನ್ನು ಉದ್ದೇಶಿಸಿ ಹೀಗೆ ಹೇಳಿದ್ದಾರೆ ಎಂಬುದನ್ನು ಅವರೇ ತಿಳಿಸಲಿ ಎಂದು ಆಗ್ರಹಿಸಿದ್ದಾರೆ.

ನೀಟ್ ವ್ಯವಸ್ಥೆಯು ಟ್ಯೂಷನ್ ಅಂಗಡಿಗಳನ್ನು ಬೆಳೆಸಿ ಪೋಷಿಸುತ್ತಿದ್ದು, ವಿದ್ಯಾರ್ಥಿಗಳ ರಕ್ತ ಹೀರಿ ಕಂಡವರ ಜೇಬು ತುಂಬಿಸುತ್ತಿದೆ. ಲಕ್ಷ ಲಕ್ಷ ಕಿತ್ತು ಪೋಷಕರ ರಕ್ತ ಹೀರುವ ಟ್ಯೂಷನ್ ಅಂಗಡಿಗಳು ಸರ್ಕಾರಗಳ ಕಣ್ಣಿಗೆ ಕಾಣುತ್ತಿಲ್ಲ ಎಂದು ಅವರು ಟೀಕಿಸಿದ್ದಾರೆ.



'ಜೆಡಿಎಸ್ ಅಧಿಕಾರಕ್ಕೆ ಬಂದರೆ ನೀಟ್ ವಿರುದ್ಧ ವಿಧಾನಸಭೆಯಲ್ಲಿ ನಿರ್ಣಯ ಕೈಗೊಳ್ಳುತ್ತೇವೆ. ನಾವು ನೀಟ್ ವಿರೋಧಿಸುತ್ತೇವೆ. ಮಕ್ಕಳ ಜೀವಕ್ಕೆ ಕುಣಿಕೆ ಬಿಗಿದು ಕಂಡವರ ಜೇಬು ಭರ್ತಿ ಮಾಡುವ ಈ ದಂಧೆ ಬೇಕಿಲ್ಲ. ಅದಕ್ಕೆ ಚರಮಗೀತೆ ಹಾಡುತ್ತೇವೆ' ಎಂದು ಅವರು ಪ್ರತಿಪಾದಿಸಿದ್ದಾರೆ.

'ಕೇಂದ್ರದ ಒಬ್ಬ ಸಚಿವರು, ನೀಟ್ ಪರೀಕ್ಷೆ ಪಾಸ್ ಮಾಡಲಾಗದ ವಿದ್ಯಾರ್ಥಿಗಳು ವಿದೇಶಕ್ಕೆ ಹೋಗುತ್ತಾರೆ ಎಂದು ಆ ಮಕ್ಕಳ ಸ್ವಾಭಿಮಾನವನ್ನು ಅಪಮಾನಿಸಿದ್ದಾರೆ. ಮತ್ತೊಂದು ಹೆಜ್ಜೆ ಮುಂದೆ ಹೋದ ಉನ್ನತ ಶಿಕ್ಷಣ ಸಚಿವರು ದ್ರೋಹದ ಹಣೆಪಟ್ಟಿ ಕಟ್ಟಿ ದೊಡ್ಡತನ ಮೆರೆದಿದ್ದಾರೆ' ಎಂದು ಅವರು ಟೀಕಿಸಿದ್ದಾರೆ.

'ಬೇರೆ ದೇಶದವರು ವಾರಕ್ಕೂ ಮುಂಚೆಯೇ ಹೊರಟಿದ್ದರು'

ಪ್ರಜಾವಾಣಿ ವಾರ್ತೆ

ಮೈಸೂರು: 'ಯುದ್ಧ ಆರಂಭವಾಗುವ ಒಂದು ವಾರದ ಮೊದಲೇ ಅಮೆರಿಕ, ಬ್ರಿಟನ್, ಫ್ರಾನ್ಸ್ ಹಾಗೂ ಜರ್ಮನಿಯ ನನ್ನ ಸ್ನೇಹಿತರನ್ನು ಆ ದೇಶದವರು ವಾಪಸ್ ಕರೆಸಿಕೊಂಡಿದ್ದರು' ಎಂದು ಉಕ್ರೇನ್‌ನ ಕೀವ್ ಪಟ್ಟಣದಿಂದ ಬುಧವಾರ ತಡರಾತ್ರಿ ಇಲ್ಲಿನ ಕೆ.ಆರ್.ನಗರದ ಮನೆಗೆ ವಾಪಸಾದ ಅನಿಲ್‌ಕುಮಾರ್ ತಿಳಿಸಿದರು.

ಕೀವ್ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ಅಂತಿಮ ವರ್ಷದ ವೈದ್ಯಕೀಯ ಪದವಿ ವ್ಯಾಸಂಗ ಮಾಡುತ್ತಿದ್ದ ಅವರು 'ಪ್ರಜಾವಾಣಿ'ಯೊಂದಿಗೆ ಮಾತನಾಡಿ, 'ಯುದ್ಧದ ವರದಿಗಳು ತುಣುಕುಗಳಷ್ಟೇ. ಕೀವ್ ಮತ್ತು ಹಾರ್ಕಿವ್‌ನಲ್ಲಿ ಅತ್ಯಂತ ಭೀಕರ ಕಾಳಗ ನಡೆಯುತ್ತಿದೆ. ಊಟ, ವಸತಿ, ಶೌಚಾಲಯ ಸೇರಿ ಯಾವ ಮೂಲಸೌಕರ್ಯವೂ ಈಗ ಅಲ್ಲಿಲ್ಲ. ಪೋಲೆಂಡ್‌ಗೆ ಬಂದ ಬಳಿಕ ಕೇಂದ್ರ ಸರ್ಕಾರ ನಮ್ಮನ್ನು ರಾಜರಂತೆ ನೋಡಿಕೊಂಡಿತು' ಎಂದರು.

'ಭಾರತೀಯ ರಾಯಭಾರ ಕಚೇರಿ ಮನಸ್ಸು ಮಾಡಿದ್ದರೆ ಮೊದಲೇ ಕರೆಸಿಕೊಳ್ಳುವ ಅವಕಾಶಗಳಿದ್ದವು. ಈಗಲು ಹಾರ್ಕಿವ್ ಹಾಗೂ ಕೀವ್‌ನಲ್ಲಿ ಸಿಲುಕಿರುವವರನ್ನು ಕರೆತರಬೇಕು' ಎಂದು ಒತ್ತಾಯಿಸಿದರು.

'ಅಲ್ಲಿ ಸ್ವಯಂಸೇವಕನಾಗಿ ಕೆಲಸ ಮಾಡಿದ್ದೆ. ಎಲ್ಲರನ್ನೂ ಕರೆ ತಂದ ಬಳಿಕ ವಾಪಸ್ ಬರೋಣ ಎಂದುಕೊಂಡಿದ್ದೆ. ಆದರೆ, ಕುಟುಂಬದರ ಒತ್ತಾಯಕ್ಕೆ ಕಟ್ಟುಬಿದ್ದು ವಾಪಸ್ ಬಂದೆ' ಎಂದು ಅವರು ಹೇಳಿದರು.

ಮೈಸೂರು ಜಿಲ್ಲೆಯ ಕೆ.ಆರ್.ನಗರಕ್ಕೆ ಉಕ್ರೇನ್‌ನಿಂದ ಬಂದ ಅನಿಲ್‌ಕುಮಾರ್ (ಎಡದಿಂದ ಮೂರನೇಯವರು) ತಮ್ಮ ಕುಟುಂಬದವರೊಂದಿಗೆ. ತಂದೆ ವೀರಪ್ಪ, ತಾಯಿ ಕೆ.ಎಸ್.ಮಂಜುಳಾ, ಅಣ್ಣ ವಿನಯ್, ಅತ್ತಿಗೆ ಪೂಜಾ ಇದ್ದಾರೆ

ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್.ರಂಗಪ್ಪ ಅವರನ್ನು ಬಿಬಿಎಂಪಿ ವಿಶೇಷ ಆಯುಕ್ತ (ಆಡಳಿತ) ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಈಶ್ವರ್ ಕುಮಾರ್ ಖಂಡೂ– ವಾಣಿಜ್ಯ ತೆರಿಗೆ ಇಲಾಖೆ (ಸೇವಾ ವಿಶ್ಲೇಷಣೆ ವಿಭಾಗ) ಹೆಚ್ಚುವರಿ ಆಯುಕ್ತ, ಗರಿಮಾ ಪವಾರ್– ಹೆಚ್ಚುವರಿ ಆಯುಕ್ತೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಚಿತ್ರಾವಳಿ

ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ 108ನೇ ಜಯಂತ್ಯುತ್ಸವದ ಅಂಗವಾಗಿ ಗದುಗಿನ ವೀರೇಶ್ವರ ಪುಣ್ಯಾಶ್ರಮದಲ್ಲಿ ದಿ.ಕೆ.ಎಚ್.ಪಾಟೀಲ ಅಭಿಮಾನಿ ಬಳಗವು ಗುರುವಾರ ಆಯೋಜಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮುಸ್ಲಿಂ ಜೋಡಿ ಸೇರಿದಂತೆ ಒಟ್ಟು 11 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದವು

ಧಾರವಾಡದ ಸೃಜನಾ ರಂಗಮಂದಿರದಲ್ಲಿ ಡಾ. ಪುಟ್ಟರಾಜ ಗವಾಯಿ ಪ್ರತಿಷ್ಠಾನವು ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಂಡಿತ್ ರಘುನಾಥ ನಾಕೋಡ ಅವರಿಗೆ ಪುಟ್ಟರಾಜ ಸಮ್ಮಾನ ಪ್ರಶಸ್ತಿಯನ್ನು ಪಂ. ವಿನಾಯಕ ತೊರವಿ ಅವರು ನೀಡಿ ಸನ್ಮಾನಿಸಿದರು. ಡಾ. ಉದಯಕುಮಾರ ದೇಸಾಯಿ, ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಉಸ್ತಾದ್ ಶಫೀಕ್ ಖಾನ್, ಶಂಕರ ಕುಂಬಿ, ಪಂ. ಡಿ. ಕುಮಾರದಾಸ್, ಡಾ. ಎಂ.ವೆಂಕಟೇಶಕುಮಾರ, ಬಸವರಾಜ ಹಿರೇಮಠ,ಮಹಾಬಲೇಶ್ವರ ಹಾಸಿನಾಳ ಇದ್ದಾರೆ.

ಶುಕ್ರವಾರ, ಮಾರ್ಚ್ 4, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಟ್ಯಾಂಕ್ ನಿಗ್ರಹ ಅಸ್ತ್ರ

ಈಶಾನ್ಯ ಕೀವ್‌ನಲ್ಲಿ ಉಕ್ರೇನ್ ಯೋಧರೊಬ್ಬರು ಗುರುವಾರ ಟ್ಯಾಂಕ್ ನಿಗ್ರಹ ಅಸ್ತ್ರದ ಜೊತೆ ಸಜ್ಜಾಗಿದ್ದರು



‘ಆ್ಯಪ್’ ಸಾಲ ನೀಡಿ ಜನರಿಗೆ ಕಿರುಕುಳ • ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ತನಿಖೆ

35 ‘ನಕಲಿ’ ಕಂಪನಿಗಳು: ಚೀನಾ ಪ್ರಜೆಗಳ ಅಕ್ರಮ

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು
- ಬೆಂಗಳೂರು ಸಿಸಿಬಿ ಪೊಲೀಸರು ಭೇದಿಸಿದ್ದ ಜಾಲ
- ಭಾರತೀಯರ ದಾಖಲೆ ದುರುಪಯೋಗ
- ಕಂಪನಿಗಳ ವಿರುದ್ಧ ಎಫ್‌ಐಆರ್

ಬೆಂಗಳೂರು: ಚೀನಾ ದೇಶದ ಹಲವು ‘ಆ್ಯಪ್’ ವ್ಯವಹಾರಗಳಿಗೆ ಭಾರತ ಈಗಾಗಲೇ ನಿರ್ಬಂಧ ವಿಧಿಸಿದೆ. ಇದರ ಬೆನ್ನಲ್ಲೇ ಕೆಲ ಚೀನಾ ಪ್ರಜೆಗಳು, ನಕಲಿ ಕಂಪನಿಗಳನ್ನು ಹುಟ್ಟು ಹಾಕಿ ಭಾರತದಲ್ಲಿ ಅಕ್ರಮವಾಗಿ ವ್ಯವಹಾರ ನಡೆಸುತ್ತಿರುವ ಸಂಗತಿ ಪತ್ತೆಯಾಗಿದೆ.

‘ಆ್ಯಪ್’ ಮೂಲಕ ಸಾಲ ನೀಡಿ, ಅದರ ವಸೂಲಿ ಹೆಸರಿನಲ್ಲಿ ಸಾರ್ವಜನಿಕರಿಗೆ ಕಿರುಕುಳ ನೀಡುತ್ತಿದ್ದ ಜಾಲವನ್ನು ಬೆಂಗಳೂರಿನ ಸಿಸಿಬಿ ಪೊಲೀಸರು ಕಳೆದ ವರ್ಷ ಭೇದಿಸಿದ್ದರು. ಇದೇ ಪ್ರಕರಣ ಆಧರಿಸಿ ತನಿಖೆ ಕೈಗೊಂಡಿದ್ದ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಧಿಕಾರಿಗಳು, ಚೀನಾ ಪ್ರಜೆಗಳು ರಾಜ್ಯದಲ್ಲಿ 35 ನಕಲಿ ಕಂಪನಿ ನಿರ್ವಹಣೆ ಮಾಡುತ್ತಿರುವುದನ್ನು ಬಯಲಿಗೆ ಎಳೆದಿದ್ದಾರೆ.

ಸಚಿವಾಲಯ ಅಧಿಕಾರಿಗಳ ತನಿಖಾ ವರದಿ ಆಧರಿಸಿ 35 ನಕಲಿ ಕಂಪನಿಗಳ ವಿರುದ್ಧ ನಗರದ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಕಂಪನಿಗಳ ಅಕ್ರಮ ವ್ಯವಹಾರಗಳ ಬಗ್ಗೆ ಪೊಲೀಸರು ಪುರಾವೆಗಳನ್ನು ಸಂಗ್ರಹಿಸುತ್ತಿದ್ದಾರೆ.

‘ಮೊಬೈಲ್ ಆ್ಯಪ್‌ಗಳ ಮೂಲಕ ಸಾರ್ವಜನಿಕರಿಗೆ ಸಾಲ ನೀಡಿ, ಮೀಟರ್ ಬಡ್ಡಿ ಲೆಕ್ಕದಲ್ಲಿ ಹಣ ವಸೂಲಿ ಮಾಡಲಾಗುತ್ತಿತ್ತು. ಹಣ ನೀಡದವರಿಗೆ ಕಿರುಕುಳ ನೀಡಲಾಗುತ್ತಿತ್ತು. ಈ ಬಗ್ಗೆ ದೂರುಗಳು ಬಂದಿದ್ದವು.

ಏಸಿಪೀಯರಲ್, ಹ್ಯಾಗಿಕಿ, ಎಕ್ಸಿಡ್‌ವೇಲ್, ಮಸ್ಕತ್‌ಸ್ವಾರ್, ಅಕ್ಯೂಸ್ಟೆಲ್ಲರ್ ಸೇರಿದಂತೆ ಹಲವು ಕಂಪನಿಗಳ ಕಚೇರಿ ಮೇಲೆ ದಾಳಿ ಮಾಡಿ, ಕೆಲಸಗಾರರನ್ನು ಬಂಧಿಸಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಚೀನಾ ಪ್ರಜೆಗಳ ಒಡೆತನದಲ್ಲಿ ಕಂಪನಿ ನಡೆಯುತ್ತಿದ್ದ ಮಾಹಿತಿ ಮಾತ್ರ ಲಭ್ಯವಾಗಿತ್ತು. ಆದರೆ, ಅವರು ಯಾರು ಎಂಬುದು ಗೊತ್ತಿರಲಿಲ್ಲ. ಹೀಗಾಗಿ, ಕಂಪನಿ ನೋಂದಣಿ ಬಗ್ಗೆ ತನಿಖೆ ನಡೆಸುವಂತೆ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯಕ್ಕೆ ಸಿಸಿಬಿಯ ಡಿಸಿಪಿ ಪತ್ರ ಬರೆದಿದ್ದರು’ ಎಂದೂ ತಿಳಿಸಿದರು.

‘ಆ್ಯಪ್’ ಸೃಷ್ಟಿಸಿರುವ ಎಲ್ಲ ಕಂಪನಿಗಳ ನೋಂದಣಿ ದಾಖಲೆ ಹಾಗೂ ನಿರ್ದೇಶಕರ ಹಿನ್ನೆಲೆ ಬಗ್ಗೆ ಸಚಿವಾಲಯ ತನಿಖೆ ನಡೆಸಿದೆ. ನಕಲಿ ಕಂಪನಿಗಳನ್ನು ನಿರ್ವಹಣೆ ಮಾಡುತ್ತಿರುವ ಚೀನಾ ಪ್ರಜೆಗಳನ್ನು ಪತ್ತೆ ಮಾಡಿ, ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಪೊಲೀಸ್ ಇಲಾಖೆಗೆ ವರದಿ ನೀಡಿದೆ’ ಎಂದೂ ಅಧಿಕಾರಿ ಹೇಳಿದರು.

ಭಾರತೀಯರ ದಾಖಲೆ ದುರುಪಯೋಗ: ‘ಭಾರತದಲ್ಲಿ ಅಕ್ರಮವಾಗಿ ಕಚೇರಿ ತೆರೆದಿದ್ದ ಆರೋಪಿಗಳು, ಭಾರತೀಯರನ್ನು ಪರಿಚಯಿಸಿಕೊಂಡು ಕಂಪನಿಯಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುತ್ತಿದ್ದರು. ಅದೇ ಕೆಲಸಗಾರರ ದಾಖಲೆಗಳನ್ನು ಪಡೆದುಕೊಂಡು, ಅವರ ಗಮನಕ್ಕೆ ಬಾರದಂತೆ ಕಂಪನಿ ನಿರ್ದೇಶಕರನ್ನಾಗಿ ಮಾಡಿಕೊಳ್ಳುತ್ತಿದ್ದರು. ಎಲ್ಲಿಯೂ ತಮ್ಮ ಹೆಸರು ಬಾರದಂತೆ ಚೀನಾ ಪ್ರಜೆಗಳು ನೋಡಿಕೊಳ್ಳುತ್ತಿದ್ದರು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘ಆ್ಯಪ್’ ಮೂಲಕ ಅಭದ್ರತೆಯ ಅಲ್ಪಾವಧಿ ಸಾಲ ನೀಡುತ್ತಿದ್ದ ಕಂಪನಿ, ಹೆಚ್ಚು ನಿರ್ವಹಣಾ ಶುಲ್ಕ ಪಡೆಯುತ್ತಿತ್ತು. ಸಾಲದ ಮೇಲೆ ಮೀಟರ್ ಬಡ್ಡಿ ವಿಧಿಸಿ, ವಸೂಲಿ ಮಾಡುತ್ತಿತ್ತು. ಸಾಲ ಮರುಪಾವತಿ ಮಾಡದವರಿಗೆ ಕಿರುಕುಳ ನೀಡಲಾಗುತ್ತಿತ್ತು. ಈ ಬಗ್ಗೆ ಗ್ರಾಹಕರು ಅಳಲು ತೋಡಿಕೊಂಡಿದ್ದರು’ ಎಂದೂ ಹೇಳಿದರು.

‘ಕೋಟ್ಯಂತರ ರೂಪಾಯಿ ವ್ಯವಹಾರ’

‘35 ನಕಲಿ ಕಂಪನಿಗಳು ಇದುವರೆಗೂ ಕೋಟ್ಯಂತರ ರೂಪಾಯಿ ವ್ಯವಹಾರ ನಡೆಸಿದ್ದು, ಸರ್ಕಾರವನ್ನೂ ವಂಚಿಸಿವೆ. ಇದರ ದಾಖಲೆಗಳು ಸಚಿವಾಲಯದ ಅಧಿಕಾರಿಗಳ ತನಿಖಾ ವರದಿಯಲ್ಲಿವೆ’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ದೇಶದ ಹಲವು ತನಿಖಾ ಸಂಸ್ಥೆಗಳು, ವಂಚಕ ಕಂಪನಿಗಳ ವಿರುದ್ಧ ತನಿಖೆ ನಡೆಸುತ್ತಿವೆ. ಕಂಪನಿ ಕೆಲಸಗಾರರು ಮಾತ್ರ ಪೊಲೀಸರಿಗೆ ಸಿಕ್ಕಿಬೀಳುತ್ತಿದ್ದಾರೆ. ವಂಚಕ ಜಾಲದ ರೂವಾರಿಗಳಾದ ಚೀನಾ ಪ್ರಜೆಗಳು ಮಾತ್ರ ಸಿಗುತ್ತಿಲ್ಲ. ಅವರೆಲ್ಲ ತಮ್ಮ ದೇಶದಲ್ಲೇ ಇದ್ದಾರೆ. ಅವರನ್ನು ಕಸ್ಟಡಿ ಪಡೆಯುವ ಸಂಬಂಧ ಹಿರಿಯ ಅಧಿಕಾರಿಗಳು ಹಾಗೂ ಕಾನೂನು ತಜ್ಞರ ಜೊತೆ ಚರ್ಚಿಸಲಾಗುತ್ತಿದೆ’ ಎಂದೂ ತಿಳಿಸಿದರು.

ನಕಲಿ ಕಂಪನಿಗಳು

ಬುಲ್‌ಫಿಂಚ್ ಸಾಫ್ಟ್‌ವೇರ್	ಪ್ರೊನೇವಸ್ ಟೆಕ್ನಾಲಜೀಸ್
ಚಾಂಗ್‌ಕ್ವಿಂಗ್ ಜಿಲಿ ಇಂಡಿಯಾ	ಹ್ಯಾನಸ್ಟೋನ್ ಕ್ರೆಡಿಟ್ ಟೆಕ್ನಾಲಜೀಸ್
ಡಾಟೈಮ್ಸ್	ಟ್ರಾಂಸ್ವಿಫ್ಟ್ ಟೆಕ್ನಾಲಜೀಸ್
ಫಾಸ್ಟ್‌ಆ್ಯಪ್ ಟೆಕ್ನಾಲಜಿ	ಮ್ಯಾಡ್ ಎಲಿಫೆಂಟ್ ನೆಟವರ್ಕ್ ಟೆಕ್ನಾಲಜೀಸ್
ಫ್ಲೈಕಾಮ್ ಟೆಕ್ನಾಲಜಿ	ಟ್ಯಾನ್‌ಲುಂಗ್ ಟೆಕ್ನಾಲಜೀಸ್
ಗೊರುಪೀ ಇನ್‌ಫಿನ್‌ಟೆಕ್ ಸರ್ವೀಸಸ್	ವಿಕ್ಯುಂಟ್ ಕನ್ಸಲ್ಟಿಂಗ್ ಇಂಡಿಯಾ
ಪೆಂಟಿಯಮ್ ವೇವ್ಸ್ ಹೈಟೆಕ್	ಯರ್ಲಾಂಗ್ ಟೆಕ್ನಾಲಜೀಸ್
ರಿಯುಸಿಂಗ್ ಟೆಕ್ನಾಲಜಿಸ್	ಬೆಟ್‌ಟೆಕ್ ಟೆಕ್ನಾಲಜೀಸ್
ಶಿನೆಬೇ ಟೆಕ್ನಾಲಜಿಸ್	ವಾಟರ್ ಎಲಿಫೆಂಟ್ ಫೈನಾನ್ಷಿಯಲ್ ಸರ್ವೀಸಸ್
ಎಫ್668 ಕಾನ್ಸೆಂಟ್ರಿಕ್ ಟೆಕ್ನಾಲಜಿಸ್	ವಿಕ್ರೆಡ್ ಟೆಕ್ನಾಲಜೀಸ್
ಫೈನ್‌ಟೆಕ್ ಸೊಲೊಷನ್ಸ್	ಇಂಡೊಫಾ ಇ–ಕಾಮರ್ಸ್
ಫೈನ್‌ಎಕ್ಸ್‌ಪ್ರೆಸ್ ಫೈನಾನ್ಷಿಯಲ್ ಸರ್ವೀಸಸ್	ವೇಬುಸಿ ಟೆಕ್ನಾಲಜೀಸ್
ಇಂಡೊನೇಸ್ ಟೆಕ್ನಾಲಜೀಸ್	ಆ್ಯಡ್‌ಟೆಕ್ ಸೊಲೊಷನ್ಸ್
ಕಾಟೆನ್	ಪೊಕಿಯೊ ಇ–ಕಾಮರ್ಸ್
ಲೆಡ್‌ಬೋಲ್ಟ್	ತುಳಸಿ ಇನ್ಫೊಟೆಕ್ ಕನ್ಸಲ್ಟಿಂಗ್
ಯುಡಿಗೊ	ಬಿಸ್ಟ್ರೋಮ್ ಟೆಕ್ನಾಲಜಿ
ಕ್ರೆಡಿಮೆ ಇ–ಸರ್ವೀಸಸ್	ಟೆಲಿಕೊ ಮಾರ್ಕೆಟಿಂಗ್
ಕ್ರೇಪೊಲೈ ಟೆಕ್ನಾಲಜೀಸ್	

ಸುದ್ದಿ 2 ನಿಮಿಷ

ವೇತನ ಸಮಿತಿ ರಚಿಸಲು ಸರ್ಕಾರಕ್ಕೆ ಬಿಎಸ್‌ವೈ ಒತ್ತಾಯ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರಿ ನೌಕರರ ಮಾದರಿಯ ವೇತನ ಶ್ರೇಣಿ ಮತ್ತು ಭತ್ಯೆಗಳನ್ನು ನೀಡಲು ‘ಅಧಿಕಾರಿಗಳ ವೇತನ ಸಮಿತಿ’ಯನ್ನು ರಚಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಪತ್ರ ಬರೆದಿದ್ದಾರೆ.

‘ರಾಜ್ಯ ಸರ್ಕಾರ ಪ್ರತಿ ಐದು ವರ್ಷಗಳಿಗೊಮ್ಮೆ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸುವ ಸಂಪ್ರದಾಯವನ್ನು ಹೊಂದಿದೆ. ನಾನು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೂ ಸಹ 5ನೇ ವೇತನ ಆಯೋಗವು ನೀಡಿದ ಶಿಫಾರಸ್ಸುಗಳನ್ನು ಯಥಾವತ್ತಾಗಿ ಜಾರಿಗೊಳಿಸಲಾಗಿತ್ತು’ ಎಂದು ಹೇಳಿದ್ದಾರೆ.

‘ಈ ವಿಚಾರವಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವೂ ಮನವಿ ಮಾಡಿದೆ. 28 ರಾಜ್ಯಗಳ ಪೈಕಿ 25 ರಾಜ್ಯಗಳಲ್ಲಿ ಕೇಂದ್ರ ಮಾದರಿ ವೇತನ ಶ್ರೇಣಿ ಇದೆ. ಅದೇ ಮಾದರಿಯಲ್ಲಿ ಕರ್ನಾಟಕದಲ್ಲಿಯೂ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸುವ ಅಗತ್ಯವಿದೆ. ಪರಾಮರ್ಶೆ ಮತ್ತು ಅನುಷ್ಠಾನಕ್ಕಾಗಿ ಅಧಿಕಾರಿಗಳ ವೇತನ ಸಮಿತಿಯ ರಚನೆಯನ್ನು ಇದೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಪ್ರಕಟಿಸಬೇಕು’ ಎಂದು ಸಲಹೆ ನೀಡಿದ್ದಾರೆ.

ವಿಜ್ಞಾನ ರಸಪ್ರಶ್ನೆ ಸ್ಪರ್ಧೆ ವಿಜೇತರು

ಬೆಂಗಳೂರು: ಕರ್ನಾಟಕ ಜ್ಞಾನ– ವಿಜ್ಞಾನ ಸಮಿತಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಏರ್ಪಡಿಸಿದ್ದ ‘ಸರ್ ಸಿ.ವಿ.ರಾಮನ್ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ’ಯಲ್ಲಿ ಆಯ್ಕೆಯಾದ ಬಹುಮಾನಿತರ ಹೆಸರುಗಳನ್ನು ಪ್ರಕಟಿಸಲಾಗಿದೆ.

ಹಾಸನದ ಪ್ರಿಯದರ್ಶಿನಿ ಪ್ರೌಢಶಾಲೆಯ ಲಿಖಿತ್ ಗೌಡ ಪ್ರಥಮ (₹6,000), ಮೈಸೂರಿನ ಎಸ್.ಜಿ.ಎಂ ಪ್ರೌಢಶಾಲೆಯ ಪ್ರಜ್ವಲ್ ದ್ವಿತೀಯ (₹5,000) ಮತ್ತು ಕೋಲಾರದ ಅಮರಜ್ಯೋತಿ ಶಾಲೆಯ ಹರ್ಷವರ್ಧನ ಎಸ್ ತೃತೀಯ (₹4,000) ಬಹುಮಾನಕ್ಕೆ ಆಯ್ಕೆಯಾಗಿದ್ದಾರೆ. ನಗದು ಜೊತೆಗೆ ಪುಸ್ತಕಗಳ ಕೊಡುಗೆಯನ್ನೂ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಮಾಧಾನಕರ ಬಹುಮಾನ: ಸೃಜನ್ ಎಸ್ ಉಕ್ಕಲಿ –ಚಿಕ್ಕೋಡಿ, ಪೃಥ್ವಿ ಎಚ್.ಎಸ್– ದಾವಣಗೆರೆ, ನವೀನ್‌ಕುಮಾರ್–ಅಂಗರೇಕನಹಳ್ಳಿ, ಚಿಕ್ಕಬಳ್ಳಾಪುರ, ಅಜಿತ್ ಎಚ್.ಕೆ–ಬಂಡಿಗಡಿ, ಚಿಕ್ಕಮಗಳೂರು, ವರ್ಷಿತಾ ದಿನೇಶ್.ಬಿ–ಕೊಡಗು, ತೇಜಸ್ ಎಸ್–ಚಿತ್ರದುರ್ಗ, ಗಂಗಾಧರ್ ಜಿ.ಎಸ್–ಚೊಟ್ಟನಹಳ್ಳಿ, ತುಮಕೂರು, ಪ್ರೀತಮ್ ಎಸ್ ಜುಟ್ಟನಟ್ಟಿ–ಬಾಗಲಕೋಟೆ, ನಿಧಿ ಮಹೇಶ್‌ಭಟ್–ಶಿರಸಿ, ಸಂಜನಾ–ಬೀದರ್. ಇವರಿಗೆ ತಲಾ ₹1 ಸಾವಿರ ನಗದು ಮತ್ತು ಪುಸ್ತಕಗಳನ್ನು ನೀಡಲಾಗುವುದು ಎಂದು ಈ.ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾಂತ್ರಿಕ ಸಮಿತಿ ವರದಿ ನಿರ್ಧಾರಕ್ಕೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಪೌಷ್ಟಿಕಾಂಶಯುಕ್ತ ಆಹಾರ ಪೂರೈಕೆಯಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ ತಾಂತ್ರಿಕ ಸಮಿತಿ ಸಲ್ಲಿಸಿರುವ ವರದಿಯನ್ನು ಒಪ್ಪಿಕೊಳ್ಳುವುದು ಅಥವಾ ತಿರಸ್ಕರಿಸುವುದಕ್ಕೆ ಸಂಬಂಧಿಸಿದಂತೆ ಎರಡು ವಾರಗಳಲ್ಲಿ ನಿರ್ಧಾರ ಕೈಗೊಳ್ಳಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಕುರಿತಂತೆ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಅಮರಾವತಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸಂಗೀತಾ ಗದುಗಿನ್ ಹಾಗೂ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಗುರುವಾರ ವಿಚಾರಣೆ ನಡೆಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ತಿಂಗಳಲ್ಲಿ ಪರಿಹಾರ ಕಂಡುಕೊಳ್ಳುವಂತೆ 2020ರ ಡಿಸೆಂಬರ್ 14ರಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶಿಸಿತ್ತು. ಈ ಆದೇಶದನ್ವಯ ರಚಿಸಲಾಗಿದ್ದ ತಾಂತ್ರಿಕ ಸಮಿತಿ 2021ರ ಆಗಸ್ಟ್ 19ರಂದು ವರದಿ ಸಲ್ಲಿಸಿದ್ದರೂ ಈವರೆಗೂ ಅದು ಜಾರಿಯಾಗಿಲ್ಲ.

ಪ್ರತಿ ಮಾರ್ಚ್ 3ಕ್ಕೆ ಚಲನಚಿತ್ರೋತ್ಸವ

ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ವರ್ಷ ಮಾರ್ಚ್ 3 ರಂದು ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವವನ್ನು ಆಯೋಜಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಇಲ್ಲಿನ ಕೃಷಿ ವಿಶ್ವವಿದ್ಯಾಲಯ ಆವರಣದಲ್ಲಿ ಕರ್ನಾಟಕ ಚಲನಚಿತ್ರ ಅಕಾಡೆಮಿ, ವಾರ್ತಾ ಮತ್ತು ಪ್ರಚಾರ ಇಲಾಖೆ ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿ ಸಹಯೋಗದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

‘ಚಿತ್ರೋತ್ಸವ ಸಿದ್ಧತೆಗೆ 35 ದಿನಗಳ ಕಾಲಾವಕಾಶ ಸಾಲದು’ ಎಂದು ಹೇಳಿದ ಉತ್ಸವದ ಕಲಾತ್ಮಕ ನಿರ್ದೇಶಕ ಎಚ್.ಎನ್. ನರಹರಿರಾವ್ ಅವರ ಮಾತಿಗೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಕೆಲವೊಮ್ಮೆ ಸಂಕಷ್ಟಗಳು ಅವಕಾಶವನ್ನು ಸೃಷ್ಟಿಸುತ್ತವೆ. ಈ ಬಾರಿ ಕೋವಿಡ್ ಸಂಕಷ್ಟ ಅತ್ಯಲ್ಪ ಅವಧಿಯಲ್ಲಿ ಈ ಚಿತ್ರೋತ್ಸವವನ್ನು ಆಯೋಜಿಸುವ ಸಾಧ್ಯತೆಯನ್ನು ತೆರೆದಿಟ್ಟಿದೆ’ ಎಂದರು.

‘ಮೈಸೂರಿನಲ್ಲಿ ಚಿತ್ರನಗರಿ 2022–23ರಲ್ಲಿ ಅನುಷ್ಠಾನ ಮಾಡುತ್ತೇವೆ. ಕನ್ನಡದ ಖ್ಯಾತ ನಿರ್ದೇಶಕ ದಿವಂಗತ ಪುಟ್ಟಣ್ಣ ಕಣಗಾಲ್ ಅವರ ನಿವಾಸವನ್ನು ಸ್ಮಾರಕವನ್ನಾಗಿ ಮಾಡಲು ಸಹಮತವಿದೆ. ಚಲನಚಿತ್ರ ಅಕಾಡೆಮಿಯಲ್ಲಿ 300 ಆಸನಗಳ ಚಿತ್ರಪ್ರದರ್ಶನ ಮಂದಿರವನ್ನು ಪೂರ್ಣಗೊಳಿಸಲು ₹ 15 ಕೋಟಿ ರೂಪಾಯಿ ಅನುದಾನದ ಬೇಡಿಕೆಯಿದೆ. ಅದನ್ನೂ ಈಡೇರಿಸುತ್ತೇನೆ’ ಎಂದು ತಿಳಿಸಿದರು.

‘ಭಾರತದಲ್ಲಿ ಫಿಯಾಫ್ (FIAPF) ಮಾನ್ಯತೆ ಪಡೆದ ಪೈಕಿ ಬೆಂಗಳೂರು ಅಂತರರಾಷ್ಟ್ರೀಯ ಚಿತ್ರೋತ್ಸವ ಐದನೆಯದು. ಆದರೆ, ಗುಣಮಟ್ಟದಲ್ಲಿ ಅದು ಮೊದಲ ಸ್ಥಾನದಲ್ಲಿರಬೇಕು’ ಎಂದು ಆಶಿಸಿದರು.

ಚಿತ್ರೋತ್ಸವದ ಸಾಂಕೇತಿಕ ಚಿತ್ರ (ಸಿಗ್ನೇಚರ್ ಫಿಲ್ಮ್) ಉದ್ಘಾಟಿಸಿದ ರಾಷ್ಟ್ರಪ್ರಶಸ್ತಿ ಪುರಸ್ಕೃತ ಚಿತ್ರ ನಿರ್ದೇಶಕ ಪ್ರಿಯದರ್ಶನ್ ಮಾತನಾಡಿ, ‘ಸಿನಿಮಾ ನೋಡಿ ಕಲಿಯಲು ಚಿತ್ರೋತ್ಸವಗಳು ಒಳ್ಳೆಯ ಪಾಠಶಾಲೆ. ಸಿನಿಮಾಗಳನ್ನು ನೋಡಿದ ಅನುಭವ ಮತ್ತು ಕಲಿಕೆಯಿಂದ ಹೊಸ ಸಿನಿಮಾಗಳನ್ನು ಮಾಡಬಹುದು. ಈ ಅನುಭವ ಒಟಿಟಿ ಮೂಲಕ ವೀಕ್ಷಿಸುವುದರಿಂದ ಬರುವುದಿಲ್ಲ. ಸಿನಿಮಾಗಳು ಶಿಕ್ಷಣ, ಕಲೆ, ಸಂಸ್ಕೃತಿ ಎಲ್ಲವನ್ನೂ ಪ್ರತಿಬಿಂಬಿಸುತ್ತವೆ’ ಎಂದರು.

ಪುನೀತ್ ರಾಜ್‌ಕುಮಾರ್ ಜೊತೆಗಿನ ಆತ್ಮೀಯತೆ ನೆನಪಿಸಿದ ನಿರ್ದೇಶಕ ಪ್ರಿಯದರ್ಶನ್ ಅವರು, ‘ಈ ಚಿತ್ರೋತ್ಸವವನ್ನು ಪುನೀತ್‌ಗೆ ಅರ್ಪಿಸಿ’ ಎಂದು ಕೋರಿದರು.

ನಟಿ ಭಾರತಿ ವಿಷ್ಣುವರ್ಧನ್, ‘ಚಿತ್ರೋತ್ಸವಗಳು ಸಿನಿಮಾ ರಂಗಕ್ಕೆ ಸ್ಫೂರ್ತಿ ನೀಡುತ್ತವೆ. ಬೇರೆ ಬೇರೆ ದೇಶಗಳ ಚಿತ್ರಗಳನ್ನು ನೋಡುವುದರಿಂದ ಅಲ್ಲಿನ ಸಿನಿಮಾ ತಂತ್ರಜ್ಞಾನ, ಕಲೆಯನ್ನು ನೋಡಿ ಕಲಿಯಬಹುದು. ಭಾವನೆಗಳ ವಿನಿಮಯಕ್ಕೆ ಒಳ್ಳೆಯ ವೇದಿಕೆ. ವಿಶ್ವ ಸಿನಿಮಾ ಕುಟುಂಬದ ಸದಸ್ಯೆ ಎನಿಸಿಕೊಳ್ಳಲು ಹೆಮ್ಮೆ ಎನಿಸುತ್ತದೆ’ ಎಂದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಪ್ರಾಸ್ತಾವಿಕ ಮಾತನಾಡಿದರು. ತೋಟಗಾರಿಕೆ ಸಚಿವ ಮುನಿರತ್ನ, ವಾರ್ತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಆಯುಕ್ತ ಡಾ.ಪಿ.ಎಸ್. ಹರ್ಷ, ಅಶ್ವಿನಿ ಪುನೀತ್ ರಾಜ್‌ಕುಮಾರ್, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಡಿ.ಆರ್. ಜೈರಾಜ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಇದ್ದರು.

ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಮರಣ ಸಂಚಿಕೆಯನ್ನು ನಟ ದರ್ಶನ್ ಬಿಡುಗಡೆಗೊಳಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್, ಸಚಿವ ಮುನಿರತ್ನ, ನಟಿ ಭಾರತಿ ವಿಷ್ಣುವರ್ಧನ್, ನಿರ್ದೇಶಕ ಪ್ರಿಯದರ್ಶನ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಇದ್ದಾರೆ. –ಪ್ರಜಾವಾಣಿ ಚಿತ್ರ

> ಕನ್ನಡ ಉಳಿಯಲು, ಬೆಳೆಯಲು ಚಲನಚಿತ್ರ ಪ್ರಭಾವಿ ಮಾಧ್ಯಮ. ಇದನ್ನು ಉಳಿಸಲು ಸ್ಪೆಷಲ್ ಎಫೆಕ್ಟ್ ಜೊತೆಗೆ ವಿಶೇಷ ಎಫರ್ಟ್ ಬೇಕು. ಚಿತ್ರಮಂದಿರಗಳ ಉಳಿಸಲು ಭಿನ್ನವಾಗಿ ಆಲೋಚಿಸಬೇಕು
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ರಾಜ್ಯ ಬಜೆಟ್ ಒಳನೋಟ
ಭಾಗವಹಿಸುವವರು:
ಆರ್.ಜಿ. ಮುರಳೀಧರ್, ಆರ್ಥಿಕ ತಜ್ಞ
ಸಂಗೀತಾ ಕಟ್ಟಿಮನಿ, ಅರ್ಥಶಾಸ್ತ್ರಜ್ಞೆ
ಸಂವಾದ
ಸಂಜೆ 4 ರಿಂದ
ಪಾಡ್‌ಕಾಸ್ಟ್: ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ. ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್.
ಪ್ರಜಾಮತ: ರಾತ್ರಿ 9 ಚುನಾವಣೆ ವಾರ್ತೆ
ಕನ್ನಡ ಧ್ವನಿ

‘ಕೊಳೆಗೇರಿ: ಶೇ 67 ಯುವತಿಯರಷ್ಟೇ ಆನ್ ಲೈನ್ ತರಗತಿಯಲ್ಲಿ ಭಾಗಿ’

ನವದೆಹಲಿ(ಪಿಟಿಐ): 2020ರಲ್ಲಿ ದೇಶದಲ್ಲಿ ಆವರಿಸಿದ ಕೊರೊನಾ ವೈರಸ್ಸಿನ ಮೊದಲ ಅಲೆಯಿಂದಾಗಿ ದೆಹಲಿ, ಮಹಾರಾಷ್ಟ್ರ, ಬಿಹಾರ ಮತ್ತು ತೆಲಂಗಾಣದ ಕೊಳೆಗೇರಿ ಪ್ರದೇಶದ ಶೇ 67ರಷ್ಟು ಯುವತಿಯರು ಮಾತ್ರವೇ ಆನ್ ಲೈನ್ ತರಗತಿಗಳಲ್ಲಿ ಭಾಗಿಯಾಗಿದ್ದಾರೆ. ಅಲ್ಲದೆ ಕೋವಿಡ್ ಪರಿಣಾಮ ಶೇ 56ರಷ್ಟು ಯುವತಿಯರು ತಮ್ಮ ಮನೋರಂಜನೆ ಚಟುವಟಿಕೆಗಳಿಂದ ವಂಚಿತರಾಗಿದ್ದಾರೆ ಎಂದು ಅಧ್ಯಯನ ವರದಿಯೊಂದು ತಿಳಿಸಿದೆ.

‘ಸೇವ್ ದಿ ಚಿಲ್ಡ್ರನ್’ ಎಂಬ ಎನ್ ಜಿಒ ನಡೆಸಿದ ಈ ಅಧ್ಯಯನದಲ್ಲಿ ಕಳೆದ ವರ್ಷದ ಫೆಬ್ರವರಿಯಲ್ಲಿ ಈ ನಾಲ್ಕು ರಾಜ್ಯಗಳ 10 ವರ್ಷದಿಂದ 18 ವಯೋಮಾನದ ಶೇ 68 ಯುವತಿಯರು ವೈದ್ಯಕೀಯ ಚಿಕಿತ್ಸೆ ಮತ್ತು ಪೌಷ್ಟಿಕ ಸೇವೆಗಳಿಂದ ವಂಚಿತರಾಗಿದ್ದರು ಎಂದು ಹೇಳಿದೆ. ದೆಹಲಿ, ಮಹಾರಾಷ್ಟ್ರ, ಬಿಹಾರ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಈ ಅಧ್ಯಯನ ನಡೆಸಲಾಗಿದೆ ಎನ್ನಲಾಗಿದೆ.

ಕೋವಿಡ್ ವ್ಯಾಪಕವಾಗಿ ಹರಡುವ ಭೀತಿಯಿಂದ 2020ರಲ್ಲಿ ದೇಶದಾದ್ಯಂತ ಲಾಕ್ ಡೌನ್ ಘೋಷಿಸಲಾಯಿತು. ಈ ವೇಳೆ ಶಾಲೆಗಳು ಮತ್ತು ಆರೋಗ್ಯ ಕೇಂದ್ರಗಳನ್ನು ಮುಚ್ಚಲಾಯಿತು. ಇದರಿಂದಾಗಿ ವೈದ್ಯ ಸಿಬ್ಬಂದಿಯ ಕೊರತೆ ಉಂಟಾಗಿ, ಆರೋಗ್ಯ ಕೇಂದ್ರದ ಬಳಿ ವೈದ್ಯ ತಪಾಸಣೆಗಾಗಿ ಉದ್ದದ ಸಾಲುಗಳು ಏರ್ಪಟ್ಟವು. ಪರಿಣಾಮ ಹದಿಹರೆಯದ ಯುವತಿಯರು ವೈದ್ಯಕೀಯ ಚಿಕಿತ್ಸೆ ಮತ್ತು ಪೌಷ್ಟಿಕ ಸೇವೆಗಳಿಂದ ವಂಚಿತರಾಗಿದ್ದರು. ಲಾಕ್ ಡೌನ್ ತೆರವು ಬಳಿಕ ಶೇ 51ರಷ್ಟು ಯುವತಿಯರು ಆರೋಗ್ಯ ಸೇವೆ ಪಡೆಯಲು ಹರಸಾಹಸ ಪಟ್ಟಿದ್ದಾರೆ ಎಂದು "ವಿಂಗ್ಸ್ 2022: ವರ್ಲ್ಡ್ ಆಫ್ ಇಂಡಿಯಾ ಗರ್ಲ್ಸ್: ಸ್ಪಾಟ್ ಲೈಟ್ ಆನ್ ಅಡೋಲೆಸ್ಸೆಂಟ್ ಗರ್ಲ್ಸ್ ಆ್ಯಮಿಡ್ ಕೋವಿಡ್-19' ಎಂಬ ಅಧ್ಯಯನ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಈ ನಾಲ್ಕು ರಾಜ್ಯಗಳ ಪ್ರತಿ ಮೂವರಲ್ಲಿ ಒಬ್ಬ ಯುವತಿ ಮಾತ್ರ ಆನ್ ಲೈನ್ ತರಗತಿಯಲ್ಲಿ ಪಾಲ್ಗೊಂಡಿದ್ದಾರೆ. ಅಲ್ಲದೆ ನಾಲ್ವರು ತಾಯಂದಿರ ಪೈಕಿ ಮೂವರು ತಾಯಂದಿರು, ಕೊರೊನಾ ವೈರಸ್ ತಮ್ಮ ಮಕ್ಕಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪ್ರತಿ ಐವರು ವಿದ್ಯಾರ್ಥಿಗಳ ಪೈಕಿ ಇಬ್ಬರು ವಿದ್ಯಾರ್ಥಿ(ಶೇ.42)ಗಳನ್ನು ಅವರು ಓದುತ್ತಿದ್ದ ಶಾಲೆಗಳಿಂದ ಮತ್ತೆ ಸಂಪರ್ಕಿಸಲು ಯತ್ನಿಸಿಲ್ಲ ಎಂದು ತಿಳಿಸಿದೆ. ಕೊರೊನಾದಿಂದ ಉದ್ಯೋಗ ನಷ್ಟ ಮತ್ತು ಕುಟುಂಬದ ಆದಾಯ ಕುಸಿತವೂ ಆಗಿದೆ ಈ ವರದಿಯಲ್ಲಿ ಹೇಳಲಾಗಿದೆ.

ಕರ್ನಾಟಕಕ್ಕೆ ₹ 492.39 ಕೋಟಿ ಬಿಡುಗಡೆ

ನವದೆಹಲಿ: ಕಳೆದ ವರ್ಷ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಪ್ರವಾಹ ಮತ್ತು ಭೂ ಕುಸಿತದಿಂದ ಉಂಟಾಗಿರುವ ಹಾನಿಗೆ ಕೇಂದ್ರ ಸರ್ಕಾರ ಗುರುವಾರ ₹ 492.39 ಕೋಟಿ ಪರಿಹಾರ ಬಿಡುಗಡೆ ಮಾಡಿದೆ.

ಐದು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯೆ ನಿಧಿ (ಎನ್‌ಡಿಆರ್‌ಎಫ್) ಅಡಿ ಹೆಚ್ಚುವರಿಯಾಗಿ ಒಟ್ಟು ₹ 1,682 ಕೋಟಿ ಪರಿಹಾರ ಬಿಡುಗಡೆ ಮಾಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಉನ್ನತ ಮಟ್ಟದ ಸಮಿತಿ ಅನುಮೋದನೆ ನೀಡಿದೆ.

ಕರ್ನಾಟಕ ಮಾತ್ರವಲ್ಲದೆ, ತಮಿಳುನಾಡು (₹ 352.85 ಕೋಟಿ), ಮಹಾರಾಷ್ಟ್ರ (₹ 355.39 ಕೋಟಿ), ಹಿಮಾಚಲ ಪ್ರದೇಶ (₹ 112.19 ಕೋಟಿ) ಆಂಧ್ರ ಪ್ರದೇಶ (₹ 351.43 ಕೋಟಿ) ಹಾಗೂ ಕೇಂದ್ರಾಡಳಿತ ಪ್ರದೇಶ ಪುದುಚೇರಿಗೆ (₹17.86 ಕೋಟಿ) ಪರಿಹಾರ ಬಿಡುಗಡೆ ಮಾಡಲಾಗಿದೆ.

ಕೇಂದ್ರವು ಎಲ್ಲ ರಾಜ್ಯಗಳಿಗೆ 2021–22ನೇ ಸಾಲಿನಲ್ಲಿ ವಿಪತ್ತು ಪ್ರತಿಕ್ರಿಯೆ ನಿಧಿ (ಎಸ್‌ಡಿಆರ್‌ಎಫ್) ಅಡಿ ₹ 17,747.20 ಕೋಟಿ ವಾರ್ಷಿಕ ನೆರವನ್ನು ಬಿಡುಗಡೆ ಮಾಡಿದ್ದು, ಇದೀಗ ಪ್ರತ್ಯೇಕವಾಗಿ ಈ ಹೆಚ್ಚುವರಿ ನೆರವನ್ನು ಒದಗಿಸಿದೆ.

‘ಲಸಿಕೆ ವ್ಯರ್ಥ ಮಾಡಬೇಡಿ’

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ ವ್ಯರ್ಥವಾಗದಂತೆ ನೋಡಿಕೊಳ್ಳಲು ಕೇಂದ್ರ ಸರ್ಕಾರ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

ಶೀಘ್ರವೇ ಅವಧಿ ಮುಗಿಯಲಿರುವ ಲಸಿಕೆಯ ವಯಲ್‌ಗಳು ಖಾಸಗಿ ಆಸ್ಪತ್ರೆಗಳಲ್ಲಿ ಇದ್ದಲ್ಲಿ, ಅವುಗಳನ್ನು ಪಡೆದು, ಸರ್ಕಾರಿ ಆಸ್ಪತ್ರೆ/ ಉಗ್ರಾಣಗಳಲ್ಲಿ ದಾಸ್ತಾನಿರುವ ದೀರ್ಘ ಅವಧಿಯ ವಯಲ್‌ಗಳನ್ನು ಆ ಆಸ್ಪತ್ರೆಗಳಿಗೆ ಪೂರೈಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಆರೋಗ್ಯ ಸಚಿವಾಲಯ ಸೂಚಿಸಿದೆ.

ಕೋವಿಡ್: ಸಕ್ರಿಯ ಪ್ರಕರಣ 3,890ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 3,890ಕ್ಕೆ ಇಳಿಕೆಯಾಗಿದೆ. ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಸೋಂಕಿತರ ಸಂಖ್ಯೆ 19 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಇವೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಇಳಿಕೆ ಮಾಡಲಾಗಿದ್ದು, ಒಂದು ದಿನದ ಅವಧಿಯಲ್ಲಿ 36 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 382 ಹೊಸ ಪ್ರಕರಣಗಳು ಪತ್ತೆಯಾಗಿವೆ.

ಸೋಂಕು ದೃಢ ಪ್ರಮಾಣ ಶೇ 1.04 ರಷ್ಟಿದೆ. ಬೆಂಗಳೂರಿನಲ್ಲಿ 239 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಕೊಡಗಿನಲ್ಲಿ 16, ಮೈಸೂರಿನಲ್ಲಿ 15, ಬಳ್ಳಾರಿಯಲ್ಲಿ 14, ತುಮಕೂರಿನಲ್ಲಿ 12, ಧಾರವಾಡದಲ್ಲಿ 11 ಹಾಗೂ ಶಿವಮೊಗ್ಗದಲ್ಲಿ 10 ಪ್ರಕರಣಗಳು ಪತ್ತೆಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ ಒಂದಂಕಿಯಲ್ಲಿವೆ.

ರಾಯಚೂರು, ರಾಮನಗರ, ಮಂಡ್ಯ, ಹಾವೇರಿ, ದಾವಣಗೆರೆ ಹಾಗೂ ಬಾಗಲಕೋಟೆಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಈವರೆಗೆ ದೃಢಪಟ್ಟ ಒಟ್ಟು ಪ್ರಕರಣಗಳ ಸಂಖ್ಯೆ 39.41 ಲಕ್ಷಕ್ಕೆ ಏರಿಕೆಯಾಗಿದೆ.

ಸೋಂಕಿತರ ಪೈಕಿ ಬೆಂಗಳೂರಿನಲ್ಲಿ 340 ಮಂದಿ ಸೇರಿದಂತೆ ರಾಜ್ಯದಲ್ಲಿ 689 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 38.97 ಲಕ್ಷಕ್ಕೆ ತಲುಪಿದೆ.

ಕೊರೊನಾ ಸೋಂಕಿತರಲ್ಲಿ 10 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ನಾಲ್ವರು, ಯಾದಗಿರಿ, ವಿಜಯಪುರ, ತುಮಕೂರು, ಮಂಡ್ಯ, ಧಾರವಾಡ ಹಾಗೂ ಬೀದರ್‌ನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಮರಣ ಪ್ರಮಾಣ ದರವು ಶೇ 2.61 ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 39,979ಕ್ಕೆ ತಲುಪಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

39,41,835 ▲	ಒಟ್ಟು ಸೋಂಕಿತರು (39,41,453 ನಿನ್ನೆಯ ವಿವರ)
3,890 ▼	ಸಕ್ರಿಯ ಪ್ರಕರಣಗಳು
38,97,928 ▲	ಗುಣಮುಖರಾದವರು
39,979 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	382	▲
ಗುಣಮುಖ	689	▼
ಸಾವು	10	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಕುಗ್ಗಿದ ಕೊರೊನಾ ಸೋಂಕು ಸಹಜ ಸ್ಥಿತಿಯತ್ತ ಸಮಾಜ –ಕೇಂದ್ರ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಸೋಂಕು ಪರಿಣಾಮ ಕುಗಿದ್ದು, ಲಸಿಕೆಯುಕ್ತವಾಗಿದೆ. ಆರ್ಥಿಕ ವಹಿವಾಟು, ಶಾಲೆ, ಕಾಲೇಜುಗಳ ಆರಂಭದ ಜೊತೆಗೆ ಸಮಾಜದಲ್ಲಿ ಸಹಜ ವಾತಾವರಣ ನಿರ್ಮಿಸುವ ಸ್ಥಿತಿ ಮೂಡಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

‘ಆದರೂ, ಕೋವಿಡ್ ಮುಂಜಾಗ್ರತೆ ಕ್ರಮಗಳನ್ನು ಪಾಲಿಸುವುದು ಅಗತ್ಯ. ಈ ವರ್ಷ ಕೋವಿಡ್‌ನಿಂದ ಮೃತಪಟ್ಟವರಲ್ಲಿ ಲಸಿಕೆಯನ್ನು ಪಡೆಯದವರ ಪ್ರಮಾಣ ಶೇ 92ರಷ್ಟು ಇತ್ತು’ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ಗುರುವಾರ ಪ್ರಕಟಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವಾಲಯದ ಹಿರಿಯ ಅಧಿಕಾರಿಗಳು, ‘15–18 ವರ್ಷ ವಯಸ್ಸಿನವರಲ್ಲಿ ಶೇ 74ರಷ್ಟು ಮಂದಿಗೆ ಮೊದಲ ಡೋಸ್ ಹಾಗೂ ಶೇ 39ರಷ್ಟು ಮಂದಿಗೆ ಎರಡೂ ಡೋಸ್ ಲಸಿಕೆ ನೀಡಲಾಗಿದೆ’ ಎಂದು ತಿಳಿಸಿದರು.

ಪ್ರಸ್ತುತ, ದೇಶದಲ್ಲಿ 29 ಜಿಲ್ಲೆಗಳಲ್ಲಿ ಮಾತ್ರವೇ ಕೋವಿಡ್ ದೃಢೀಕರಣ ಪ್ರಮಾಣ ಶೇ 10ಕ್ಕೂ ಹೆಚ್ಚಾಗಿದೆ. 34 ಜಿಲ್ಲೆಗಳಲ್ಲಿ ಈ ಪ್ರಮಾಣವು ಶೇ 5 ರಿಂದ 10ರಷ್ಟಿದೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಪೌಷ್ಟಿಕ ಆಹಾರ ಸೇವಿಸಿ

ಲೂಪ್ ಟೆಲಿಕಾಂ ಅರ್ಜಿ ವಜಾ

ನವದೆಹಲಿ (ಪಿಟಿಐ): ‘2ಜಿ ಪರವಾನಗಿ ಪಡೆಯಲು ನೀಡಿದ್ದ ಶುಲ್ಕ ಹಾಗೂ ಪರವಾನಗಿ ರದ್ದತಿ ನಂತರ ಕಂಪನಿಯ ಖ್ಯಾತಿಗೆ ಹಾನಿಯುಂಟಾಗಿದ್ದಕ್ಕಾಗಿ ₹ 1,454 ಕೋಟಿ ಮರುಪಾವತಿ ಮಾಡಬೇಕು’ ಎಂದು ಕೋರಿ ಲೂಪ್ ಟೆಲಿಕಾಂ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿತು.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ವಿಕ್ರಮ್ ನಾಥ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು. ‘ಈ ಕ್ರಿಮಿನಲ್ ಪ್ರಕರಣದಲ್ಲಿ ಕಂಪನಿಯ ಪ್ರವರ್ತಕರನ್ನು ಖುಲಾಸೆಗೊಳಿಸಿದ ಮಾತ್ರಕ್ಕೆ, ಟೆಲಿಕಾಂ ಪರವಾನಗಿ ನೀಡುವ ಪ್ರಕ್ರಿಯೆಯು ಅಸಂಬದ್ಧವಾಗಿತ್ತು ಎಂಬ ಕೋರ್ಟ್‌ನ ತೀರ್ಮಾನವನ್ನು ಅಳಿಸಿಹಾಕಲಾಗದು’ ಎಂದು ನ್ಯಾಯಪೀಠ ಹೇಳಿದೆ.

2ಜಿ ತರಂಗಾಂತರಗಳ ಹಂಚಿಕೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಸಿಪಿಐಎಲ್ ಎಂಬ ಸ್ವಯಂ ಸೇವಾ ಸಂಸ್ಥೆ ಅರ್ಜಿ ಸಲ್ಲಿಸಿತ್ತು.

‘ನೀಟ್’ ವಿರುದ್ಧ ಆಕ್ರೋಶ ಮುಂದುವರಿದ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್) ರದ್ದುಪಡಿಸಬೇಕು ಎಂದು ಒತ್ತಾಯಿಸಿ ಆರಂಭವಾದ ಟ್ವಿಟರ್ ಅಭಿಯಾನಕ್ಕೆ ಗುರುವಾರವೂ ಹಲವರು ಪ್ರತಿಕ್ರಿಯಿಸಿದ್ದಾರೆ.

ಉಕ್ರೇನ್‌ನಲ್ಲಿ ರಷ್ಯಾ ನಡೆಸಿದ ಶೆಲ್ ದಾಳಿಯಲ್ಲಿ ಹಾವೇರಿಯ ನವೀನ್ ಸಾವಿಗೀಡಾದ ಬಳಿಕ, ವೈದ್ಯಕೀಯ ಕಾಲೇಜುಗಳ ಪ್ರವೇಶ ಪ್ರಕ್ರಿಯೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಈ ಅಭಿಯಾನವನ್ನು ಕೈಗೊಳ್ಳಲಾಗಿತ್ತು.

ಟ್ಯೂಷನ್ ಹಾವಳಿಯ ಚಿತ್ರಗಳನ್ನು ಕೆಲವರು ಟ್ವೀಟ್‌ಗೆ ಲಗತ್ತಿಸಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ನೀಟ್ ಕುರಿತ ಟ್ವೀಟ್‌ಗೆ ಹಲವರು ಪ್ರತಿಕ್ರಿಯಿಸಿದ್ದಾರೆ. ಸಿಪಿಐ(ಎಂ) ಪುದುಚೇರಿ ಘಟಕ ಸಹ ಎಚ್.ಡಿ. ಕುಮಾರಸ್ವಾಮಿ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿದೆ.

‘ಉಳ್ಳವರು ಪೇಮೆಂಟ್ ಸೀಟ್ ಗಿಟ್ಟುವರಯ್ಯ, ಬಡ ಮತ್ತು ಮಧ್ಯಮ ವರ್ಗದವರು ಏನು ಮಾಡಬೇಕಯ್ಯ. ವೈದ್ಯ ಶಿಕ್ಷಣದ ಕನಸು ಕಾಣುವ ಬಡ, ಮಧ್ಯಮ ವರ್ಗದ ಬದುಕನ್ನು ಛಿದ್ರಗೊಳಿಸುತ್ತಿರುವ ನೀಟ್ ವಿದ್ಯಾರ್ಥಿಗಳು ಮತ್ತು ಪೋಷಕರ ಪಾಲಿಗೆ ಮರಣಶಾಸನವಾಗಿದೆ. ಉನ್ನತ ಶಿಕ್ಷಣವನ್ನು ಉಳ್ಳವರಿಗೆ ಮೀಸಲಿಟ್ಟು ಉಳಿದವರಿಗೆ ವ್ಯವಸ್ಥಿತವಾಗಿ ನಿರಾಕರಿಸಲಾಗುತ್ತಿದೆ...’ ಎಂದು ಸುನಿ ಎನ್ನುವವರು ಟ್ವೀಟ್ ಮಾಡಿದ್ದಾರೆ.

‘ಕರ್ನಾಟಕದ ವೈದ್ಯಕೀಯ ಶಿಕ್ಷಣದ ಅಭ್ಯರ್ಥಿಗಳಿಗೆ ಗಗನ ಕುಸುಮವಾಗಿರುವ ನೀಟ್ ಅನ್ನು ಬಹಿಷ್ಕರಿಸಿ’ ಎಂದು ಸೂರ್ಯಪ್ರಕಾಶ್ ಪ್ರತಿಕ್ರಿಯಿಸಿದ್ದಾರೆ.

‘ನೀಟ್ ರದ್ದುಪಡಿಸಬೇಕು ಎನ್ನುವ ಅಭಿಯಾನ ತಮಿಳುನಾಡಿನಿಂದ ಆರಂಭವಾಯಿತು. ಈಗ ಕರ್ನಾಟಕದಲ್ಲಿ ಆರಂಭವಾಗಿದೆ. ಕೊನೆಗೂ, ಕನ್ನಡಿಗರು ನಮ್ಮ ಜತೆ ಸೇರಿದ್ದಾರೆ. ತಮಿಳಿಗರಾಗಿ ನಾವು ನಿಮ್ಮನ್ನು ಬೆಂಬಲಿಸುತ್ತೇನೆ. ಶೀಘ್ರ ಇಡೀ ದೇಶದಾದ್ಯಂತ ಈ ಅಭಿಯಾನ ವ್ಯಾಪಿಸುತ್ತುತ್ತದೆ’ ಎಂದು ಕೆಲವರು ತಮಿಳಿನಲ್ಲಿ ಟ್ವೀಟ್ ಮಾಡಿದ್ದಾರೆ.

‘ನೀಟ್ ಮೋಸದಿಂದ ನಮ್ಮ ಕನ್ನಡ ನಾಡಿನಲ್ಲಿ ವೈದ್ಯಕೀಯ ಸೀಟು ಸಿಗದೆ ವಿದೇಶದಲ್ಲಿ ವ್ಯಾಸಂಗ ಮಾಡಲು ಹೋಗುತ್ತಿದ್ದಾರೆ’ ಎಂದು ನಾರಾಯಣ ಕುಮಾರ್ ಎನ್ನುವವರು ಪ್ರತಿಕ್ರಿಯಿಸಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗಕ್ಕೆ ಹಿಂದುಳಿದ ಜಾತಿಗಳ ಒಕ್ಕೂಟ ಮನವಿ

‘ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಬೇಡ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಾಮಾಜಿಕವಾಗಿ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಬಗ್ಗೆ ದತ್ತಾಂಶ ನೀಡಲಿ
- ಇನ್ನಷ್ಟು ವಿವರ ಸಲ್ಲಿಸಲು ಹದಿನೈದು ದಿನ ಸಮಯ ಕೋರಿದ ಒಕ್ಕೂಟ

ಬೆಂಗಳೂರು: ‘ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪ್ರವರ್ಗ 2ಎ ಮೀಸಲಾತಿ ಪಟ್ಟಿಗೆ ಸೇರಿಸಬಾರದು’ ಎಂದು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟವು ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಿದೆ.

ಪಂಚಮಸಾಲಿ ಸಮುದಾಯವನ್ನು 2-ಎ ಮೀಸಲಾತಿ ಪಟ್ಟಿಗೆ ಸೇರಿಸುವ ಅರ್ಜಿ ವಿಚಾರಣೆ ನಡೆಸುತ್ತಿರುವ ಆಯೋಗಕ್ಕೆ ಒಕ್ಕೂಟದ ಅಧ್ಯಕ್ಷ ಕೆ.ಎಂ. ರಾಮಚಂದ್ರಪ್ಪ ಮತ್ತು ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ಮನವಿ ಸಲ್ಲಿಸಿದ್ದರು. ಖುದ್ದು ವಿಚಾರಣೆಗೆ ಹಾಜರಾಗಲು ಆಯೋಗ ಗುರುವಾರ ಸಮಯ ನಿಗದಿ ಮಾಡಿ ನೋಟಿಸ್ ನೀಡಿತ್ತು.

‘ಆಯೋಗಕ್ಕೆ ರವಿವರ್ಮಕುಮಾರ್ ಅವರು ಅಧ್ಯಕ್ಷರಾಗಿದ್ದಾಗ ಲಿಂಗಾಯತ ಸಮುದಾಯವು ಇದೇ ವಿಷಯದ ಸಂಬಂಧ ಸಲ್ಲಿಸಿದ್ದ ಮನವಿ ತಿರಸ್ಕಾರಗೊಂಡಿದೆ. ಈಗ ಪಂಚಮಸಾಲಿ ಸಮುದಾಯ ಮೀಸಲಾತಿ ಬೇಡಿಕೆ ಇಟ್ಟಿದೆ. ಈ ಸಮುದಾಯವು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಬಗ್ಗೆ ಯಾವುದೇ ಅಂಕಿ–ಅಂಶಗಳು ಮತ್ತು ದತ್ತಾಂಶಗಳನ್ನು ಈ ಹಿಂದಿನ ಆಯೋಗಗಳು ನೀಡಿಲ್ಲ. ಆಯೋಗದ ವರದಿಗಳಲ್ಲೂ ಇದು ಉಲ್ಲೇಖವಾಗಿಲ್ಲ. ಸಂವಿಧಾನ ಜಾರಿಗೆ ಬಂದ ಬಳಿಕ ನೇಮಕ ಆಗಿರುವ ಯಾವ ಆಯೋಗಗಳೂ (ನಾಗನಗೌಡ ಸಮಿತಿ, ಹಾವನೂರ್ ಆಯೋಗ, ವೆಂಕಟಸ್ವಾಮಿ ಆಯೋಗ, ಚಿನ್ನಪ್ಪರೆಡ್ಡಿ ಆಯೋಗ) ಪಂಚಮಸಾಲಿ ಸಮುದಾಯವನ್ನು ಪ್ರವರ್ಗ 2ಎ ಪಟ್ಟಿಗೆ ಸೇರಿಸಲು ಶಿಫಾರಸು ಮಾಡಿಲ್ಲ’ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎಣ್ಣೆಗೆರೆ ಆರ್. ವೆಂಕಟರಾಮಯ್ಯ ವಾದ ಮಂಡಿಸಿದರು.

‘ಪ್ರವರ್ಗ 2ಎ ಅಡಿಯಲ್ಲಿ ಇರುವ ಸಮುದಾಯಗಳಷ್ಟು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವಿಕೆ ಬಗ್ಗೆ ದತ್ತಾಂಶದೊಂದಿಗೆ ಸ್ಪಷ್ಟಪಡಿಸಬೇಕು. ಈ ಯಾವುದೇ ಅಂಶಗಳು ಪಂಚಮಸಾಲಿ ಸಮುದಾಯದ ಮನವಿಯಲ್ಲಿ ಕಂಡು ಬರುವುದಿಲ್ಲ. ಮನವಿ ಪುರಸ್ಕರಿಸುವ ಮೊದಲು ಪಂಚಮಸಾಲಿ ಸಮುದಾಯಗಳ ಮನೆ ಮನೆ ಸಮೀಕ್ಷೆ ನಡೆಸಿ ಅಂಕಿ–ಅಂಶಗಳನ್ನು ಆಯೋಗ ಪಡೆಯಬೇಕು’ ಎಂದು ಕೋರಿದರು.

‘ಇನ್ನೂ ಹಲವು ಮಾಹಿತಿಯನ್ನು ಲಿಖಿತವಾಗಿ ಸಲ್ಲಿಸಲು ಹದಿನೈದು ದಿನಗಳ ಅವಕಾಶ ನೀಡಬೇಕು ಎಂದು ಕೋರಲಾಯಿತು’ ಎಂದು ವೆಂಕಟರಾಮಯ್ಯ ತಿಳಿಸಿದರು.

ಶುಕ್ರವಾರ, ಮಾರ್ಚ್ 4, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 63 | ಪುಟ 20

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಪಂಚೆಯುಟ್ಟು, ಗಡ್ಡ ಬಿಟ್ಟು 'ಪೆಪೆ' ಮೂಲಕ ಹೊಸ ಲುಕ್‌ನೊಂದಿಗೆ ಮಲೆನಾಡಿನ ಮಣ್ಣಿಗೆ ಹೆಜ್ಜೆ ಇಟ್ಟದ್ದಾರೆ ನಟ ವಿನಯ್ ರಾಜ್‌ಕುಮಾರ್

ಕಚ್ಚಾತೈಲ ದರ ಏರಿಕೆ: ತಗ್ಗಿದ ಷೇರುಪೇಟೆ ವಹಿವಾಟು 10
ಸಂಖ್ಯೆ-ಸುದ್ದಿ
ಬ್ಯಾಟರಿ ವಾಹನಕ್ಕೆ ಶಕ್ತಿ
ಉತ್ತರ ಪ್ರದೇಶ: ಶೇ 53ರಷ್ಟು ಮತದಾನ 4

ಸೆನ್ಸೆಕ್ಸ್	ನಿಫ್ಟಿ	₹/$
55,103	16,498	75.94

ಕೆನರಾ ಬ್ಯಾಂಕ್ Canara Bank
Government of India Undertaking
Together We Can
ಚಿನ್ನದ ಸಾಲ 7.25% ಬಡ್ಡಿ ದರದಲ್ಲಿ
ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ ತಕ್ಷಣದ ಅನುಮೋದನೆ ಪಡೆಯಿರಿ
*ಷರತ್ತುಗಳು ಅನ್ವಯಿಸುತ್ತವೆ
1800 425 0018

ಒಳ ಪುಟಗಳು

ಎಲ್ಲರ ಕಣ್ಣು ವಾರಾಣಸಿಯತ್ತ 4
'ಬಿಜೆಪಿಯಿಂದ ದೂರವಾಣಿ ಕದ್ದಾಲಿಕೆ' 4

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಷ್ಯಾ ಆಕ್ರಮಣ ತೀವ್ರ • ಉಕ್ರೇನ್‌ನ ಬಂದರು ನಗರ ವಶಕ್ಕೆ

ಕೆರ್ಸೆನ್ ನಗರ ಪತನ

ಕೀವ್ (ಎಪಿ): ರಕ್ಷಣಾ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾದ ಬಂದರು ನಗರ ಕೆರ್ಸೆನ್ ಅನ್ನು ರಷ್ಯಾ ಪಡೆಗಳು ಗುರುವಾರ ವಶಕ್ಕೆ ಪಡೆದಿವೆ. ಕೆರ್ಸೆನ್‌ನಿಂದ ಪೂರ್ವಕ್ಕೆ ಇರುವ ಇನ್ನೊಂದು ಬಂದರು ನಗರ ಮರಿಯುಪೋಲ್ ಅನ್ನು ರಷ್ಯಾ ಸೈನಿಕರು ಸುತ್ತುವರಿದಿದ್ದಾರೆ. ಈ ನಗರಕ್ಕೆ ಕೆಲವು ದಿನಗಳಿಂದ ವಿದ್ಯುತ್ ಮತ್ತು ನೀರು ಪೂರೈಕೆ ಇಲ್ಲ.

ಆಕ್ರಮಣವನ್ನು ತೀವ್ರಗೊಳಿಸಿದ್ದರ ಜತೆಗೇ ಯುದ್ಧ ನಿಲ್ಲಿಸಲು ಮಾತುಕತೆಗೆ ಸಿದ್ಧ ಎಂದು ರಷ್ಯಾ ಹೇಳಿದೆ. 'ನಾವು ಮಾತುಕತೆಗೆ ಸಿದ್ಧ. ಆದರೆ, ಸೇನಾ ಕಾರ್ಯಾಚರಣೆಯನ್ನು ನಿಲ್ಲಿಸುವುದಿಲ್ಲ. ರಷ್ಯಾಕ್ಕೆ ಬೆದರಿಕೆಯಾಗಿರುವ ಸೇನಾ ಮೂಲಸೌಕರ್ಯವನ್ನು ಉಕ್ರೇನ್ ಸಂರಕ್ಷಿಸಿಕೊಳ್ಳುವುದು ನಮಗೆ ಬೇಕಿಲ್ಲ' ಎಂದು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಹೇಳಿದ್ದಾರೆ.

ಕೆರ್ಸೆನ್ ನಗರವನ್ನು ಸಂಪೂರ್ಣ ನಿಯಂತ್ರಣಕ್ಕೆ ಪಡೆದಿದ್ದಾಗಿ ರಷ್ಯಾ ಹೇಳಿಕೊಂಡಿದೆ. ನಗರದ ಸ್ಥಳೀಯಾಡಳಿತ ಸರ್ಕಾರದ ಕೇಂದ್ರ ಕಚೇರಿಯನ್ನು ರಷ್ಯಾ ವಶಕ್ಕೆ ಪಡೆದಿದೆ ಎಂದು ಉಕ್ರೇನ್ ಅಧಿಕಾರಿಗಳು ದೃಢ-ಪಡಿಸಿದ್ದಾರೆ. ಒಂದು ವಾರದಿಂದ ನಡೆಯುತ್ತಿರುವ ಆಕ್ರಮಣದಲ್ಲಿ ಇದೇ ಮೊದಲಿಗೆ ನಗರವೊಂದನ್ನು ವಶಕ್ಕೆ ಪಡೆಯಲು ರಷ್ಯಾಕ್ಕೆ ಸಾಧ್ಯವಾಗಿದೆ.

ಉಕ್ರೇನ್‌ನ ರಾಜಧಾನಿ ಕೀವ್‌ನಲ್ಲಿ ರಷ್ಯಾ ಪಡೆಗಳು ಗುರುವಾರ ನಡೆಸಿದ ಶೆಲ್ ದಾಳಿಯಿಂದಾಗಿ ಕಟ್ಟಡವೊಂದು ಹೊತ್ತಿ ಉರಿಯಿತು –ಎಪಿ ಚಿತ್ರ

ಉಕ್ರೇನ್ ರಾಜಧಾನಿ ಕೀವ್‌ನ ಮೇಲೆ ನಿಯಂತ್ರಣ ಸಾಧಿಸಲು ರಷ್ಯಾಕ್ಕೆ ಸಾಧ್ಯವಾಗಿಲ್ಲ. ಟ್ಯಾಂಕ್‌ಗಳು ಮತ್ತು ಇತರ ಸೇನಾ ವಾಹನಗಳನ್ನು ನಗರದ ಹೊರಗೆ ಕೆಲವು ದಿನಗಳಿಂದ ತಡೆದು ನಿಲ್ಲಿಸುವಲ್ಲಿ ಉಕ್ರೇನ್ ಸೇನೆಯು ಯಶಸ್ವಿಯಾಗಿದೆ. ಆದರೆ, ಇತರ ಹಲವು ನಗರಗಳ ಮೇಲೆ ರಷ್ಯಾದ ಆಕ್ರಮಣ ತೀವ್ರಗೊಂಡಿದೆ. ಬಂದರು ನಗರವಾದ ಆ್ಯಝೋವ್ ಮೇಲೆಯೂ ರಷ್ಯಾ ದಾಳಿ ತೀವ್ರಗೊಂಡಿದೆ. ಉಕ್ರೇನ್‌ಗೆ ಕರಾವಳಿಯ ಸಂಪರ್ಕವನ್ನು ಕಡಿತ-ಗೊಳಿಸುವುದು ರಷ್ಯಾದ ಉದ್ದೇಶ ಎನ್ನಲಾಗಿದೆ.

ವಿಶ್ವಸಂಸ್ಥೆಯು ನೀಡಿದ ವರದಿಯ ಪ್ರಕಾರ 227 ನಾಗರಿಕರು ಬಲಿಯಾಗಿದ್ದಾರೆ. 525 ಮಂದಿ ಗಾಯಗೊಂಡಿದ್ದಾರೆ. ಇದು ನಿಖರವಾದ ಲೆಕ್ಕವೇನೂ ಅಲ್ಲ. ಸಾವಿನ ಸಂಖ್ಯೆ ಇದಕ್ಕಿಂತ ಬಹಳ ಹೆಚ್ಚು ಇರಬಹುದು ಎಂದೂ ವಿಶ್ವಸಂಸ್ಥೆಯು ತಿಳಿಸಿದೆ. ಎರಡು ಸಾವಿರಕ್ಕೂ ಹೆಚ್ಚು ನಾಗರಿಕರು ಬಲಿಯಾಗಿದ್ದಾರೆ ಎಂದು ಉಕ್ರೇನ್ ಸರ್ಕಾರ ಈ ಹಿಂದೆ ಹೇಳಿತ್ತು.

4ನೇ ಪುಟ ನೋಡಿ
ವಿಶೇಷ ಪುಟ 5

ಸೀಮಿತ ಅವಧಿ, ಸೀಮಿತ ಮಾರ್ಗದಲ್ಲಿ ಕದನವಿರಾಮ

ಬೆಲರೂಸ್ (ರಾಯಿಟರ್ಸ್): ಉಕ್ರೇನ್‌ನ ಯುದ್ಧಬಾಧಿತ ನಗರಗಳಲ್ಲಿ ಸಿಲುಕಿರುವ ನಾಗರಿಕರು ಸುರಕ್ಷಿತವಾಗಿ ತೆರಳಲು 'ಮಾನವೀಯ ಮಾರ್ಗ' ರೂಪಿಸಲು ಮತ್ತು ಆ ವ್ಯಾಪ್ತಿಯಲ್ಲಿ ತಾತ್ಕಾಲಿಕವಾಗಿ ಕದನ ವಿರಾಮ ಘೋಷಿಸಲು ರಷ್ಯಾ ಸಮ್ಮತಿಸಿದೆ.

ಯುದ್ಧದ ಪರಿಸ್ಥಿತಿ ತಿಳಿಗೊಳಿಸಲು ರಷ್ಯಾ ಮತ್ತು ಉಕ್ರೇನ್ ನಡುವೆ ಗುರುವಾರ ಇಲ್ಲಿ ನಡೆದ ಎರಡನೇ ಸುತ್ತಿನ ಚರ್ಚೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

7ನೇ ಪುಟ ನೋಡಿ

ಪ್ರಗತಿಯ ಭವಿಷ್ಯ ಬರೆಯಲಿದ್ದಾರಾ ಸಿ.ಎಂ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನ ಸಂಕಷ್ಟಗಳು ಮರೆಯಾಗಿ ಆರ್ಥಿಕ ಪುನಃಶ್ಚೇತನದ ಹಾದಿಯತ್ತ ನಾಡು ಮರಳುತ್ತಿರುವ ಹೊತ್ತಿನಲ್ಲಿ 2022ರ ಸಾಲಿನ ಪ್ರಗತಿಯ ಮುನ್ನೋಟವೆಂದೇ ಬಿಂಬಿಸಲಾದ ತಮ್ಮ ಮೊದಲ ಬಜೆಟ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ (ಮಾ.4) ಮಧ್ಯಾಹ್ನ 12.30ಕ್ಕೆ ವಿಧಾನಸಭೆಯಲ್ಲಿ ಮಂಡಿಸಲಿದ್ದಾರೆ.

ರಾಜ್ಯಪಾಲರ ಭಾಷಣದ ಮೇಲೆ ನಡೆದ ಚರ್ಚೆ ಬಳಿಕ ಸರ್ಕಾರದ ಪರವಾಗಿ ಸದನಕ್ಕೆ ಉತ್ತರ ನೀಡಿದ್ದ ಬೊಮ್ಮಾಯಿ, 'ಬಜೆಟ್‌ನಲ್ಲಿ ರಾಜ್ಯದ ಪ್ರಗತಿಯ ಭವಿಷ್ಯ ಬರೆಯುವೆ' ಎಂದು ಘೋಷಿಸಿದ್ದರು.

ಇಂದು ಬಜೆಟ್

ಅದರ ಅನುಷ್ಠಾನಕ್ಕೆ ಬೇಕಾದ ನೀಲನಕ್ಷೆಯನ್ನು ಬಜೆಟ್‌ನಲ್ಲಿ ನೀಡಲಿದ್ದಾರೆಯೇ ಎಂಬ ಕುತೂಹಲವೂ ಇದೆ.

ಕೋವಿಡ್‌ನ ಮೂರು ಅಲೆಗಳು ತಂದಿತ್ತ ಆರ್ಥಿಕ ಸಂಕಷ್ಟಗಳು ರಾಜ್ಯದ ಸಂಪನ್ಮೂಲ ಸಂಗ್ರಹದ ಮೇಲೆ ದೊಡ್ಡ ಮಟ್ಟದ ಪರಿಣಾಮ ಬೀರಿವೆ. ಆಡಳಿತಾತ್ಮಕ ಕಾರಣಗಳಿಗೆ ಮಾಡಲೇಬೇಕಾದ ಬದ್ಧವೆಚ್ಚದ ಪ್ರಮಾಣ ಭಾರಿ ಪ್ರಮಾಣದಲ್ಲಿ ಏರಿದೆ. ಈ ಇಕ್ಕಟ್ಟಿನ ಸ್ಥಿತಿಯಲ್ಲಿ, ಬಜೆಟ್ ಮಂಡಿಸುವ ಸವಾಲನ್ನು ಹಣಕಾಸು ಸಚಿವರೂ ಆಗಿರುವ ಬೊಮ್ಮಾಯಿ ಎದು-ರಿಸುತ್ತಿದ್ದಾರೆ. ಒಂದು ವರ್ಷದ ಬಳಿಕ ಅಂದರೆ, 2023ರಲ್ಲಿ ವಿಧಾನಸಭೆಗೆ ಸಜ್ಜಾಗಬೇಕಾಗಿರುವು-ದರಿಂದ ಅಭಿವೃದ್ಧಿಗೆ ದಿಕ್ಸೂಚಿ ತೋರಿಸುವ ಜತೆಗೆ, ಜನರನ್ನು ಓಲೈಸುವ ಜನಪ್ರಿಯ ಕಾರ್ಯಕ್ರಮಗಳ-ನ್ನು ನೀಡಬೇಕಾದ ಅನಿವಾರ್ಯವೂ ಅವರ ಮೇಲಿದೆ.

ಸಾಲದ ಹೊರೆ, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾಗಿದ್ದ ಅನುದಾನ ಮತ್ತು ತೆರಿಗೆಯ ಪಾಲಿನಲ್ಲಿ ಗಣನೀಯ ಕುಸಿತ ಆಗಿರುವುದರಿಂದ ಅಭಿವೃದ್ಧಿ ಮತ್ತು ಜನಪರ ಯೋಜನೆಗಳಿಗೆ ಹೇಗೆ ಹಣ ಹೊಂದಿಸಲಿದ್ದಾರೆ ಎಂಬ ಚರ್ಚೆಗೆ ಬೊಮ್ಮಾಯಿ ಅವರು ತಮ್ಮ ಬಜೆಟ್‌ನಲ್ಲಿ ಉತ್ತರ ನೀಡಬೇಕಾಗಿದೆ.

4ನೇ ಪುಟ ನೋಡಿ

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ भारत सरकार का उपक्रम A Government of India Undertaking
Together We Can
Azadi Ka Amrit Mahotsav
ನಿಮ್ಮ ಹಣಕಾಸು ಬೆಳವಣಿಗೆಗೆ ಒಂದು ಪರಿಸಾಟಿಯಿಲ್ಲದ ಅವಕಾಶ
ಕೆನರಾ ಯೂನಿಕ್ 1111 ದಿನಗಳ ಸಾವಧಿ ಠೇವಣಿ ಯೋಜನೆ
ಕೆನರಾ ಬ್ಯಾಂಕ್ ಅತ್ಯಧಿಕ ಬಡ್ಡಿ ದರಗಳನ್ನು ಘೋಷಿಸುತ್ತಿದೆ
ಈಗ ವಾರ್ಷಿಕ 6.05% ಬಡ್ಡಿ* ದರವನ್ನು ಆನಂದಿಸಿ
ಹಾಗೂ ಉಳಿತಾಯ ಖಾತೆಯ ಮೇಲೆ ವಾರ್ಷಿಕ 3.50 % ಬಡ್ಡಿ** ದರವನ್ನು ಆನಂದಿಸಿ
** ವಿಶೇಷ ಸ್ಲ್ಯಾಬ್‌ಗೆ
* ಹಿರಿಯ ನಾಗರಿಕರಿಗಾಗಿ ವಿಶೇಷ ಸ್ಲ್ಯಾಬ್
*ಷರತ್ತುಗಳು ಅನ್ವಯಿಸುತ್ತವೆ
www.canarabank.com 1800 425 0018
canarabank | canarabankofficial | canarabankinsta

Issued in Public Interest

#YouInspireUs

When you are battling silent killer diseases, we are inspired to find a treatment.

This World Obesity Day, let's win the battle against NAFLD and NASH.

Obesity could lead to several disorders including Non-Alcoholic Fatty Liver Disease (NAFLD) & Non-Alcoholic Steatohepatitis (NASH). Over 600 million adults in the world battling obesity[1] are at risk of NAFLD and NASH. 38% of Indians are at risk of getting NAFLD of which 25-30% are at risk of suffering from NASH[2,3]. Zydus has addressed this unmet healthcare need, bringing the first-of-its-kind solution to fight NAFLD (with co-morbidities) and non-cirrhotic NASH. Saroglitazar magnesium, approved in India, empowers patients to lead healthier and more fulfilled lives.

For over 27 years, we at Zydus, have been committed to science and innovation. As a part of our organizational transformation, Cadila Healthcare Limited is renamed as Zydus Lifesciences Limited. Our new corporate identity is a confluence of empathy with innovation, of humanity with science and of legacy with transformation. Moving ahead as a patient-centric, innovation-driven global lifesciences company, we remain dedicated to life.

(Saroglitazar magnesium is a prescription drug and should be taken under the guidance of a Registered Medical Practitioner only. Please consult your Doctor today if you are suffering from NAFLD with co-morbidities and non-cirrhotic NASH).

1. https://www.a-mansia.com/obesity-and-diabetes-in-the-world/(As accessed on 1.03.2022)
2. Shalimar et al., Prevalence of Non-alcoholic Fatty Liver Disease in India: A Systematic Review and Meta-analysis, Journal of Clinical and Experimental Hepatology https://doi.org/10.1016/j.jceh.2021.11.010
3. Luis Calzadilla Bertot et al., The Natural Course of Non-Alcoholic Fatty Liver Disease Int J Mol Sci. 2016 May; 17(5): 774 https://doi.org/10.3390/ijms17050774

zydus
Dedicated To Life

www.zyduslife.com

ನಾಳೆಯಿಂದ ಕಿಸಾನ್ ಸಮೃದ್ಧಿ ಮಹೋತ್ಸವ

ಬೆಂಗಳೂರು: ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಇದೇ 5ರಿಂದ 7ರವರೆಗೆ ಕನಕಪುರ ರಸ್ತೆಯಲ್ಲಿರುವ ತನ್ನ ಕೇಂದ್ರದಲ್ಲಿ ಕಿಸಾನ್ ಸಮೃದ್ಧಿ ಮಹೋತ್ಸವ ಹಮ್ಮಿಕೊಂಡಿದೆ.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ವಕ್ತಾರ ಶ್ರೀನಿವಾಸ್ ಪಟಾಪಟ್, 'ಒಂಬತ್ತು ರಾಜ್ಯಗಳಿಂದ ಒಂದು ಸಾವಿರ ರೈತರು ಈ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಉದ್ಘಾಟನಾ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್, ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕ ಶ್ರೀ ಶ್ರೀ ರವಿಶಂಕರ ಗುರೂಜಿ, ಕೇಂದ್ರ ಸಚಿವರಾದ ನಿತಿನ್ ಗಡ್ಕರಿ, ನರೇಂದ್ರ ಸಿಂಗ್ ತೋಮರ್ ಹಾಗೂ ಗಜೇಂದ್ರ ಸಿಂಗ್ ಶೇಖಾವತ್ ಅವರು ಉಪಸ್ಥಿತರಿರಲಿದ್ದಾರೆ' ಎಂದು ಹೇಳಿದರು.

'ಸುಸ್ಥಿರ ಕೃಷಿ, ನದಿಗಳ ಪುನಶ್ಚೇತನ, ಅರಣ್ಯ ಕೃಷಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಜ್ಞರಿಂದ ವಿಚಾರ ಸಂಕಿರಣ ನಡೆಸಲಾಗುತ್ತದೆ. ಸಾಧಕ ರೈತರು ತಮ್ಮ ಅನುಭವಗಳನ್ನೂ ಹಂಚಿಕೊಳ್ಳಲಿದ್ದಾರೆ. ಕೃಷಿಯಿಂದ ಅಧಿಕ ಆದಾಯ ಪಡೆಯುವಿಕೆ ಹಾಗೂ ಮಾರುಕಟ್ಟೆ ಅವಕಾಶಗಳ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ. ಕೃಷಿ ಕ್ಷೇತ್ರದಲ್ಲಿ ಇರುವ ಅವಕಾಶಗಳು ಹಾಗೂ ಅತ್ಯಾಧುನಿಕ ತಂತ್ರಜ್ಞಾನಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ' ಎಂದು ತಿಳಿಸಿದರು.

SHATRUJEET ARMY PRE PRIMARY SCHOOL, PRTC

(AN ISO 9001 & 14001 Certified School)

Near Mekhri Circle, JC Nagar, Bangalore-560 006

Ph: 080 23433340 / Email- sappsprtc@gmail.com

Vacancies for the Academic year 2022-23.

TEACHERS, OFFICE STAFF & GROUP 'D

We invite application from qualified and experienced candidates for the following Post -

1. TEACHERS: NTT/ Montessorie trained. Salary Rs. 18,000/-p.m
2. ADM IN-CHARGE: Ex - defense personnel. Salary Rs. 18,000/-p.m
3. ACCOUNTANT/ CLERK: Graduate with knowledge of accounts. Salary Rs. 18,000/-p.m
4. GROUP D - Male/ Female- with basic qualification. Starting Salary Rs. 13,000/-

Experience / Computer literacy, fluency in English and local language will be an added advantage.

For Teacher's post. Forms available (Rs100/-) for all other posts candidates can drop a resume to school office.

Timings: 08.00 AM to 01.00 PM (on all working days only).

Last date of submission : 15th March 2022. Expected Interview dates: 19, 21 and 22nd March 2022.

For details contact school office on 080 - 2343 3340 Monday to Friday at 8 am till 1 pm.

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ
ನಿರ್ಮಾಣ ಮತ್ತು ನಿರ್ವಹಣೆ ಸಮೂಹ ಇಸ್ರೋ ಹೆಚ್.ಕ್ಯೂ.,
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ,
ಹೆಚ್‌ಎಎಲ್ 2ನೇ ಹಂತ, ಬೆಂಗಳೂರು-560 008.
ದೂ.: 080-25037-131/210/388

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಕೆಲಸದ ಹೆಸರು	ಅಂತರಿಕ್ಷ ಭವನ, ಜಾಲಹಳ್ಳಿ, ಆರ್.ಪಿ.ಸಿ. ಬಡಾವಣೆ ಅಂತರಿಕ್ಷ ಅಪಾರ್ಟ್‌ಮೆಂಟ್, ಎಂಯುಸಿ ಕಟ್ಟಡ (ಹಳೇ ಭೂಮಿ) ಮತ್ತು ದೊಮ್ಮಲೂರು, ಬೆಂಗಳೂರು ಇಲ್ಲಿ ಫೈರ್ ಎಕ್ಸ್‌ಟಿಂಗ್ವಿಷರ್ಸ್ ಮತ್ತು ಫೈರ್ ಫೈಟಿಂಗ್ ಹೈಡ್ರಾನ್ಟ್ ಸಿಸ್ಟಮ್‌ಗೆ ಸಮಗ್ರ ವಾರ್ಷಿಕ ನಿರ್ವಹಣಾ ಸೇವಾ ಗುತ್ತಿಗೆ.
ಎನ್‌ಐಟಿ ಸಂಖ್ಯೆ	ಸಿಎಂಜಿ/ಇಸ್ರೋ-ಹೆಚ್‌ಕ್ಯೂ/ಸಿ/ಎಂ/32/2021-22 ದಿನಾಂಕ: 03.03.2022
ಅಂದಾಜು ವೆಚ್ಚ	ರೂ. 6.80 ಲಕ್ಷಗಳು
ಪೂರ್ಣಗೊಳಿಸುವ ಅವಧಿ	ಹನ್ನೆರಡು (12) ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡುವ ಕಾಲಾವಧಿ	03.03.2022 ರಂದು 18:10 ಗಂಟೆಯಿಂದ 09.03.2022 ರಂದು 23:59ಗಂಟೆವರೆಗೆ
ಟೆಂಡರುಗಳನ್ನು ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ	11.03.2022 ರಂದು 14:30 ಗಂಟೆಯವರೆಗೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	11.03.2022 ರಂದು 15:00 ಗಂಟೆಗೆ

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಜೊತೆಗೆ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು ವೆಬ್‌ಸೈಟ್:www.isro.gov.in/tenders ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹದ ಮುಖ್ಯಸ್ಥರು, ಸಿಎಂಜಿ, ಇಸ್ರೋ ಹೆಚ್‌ಕ್ಯೂ

ನೈಋತ್ಯ ರೈಲ್ವೆ

ಇ-ಟೆಂಡರ್ ಪ್ರಕಟಣೆ ಸಂ. ಬಿ/ಇ.29/2021-22/ಓಟಿ/ 16, 18, 19, 21, 22, 23

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ಕೆಲಸದ ಹೆಸರು	ಅಂದಾಜು ಮೌಲ್ಯ
1	ಎಸ್‌ಎಸ್‌ಇ/ಪಿ/ಯಶವಂತಪುರ ವ್ಯಾಪ್ತಿಯ ಅಡಿಯಲ್ಲಿ ವಿದ್ಯುತ್ ಕಾಮಗಾರಿಗಳಿಗಾಗಿ ವಲಯ ಗುತ್ತಿಗೆ. (ಓಟಿ ಸಂ.16)	ರೂ. 40,03,181/-
2	ಎಸ್‌ಎಸ್‌ಇ/ಪಿಆರ್‌ಎಸ್/ ಬೆಂಗಳೂರು ವ್ಯಾಪ್ತಿಯ ಅಡಿಯಲ್ಲಿ ಅಂದರೆ ಕೆಎಸ್‌ಆರ್ ಬೆಂಗಳೂರು ನಿಲ್ದಾಣ ಮತ್ತು ಯಾರ್ಡ್, ಡಿಆರ್‌ಎಂ ಕಛೇರಿ ಕಟ್ಟಡ, ನಂದಿ ಕ್ಲಬ್, ಪಿಟ್ ಲೈನ್‌ಗಳು ಮತ್ತು ಇತರ ಅಳವಡಿಕೆಗಳ ವಿದ್ಯುತ್ ಕಾಮಗಾರಿಗಳಿಗಾಗಿ ವಲಯ ಗುತ್ತಿಗೆ. (ಓಟಿ ಸಂ. 18)	ರೂ. 25,10,049/-
3	ಎಸ್‌ಎಸ್‌ಇ/ಪಿ/ಬೆಂಗಳೂರು ವ್ಯಾಪ್ತಿಯ ಬೆಂಗಳೂರು – ಧರ್ಮಾವರಂ ಸೆಕ್ಷನ್ ಅಡಿಯಲ್ಲಿನ ವಿದ್ಯುತ್ ಕಾಮಗಾರಿಗಳಿಗಾಗಿ ವಲಯ ಗುತ್ತಿಗೆ. (ಓಟಿ ಸಂ. 19)	ರೂ. 25,03,696/-
4	ಎಸ್‌ಎಸ್‌ಇ/ಪಿ/ಬೆಂಗಳೂರು ದಂಡು ವ್ಯಾಪ್ತಿಯ ಅಡಿಯಲ್ಲಿ ಅಂದರೆ ಬೆಂಗಳೂರು ದಂಡು – ಬಂಗಾರಪೇಟೆ (ಹೊರತುಪಡಿಸಿ) ಸೆಕ್ಷನ್, ಕೃಷ್ಣರಾಜಪುರಂ ಶೆಡ್, ಡಿಇಎಂಯು ಶೆಡ್, ಎಸ್‌ಜಿಟಿ, ಬೈಯಪ್ಪನಹಳ್ಳಿ ಮತ್ತು ಇತರ ಅಳವಡಿಕೆಗಳ ವಿದ್ಯುತ್ ಕಾಮಗಾರಿಗಳಿಗಾಗಿ ವಲಯ ಗುತ್ತಿಗೆ. (ಓಟಿ ಸಂ. 21)	ರೂ. 30,06,831/-
5	ಎಸ್‌ಎಸ್‌ಇ/ಪಿ/ಬಂಗಾರಪೇಟೆ ವ್ಯಾಪ್ತಿಯ ಅಡಿಯಲ್ಲಿ ಅಂದರೆ ಬಂಗಾರಪೇಟೆ – ಜೋಲಾರಪೇಟ್ಟೈ (ಹೊರತುಪಡಿಸಿ), ಬಂಗಾರಪೇಟೆ – ಮಾರಿಕುಪ್ಪಂ, ಬಂಗಾರಪೇಟೆ – ಕೋಲಾರ – ಚಿಕ್ಕಬಳ್ಳಾಪುರ (ಹೊರತುಪಡಿಸಿ) ಸೆಕ್ಷನ್‌ಗಳು ಮತ್ತು ಇತರ ಅಳವಡಿಕೆಗಳ ವಿದ್ಯುತ್ ಕಾಮಗಾರಿಗಳಿಗಾಗಿ ವಲಯ ಗುತ್ತಿಗೆ. (ಓಟಿ ಸಂ. 22)	ರೂ. 25,09,527/-
6	ಬೆಂಗಳೂರು ವಿಭಾಗದಲ್ಲಿ 2 ವರ್ಷಗಳ ಅವಧಿಗೆ ಮುಳುಗಿಸಿಡಬಹುದಾದ ಪಂಪ್‌ಗಳ ಬದಲಾವಣೆ, ಎತ್ತುವುದು ಮತ್ತು ಇಳಿಸುವುದು, ಮೋಟಾರ್‌ಗಳ ರಿವೈಂಡಿಂಗ್. (ಓಟಿ ಸಂ. 23)	ರೂ. 33,51,270/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 18-03-2022ರಂದು 11:00 ಗಂಟೆವರೆಗೆ.

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ / ಜಿ
ಪಿಯುಬಿ/437/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2021-22 ಬೆಂಗಳೂರು

S.W.Railways SWRRLY SWRRLY

ಕುಲಪತಿ ವಿರುದ್ಧ ಸಿಂಡಿಕೇಟ್ ಸದಸ್ಯರ ಆರೋಪ

'ಬೆಂಗಳೂರು ವಿ.ವಿ.ಯಲ್ಲಿ ಕಾನೂನುಬಾಹಿರ ಆಡಳಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಮತ್ತು ಸಿಂಡಿಕೇಟ್ ಸದಸ್ಯ ಕಾರ್ಯದರ್ಶಿಯಾಗಿರುವ ಪ್ರೊ. ಕೊಟ್ರೇಶ್ ಅವರು ಕಾನೂನುಬಾಹಿರವಾಗಿ ಸಿಂಡಿಕೇಟ್ ಸಭೆ ಮತ್ತು ಆಡಳಿತ ನಡೆಸುತ್ತಿದ್ದಾರೆ ಎಂದು ಸಿಂಡಿಕೇಟ್ ಸದಸ್ಯರು ಆರೋಪಿಸಿದ್ದಾರೆ.

ಜ.18ರಂದು ವಿಶೇಷ ಸಿಂಡಿಕೇಟ್ ಸಭೆ ಜರುಗಿಸಿದ್ದು, ರಾಜ್ಯಪಾಲರು ಮತ್ತು ಸರ್ಕಾರ ನೇಮಿಸಿದ 8 ಸದಸ್ಯರು ಭಾಗವಹಿಸದೆ ಇದ್ದರೂ ಕುಲಪತಿಗಳು ವಿಶೇಷ ಸಿಂಡಿಕೇಟ್ ಸಭೆ ನಡೆಸಿ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ ಎಂದು ಸಿಂಡಿಕೇಟ್ ಸದಸ್ಯ ಸುಧಾಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಈ ಕುಲಪತಿ ಮತ್ತು ಕುಲಸಚಿವರು ಮಾತ್ರ ಮೊದಲ ಬಾರಿಗೆ ಈ ರೀತಿಯ ಕೆಟ್ಟ ದುರಾಡಳಿತದ ಬುನಾದಿ ಹಾಕಿದ್ದಾರೆ. ಕಾನೂನುಬಾಹಿರ ಸಭೆ ನಡೆಸಿ ವಿಶ್ವ ವಿದ್ಯಾಲಯದ ನಿಯಮಗಳ ಉಲ್ಲಂಘನೆಯನ್ನು ಮಾಡಿದ್ದಾರೆ. ಆದ್ದರಿಂದ ಈ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಊರ್ಜಿತವಲ್ಲ ಎಂದು ತಿಳಿಸಿದ್ದಾರೆ.

ಕುಲಪತಿ ಮತ್ತು ಕುಲಸಚಿವರು ಸಿಂಡಿಕೇಟ್‌ನಲ್ಲಿ ಚರ್ಚಿಸಿದ ವಿಷಯಗಳ ಗೋಪ್ಯತೆಯನ್ನು ಕಾಪಾಡದೆ ಬೋಧಕೇತರ ನೌಕರರ ಸಂಘದ ಸಿಬ್ಬಂದಿಗೆ ತಿಳಿಸಿ, ಕಾನೂನು ಉಲ್ಲಂಘನೆ ಮಾಡಿ ವಿಶ್ವವಿದ್ಯಾಲಯದ ಶಾಂತಿಯನ್ನು ಕದಡಿ, ಅಶಾಂತಿ ವಾತಾವರಣ ಸೃಷ್ಟಿಸಲು ಪರೋಕ್ಷವಾಗಿ ಕಾರಣರಾಗಿದ್ದಾರೆ.

ವಿಶ್ವವಿದ್ಯಾಲಯದಲ್ಲಿ ಅಶಾಂತಿ ನಿರ್ಮಾಣವಾಗುವುದಕ್ಕೆ ಕುಮ್ಮಕ್ಕು ನೀಡುತ್ತಿರುವ ಕುಲಪತಿ ಮತ್ತು ಕುಲಸಚಿವರ ಮೇಲೆ ರಾಜ್ಯಪಾಲರು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಏ.2ರಿಂದ ಅಂತರರಾಷ್ಟ್ರೀಯ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರೀ ರಾಮ ಸೇವಾ ಮಂಡಳಿ ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್' ವತಿಯಿಂದ ಏಪ್ರಿಲ್ 2ರಿಂದ ಮೇ 2ರವರೆಗೆ 84ನೇಯ ಶ್ರೀ ರಾಮನವಮಿ ಮತ್ತು ಅಂತರ ರಾಷ್ಟ್ರೀಯ ಸಂಗೀತೋತ್ಸವ ನಗರದ ಚಾಮರಾಜಪೇಟೆಯ ಹಳೇ ಕೋಟೆ ಹೈಸ್ಕೂಲ್ ಆವರಣದಲ್ಲಿ ಆಯೋಜಿಸಲಾಗಿದೆ.

ಖ್ಯಾತ ಸಂಗೀತಗಾರರು ಕಾರ್ಯಕ್ರಮಗಳನ್ನು ನೀಡಲಿದ್ದು, ಪ್ರತಿ ದಿನ ಶಾಸ್ತ್ರೀಯ ಸಂಗೀತದ ವಿಶಿಷ್ಟ ಕಾರ್ಯಕ್ರಮಗಳು ಸಂಗೀತ ಪ್ರಿಯರಿಗೆ ರಸದೌತಣ ನೀಡಲಿವೆ.

ಸರ್ಕಾರದ ಕೋವಿಡ್ ಮಾರ್ಗಸೂಚಿ ಅನ್ವಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಕೆಲ ಆಯ್ದ ಸಂಗೀತ ಕಛೇರಿಗಳನ್ನು ಹೈಬ್ರಿಡ್ ಮಾದರಿಯಲ್ಲಿ ನಡೆಸಲಾಗುತ್ತಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ದೇಶದ 75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏ.10 ರಂದು 'ಭಾರತ ಸ್ವತಂತ್ರ ಸಂಗೀತ ವೈಭವಂ' ಎನ್ನುವ ವಿಶೇಷ ಕಾರ್ಯಕ್ರಮ ನಡೆಯಲಿದೆ. ಡಾ.ಮೈಸೂರು ಮಂಜುನಾಥ್ ನೇತೃತ್ವದಲ್ಲಿ 75 ಸಂಗೀತಗಾರರು ಕಾರ್ಯಕ್ರಮ ನೀಡಲಿದ್ದಾರೆ.

www.ramanavamitickets.com ವೆಬ್‌ಸೈಟ್ ಮೂಲಕ ಟಿಕೆಟ್‌ಗಳನ್ನು ಕಾಯ್ದಿರಿಸಬಹುದು.

ಮಾಹಿತಿಗಾಗಿ ಪ್ರಧಾನ ಕಾರ್ಯದರ್ಶಿ ಮತ್ತು ಮ್ಯಾನೇಜಿಂಗ್ ಟ್ರಸ್ಟಿ ಎಸ್.ಎನ್. ವರದರಾಜ್ (ಮೊಬೈಲ್ ದೂರವಾಣಿ ಸಂಖ್ಯೆ: 9448079079) ಅಥವಾ ಕಾರ್ಯನಿರ್ವಾಹಕ ಅಧಿಕಾರಿ ಎಸ್ ಅಭಿಜೀತ್ ವರದರಾಜ್ (ಮೊಬೈಲ್ ದೂರವಾಣಿ ಸಂಖ್ಯೆ: 9483518012) ಅಥವಾ ಕಚೇರಿ ಸಂಖ್ಯೆ 080-26604031 ಸಂಪರ್ಕಿಸಬಹುದು. ಇ-ಮೇಲ್ ವಿಳಾಸ: ramasevamandali@gmail.com

ಈ ಕಾರ್ಯಕ್ರಮಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇನ್ಫೋಸಿಸ್ ಫೌಂಡೇಷನ್ ಮತ್ತು ಕೇಂದ್ರ ಸರ್ಕಾರದ ಸಂಸ್ಕೃತಿ ಸಚಿವಾಲಯಗಳು ಸಹಕಾರ ನೀಡಿವೆ.

WEEKEND CORNER ಕ್ಲಾಸಿಫೈಡ್ಸ್

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business to Business

Consultants

BIG LOAN Avail @ 3.5%. per Annum Personal, Business, Project all types loan in just 5 days OM SAI FINANCE LTD. Call/ WhatsApp::. 8826494700.

WANTED BUSINESS Partner Non Veg Hotel 5 to 10 Lakhs Investment Daily Income: 9606701007/ 8892501007

Karnataka Golf Association
No.1, Golf Avenue, Kodihalli, Bengaluru - 560 008.

Requires Project Management Consultant

Karnataka Golf Association (KGA) invites application for Project Management Services from Project Management Consultants for the Capital Works, Upgradation, Renovation and Repair works to be executed on their premises.

The scope of our work for the Project Management Services by the consultancy firm can be down loaded from KGA's website **www.kga.in** home page notice board.

The proposal should contain company profile, credentials/ reference along with the terms and conditions of the consultancy firm should be submitted to Hon. Secretary Karnataka Golf Association signed hard copy at No.1, Golf Avenue, Kodihalli, Off. HAL Airport Road, PB No. 817, Bangalore - 560008 and soft copy mailed to **secretary@kga.in** cc **chmn.club@kga.in**, **ceo@kga.in** to reach KGA by **14 March 2022**.

Sd/-
Suresh Jois Chandrashekhar
Hon. Secretary, KGA

Business Offers

Finance

NRI'S INVESTMENT And Finance Available On Low Interest Against Properties, Land& Building, Sites, Flats, Converted& Agriculture Lands Call: 7411265189

JOB OPPORTUNITIES

Teachers/ Professors

A REPUTED School Wanted D.Ed and English B.Ed Teachers and an Efficient Marketing Person For Their Advertisement Dept Contact: 8951143697

WANTED TEACHERS with B.Ed. to teach English and Maths in Christha Vidyalaya High School, S.G.Palya, DRC Post, Bangalore-29. Contact: 9448448844. Email: christhavidyalaya@gmail.com

PUBLIC NOTICE

ELCITA

TENDERS INVITED BY ELECTRONICS CITY INDUSTRIAL TOWNSHIP AUTHORITY (ELCITA), BANGALORE

ELECTRONICS CITY INDUSTRIAL TOWNSHIP AUTHORITY (ELCITA), having its office at Sy. No. 7 (P), West Phase, Electronics City, Bangalore - 560100 is invited tender as detailed below:

Sl.No	Tender name	Tender number	Last date to apply	Closing timings
1	Design, Supply, Installation, Testing, and Commissioning Including Warranty of Grid Connected 30 Kwp Solar Rooftop Plant for East Phase Toll Plaza at Electronic City, Bengaluru-560100	ELCITA/UDD/ 2021-22/ WORK/INDENT_ 1702	23.03. 2022	5:00 PM

Details of the Tenders can be downloaded from the e-procurement **website eproc.karnataka.gov.in** under Urban Development Department- Electronics city Industrial Township Authority. Also details are available in **www.elcita.in**

For queries Contact: 080-4660 2222 / write to : project.mgr@elcita.in

Chief Executive Officer
Electronics City Industrial Township Authority (ELCITA)
7 (P), West Phase, Electronics City, Bangalore : 560 100
Website : www.elcita.in
Phone : 080-4660 2222

RENTAL PROPERTIES

Accommodation Available

Flats

FLAT FOR LEASE 2-BHK with all amenities 15 Lakhs only Veg and Non-Veg both @ Vijayanagar- 9110432149, 9880034233

Godown

20,000 SQ.FT. Building for Gowdown / Factory available for rent for BM Road Channarayapattana Town, Hassan District. Contact: 9845051023/ 9731132616

Commercial Building

Malleshwaram

COMMERCIAL COMPLEX (MNC Tenanted) Mission Road Rental income 30 Lakhs/ Month, Price 50Cr. Also Malleshwaram 8th Cross: 9845057822/ 9980830798

REAL ESTATE SELLING

Agricultural Land

Nelamangala

AGRICULTURE LAND sale 39 lacs per acres marrur_ tipsandra 56 kms kungial road 9945080017, 8310414614

Industrial & Factory

Yeshwanthpur

SALE, YESHWANTHPUR Industrial Land, BDA, 34000 sqft, north, 60 feet road, near Modern Bread. 9035767333

Flat

Vasanth Nagar

2 BHK Flat for sale at Palace Cross Road, Vasanthnagar, East facing, 1 Covered car park. Gated community, 1262 sqft. 9845493251/ 9449009325

Sites

Nelamangala

CORNER PLOT 2190 sft East facing in Harina's Euro Valley Layout. Ready to construct. BEST SUITED FOR INVESTMENT. 4 km to New APMC Market, Dasanpura. Rs 29 lacs. Whatsapp owner (message only) 9845131527.

RMV

33X45 Site Sale Devinagar, Nagashettihally, near ring road rate 7500 per sft 8310414614, 9035315797

Mysore

SALE 106'X62' Site with Old House at Nazarbad Mohalla near Lalitha Mahal Hotel, Clear Title Rs. 3.6 cr. Only genuine buyers Call: 8904007677. (Brokers Excuse)

Doddabalapur

BUY 30X40/ 40x60 Plots. Just Pay 1 Lakh Remaining from Bank Loan/ Instalment Facility. Doddaballapura Town Best Investment Opportunity: 9591146666

Vishweshwariah Layout

BDA SITE Sale Vishweshwaraiah 30x40 1st Block North 9000, 30x40 4th Block North 5800 Negotiable. 50x80 6th Block 60ft Road:- 8892901567/ 9341733480

AVAILABLE 50X80 80feet Road 2nd Block Vishveswaraya Layout Rate 6500/- Per Sqft Contact: 9481703468

Yelahanka

SALE BDA approved North Facing 1427 sft Site Jayasurya Nagar, Iii Phase 'A' Block, (Vidhana Soudha Layout) at Agrahara, Yelahanka, Bangalore, Contact 9535773366, 9448488818

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

PERSONAL

Change of Name

I, DAKSHAYANI Residing-at #432/A, Flat-No.301, 9th-Main, 3rd-Cross, Rajarajeshwarinagar, Bangalore- 560098 have-changed my-Name-to DAKSHAYANI REDDY vide-Affidavit Dated: 02-03-2022 Sworn-Before Notary N.Sandhya,Bangalore

I, MANDAPATI SATYA VENKATA NARASIMHA RAJU residing No.24/71, Escorts Colony, 2nd 'A' Main, Attur Layout, Yelahanka NewTown, Bangalore-560064 have changed my minor son's name from MANDAPATI NAYAN VARMA to MANDAPATI VIGNESH VARMA vide affidavit dated 03/03/2022 sworn before notary H.K.Gopala Gowda, Bangalore

I, SUNIL KUMAR LODHA, residing at No.194/1-1, 3rd floor,2nd Main, Magadi Main Road, Opp.Kamakshipalya Traffic Station, HVR Layout,Kamakshipalya, Bangalore-560079. have Changed my Name from SUNIL KUMAR SHANTHILAL LODHA to SUNIL KUMAR LODHA vide affidavit Dated:03/03/2022 before Notary H.G.Venkataramu,Bangalore.

I, ANVESH SHETTY S/o VITTALA SHETTY Residing at Flat No.5P 605, Arya Hamsa Apartment, Royal country, Gottigere, Bangalore- 560083 have changed my name from ANVESH to ANVESH SHETTY vide affidavit dated 02/03/2022 before notary L.Puttaraju, Bangalore

I, REKHA BHARATESH LADAGE W/o No.16112120H, Rank:HAV, Name: Bharatesh Ladagi R/at Soundatti, Belgaum, Karnataka-591213 have changed my name REKHA BHARATESH LADAGE to REKHA BHARATESH LADAGI affidavit dated 03.03.2022 notary A.R.Muneer Ahmed, Bangalore.

I, SITHA, residing at Door No. T-1, 3rd floor, Samrudhi Enclave, No. 45, Naganapalya Main Road, Maruthi Sevanagar Post, Bengaluru 560033, have changed my name to SAVITHA, vide affidavit dated 03.03.2022 sworn before Advocate & Notary N. Narayana Swamy, Bengaluru.

I,AISHWARYA CHALUVA MURTHY Residing-at #1748, 7th-Main,BEML Layout,5th Stage, Rajarajeshwarinagar, Bangalore-560098 have-changed my-Name-to AISHWARYA MURTHY vide-Affidavit Dated: 03-03-2022 Sworn Before-Notary N.Sandhya, Bangalore

EDUCATIONAL

Correspondence Courses

PASS IN ONE YEAR! LL.B/LL.M/B.Tech/M.Tech/ Diploma/M.Phil/MBA/MCA/ M.Sc/BCA/BBA/B.Sc/B.Com/ 10th/ PU (NIOS). Asha Academy, Bangalore: 9448460103/ 7093438248

DH DECCAN HERALD ಪ್ರಜಾವಾಣಿ

BOOK YOUR CLASSIFIEDS ONLINE

5 EASY STEP

5 Easy steps to book your ads

- LOG INTO WWW.DHCLASSIFIEDS.COM
- CHOOSE THE CATEGORY
- CHOOSE THE AD DATES
- COMPOSE THE MATTER
- CONFIRM AND PAY

TO BOOK YOUR CLASSIFIEDS ADS ONLINE

JOB | LOST | REAL ESTATE | NAME CHANGE | EDU | HEALTH | MATRI | AUTO | ASTRO | NOTICE | TRAVEL

condition apply*

WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಚನ್ನಡಲು ಗ್ರಾಮದ ಅತಿವೃಷ್ಟಿ ಸಂತ್ರಸ್ತರಿಂದ ರಾಷ್ಟ್ರಪತಿಗೆ ಮನವಿ

'ದಯಾಮರಣಕ್ಕೆ ಅನುಮತಿ ನೀಡಿ'

ಪ್ರಜಾವಾಣಿ ವಾರ್ತೆ

ಕಳಸ: ಅತಿವೃಷ್ಟಿಯಿಂದ ಮನೆ ಕಳೆದುಕೊಂಡ ತಾಲ್ಲೂಕಿನ ಚನ್ನಡಲು ಗ್ರಾಮದ 16 ಕುಟುಂಬಗಳ ಸಂತ್ರಸ್ತರು ದಯಾಮರಣ ಕೋರಿ ಗುರುವಾರ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದಾರೆ.

'2019ರ ಆಗಸ್ಟ್‌ನಲ್ಲಿ ಸುರಿದ ಭಾರಿ ಮಳೆಗೆ ತೋಟ, ಮನೆ ಕಳೆದುಕೊಂಡರೂ ಅಧಿಕಾರಿಗಳ ಭರವಸೆಯ ಕಾರಣಕ್ಕೆ ಜೀವ ಉಳಿದಿದೆ. ಆದರೆ, 3 ವರ್ಷ ಕಳೆದರೂ ಸರ್ಕಾರದಿಂದ ಯಾವುದೇ ಪರಿಹಾರದ ಲಕ್ಷಣ ಕಾಣುತ್ತಿಲ್ಲ. ಹೀಗಾಗಿ ಬದುಕಿನ ಎಲ್ಲ ಭರವಸೆ ಕಳೆದುಕೊಂಡಿದ್ದೇವೆ. ನಮಗೆ ದಯಾಮರಣಕ್ಕೆ ಅನುಮತಿ ನೀಡಬೇಕು' ಎಂದು ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದ್ದಾರೆ.

ಮನವೊಲಿಕೆಗೆ ಯತ್ನ: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕಳಸ ತಾಲ್ಲೂಕು ಕಚೇರಿಯ ಮುಂಭಾಗದಲ್ಲಿ ಅತಿವೃಷ್ಟಿ ಸಂತ್ರಸ್ತರು ಬುಧವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಗುರುವಾರ ಮುಷ್ಕರದ ಸ್ಥಳಕ್ಕೆ ಬಂದ ತಹಶೀಲ್ದಾರ್ ನಾಗರಾಜ್, 'ನಿಮಗೆ ಹಕ್ಕುಪತ್ರ ಸಿಗಲು ಅಗತ್ಯವಾದ ಎಲ್ಲ ಪ್ರಕ್ರಿಯೆ ಮುಗಿಸಿದ್ದೇವೆ. ಬೆಂಗಳೂರಿನ ರಾಜೀವಗಾಂಧಿ ವಸತಿ ನಿಗಮದಲ್ಲಿ ಹಕ್ಕುಪತ್ರ ಸಿದ್ಧವಾಗುತ್ತದೆ. ಆದ್ದರಿಂದ ಮುಷ್ಕರ ಕೈಬಿಡಿ' ಎಂದು ಮನವಿ ಮಾಡಿದರು.

ಆದರೆ ಪ್ರತಿಭಟನೆಯ ನೇತೃತ್ವ ವಹಿಸಿರುವ ರವಿ ರೈ, 'ಹಕ್ಕುಪತ್ರ ಸಿಗುವವರೆಗೂ ಸಂತ್ರಸ್ತರು ಮುಷ್ಕರ ಹಿಂಪಡೆಯುವುದಿಲ್ಲ. 3 ದಿನದಲ್ಲಿ ಹಕ್ಕುಪತ್ರದ ಸ್ಪಷ್ಟ ಮಾಹಿತಿ ಸಿಗದಿದ್ದರೆ ಉಪವಾಸ ಸತ್ಯಾಗ್ರಹ ಅನಿವಾರ್ಯ' ಎಂದು ಎಚ್ಚರಿಸಿದರು. ಮುಖಂಡರಾದ ಗೋಪಾಲ ಶೆಟ್ಟಿ, ಮಂಜಪ್ಪ ಪೂಜಾರಿ ಇದ್ದರು.

ಧರಣಿ ನಡೆಯುವ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ ತಹಶೀಲ್ದಾರ್ ನಾಗರಾಜ್ ಧರಣಿ ಕೈಬಿಡುವಂತೆ ಸಂತ್ರಸ್ತರ ಮನವೊಲಿಸುವ ಯತ್ನ ಮಾಡಿದರು –ಪ್ರಜಾವಾಣಿ ಚಿತ್ರ

ಅವ್ಯವಹಾರ ಆರೋಪ, ಬೋಧಕ ಸಿಬ್ಬಂದಿ ವಜಾ

ಸಂಗೀತ ವಿ.ವಿ: ಬಹಿರಂಗ ಚರ್ಚೆಗೆ ಸವಾಲು

ಪ್ರಜಾವಾಣಿ ವಾರ್ತೆ

ಮೈಸೂರು: 'ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಲ್ಲಿ ನಡೆದಿರುವ ಅವ್ಯವಹಾರಗಳು ಹಾಗೂ 21 ಮಂದಿ ಬೋಧಕ ಸಿಬ್ಬಂದಿಯನ್ನು ತೆಗೆದು ಹಾಕಿರುವ ಕುರಿತು ಕುಲಪತಿ ನಾಗೇಶ್ ವಿ. ಬೆಟ್ಟಕೋಟೆ ಅವರು ಬಹಿರಂಗ ಚರ್ಚೆಗೆ ಬರಬೇಕು' ಎಂದು ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್ ಸವಾಲೆಸೆದರು.

ಸರ್ಕಾರದ ಆದೇಶ ಪಾಲಿಸಿದ್ದೇನೆ: ಕುಲಪತಿ

'ಸರ್ಕಾರದ ಆದೇಶವನ್ನು ಪಾಲಿಸಿ ವರದಿ ಸಲ್ಲಿಸಿದ್ದೇನೆ. ಯಾರ ಮೇಲೂ ವೈಯಕ್ತಿಕ ದ್ವೇಷವಿಲ್ಲ. 21 ಮಂದಿಯನ್ನೂ ಕರ್ತವ್ಯದಿಂದ ಬಿಡುಗಡೆ ಮಾಡಿ ಎಂದು ಸರ್ಕಾರ ನಾಲ್ಕು ಆದೇಶ ನೀಡಿತ್ತು. ಸಂಬಳ ನೀಡಿಲ್ಲ. ಅವರ ನೇಮಕಾತಿ ಹಾಗೂ ಸಂಬಳ ಪಾವತಿ ಕುರಿತು ಲೆಕ್ಕಪರಿಶೋಧಕರು ಆಕ್ಷೇಪ ಎತ್ತಿದ್ದಾರೆ. ಈಗಲೂ ಸರ್ಕಾರ ಆದೇಶಿಸಿದರೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳುವೆ' ಎಂದು ಕುಲಪತಿ ನಾಗೇಶ್ ವಿ. ಬೆಟ್ಟಕೋಟೆ ಪ್ರತಿಕ್ರಿಯಿಸಿದರು.

'ನಿಯಮಾನುಸಾರ ನೇಮಕಗೊಂಡು 10 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ಕೆಲಸದಿಂದ ತೆಗೆದಿರುವುದರ ವಿರುದ್ಧ ಪ್ರತಿಭಟನೆ ನಡೆಯುತ್ತಿದ್ದು, ಉಪವಾಸ ಸತ್ಯಾಗ್ರಹ ಆರಂಭಿಸಲೂ ಸಿಬ್ಬಂದಿ ಚಿಂತನೆ ನಡೆಸಿದ್ದಾರೆ. ಕನಿಷ್ಠ 21 ಮಂದಿಯೂ ಕೆಲಸ ಮಾಡುವುದು ಬೇಡ ಎನ್ನುವುದಾದರೆ ವಿಶ್ವವಿದ್ಯಾಲಯವನ್ನೇ ಮುಚ್ಚುವುದು ಲೇಸು' ಎಂದು ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ಒಡನಾಡಿ ಸಂಸ್ಥೆಯ ಸಂಸ್ಥಾಪಕ ಸ್ಟ್ಯಾನ್ಲಿ ಮಾತನಾಡಿ, 'ಒಡೆಯರ ಜೀತ ಪ್ರಕರಣ, ಜಿಲ್ಲಾಧಿಕಾರಿ ಸ್ವಯಂಪ್ರೇರಿತರಾಗಿ ಪ್ರಕರಣ ದಾಖಲಿಸಿ ಕುಲಪತಿ ವಿರುದ್ಧ ವಿಚಾರಣೆ ನಡೆಸಬೇಕು' ಎಂದು ಒತ್ತಾಯಿಸಿದರು.

'ಕೋವಿಡ್ ಸಂದರ್ಭದಲ್ಲಿ ಎಲ್ಲರಿಗೂ ಸಂಬಳ ಕೊಡಬೇಕು ಎಂಬ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಸೂಚನೆಯನ್ನು ಕುಲಪತಿ ಧಿಕ್ಕರಿಸಿ 10 ತಿಂಗಳಿಂದ ಸಿಬ್ಬಂದಿಗೆ ವೇತನ ನೀಡಿಲ್ಲ. ಮಹಿಳಾ ದೌರ್ಜನ್ಯ ಪ್ರಕರಣದ ಆರೋಪಿಯೊಬ್ಬರಿಗೂ ಬೋಧಕ ಹುದ್ದೆ ನೀಡಲಾಗಿದೆ. ಕುಲಪತಿ ವಿರುದ್ಧದ ಎಲ್ಲ ಆರೋಪಗಳ ವಿರುದ್ಧ ನ್ಯಾಯಾಂಗ ತನಿಖೆನಡೆಸಬೇಕು' ಎಂದು ಆಗ್ರಹಿಸಿದರು.

ಕೋಮು ಸೌಹಾರ್ದಕ್ಕೆ ಸಾಕ್ಷಿಯಾಗಲಿದೆ ವಿವಾಹ

ಬಸವಾಪಟ್ಟಣ: ಇಲ್ಲಿನ ನಿವಾಸಿ, ಗುತ್ತಿಗೆದಾರ ಸನಾವುಲ್ಲಾ ಅವರು ಕೋಮು ಸೌಹಾರ್ದ ಸಾರಲು ತಮ್ಮ ಪುತ್ರಿ ವಿವಾಹವನ್ನು ಹಿಂದೂ ಸ್ನೇಹಿತರ ಮನೆಯಲ್ಲಿ ಮಾಡಲು ನಿರ್ಧರಿಸಿದ್ದಾರೆ.

ಕೆ.ಎಂ.ವೀರಯ್ಯ

ಸನಾವುಲ್ಲಾ

ಸನಾವುಲ್ಲಾ ಅವರ ಪುತ್ರಿ ನಸೀಫಾ ಅಂಜುಂ ಅವರ ಮದುವೆ ಕಮ್ಮಾರ ಗಟ್ಟೆಯ ಗೌಸಿಪೀರ್ ಅವರೊಂದಿಗೆ ಇಲ್ಲಿನ ಬಸ್ಸು ನಿಲ್ದಾಣ ಬಳಿಯ ವೀರಶೈವ ಸಂಗಮರಾದ ಕೆ.ಎಂ. ವೀರಯ್ಯ ಅವರ ಮನೆಯ ಆವರಣದಲ್ಲಿ ಮಾರ್ಚ್ 6ರಂದು ಮಧ್ಯಾಹ್ನ 12.30ಕ್ಕೆ ನಡೆಯಲಿದೆ. ಈ ವಿವಾಹ ಹಿಂದೂ–ಮುಸ್ಲಿಂ ಭಾವೈಕ್ಯ ಸಾರಲಿದೆ ಎನ್ನುತ್ತಾರೆ ಸನಾವುಲ್ಲಾ.

'ಈ ಮದುವೆ ಕೋಮು ಸೌಹಾರ್ದಕ್ಕೆ ಸಾಕ್ಷಿ ಎನಿಸಲಿದೆ. ವಿವಾಹಕ್ಕಾಗಿ ಮಾರ್ಚ್ 5 ಮತ್ತು 6ರಂದು ನಮ್ಮ ಮನೆಯನ್ನು ಸನಾವುಲ್ಲಾ ಅವರ ಕುಟುಂಬದ ಮದುವೆಗೆ ಬಿಟ್ಟು ಕೊಡಲಿದ್ದು, ಅತಿಥಿಗಳಿಗೆ ಸಸ್ಯಾಹಾರದ ಅಡುಗೆಯನ್ನು ಹಿಂದೂ ಅಡುಗೆಯವರಿಂದಲೇ ಮಾಡಿಸಿ ಊಟಬಡಿಸಲಾಗುತ್ತದೆ' ಎಂದು ವಿ.ಎಸ್.ಎಸ್.ಎನ್ ಅಧ್ಯಕ್ಷರೂ ಆಗಿರುವ ಕೆ.ಎಂ.ವೀರಯ್ಯ ತಿಳಿಸಿದರು.

'ಮದುವೆ ಸಂಪೂರ್ಣ ಮುಸ್ಲಿಂ ಪದ್ಧತಿಯಂತೆ ನಡೆಯಲಿದೆ. ಕೋಮು ಸೌಹಾರ್ದಕ್ಕಾಗಿ ಇಂತಹ ಯೋಜನೆ ಮಾಡಿದೆ. ಹಿಂದೂಗಳ ಮನೆಯಲ್ಲಿ ನಡೆಸುತ್ತಿರುವ ಮದುವೆಗೆ ನಮ್ಮ ಮುಸ್ಲಿಂ ಸಮಾಜದ ಎಲ್ಲಾ ಬಂಧು-ಮಿತ್ರರೂ ಸಂತಸ ವ್ಯಕ್ತಪಡಿಸಿದ್ದು, ಮದುವೆಗೆ ಬಂದು ವಧೂ-ವರರನ್ನು ಆಶೀರ್ವದಿಸುವುದಾಗಿ ಹೇಳಿದ್ದಾರೆ' ಎಂದು ಸನಾವುಲ್ಲಾ ಹೇಳಿದರು.

'ಸನಾವುಲ್ಲಾ ಅವರು ಎಲ್ಲರಲ್ಲಿಯೂ ಬೆರೆಯುವ ಮನಸ್ಸಿನವರು. ಅಂದು ನಾವೆಲ್ಲರೂ ಮದುವೆಯಲ್ಲಿ ಭಾಗವಹಿಸಿ ಸನಾವುಲ್ಲಾ ಅವರ ಪರವಾಗಿ ಎಲ್ಲರನ್ನೂ ಸ್ವಾಗತಿಸುತ್ತೇವೆ' ಎಂದು ಗ್ರಾಮ ಪಂಚಾಯಿತಿ ಸದಸ್ಯ ಡಿ.ಆರ್. ಹಾಲೇಶ್ ಹೇಳಿದರು.

ಮುಂದಿನ ನಡೆ: 12ರಂದು ಪ್ರಕಟ– ಸಿ.ಎಂ. ಇಬ್ರಾಹಿಂ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಬಸವಾದಿ ಶರಣರ ನಿಜವಾದ ಸಿದ್ಧಾಂತವುಳ್ಳ ಸರ್ಕಾರ ತರಬೇಕು; ಸ್ವಚ್ಛ ಜೊತೆಗಿರಬೇಕು ಎಂದುಕೊಂಡಿದ್ದೇನೆ. ಈ ನಿಟ್ಟಿನಲ್ಲಿ ಮುಂದಿನ ನಡೆಯನ್ನು ಮಾರ್ಚ್ 12ರಂದು ಪ್ರಕಟಿಸುತ್ತೇನೆ' ಎಂದು ವಿಧಾನಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಗುರುವಾರ ಮಾತನಾಡಿದ ಅವರು, 'ಮದುವೆ ಖಚಿತ. ಆದರೆ, ವೀಗರಾರು ಎನ್ನುವುದನ್ನು ಅಂದೇ ಹೇಳುತ್ತೇನೆ. ಬಹಳ ಒಳ್ಳೆಯ ಬದಲಾವಣೆ ಆಗುತ್ತದೆ' ಎಂದು ಪ್ರತಿಕ್ರಿಯಿಸಿದರು.

IN THE COURT OF THE XCI ADDITIONAL CITY CIVIL AND SESSIONS JUDGE AND SPECIAL JUDGE FOR KPIDFE Act BENGALURU
Misc. No.664/2021 & Misc. No. 666/2021

BETWEEN
The Competent Authority,
For - M/s Aala Ventures Ltd.,
Deputy Commissioner - (Urban),
Bengaluru, Kandaya Bhavan,
K.G. Road, Bengaluru - 560 009.
..............Petitioner

AND

Notice to Respondents No. 1 & 2

1. M/s Aala Ventures Ltd.,
Having its office at
No. 403, 3rd Floor, 5th Cross,
5th Main, 1st Stage, 3rd Block,
HBR Layout, Kalyan Nagar P.O,
Bengaluru - 560043.

Represented by its Chairman
Nadim Ahmed.

2. Nadim Ahmed,
Aged about 42 years,
S/o. Late Nisar Ahmed,
R/at No. 403, 3rd floor, 5th Cross,
5th Main, 1st Stage, 3rd Block,
HBR Layout, Kalyan Nagar P.O.
Bengaluru - 560043.
................Respondents

Whereas, the Petitioner has filed the petitions under section 5(2) of the KPIDFE Act 2004 against Respondents.

The Respondents No. 1 & 2 are hereby issued show cause notice u/s 12(1) of KPIDFE Act 2004, to appear in court of the XCI Addl. City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petitions on 21-03-2022 at 11.00 'O' Clock in the forenoon.

Take notice that in default of your appearance on the date above mentioned, the petition will be heard and determined in your absence.

Given under my hand and seal of the court on this day 25-02-2022.

By order of the Court
Assistant Registrar
City Civil Court
Bengaluru
Smt. Shantha Mullur
Special Public Prosecutor
DIPR/DDU/Sreshta/3574/2021-22

IN THE COURT OF THE XCI ADDITIONAL CITY CIVIL AND SESSIONS JUDGE AND SPECIAL JUDGE FOR KPIDFE Act BENGALURU
Misc. No. 663/2021

BETWEEN
The Competent Authority,
For - M/s Aala Ventures Ltd.,
Deputy Commissioner - (Urban),
Bengaluru, Kandaya Bhavan,
K.G. Road, Bengaluru - 560 009.
..............Petitioner

AND

Notice to Respondents No.1 to 4

1. M/s Aala Ventures Ltd.,
Having its office at
No.403, 3rd Floor, 5th Cross,
5th Main, 1st Stage, 3rd Block,
HBR Layout, Kalyan Nagar P.O,
Bengaluru - 560 043.
Represented by its Chairman Nadim Ahmed.

2. Nadim Ahmed,
Aged about 42 years,
S/o. Late Nisar Ahmed,
R / at No.403, 3rd Floor, 5th Cross,
5th Main, 1st Stage, 3rd Block,
HBR Layout, Kalyan Nagar P.O.,
Bengaluru - 560 043.

3. Mrs. Shanazunnisa,
Aged about 37 years,
w/o Noorulla Sheriff

4. Master. Sadath Ullah Sheriff,
Aged about 21 years,
s/o Noorulla Sheriff.

Respondents No. 3 & 4 are residing at
No. 94, 4th Cross, Umar Nagar,
Dr. APJ Abdul Kalam Main Road,
(Govindapura), Arabic College Post,
Bengaluru - 560 045.
................Respondents

Whereas, the petitioner has filed the petition under section 5(2) of the KPIDFE Act 2004, against Respondents.

The Respondents No. 1 to 4 are hereby issued show cause notice u / s 12(1) of KPIDFE Act 2004, to appear in court of the XCI Addl. City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petition on 21-03-2022 at 11.00 'O' Clock in the forenoon.

Take notice that in default of your appearance on the date above mentioned, the petition will be heard and determined in your absence.

Given under my hand and seal of the court on this day 25-02-2022.

By order of the Court
Assistant Registrar
City Civil Court
Bengaluru
Smt. Shantha Mullur
Special Public Prosecutor
DIPR/DDU/Sreshta/3573/2021-22

Vijayanagara Nirmithi Kendra, Hosapete
EOI for Internal Auditors

EOI is invited from Practicing Chartered Accountants firms to undertake the Internal Audit of Vijayanagara Nirmithi Kendra for the year 2021-22 the details are available on the website https://vijayanagara.nic.in/. Eligible applicants' FIRMS/ Companies may send their applications to the Project Director, Vijayanagara Nirmithi Kendra, #02 PWD Quarters, Teachers Colony, Ballari road, Hosapete Taluk Vijayanagara Dist-583201.E-Mail ID: vijayanagaranirmthikendra@gmail.com on or before 14.03.2022 5pm by mail or Hard copy. The Chairman, Vijayanagara Nirmithi Kendra reserves the right to accept or reject any application without assigning any reason thereto.

Date : 04.03.2022

Sd/- Chairman
Vijayangara Nirmithi Kendra
and Deputy Commissioner
Vijayangara District

ಸಾರ್ವಜನಿಕ ಶಿಕ್ಷಣ ಇಲಾಖೆಯ, ಉಪನಿರ್ದೇಶಕರ ಕಾರ್ಯಾಲಯ,
ಸಮಗ್ರ ಶಿಕ್ಷಣ ಕರ್ನಾಟಕ – ಬೀದರ

ಸಂಖ್ಯೆ :– ಸ.ಶಿ.ಕ/ಬೀ/ಕೆ.ಜಿ.ಬಿ.ವಿ/ಹೊ.ಗು.ಸಿ./ಮ್ಯಾನ್ ಪಾವರ್/ಇ–ಟೆಂಡರ್/2021–22 ದಿನಾಂಕ :25/02/2022

ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಬೀದರ ಜಿಲ್ಲೆಯ 4 ಕೆ.ಜಿ.ಬಿ.ವಿ. ವಸತಿ ಶಾಲೆ ಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಅರೆಕಾಲಿಕ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ಕುರಿತು ಅಲ್ಪಾವಧಿ ಇ–ಟೆಂಡರ್ ಪ್ರಕ್ರಿಯೆಯ ವೇಳಾಪಟ್ಟಿ

1) ಅಲ್ಪಾವಧಿ ಟೆಂಡರ್ ಪ್ರಕಟಣೆಯ ಸಂಖ್ಯೆ ಹಾಗೂ ದಿನಾಂಕ : SSK/KGBV/STAFFHIRING/O S/ BIDAR/2021-22/2022-23 Date: 25-02-2022, 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **ದಿ: 07–03–2022 ಸಾಯಂಕಾಲ : 4.00 ಗಂಟೆ,** 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: ದಿ: **10–03–2022 ಮುಂಜಾನೆ : 11:30 ಗಂಟೆ,** 4) ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ(ತಾತ್ಕಾಲಿಕ) : ತಾಂತ್ರಿಕ ಬಿಡ್ ಅಂತಿಮಗೊಳಿಸಿದ ನಂತರ, 5) ಟೆಂಡರ್ ಮೊತ್ತ: ಮೊತ್ತ 54.42 ಲಕ್ಷ 6) ಪಾವತಿಸಬೇಕಾದ ಇ.ಎಮ್.ಡಿ ಮೊತ್ತ: **ರೂ. 1.36 ಲಕ್ಷಗಳು,** 7) ಟೆಂಡರ್ ಅಂಗೀಕರಿಸುವ ಅಧಿಕಾರಿ : ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರವು ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಬೀದರ ಇವರು ಹೊಂದಿರುತ್ತಾರೆ. 8) ವ್ಯವಹರಿಸಬೇಕಾದ ಅಧಿಕಾರಿ, ಕಛೇರಿ ವಿಳಾಸ ಮತ್ತು ದೂರವಾಣಿ ಸಂಖ್ಯೆ: ಶ್ರೀ ಬಾಬು ಫತ್ರುಸಾಬ್. ಉಪಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ ಮೊಬೈಲ್ ಸಂಖ್ಯೆ: 94489–99388, ಸ್ಥಿರ ದೂರವಾಣಿ ಸಂಖ್ಯೆ: 08482–233136

ಸಹಿ/– ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ ಜಿಲ್ಲೆ

ವಾ.ಸಾ.ಸಂ.ಇ/ಬೀದರ/314/ಎಂಸಿ&ಎ/2021–22

ಕರ್ನಾಟಕ ಸರಕಾರ
ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರರ್ ಕಛೇರಿ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಸಂ:ಕಾನಿಇಂ/ಲೋಇ/ವಿಬಿ/ಕಿಇಂ–1/ಎಸ್‌ಡಿಪಿ/2021–22/5223
ದಿನಾಂಕ: 28.2.2022

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ವರ್ಕ್–ಇಂಡೆಂಟ್ **KPWD/2021–22/RD/WORK_INDENT** 149060, 149107, 143814, 146370, 148719 & 149402 ಅಡಿ ಇರುವ ಕನಿಷ್ಠ **ರೂ. 112.00 ಲಕ್ಷ** ಮತ್ತು ಗರಿಷ್ಠ **ರೂ. 300.00 ಲಕ್ಷ** ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ ಇವರಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.

ಪಬ್ಲಿಕ್–ಪ್ರೊಕ್ಯುರ್‌ಮೆಂಟ್ ಪೋರ್ಟಾಲ್‌ನ http://eproc.karnataka.gov.in ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **07.03.2022** ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: **08.03.2022** ರಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.

ಸಹಿ/– **ಅಶೋಕ್ ಖಂಡ್ರೆ**
ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಪುರಸಭಾ ಕಾರ್ಯಾಲಯ ಕಡೂರು, ಚಿಕ್ಕಮಗಳೂರು ಜಿಲ್ಲೆ

website : www.kadurtown.gov.in PH : 08267-221221
E-mail: kadurtmc@yahoo.com FAX: 08267-221202

ಸಂಖ್ಯೆ/ಕೆ.ಪು/ಡೇ–ನಲ್ಮ್/ಸಿ.ಆರ್/2021–22 ದಿನಾಂಕ : 02/03/2022

॥ ಕೋಟೇಶನ್ ಕರೆಯೋಲೆ ॥

ಸ್ವಚ್ಛತಾ ಮತ್ತು ನೈರ್ಮಲ್ಯ ಕಲಸ ನಿರ್ವಹಿಸುತ್ತಿರುವ **ಖಾಯಂ/ಗುತ್ತಿಗೆ ಪೌರಕಾರ್ಮಿಕರಿಗೆ ಮಾಸ್ಟರ್ ಹೆಲ್ತ್ ಚೆಕಪ್** ಮಾಡಲು ಅಧಿಕೃತ ಮಾನ್ಯತೆ ಹೊಂದಿದ ಆಸ್ಪತ್ರೆಗಳಿಂದ ಕೋಟೇಶನ್ ಕರೆಯಲಾಗಿದೆ. ಆಸಕ್ತಿಯುವುಳ್ಳ ನೋಂದಾಯಿತ ಅಂಗೀಕೃತ ಆಸ್ಪತ್ರೆಗಳಿಂದ ಸೀಲ್ ಮಾಡಿದ ಲಕೋಟೆಯಲ್ಲಿ ಮುಖ್ಯಾಧಿಕಾರಿ ಪುರಸಭೆ ಕಡೂರು ಇವರ ಹೆಸರಿಗೆ ಲಕೋಟೆಯಲ್ಲಿ ದರ ನಮೂದಿಸಿ **ದಿನಾಂಕ :09/03/ 2021 ರಂದು ಸಂಜೆ4 : 30 ಗಂಟೆಗಳೊಳಗಾಗಿ** ಈ ಕಛೇರಿಗೆ ಕೋಟೇಶನ್ ಸಲ್ಲಿಸುವುದು. ಅವಧಿ ಮುಗಿದ ನಂತರ ಬಂದ ಕೋಟೇಶನ್‌ಗಳನ್ನು ಸ್ವೀಕರಿಸ ಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯುವುದು.

ಸಹಿ/–	ಸಹಿ/–	ಸಹಿ/–
(ಶ್ರೀ ಭಂಡಾರಿ ಶ್ರೀನಿವಾಸ್)	(ಶ್ರೀಮತಿ ವಿಜಯ ರಾಜಗೋಪಾಲ್(ಚಿನ್ನರಾಜು))	(ಶ್ರೀಮತಿ ಕಲಾವತಿ.ಕೆ.ಎಂ)
ಅಧ್ಯಕ್ಷರು, ಪುರಸಭೆ, ಕಡೂರು	ಉಪಾಧ್ಯಕ್ಷರು, ಪುರಸಭೆ, ಕಡೂರು	ಮುಖ್ಯಾಧಿಕಾರಿ ಪುರಸಭೆ , ಕಡೂರು

IN THE COURT OF THE XCI ADDITIONAL CITY CIVIL AND SESSIONS JUDGE AND SPECIAL JUDGE FOR KPIDFE Act BENGALURU
Misc. No. 665/2021

BETWEEN
The Competent Authority,
For - M/s Aala Ventures Ltd.,
Deputy Commissioner - (Urban),
Bengaluru, Kandaya Bhavan,
K.G. Road, Bengaluru - 560 009.
..............Petitioner

AND

Notice to Respondents No.1 to 8

1. M/s Aala Ventures Ltd.,
Having its office at
No.403, 3rd Floor, 5th Cross,
5th Main, 1st Stage, 3rd Block,
HBR Layout, Kalyan Nagar P.O,
Bengaluru - 560 043.
Represented by its Chairman
Nadim Ahmed.

2. Nadim Ahmed,
Aged about 42 years,
S/o. Late Nisar Ahmed,
R / at No.403, 3rd Floor, 5th Cross,
5th Main, 1st Stage, 3rd Block,
HBR Layout, Kalyan Nagar P.O.,
Bengaluru - 560 043.

3. Mrs. Faheema Begum,
Aged about 61 years,
w/o Late Mohammed Bashher Ahmed,

4. Mrs. Asma Ayesha Ansar,
Aged about 43 years,
w/o Mr. Ansar Ahmad Khan &
D / o Late Mohammed Basher Ahmed,

5. Mrs. Sara,
Aged about 36 years,
w / o Mr. Manzoor Rehman &
d / o late Mohammed Basher Ahmed,

6. Mr. Mohammed Afnan Ahmed,
Aged about 35 years,
s / o late Mohammed Basher Ahmed,

7. Mrs. Noor Us Sabah,
Aged about 32 years,
w / o Mr. Mujaheed Khan &
D / o late Mohammed Basher Ahmed,

8. Mr. Mohammed Jibran Ahmed,
Aged about 30 years,
S / o late Mohammed Basher Ahmed,

Respondents No. 3 to 8 are residing at
No. 80, St. Johns Church Road,
Opp. Safeena Garden, Frazer Town,
Bengaluru - 560 005.
................Respondents

Whereas, the petitioner has filed the petition under section 5(2) of the KPIDFE Act 2004, against Respondents.

The Respondents No. 1 to 8 are hereby issued show cause notice u / s 12(1) of KPIDFE Act 2004, to appear in court of the XCI Addl. City Civil & Sessions Judge (CCH-92) at Bengaluru, in person or by a pleader duly instructed and able to answer all material questions relating to above petition on 21-03-2022 at 11.00 'O' Clock in the forenoon.

Take notice that in default of your appearance on the date above mentioned, the petition will be heard and determined in your absence.

Given under my hand and seal of the court on this day 25-02-2022.

By order of the Court
Assistant Registrar
City Civil Court
Bengaluru
Smt. Shantha Mullur
Special Public Prosecutor
DIPR/DDU/Sreshta/3575/2021-22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001. ಫೋನ್ : 080–22265383
website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಡಿಪಿಆರ್–11/16173/2021–22 ದಿನಾಂಕ: 03.03.2022

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿ.ಓ.ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಯೋಜನೆಗೆ ವಿವರವಾದ ಯೋಜನಾ ವರದಿಯನ್ನು ಸಿದ್ದಪಡಿಸುವುದಕ್ಕಾಗಿ ಇದೇ ರೀತಿಯ ಕಾಮಗಾರಿಯನ್ನು ನಿರ್ವಹಿಸಿದ ದಾಖಲೆಯುಳ್ಳ ಮತ್ತು ಹೆಚ್ಚಿನ ಅನುಭವವಿರುವ, ಬೆಂಗಳೂರಿನಲ್ಲಿ ಕಛೇರಿಯುಳ್ಳ ಪ್ರತಿಷ್ಠಿತ ಅರ್ಹ ಸಮಾಲೋಚಕರು / ಸಂಸ್ಥೆಗಳಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

ಕಾಮಗಾರಿಯ ಹೆಸರು: ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಳ ತಾಲ್ಲೂಕಿನಲ್ಲಿ ಪ್ರಸ್ತಾಪಿತ ಓಬಳಾಪುರ ಕೈಗಾರಿಕಾ ಪ್ರದೇಶದ ರಚನೆಗಾಗಿ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಬಡಾವಣೆ ನಕ್ಷೆ, ವಿನ್ಯಾಸ, ಅಂದಾಜು ಪಟ್ಟಿ, ಇತ್ಯಾದಿ ಒಳಗೊಂಡಂತೆ ವಿವರವಾದ ಯೋಜನಾ ವರದಿ (ಡಿಪಿಆರ್)ಯನ್ನು ಒಳಗೊಂಡಂತೆ ಸಲಹಾ ಸೇವೆಗಳನ್ನು ಒದಗಿಸುವುದು. (442.00 ಎಕರೆ ವಿಸ್ತೀರ್ಣದಲ್ಲಿ)

ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 16.03.2022, ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/DDU/Zen/R.O: 3591/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರರ್ ಕಛೇರಿ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಸಂ:ಕಾನಿಇಂ/ಲೋಇ/ವಿಬಿ/ತಾಸ–3/ಎಸ್.ಸಿ.ಪಿ.ಟಿಎಸ್‌ಪಿ/ಹೆ/2021–22/6072
ದಿನಾಂಕ: 25.2.2022

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ವರ್ಕ್–ಇಂಡೆಂಟ್ **KPWD/2021–22/RD/WORK_INDENT 148681, 148597, 148615, 148742, 148747, 148679, 148427, 148918, 148915, 148977, 148916, 149112, 148741, 148748, 148917 & 149902** ಅಡಿ ಇರುವ ಕನಿಷ್ಠ **ರೂ. 50.00 ಲಕ್ಷ** ಮತ್ತು ಗರಿಷ್ಠ **ರೂ. 300.00 ಲಕ್ಷ** ಮೊತ್ತದ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆ ವಿಭಾಗ ಬೀದರ ಇವರಿಂದ ಟೆಂಡರ್‌ಗಳನ್ನು ಕರೆಯಲಾಗಿದೆ.

ಪಬ್ಲಿಕ್–ಪ್ರೊಕ್ಯುರ್‌ಮೆಂಟ್ ಪೋರ್ಟಾಲ್‌ನ http://eproc.karnataka.gov.in ರಿಂದ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **07.03.2022** ರ ಸಂಜೆ **4.00** ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: **08.03.2022** ರಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಅಂತರ್ಜಾಲ ತಾಣ ಅಥವಾ ಈ ಕಚೇರಿಗೆ ಸಂಪರ್ಕಿಸಬಹುದು.

ಸಹಿ/– **ಅಶೋಕ್ ಖಂಡ್ರೆ**
ಕಾರ್ಯನಿರ್ವಾಹಕ ಇಂಜಿನಿಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಬೀದರ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಚಿತ್ರದುರ್ಗ.
(ಯೋಜನಾ ವಿಭಾಗ) ದೂ: 08194–230294, Email: kn_cht@pmgsy.nic.in
ಸಂಖ್ಯೆ: ಕಾ.ಇಂ./ಯೋ.ವಿ/ಚಿದು/ತಾಂತ್ರಿಕ/ಟೆಂಡರ್/2021–22/589 ದಿ: 02.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ – ವಿಸ್ತರಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಚಿತ್ರದುರ್ಗ ರವರು 2020–21ನೇ ಸಾಲಿನ 'ನಮ್ಮ ಗ್ರಾಮ ನಮ್ಮ ರಸ್ತೆ' ಯೋಜನೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾರ್ಯಕ್ರಮದಡಿ ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ವಿಧಾನಸಭಾ ಕ್ಷೇತ್ರಗಳ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿಗಳಿಗೆ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾನದಂಡಗಳನ್ನು ಅನುಸರಿಸಿ ಅಲ್ಪಾವಧಿ ಟೆಂಡರ್‌ನ್ನು ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರಗಳ ಅನುಸಾರ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ–ಲಕೋಟೆ ಪದ್ಧತಿಯಂತೆ ಕರೆಯಲಾಗಿತ್ತು. ಆದರೆ ಕಾರಣಾಂತರಗಳಿಂದ ಸದರಿ ಟೆಂಡರನ್ನು ವಿಸ್ತರಣೆ ಮಾಡಲಾಗಿತ್ತು. ತಾಂತ್ರಿಕ ಕಾರಣಗಳಿಂದ ಟೆಂಡರನ್ನು ಮುಂದೂಡಿ 2ನೇ ಕರೆ ಕರೆಯಲಾಗಿತ್ತು. ಸದರಿ ಟೆಂಡರ್‌ನ್ನು ಸಹ ಪ್ರಕಟಿಸಲು ಸಾಧ್ಯವಾಗದೇ ಇದ್ದುದರಿಂದ 3ನೇ ಕರೆ ಟೆಂಡರನ್ನು ಕರೆಯಲಾಗಿದೆ. ಸದರಿ ದಿನಾಂಕಗಳು ಈ ಕೆಳಕಡಂತಿರುತ್ತವೆ. 1) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: 09.03.2022 (ವ.ಇಂ. ನಂ.5347), 16:30 ಗಂಟೆ. 2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 11.03.2022, 11:00 ಗಂಟೆ (ವ.ಇಂ. ನಂ.5347). 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 14.03.2022, 15:00 ಗಂಟೆ (ವ.ಇಂ. ನಂ.5347).

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಯೋಜನಾ ವಿಭಾಗ, ಚಿತ್ರದುರ್ಗ.

RO No. 990: DIPR/CTA/MCA/2021-22

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/6236/2021–22 ದಿನಾಂಕ : 28–02–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ (1) ಹಾಗೂ (2)ರಲ್ಲಿನ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಹಾಗೂ ಉಳಿದ ಕಾಮಗಾರಿಗಳಿಗೆ ಏಕ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು –ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ವರ್ಗ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	8443–ಠೇವಣಿ ಕಾಮಗಾರಿಗಳು :		
	5054–ವಿಶೇಷ ಅಭಿವೃದ್ಧಿ ಯೋಜನೆ (ಜಿಲ್ಲಾ ಮತ್ತು ಇತರೆ ರಸ್ತೆಗಳು)		
1)	KPWD/2021-22/RD/WORK_INDENT149727	ಅನ್ವಯಿಸುವುದಿಲ್ಲ	203.74
2)	KPWD/2021-22/BG/WORK_INDENT149692	ಅನ್ವಯಿಸುವುದಿಲ್ಲ	72.23
	5054–ವಿಶೇಷ ಅಭಿವೃದ್ಧಿ ಯೋಜನೆ (ಎಸ್‌ಸಿಪಿ)		
3)	KPWD/2021-22/RD/WORK_INDENT149935	ಸಾಮಾನ್ಯ	16.07
	5054–ವಿಶೇಷ ಅಭಿವೃದ್ಧಿ ಯೋಜನೆ (ಟಿಎಸ್‌ಪಿ)		
4)	KPWD/2021-22/RD/WORK_INDENT149985	ಸಾಮಾನ್ಯ	6.80
5)	TSP)(KPWD/2021-22/RD/WORK_INDENT149691	ಸಾಮಾನ್ಯ	26.96

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **08–03–2022 ರಂದು 12.00 ಗಂಟೆಯ ವರೆಗೆ.** ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10–03–2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **11–03–2022ರಂದು 11.00 ಗಂಟೆಗೆ** ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/802/ಎಂಸಿಎ/2021–22

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು
ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ, ಕಾಫಿ ಬೋರ್ಡ್ ಕಾಲೋನಿ, ತುಮಕೂರು–572 102
ದೂರವಾಣಿ:0816–2278190
ವೆಬ್‌ಸೈಟ್: **www.smartcitytumakuru.in**
ಇ–ಮೇಲ್: **smartcitytumakuru@gmail.com**
ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/13/2021–22 ದಿನಾಂಕ: 28.02.2022

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಸ್ತಾನನ್ನು ಇ–ಪೋರ್ಟಲ್ www.eproc.karnataka.gov.in –ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಇ–ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆ:080–22340948 ಹಾಗೂ ತುಮಕೂರು ಸ್ಮಾರ್ಟ್‌ಸಿಟಿ ದೂರವಾಣಿ ಸಂಖ್ಯೆ: 0816–2278190 ಯನ್ನು ಸಂಪರ್ಕಿಸಬಹುದು.

ಕಾಮಗಾರಿಯ ಹೆಸರು:– 1) ತುಮಕೂರು ಅಮಾನಿಕೆರೆ ಅಣ್ಣೆತೋಟದ ಕಡೆಯಿಂದ ಕೋತಿತೋಪು ಚರಂಡಿಗೆ ಹರಿಯುವ ಕೊಳಚೆ ನೀರು ಮಾರ್ಗ ಬದಲಾವಣೆ ಚರಂಡಿ ನಿರ್ಮಾಣ ಕಾಮಗಾರಿ, ಕಾಮಗಾರಿಯ ಮೊತ್ತ ರೂ.4.04 ಕೋಟಿಗಳು, ಇಎಂಡಿ ರೂ.6,06,000/–, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18.03.2022** ಟೆಂಡರ್ ತೆರೆಯುವ ದಿನಾಂಕ: **19.03.2022**. 2) ತುಮಕೂರು ನಗರದ ವಿವಿಧ 3 ಸ್ಥಳಗಳಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣ ಹಂತ–4, ಕಾಮಗಾರಿಯ ಮೊತ್ತ ರೂ. 63.00 ಲಕ್ಷಗಳು, ಇಎಂಡಿ ರೂ.1,26,000/–, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18.03.2022,** ಟೆಂಡರ್ ತೆರೆಯುವ ದಿನಾಂಕ: **19.03.2022**. ಟೆಂಡರ್ ದಾಸ್ತಾನನ್ನು ದಿನಾಂಕ:**03.03.2022** ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುವುದಿಲ್ಲ.

ಸಹಿ/–ಕಾರ್ಯಪಾಲಕ ಅಭಿಯಂತರರು,
ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/697/MCA/2021-22

ಕರ್ನಾಟಕ ಸರ್ಕಾರ
(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ:(0831)2463850/ಫ್ಯಾಕ್ಸ್ ಸಂ:(0831) 2423008

No.EE/MI&GWDDD/BGM/TND/AE-1/2021-22/759 Date:02-03-2022

ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ–3)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಇ ಪ್ರೋಕ್ಯೂರಮೆಂಟ್" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆವ್ಹಾನಿಸಲಾಗಿದೆ. ಅಥಣಿ ಉಪವಿಭಾಗದಡಿಯ 4702(2021–22) ಲೆಕ್ಕ ಶೀರ್ಷಿಕೆಯ ಒಟ್ಟು 03 ಕಾಮಗಾರಿಗಳು. ಪ್ರತಿ ಕಾಮಗಾರಿಗಳ ಅಂದಾಜು ಮೊತ್ತ ರೂ.90.00 ಲಕ್ಷಗಳು. ಸದರಿ ಕಾಮಗಾರಿಗಳಿಗಾಗಿ ಗುತ್ತಿಗೆದಾರರು ದರವನ್ನು GST ರಹಿತ ನಮೂದಿಸುವುದು ಮತ್ತು ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ GST ಪ್ರತ್ಯೇಕವಾಗಿ ನೀಡಲಾಗುವುದು ಹಾಗೂ ಹೆಚ್ಚುವರಿ ಗುತ್ತಿಗೆ ಅವಧಿಯಲ್ಲಿ GST ದರಗಳಲ್ಲಿ ಹೆಚ್ಚಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವುದು. ಸದರಿ ಕಾಮಗಾರಿಗಳ ವಿವರಗಳನ್ನು "ಇ ಪ್ರೋಕ್ಯೂರಮೆಂಟ್"ನಲ್ಲಿ ದಿನಾಂಕ:04–03–2022 ರಿಂದ ದಿನಾಂಕ:10–03–2022 ಸಾಯಂಕಾಲ 4–00 ಗಂಟೆಯ ಅವಧಿಯಲ್ಲಿ ಪಡೆಯಬಹುದು.

1.ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:10–03–2022 ಸಾಯಂಕಾಲ 4.00 ಗಂಟೆಯವರೆಗೆ, 2. ಟೆಂಡರ ತೆರೆಯುವ ದಿನಾಂಕ:11–03–2022 ಸಾಯಂಕಾಲ 4.30 ಗಂಟೆಯವರೆಗೆ (ಸಾಧ್ಯವಾದಲ್ಲಿ), 3.ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ:ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.4.ಅಂತರಜಾಲ ತಾಣದ ವಿಳಾಸ:www.e-proc.karnataka.gov.in

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ, ಬೆಳಗಾವಿ.

DIPR/BGM/RO-NO-1689/MCA/2021-22

2021–22ನೇ ಸಾಲಿನಲ್ಲಿ ಬೆಂಗಳೂರು ನಗರಕ್ಕೆ ₹ 7,795 ಕೋಟಿ ವೆಚ್ಚದ ಕಾರ್ಯಕ್ರಮ ಘೋಷಿಸಿದ್ದ ಸರ್ಕಾರ

ಭರವಸೆಯಾಗಿಯೇ ಉಳಿದ ಬಜೆಟ್ ಘೋಷಣೆ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ರಾಜ್ಯ ಸರ್ಕಾರವು 2021-22ನೇ ಸಾಲಿನ ಬಜೆಟ್‌ನಲ್ಲಿ ರಾಜಧಾನಿಗೆ ಭರಪೂರ ಘೋಷಣೆಗಳನ್ನು ಮಾಡಿತ್ತು. ಒಂದಷ್ಟು ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸುವ ವಾಗ್ದಾನವನ್ನೂ ನೀಡಿತ್ತು. ಆದರೆ, ಘೋಷಿಸಲಾದ ಬಹುತೇಕ ಕಾರ್ಯಕ್ರಮಗಳು ವರ್ಷದ ಬಳಿಕವೂ ಭರವಸೆಯಾಗಿಯೇ ಉಳಿದಿವೆ. ಬೆರಳೆಣಿಕೆಯಷ್ಟು ಕಾರ್ಯಕ್ರಮಗಳು ಮಾತ್ರ ಅನುಷ್ಠಾನಕ್ಕೆ ಬಂದಿವೆ.

ಉಪನಗರ ರೈಲು ಯೋಜನೆ, ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಯೋಜನೆ, ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ₹ 100 ಕೋಟಿ ವೆಚ್ಚದಲ್ಲಿ ಕೈಗಾರಿಕಾ ಟೌನ್‌ಷಿಪ್ ಸ್ಥಾಪನೆ ಮುಂತಾದ ದಶಕಗಳ ಕನಸುಗಳನ್ನು ಈಡೇರಿಸುವ ಭರವಸೆಯೂ ಹುಸಿಯಾಗಿದೆ. ಇಂತಹ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳ ಅನುಷ್ಠಾನದಲ್ಲೂ ಯಾವುದೇ ಗಮನಾರ್ಹ ಬೆಳವಣಿಗೆಗಳು ಆಗಿಲ್ಲ.

ಟುಸ್ ಆದ ಸ್ವಿಸ್ ಚಾಲೆಂಜ್: ಪಿಆರ್‌ಆರ್ ಯೋಜನೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಅನುಷ್ಠಾನಗೊಳಿಸಲು ಸರ್ಕಾರ ನಿರ್ಧರಿಸಿತ್ತು. ಈ ಯೋಜನೆಯನ್ನು ಸ್ವಿಸ್ ಚಾಲೆಂಜ್ ಮಾದರಿಯಲ್ಲಿ ಅನುಷ್ಠಾನಗೊಳಿಸುವುದಾಗಿ ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬಜೆಟ್ ಭಾಷಣದಲ್ಲಿ ಭರವಸೆ ನೀಡಿದ್ದರು. ಈ ಯೋಜನೆ ಅನುಷ್ಠಾನಕ್ಕೆ ಜಾಗತಿಕ ಮಟ್ಟದಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಿ, ನಂತರ ಅದಕ್ಕಿಂತ ಉತ್ತಮ ಪ್ರಸ್ತಾವನೆ ಸಲ್ಲಿಸಲು ಅವಕಾಶ ಕಲ್ಪಿಸುವುದಾಗಿ ಸರ್ಕಾರ ತಿಳಿಸಿತ್ತು. ಪಿಆರ್‌ಆರ್ ಅನುಷ್ಠಾನದ ಬಗ್ಗೆ 2006ರಿಂದಲೇ ಚರ್ಚೆ ನಡೆಯುತ್ತಿದೆ. ಈಗ ಮತ್ತೆ ಒಂದು ವರ್ಷ ಕಳೆದು ಹೋಗಿದೆಯೇ ಹೊರತು, ಇದರ ಅನುಷ್ಠಾನದ ನಿಟ್ಟಿನಲ್ಲಿ ಯಾವುದೇ ಮಹತ್ತರ ಬೆಳವಣಿಗೆಗಳಾಗಿಲ್ಲ.

ಈ ಯೋಜನೆಗೆ 15ನೇ ಹಣಕಾಸು ಆಯೋಗದ ನಿಧಿಯಡಿ ₹ 3 ಸಾವಿರ ಕೋಟಿ ಒದಗಿಸುವ ಪ್ರಸ್ತಾವನೆಯೂ ನನೆಗುದಿಗೆ ಬಿದ್ದಿದೆ. ಪಿಆರ್‌ಆರ್ ಯೋಜನೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಈಗ ಬಿಡಿಎ ಸಿದ್ಧತೆ ನಡೆಸಿದೆ.

ಕದಲದ ಉಪನಗರ ರೈಲು: ಉಪನಗರ ರೈಲು ಯೋಜನೆಗೆ 2021-22ನೇ ಸಾಲಿನಲ್ಲಿ ₹ 850 ಕೋಟಿ ಅನುದಾನ ಒದಗಿಸುವುದಾಗಿ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ನಗರದಲ್ಲಿ ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಒದಗಿಸಬಲ್ಲ ಈ ಯೋಜನೆಗೆ ಕೇಂದ್ರದಿಂದ ಅನುಮೋದನೆ ದೊರೆತು ಒಂದೂವರೆ ವರ್ಷ ಕಳೆದಿದೆ. ಆದರೂ ಈ ಯೋಜನೆ ಸ್ವಲ್ಪವೂ ಮುಂದಕ್ಕೆ ಚಲಿಸಿಲ್ಲ. ಸಿವಿಲ್ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಈಗಷ್ಟೇ ನಡೆಯುತ್ತಿದೆ.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕೈಗಾರಿಕಾ ಟೌನ್‌ಷಿಪ್ ರಚನೆಯನ್ನು ಸರ್ಕಾರ ಕೈಗಾರಿಕಾ ಇಲಾಖೆ ಮೂಲಕ ಅನುಷ್ಠಾನಗೊಳಿಸುವುದಾಗಿ ಸರ್ಕಾರ ಹೇಳಿತ್ತು. ಆದರೆ, ಇದನ್ನು ಬಿಬಿಎಂಪಿ ಮೂಲಕ ಜಾರಿಗೊಳಿಸಬೇಕು ಎಂಬುದು ಶಾಸಕರ ಒತ್ತಾಯ. ಈ ಹಗ್ಗಜಗ್ಗಾಟದಿಂದಾಗಿ ಈ ಯೋಜನೆ ಅನುಷ್ಠಾನದಲ್ಲಿ ಒಂದು ವರ್ಷದಲ್ಲಿ ಯಾವುದೇ ಪ್ರಗತಿ ಆಗಿಲ್ಲ.

ಬೆಂಗಳೂರು ನಗರಕ್ಕೆ 2021–22ನೇ ಸಾಲಿನಲ್ಲಿ ಒಟ್ಟು ₹ 7,795 ಕೋಟಿ ಅನುದಾನವನ್ನು ಸರ್ಕಾರ ಬಜೆಟ್‌ನಲ್ಲಿ ಘೋಷಿಸಿತ್ತು.

ನವಚೈತನ್ಯ ನೀಡದ ‘ಬೆಂಗಳೂರು ವಿಷನ್ 2022’

ಬೆಂಗಳೂರಿಗೆ ನವಚೈತನ್ಯ ನೀಡಲು ‘ಬೆಂಗಳೂರು ವಿಷನ್ 2022’ ಕಾರ್ಯಕ್ರಮ ಹಮ್ಮಿಕೊಳ್ಳುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಇದರ ಅನುಷ್ಠಾನದಲ್ಲೂ ಗಮನಾರ್ಹ ಪ್ರಗತಿ ಆಗಿಲ್ಲ.

ಸುಗಮ ಸಂಚಾರಕ್ಕಾಗಿ ಮುಖ್ಯ ರಸ್ತೆಗಳನ್ನು ಅಭಿವೃದ್ಧಿಪಡಿಸುವುದು, ಚತುರ ಸಾರಿಗೆ ವ್ಯವಸ್ಥೆ ಜಾರಿಗೊಳಿಸುವುದು, ‘ಸ್ವಚ್ಛ ಬೆಂಗಳೂರು’ ಕಾರ್ಯಕ್ರಮದಡಿ ಕಸ ವಿಲೇವಾರಿ ವ್ಯವಸ್ಥೆ ಸುಧಾರಣೆ, ಕಸ ನಿರ್ವಹಣೆಗೆ ಸಮಗ್ರ ವ್ಯವಸ್ಥೆ ರೂಪಿಸುವುದು, ‘ಹಸಿರು ಬೆಂಗಳೂರು‘ ನಿರ್ಮಾಣಕ್ಕಾಗಿ ಹಸಿರು ನೆರೆಹೊರೆ ಕಾರ್ಯಕ್ರಮ ಅನುಷ್ಠಾನಗೊಳಿಸುವುದು, ಜಲಮೂಲಗಳ ಸಂರಕ್ಷಣೆ, ಜನ ಸಂಪರ್ಕಕ್ಕಾಗಿ ಏಕೀಕೃತ ಡಿಜಿಟಲ್ ಪೋರ್ಟಲ್ ರೂಪಿಸುವುದು ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ‘ಬೆಂಗಳೂರು ವಿಷನ್ 2022’ ಯೋಜನೆಯಡಿ ಜಾರಿಗೊಳಿಸುವುದಾಗಿ ಸರ್ಕಾರ ಹೇಳಿಕೊಂಡಿತ್ತು.

‘ಕೆ–100’ ಕಾಮಗಾರಿ ಶೇ 46ರಷ್ಟು ಅನುಷ್ಠಾನ

ಕೋರಮಂಗಲ ಕಣಿವೆಯ ರಾಜಕಾಲುವೆಯನ್ನು ₹ 169 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವ ‘ನಾಗರಿಕರ ನೀರ ಹಾದಿ’ ಯೋಜನೆಯನ್ನು ಸರ್ಕಾರ ಕಳೆದ ವರ್ಷ ಬಜೆಟ್‌ನಲ್ಲಿ ಘೋಷಿಸಿತ್ತು. ಕೊಳಚೆ ನೀರು ಹರಿಯುವ ಜಾಲದ ಮರುಪರಿಶೀಲನೆ, ದುರಸ್ತಿ, ಮರುವಿನ್ಯಾಸ, ನಿರ್ಮಾಣ ತ್ಯಾಜ್ಯನೀರು ಶುದ್ಧೀಕರಣ ಘಟಕ (ಎಸ್‌ಟಿಪಿ) ರಚನೆ ಮುಂತಾದ ಕಾಮಗಾರಿಗಳನ್ನು ಈ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತದೆ. ಈ ಕಾಮಗಾರಿಯಲ್ಲಿ ಶೇ 46ರಷ್ಟು ಭೌತಿಕ ಪ್ರಗತಿ ಹಾಗೂ ಶೇ 25ರಷ್ಟು ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

ಕಾರ್ಯಾರಂಭ ಮಾಡದ ಕಸ ನಿರ್ವಹಣೆ ಕಂಪನಿ

ನಗರದಲ್ಲಿ ಕಸ ವಿಲೇವಾರಿಗೆ ಪ್ರತ್ಯೇಕ ಕಂಪನಿಯನ್ನು ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಹೇಳಲಾಗಿತ್ತು. ಈ ಪ್ರಕಾರ ಬೆಂಗಳೂರು ಕಸ ನಿರ್ವಹಣೆ ನಿಯಮಿತವನ್ನು ಸ್ಥಾಪಿಸಲಾಗಿದೆ. ಆದರೆ, ಈ ಕಂಪನಿಗೆ ಹೊಸ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯನ್ನು (ಸಿಇಒ) ಸ್ಥಾಪಿಸುವ ಮೂಲಕ ಇದು ಸ್ವಾಯತ್ತವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಪ್ರಗತಿ ಆಗಿಲ್ಲ. ಸಾರ್ವಜನಿಕ ಶೌಚಾಲಯಗಳ ಕಸ ಹಾಗೂ ಜೈವಿಕ- ವೈದ್ಯಕೀಯ ಕಸವನ್ನು ಹೊರತಾಗಿ ಉಳಿದ ಎಲ್ಲ ರೀತಿಯ ಕಸಗಳನ್ನು ಈ ಕಂಪನಿಯೇ ನಿರ್ವಹಿಸಲಿದೆ. ಕಸ ಸಂಗ್ರಹ, ವಿಂಗಡಣೆ, ರವಾನೆ, ಸಂಸ್ಕರಣೆ, ಹಸಿ ತ್ಯಾಜ್ಯದಿಂದ ಸಾವಯವ ಗೊಬ್ಬರ ತಯಾರಿ, ಮರುಬಳಕೆ ಹಾಗೂ ವಿಲೇವಾರಿ ಕುರಿತ ಎಲ್ಲ ಹೊಣೆಗಳೂ ಈ ಕಂಪನಿಯದ್ದಾಗಲಿದೆ ಎಂದು ಸರ್ಕಾರ ತಿಳಿಸಿತ್ತು. ಈ ಭರವಸೆಗಳೂ ಈಡೇರಿಲ್ಲ.

ಸುದ್ದಿ 2 ನಿಮಿಷ

ಜಲಮಂಡಳಿ ಫೋನ್ ಇನ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ 5ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅಹವಾಲು ಆಲಿಸಲಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆಗಳಿಂದ ತ್ಯಾಜ್ಯ ನೀರು ಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಂ. ಮಂಜುನಾಥ್ ಅವರು ತಿಳಿಸಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ಬಿಎಂಎಸ್ ಆಸ್ಪತ್ರೆಯ ಸಂಸ್ಥಾಪನಾ ದಿನ ಆಚರಣೆ

ಬೆಂಗಳೂರು: ಉತ್ತಮ ಆರೋಗ್ಯ ಸೇವೆ ಮತ್ತು ಗುಣಮಟ್ಟದ ಚಿಕಿತ್ಸೆಯು ಜನರ ಮಾನಸಿಕ ಚೈತನ್ಯ ಹೆಚ್ಚಿಸುತ್ತದೆ ಎಂದು ಬಿಎಂಎಸ್ ಆಸ್ಪತ್ರೆಯ ಟ್ರಸ್ಟಿ ಡಾ. ರಾಗಿಣಿ ನಾರಾಯಣ್ ತಿಳಿಸಿದರು.

ಬಿಎಂಎಸ್ ಆಸ್ಪತ್ರೆ ಸಂಸ್ಥಾಪನಾ ದಿನಾಚರಣೆ ಹಾಗೂ ಹೊಸ ಬ್ಲಾಕ್ ಉದ್ಘಾಟಿಸಿ ಅವರು ಮಾತನಾಡಿದರು. ‘ನಾವು ಮಾಡುವ ಕಾರ್ಯಗಳಲ್ಲಿ ಪ್ರಾಮಾಣಿಕತೆ ಮತ್ತು ಸಂತೃಪ್ತಿ ಇಟ್ಟುಕೊಂಡಾಗ ಆ ಸೇವೆಯ ಮೌಲ್ಯವರ್ಧನೆ ಹೆಚ್ಚಾಗುತ್ತದೆ’ ಎಂದು ತಿಳಿಸಿದರು.

ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಮಾತನಾಡಿ, ‘ಖಾಸಗಿ ಆಸ್ಪತ್ರೆಗಳು ಜನಸಾಮಾನ್ಯರಿಗೆ ಹಾಗೂ ಬಡವರಿಗೆ ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಸೇವೆ ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು. ಬಿಎಂಎಸ್ ಆಸ್ಪತ್ರೆಯು ಸುತ್ತ ಮುತ್ತಲಿನ ಬಡವರಿಗೆ ರಿಯಾಯಿತಿ ನೀಡಿ ಸ್ಪಂದಿಸುತ್ತಿದೆ’ ಎಂದು ಹೇಳಿದರು.

ಬಿಎಂಎಸ್ ಆಸ್ಪತ್ರೆ ಟ್ರಸ್ಟ್ ಅಧ್ಯಕ್ಷ ಗೌತಮ್ ವಿ.ಕಲತೂರ್, ಟ್ರಸ್ಟಿ ಅವಿರಾಮ್ ಶರ್ಮಾ, ಡಾ.ವಿಶಾಲ್, ಸುನಿತಾ ಪ್ರಸಾದ್ ಇದ್ದರು.

ಕಾರು ಕದಿಯಲು ಯತ್ನಿಸಿ ಸಿಕ್ಕಿಬಿದ್ದ

ಬೆಂಗಳೂರು: ಅಪರಾಧ ಪ್ರಕರಣವೊಂದರಲ್ಲಿ ಜೈಲು ಸೇರಿ 21 ದಿನಗಳ ಹಿಂದಷ್ಟೇ ಜಾಮೀನು ಮೇಲೆ ಬಿಡುಗಡೆಯಾಗಿದ್ದ ಸಲ್ಮಾನ್ ಎಂಬಾತ, ಕಾರು ಕದಿಯಲು ಯತ್ನಿಸಿ ಸಾರ್ವಜನಿಕರ ಕೈಗೆ ಸಿಕ್ಕಿಬಿದ್ದಿದ್ದಾನೆ.

‘ಸದಾಶಿವನಗರ 8ನೇ ಮುಖ್ಯರಸ್ತೆಯಲ್ಲಿರುವ ಮನೆಯೊಂದರ ಮುಂದೆ ನಿಲ್ಲಿಸಿದ್ದ ಕಾರು ಕದಿಯಲು ಸಲ್ಮಾನ್ ಹಾಗೂ ಆತನ ಸಹಚರ ನವಾಜ್ ಯತ್ನಿಸಿದ್ದರು. ಅವರನ್ನು ಹಿಡಿದು ಥಳಿಸಿದ್ದ ಸಾರ್ವಜನಿಕರು, ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಕೈಗೆ ಒಪ್ಪಿಸಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕಾರು ಕಳ್ಳತನ ಪ್ರಕರಣದಡಿ ಸಲ್ಮಾನ್ ಹಾಗೂ ನವಾಜ್‌ನನ್ನು ಬಂಧಿಸಲಾಗಿದೆ. ರೌಡಿ ಪಟ್ಟಿಯಲ್ಲಿ ಸಲ್ಮಾನ್ ಹೆಸರಿರುವ ಮಾಹಿತಿ ಇದೆ’ ಎಂದೂ ತಿಳಿಸಿವೆ.

‘ಅಪರಾಧ ಹಿನ್ನೆಲೆಯುಳ್ಳ ಸಲ್ಮಾನ್, ಕೆಲ ತಿಂಗಳ ಹಿಂದಷ್ಟೇ ಪ್ರಕರಣವೊಂದರಲ್ಲಿ ಸಿಕ್ಕಿಬಿದ್ದು ಜೈಲು ಸೇರಿದ್ದ. 21 ದಿನಗಳ ಹಿಂದೆ ಬಿಡುಗಡೆಯಾಗಿದ್ದ. ಈಗ ಮತ್ತೆ ಕೃತ್ಯ ಎಸಗಿ ಸಿಕ್ಕಿಬಿದ್ದಿದ್ದಾನೆ. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದೂ ಹೇಳಿವೆ.

ಚಾಕುವಿನಿಂದ ಇರಿದು ಸುಲಿಗೆ: ಬಂಧನ

ಬೆಂಗಳೂರು: ರಸ್ತೆಬದಿ ನಿಂತಿದ್ದ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿದು ಸುಲಿಗೆ ಮಾಡಿದ್ದ ಆರೋಪದಡಿ ಇಬ್ಬರನ್ನು ಕೆಂಗೇರಿ ಪೊಲೀಸರು ಬಂಧಿಸಿದ್ದಾರೆ.

‘ಚಂದಾಪುರದ ಸಲ್ಮಾನ್ (22) ಹಾಗೂ ಜೆ.ಜೆ. ನಗರದ ಇಂಜಮಾಮ್ (23) ಬಂಧಿತರು. ಅವರಿಂದ ₹1 ಲಕ್ಷ ಮೌಲ್ಯದ ಐ-ಫೋನ್, ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಠಾಣೆ ವ್ಯಾಪ್ತಿಯಲ್ಲಿ ಫೆ.25ರಂದು ರಾತ್ರಿ ವ್ಯಕ್ತಿಯೊಬ್ಬರು ರಸ್ತೆಬದಿ ನಿಂತಿದ್ದರು. ತಮ್ಮ ಐ-ಫೋನ್ ಬಳಸಿ ಬಾಡಿಗೆ ದ್ವಿಚಕ್ರ ವಾಹನ ಕಾಯ್ದಿರಿಸುತ್ತಿದ್ದರು. ಅದೇ ವೇಳೆ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಚಾಕುವಿನಿಂದ ಹಲ್ಲೆ ಮಾಡಿ ಐ-ಫೋನ್ ಕಿತ್ತುಕೊಂಡು ಹೋಗಿದ್ದರು. ಆಸ್ಪತ್ರೆಯೊಂದರಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದ ವ್ಯಕ್ತಿ ಠಾಣೆಗೆ ದೂರು ನೀಡಿದ್ದರು’ ಎಂದೂ ತಿಳಿಸಿದರು.

ಬಜೆಟ್: ಕಸ ನಿರ್ವಹಣೆ, ರಸ್ತೆ, ರಾಜಕಾಲುವೆ ಅಭಿವೃದ್ಧಿ, ಕೆರೆ ಪುನಃಶ್ಚೇತನದ ಸವಾಲು

ರಾಜಧಾನಿಗೆ ಅನುದಾನದ ‘ಅಮೃತ’ ಸಿಂಚನ?

ಪ್ರಜಾವಾಣಿ ವಾರ್ತೆ

ರಸ್ತೆಗಳ ಮುಕ್ತಿ ಕಾಣದ ಗುಂಡಿಗಳು – ಪ್ರಜಾವಾಣಿ ಚಿತ್ರ

ಬೆಂಗಳೂರು: ಕೋವಿಡೋತ್ತರ ಕಾಲಘಟ್ಟದಲ್ಲಿ ರಾಜಧಾನಿಯು ಮತ್ತೆ ಅಭಿವೃದ್ಧಿ ಚೇತರಿಕೆಯ ಹಾದಿಗೆ ಹೊರಳುವ ತವಕದಲ್ಲಿದೆ. ನಗರದ ಪ್ರಮುಖ ರಸ್ತೆಗಳ ಅಭಿವೃದ್ಧಿ, ಕಸ ನಿರ್ವಹಣೆ, ಆರೋಗ್ಯ ವ್ಯವಸ್ಥೆ ಸುಧಾರಣೆ, ಕೆರೆಗಳ ಪುನಃಶ್ಚೇತನ, ರಾಜಕಾಲುವೆ ಅಭಿವೃದ್ಧಿ ಹಾಗೂ ನಮ್ಮ ಮೆಟ್ರೊ, ಉಪನಗರ ರೈಲು.. ಮೊದಲಾದ ಮಹತ್ವಾಕಾಂಕ್ಷಿ ಯೋಜನೆಗಳು 2022-23ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಭಾರಿ ಆರ್ಥಿಕ ಬೆಂಬಲವನ್ನು ನಿರೀಕ್ಷಿಸುತ್ತಿವೆ.

ಬಜೆಟ್ ಮಂಡನೆಗೆ ಎರಡು ತಿಂಗಳು ಇರುವಂತೆಯೇ ರಾಜ್ಯ ಸಚಿವ ಸಂಪುಟವು ₹ 6 ಸಾವಿರ ಕೋಟಿ ವೆಚ್ಚದ ‘ಅಮೃತ ನಗರೋತ್ಥಾನ’ ಯೋಜನೆಗೆ ಮಂಜೂರಾತಿ ನೀಡಿದೆ. ಈ ಯೋಜನೆಗೆ ಸರ್ಕಾರ ಈಗಾಗಲೇ ₹ 3,661 ಕೋಟಿ ಅನುದಾನವನ್ನು ನಗರದ 28 ವಿಧಾನಸಭಾ ಕ್ಷೇತ್ರಗಳಿಗೆ ಹಂಚಿಕೆ ಮಾಡಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಚೊಚ್ಚಲ ಬಜೆಟ್ ಘೋಷಣೆಗಳು ‘ಅಮೃತ ನಗರೋತ್ಥಾನ’ ಯೋಜನೆಯ ಆಚೆಗಿನ ನಿರೀಕ್ಷೆಗಳನ್ನು ಈಡೇರಿಸುತ್ತವೆಯೋ ಎಂಬ ಕುತೂಹಲ ನಗರದ ನಿವಾಸಿಗಳದ್ದು.

‘2021-22ರಲ್ಲಿ ವರ್ಷದುದ್ದಕ್ಕೂ ರಸ್ತೆ ಗುಂಡಿ ಸಮಸ್ಯೆ ನಗರ ನಿವಾಸಿಗಳನ್ನು ಹೈರಾಣಾಗಿಸಿತ್ತು. ಐದು ಜೀವಗಳನ್ನೂ ಬಲಿ ಪಡೆದಿತ್ತು. ವಾರ್ಡ್ ರಸ್ತೆಗಳ ಅಭಿವೃದ್ಧಿಗೆ ಬಿಬಿಎಂಪಿಯ ಬಜೆಟ್‌ನಲ್ಲಿ ಅನುದಾನ ಹಂಚಿಕೆ ಮಾಡಬಹುದು. ಆದರೆ, ಮುಖ್ಯ ರಸ್ತೆಗಳು, ಉಪಮುಖ್ಯ ರಸ್ತೆಗಳ ಡಾಂಬರೀಕರಣಕ್ಕೆ ಹಾಗೂ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆ ಸಮಸ್ಯೆ ನಿವಾರಣೆಗೆ ಸರ್ಕಾರವೇ ಹಣಕಾಸು ಒದಗಿಸುವ ಅಗತ್ಯವಿದೆ. ಕೆಲವು ಪ್ರಮುಖ ರಸ್ತೆಗಳಲ್ಲಿ ಗಂಟೆಗೆ 50 ಸಾವಿರ ಪಿಸಿಯುಗಳಿಗಿಂತಲೂ ಹೆಚ್ಚು ವಾಹನಗಳು ಸಂಚರಿಸುತ್ತವೆ. ಬಜೆಟ್‌ನಲ್ಲೇ ಅನುದಾನ ಒದಗಿಸದಿದ್ದರೆ ವಾಹನಗಳ ಸುಗಮ ಸಂಚಾರಕ್ಕೆ ಯೋಗ್ಯವಾಗಿರುವಂತೆ ರಸ್ತೆಗಳನ್ನು ನಿರ್ವಹಿಸುವುದು ಬಲು ಕಷ್ಟ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಬಿಬಿಎಂಪಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಬಿಬಿಎಂಪಿ ಎದುರಿಸುತ್ತಿರುವ ಪ್ರಮುಖ ಆಡಳಿತಾತ್ಮಕ ಸವಾಲುಗಳಲ್ಲಿ ಕಸ ವಿಲೇವಾರಿಯೂ ಒಂದು. 2016ರ ಕಸ ನಿರ್ವಹಣೆ ನಿಯಮಗಳ ಪ್ರಕಾರ ಮಿಶ್ರಕಸವನ್ನು ಭೂಭರ್ತಿ ಕೇಂದ್ರಗಳಲ್ಲಿ ವಿಲೇವಾರಿ ಮಾಡುವಂತಿಲ್ಲ. ಜಾರಿಯಾಗಿ ಆರು ವರ್ಷಗಳ ಬಳಿಕವೂ ಈ ನಿಯಮದ ಪಾಲನೆ ಬಿಬಿಎಂಪಿ ಪಾಲಿಗೆ ಸಾಧ್ಯವಾಗಿಲ್ಲ. ಬೆಳ್ಳಹಳ್ಳಿಯ ಕೇಂದ್ರವು ಮುಚ್ಚಲಾಗಿದೆ. ಮಿಟ್ಟಗಾನಹಳ್ಳಿಯಲ್ಲಿ ಭೂಭರ್ತಿ ಕೇಂದ್ರವೂ ತುಂಬಿದೆ. ಮಂಡೂರಿನ ಭೂಭರ್ತಿ ಕೇಂದ್ರ ನಿರ್ವಹಣೆ ಪಾಲಿಕೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿದೆ. ಕಸ ಸಂಸ್ಕರಣೆ ವ್ಯವಸ್ಥೆಯನ್ನು ವಿಕೇಂದ್ರೀಕರಣಗೊಳಿಸುವುದೇ ಸದ್ಯಕ್ಕೆ ಬಿಬಿಎಂಪಿ ಮುಂದಿರುವ ಸುಸ್ಥಿರ ಮಾರ್ಗೋಪಾಯ. ಇದಕ್ಕೆ ಭಾರಿ ಅನುದಾನದ ಅಗತ್ಯ ವಿದೆ.

‘ಕಸ ಸಂಸ್ಕರಣೆಗೆ ಬಳಕೆದಾರರ ಶುಲ್ಕ ವಿಧಿಸಲು ಬಿಬಿಎಂಪಿ ಮುಂದಾಗಿದೆ. ಸದ್ಯಕ್ಕೆ ಈ ಪ್ರಸ್ತಾವ ಸರ್ಕಾರದ ಮುಂದಿದೆ. ಬಿಬಿಎಂಪಿ ಚುನಾವಣೆ ಯಾವಾಗ ಬೇಕಾದರೂ ಘೋಷಣೆ ಆಗಬಹುದು. ಹಾಗಾಗಿ, ಈ ರೀತಿ ಜನರಿಗೆ ಹೊರೆ ವಿಧಿಸುವ ಕ್ರಮಕ್ಕೆ ಸರ್ಕಾರ ಮುಂದಾಗದು. ಹಾಗಾಗಿ ಬಜೆಟ್‌ನಲ್ಲಿ ಇದಕ್ಕೆ ಅನುದಾನ ನೀಡುವ ನಿರೀಕ್ಷೆ ಇದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಕೆರೆಗಳ ಅಭಿವೃದ್ಧಿಗೆ ಈ ಹಿಂದಿನ ಬಜೆಟ್‌ನಲ್ಲಿ ಸಾಕಷ್ಟು ಅನುದಾನ ನೀಡಲಾಗಿದೆ. ಆದರೆ, ಪಾಲಿಕೆ ಅಧೀನದಲ್ಲಿರುವ ಎಲ್ಲ ಕೆರೆಗಳ ಅಭಿವೃದ್ಧಿ ಇನ್ನೂ ಸಾಧ್ಯವಾಗಿಲ್ಲ. ಹಾಗಾಗಿ ಈ ಬಾರಿಯ ಬಜೆಟ್‌ನಲ್ಲಿ ಮತ್ತಷ್ಟು ಅನುದಾನ ಸಿಗುವ ನಿರೀಕ್ಷೆ ಇದೆ’ ಎಂದರು.

‘ನಮ್ಮ ಮೆಟ್ರೊ ಯೋಜನೆ, ಉಪ ನಗರ ರೈಲು ಯೋಜನೆಗಳಿಗೆ, 110 ಹಳ್ಳಿಗಳ ರಸ್ತೆ ದುರಸ್ತಿಗೆ, ನಗರದಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆ ಸುಧಾರಣೆಗೆ ಭಾರಿ ಪ್ರಮಾಣದ ಅನುದಾನದ ಅಗತ್ಯವಿದೆ. ಕೋವಿಡ್ ಬಳಿಕ ರಾಜ್ಯದ ಆರ್ಥಿಕತೆಯೂ ಸಂಕಷ್ಟಕ್ಕೆ ಸಿಲುಕಿರುವುದರಿಂದ, ಈ ನಿರೀಕ್ಷೆಗಳನ್ನು ಮುಖ್ಯಮಂತ್ರಿಯವರು ಎಷ್ಟರ ಮಟ್ಟಿಗೆ ಈಡೇರಿಸುತ್ತಾರೋ ತಿಳಿಯದು’ ಎಂದರು.

> ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2022– 23ನೇ ಸಾಲಿನ ಬಜೆಟ್‌ನಲ್ಲಿ ಬಿಬಿಎಂಪಿಗೆ ನಿರೀಕ್ಷಿತ ಅನುದಾನ ಒದಗಿಸುವ ವಿಶ್ವಾಸವಿದೆ
>
> **ಗೌರವ್ ಗುಪ್ತ**
> ಮುಖ್ಯ ಆಯುಕ್ತ, ಬಿಬಿಎಂಪಿ

ಪ್ರವಾಹ ನಿಯಂತ್ರಣಕ್ಕೆ ಹೆಚ್ಚಿನ ಅನುದಾನ?

‘ನಗರವು 2021-22ರಲ್ಲಿ ಪದೇ ಪದೇ ಪ್ರವಾಹದಿಂದ ತತ್ತರಿಸಿತ್ತು. ಪ್ರವಾಹ ನಿಯಂತ್ರಣಕ್ಕಾಗಿ ರಾಜಕಾಲುವೆಗಳ ಶಾಶ್ವತ ದುರಸ್ತಿಗೆ ಕ್ರಮ ಕೈಗೊಳ್ಳುವುದಾಗಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದರು. ಈ ಸಲುವಾಗಿ ಬಿಬಿಎಂಪಿ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಬಜೆಟ್‌ನಲ್ಲಿ ವಿಶೇಷ ಅನುದಾನ ಘೋಷಿಸುವ ನಿರೀಕ್ಷೆ ಇದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ತೇಜಸ್ವಿ ಸೂರ್ಯ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಳೆದ ಲೋಕಸಭಾ ಚುನಾವಣೆ ವೇಳೆ ಮುದ್ರಿಸಲಾಗಿದ್ದ ಕರಪತ್ರದಲ್ಲಿ ಮುದ್ರಕರ ಹೆಸರು ಹಾಗೂ ವಿಳಾಸ ಉಲ್ಲೇಖಿಸಿರಲಿಲ್ಲ‘ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಸಂಸದ ತೇಜಸ್ವಿ ಸೂರ್ಯ ವಿರುದ್ಧ ತನಿಖೆ ನಡೆಸಲು ಅನುಮತಿಸಿ ಮ್ಯಾಜಿಸ್ಟ್ರೇಟ್ ಕೋರ್ಟ್ ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ತೇಜಸ್ವಿ ಸೂರ್ಯ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪ್ರಕರಣವೇನು?: ತೇಜಸ್ವಿ ಸೂರ್ಯ ಅವರ ಪರವಾಗಿ ನಾರಾಯಣಪ್ಪ ಎಂಬುವರು ಚುನಾವಣಾ ಪ್ರಚಾರಕ್ಕೆ ಎರಡು ಸಾವಿರ ಕರಪತ್ರಗಳನ್ನು ಮುದ್ರಿಸಿದ್ದರು. ಕರಪತ್ರದಲ್ಲಿ ಮುದ್ರಕರ ಹೆಸರು ಹಾಗೂ ವಿಳಾಸ ನಮೂದಿಸಿರಲಿಲ್ಲ. ಇದು ಅಪರಾಧ ಕೃತ್ಯ ಎಂದು ಆರೋಪಿಸಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿ ಸಿದ್ದಾಪುರ ಪೊಲೀಸ್ ಠಾಣೆಗೆ 2019ರ ಏಪ್ರಿಲ್ 18ರಂದು ದೂರು ಸಲ್ಲಿಸಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಮ ಜರುಗಿಸಲು ಅನುಮತಿ ನೀಡಬೇಕು ಎಂದು ಪೊಲೀಸರು 2ನೇ ಎಸಿಎಂಎಂ ನ್ಯಾಯಾಲಯವನ್ನು ಕೋರಿದ್ದರು. ಇದನ್ನು ಪರಿಗಣಿಸಿದ್ದ ನ್ಯಾಯಾಲಯ ತನಿಖೆಗೆ ಅನುಮತಿಸಿ ಆದೇಶಿಸಿತ್ತು. ತನಿಖೆ ನಡೆಸಿದ್ದ ಸಿದ್ದಾಪುರ ಠಾಣಾ ಪೊಲೀಸರು 2019ರ ಜುಲೈ 2ರಂದು 1ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

‘ನನ್ನ ವಿರುದ್ಧದ ದೋಷಾರೋಪ ಪಟ್ಟಿ ಮತ್ತು 2ನೇ ಎಸಿಎಂಎಂ ನ್ಯಾಯಾಲಯದ ವಿಚಾರಣೆ ರದ್ದುಪಡಿಸಬೇಕು’ ಎಂದು ತೇಜಸ್ವಿ ಸೂರ್ಯ ಕೋರಿದ್ದರು.

‘ಕೇಸರಿ ಪೇಟಕ್ಕೆ ತಲೆ ಬಾಗುವ ದಿನ ಬರಲಿದೆ’

ಹೊನ್ನಾಳಿ: ‘ದೇಶದಲ್ಲಿ ಧರ್ಮ-ಜಾತಿಗಳನ್ನು ಒಡೆದ ಪಕ್ಷಗಳು ಇಂದು ದೇಶದಲ್ಲಿ ನಿರ್ನಾಮವಾಗಿವೆ. ಮುಂದೊಂದು ದಿನ ಕೇಸರಿ ಪೇಟಕ್ಕೆ ಎಲ್ಲರೂ ತಲೆ ಬಾಗುವ ದಿನ ಬರಲಿದೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಬುಧವಾರ ರಾತ್ರಿ ನಗರದ ಅಗಳ ಮೈದಾನದಲ್ಲಿ ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿಗಳು ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಜಾತಿ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ ಎಲ್ಲಿದೆ ಎಂದು ಹುಡುಕಬೇಕಾಗಿದೆ. ಬಿಜೆಪಿ ಕೋಮುವಾದಿ ಪಕ್ಷ ಎಂದು ಸುಳ್ಳು ಆರೋಪ ಮಾಡುವವರಿಗೆ ಈ ಹಿಂದೆ ಅಟಲ್ ಬಿಹಾರಿ ವಾಜಪೇಯಿ ಪ್ರಧಾನಿಯಾಗಿದ್ದಾಗ ಕ್ರಿಶ್ಚಿಯನ್ ಆದ ಜಾರ್ಜ್ ಫರ್ನಾಂಡಿಸ್ ರಕ್ಷಣಾ ಸಚಿವರಾಗಿದ್ದರು. ಮುಸ್ಲಿಮರಾಗಿದ್ದ ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾಗಿದ್ದರು ಎಂಬುದು ನೆನಪಿಲ್ಲ ಎಂದರು.

ಜೆಡಿಎಸ್ ಮುಖಂಡ ಸತೀಶ್ ಅವರು ತಹಶೀಲ್ದಾರ್ ಅಜಿತ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು

ಸರ್ಕಾರಿ ಜಾಗಗಳ ಒತ್ತುವರಿ ತೆರವುಗೊಳಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಸರ್ಕಾರಿ ಜಾಗಗಳನ್ನು ಕೂಡಲೇ ತೆರವುಗೊಳಿಸಬೇಕು ಹಾಗೂ ಬಡವರಿಗೆ ಹಕ್ಕುಪತ್ರ ವಿತರಿಸಬೇಕು ಎಂದು ಒತ್ತಾಯಿಸಿ ಕೆ.ಆರ್.ಪುರದ ತಾಲ್ಲೂಕು ಕಚೇರಿ ಮುಂದೆ ಮಹದೇವಪುರ ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವವಹಿಸಿ ಮಾತನಾಡಿದ ಜೆಡಿಎಸ್ ಮುಖಂಡ ಸತೀಶ್ ಮಾತನಾಡಿ, ಸರ್ಕಾರಿ ಜಮೀನುಗಳನ್ನು ಪ್ರಭಾವಿ ವ್ಯಕ್ತಿಗಳು ಒತ್ತುವರಿ ಮಾಡಿ ಅಕ್ರಮವಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಆರೋಪಿಸಿದರು.

ಬೆಂಗಳೂರು ಪೂರ್ವ ತಾಲ್ಲೂಕಿನ ಮಹದೇವಪುರದ ಮುಳ್ಳೂರು ಗ್ರಾಮದ ಸರ್ವೆ ನಂಬರ್ 44,45/9,48,49,/6 ಮತ್ತು ಪಟ್ಟಂದೂರು ಅಗ್ರಹಾರ ದೇವರ ಬೀಸನಹಳ್ಳಿ ಸರ್ವೆ ನಂಬರ್ 16, ಚೀಮಸಂದ್ರ ಸರ್ವೆ ನಂಬರ್ 77ರಲ್ಲಿ ಮತ್ತು ಮಂಡೂರು ಗ್ರಾಮ ಸರ್ವೆ ನಂಬರ್ 128 ರಲ್ಲಿ ಕಾಚಾಮರನಹಳ್ಳಿ ಇನ್ನೂ ಅನೇಕ ಗ್ರಾಮಗಳಲ್ಲಿ ಹಲವು ಸರ್ಕಾರಿ ಜಾಗಗಳು ಒತ್ತುವರಿಯಾಗಿವೆ. ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳು ಅಕ್ರಮವಾಗಿ ರಾತ್ರೋರಾತ್ರಿ ದಾಖಲೆಗಳನ್ನು ತಿದ್ದುಪಡಿ ಮಾಡುವ ಪ್ರಯತ್ನದಲ್ಲಿ ತೊಡಗಿದ್ದಾರೆ ಎಂದು ದೂರಿದರು.

ತಹಶೀಲ್ದಾರ್ ಅಜೀತ್ ಕುಮಾರ್ ರೈ ತಾವೊಬ್ಬ ಅಧಿಕಾರಿ ಎನ್ನುವುದೇ ಮರೆತು ಬಿಜೆಪಿ ಪಕ್ಷದ ಏಜೆಂಟ್‌ರಂತೆ ನಡೆದುಕೊಳ್ಳುತ್ತಿದ್ದಾರೆ. ಮೂವತ್ತು ಬಡವರಿಗೆ 94ಸಿಸಿ ಅಡಿಯಲ್ಲಿ ಹಕ್ಕುಪತ್ರ ವಿತರಣೆ ಮಾಡದೆ ಕಾಲಹರಣ ಮಾಡುತ್ತಿದ್ದಾರೆ ಎಂದು ದೂರಿದರು.

ಕರ್ಣಾಟಕ ಬ್ಯಾಂಕಿನ 874ನೇ ಶಾಖೆ ಆರಂಭ

ಪ್ರಜಾವಾಣಿ ವಾರ್ತೆ

ಯಲಹಂಕ: ಸಿಂಗನಾಯಕನಹಳ್ಳಿಯಲ್ಲಿ ಕರ್ಣಾಟಕ ಬ್ಯಾಂಕ್‌ನ 874ನೇ ಶಾಖೆ ಮತ್ತು ಎಟಿಎಂ ಘಟಕವನ್ನು ಆವಲಹಳ್ಳಿಯ ರಾಮಕೃಷ್ಣ ವಿವೇಕಾನಂದ ವೇದಾಂತ ಆಶ್ರಮದ ಅಧ್ಯಕ್ಷ ಸ್ವಾಮಿ ಅಭಯಾನಂದ ಸರಸ್ವತಿ ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಶ್ರೀಗಳು, ‘ಕರ್ಣಾಟಕ ಬ್ಯಾಂಕ್ ಅವಶ್ಯಕತೆಗಳನ್ನು ಅರ್ಥ ಮಾಡಿಕೊಂಡು ಗ್ರಾಹಕರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗಿದೆ. ಹೀಗಾಗಿ, ಬ್ಯಾಂಕ್ ಪ್ರಗತಿ ಪಥದಲ್ಲಿ ಸಾಗಿದೆ. ನೂತನ ಶಾಖೆಯು ಸಹ ಈ ಭಾಗದ ಜನರಿಗೆ ಉತ್ತಮ ಸೇವೆ ಒದಗಿಸಲಿ ಎಂದು ಆಶಿಸಿದರು.

ಬೆಂಗಳೂರು ವಲಯದ ಉಪ ಮಹಾವ್ಯವಸ್ಥಾಪಕ ನಾಗರಾಜ ಐತಾಳ್ ಮಾತನಾಡಿ, ಬ್ಯಾಂಕ್‌ನಲ್ಲಿ ದೊರೆಯುವ ಆನ್‌ಲೈನ್, ವೆಬ್ ಬ್ಯಾಂಕಿಂಗ್, ತಾಂತ್ರಿಕ ಆಧಾರಿತ ಸಾಲ ಸೌಲಭ್ಯ, ವಿಮಾ ಸೌಲಭ್ಯ ಹಾಗೂ ಮ್ಯೂಚ್ಯುವಲ್ ಫಂಡ್ ಮತ್ತಿತರ ಸೇವೆಗಳ ಬಗ್ಗೆ ವಿವರಿಸಿದರು.

ಬೆಂಗಳೂರು ವಲಯದ ಸಹಾಯಕ ಮಹಾ ವ್ಯವಸ್ಥಾಪಕ ಮಹೇಶ್ ಶೆಟ್ಟಿ, ಶಾಖೆಯ ವ್ಯವಸ್ಥಾಪಕ ಸಮೀರ್ ನಾಗರಾಜು ಕುಲಕರ್ಣಿ ಇದ್ದರು.

ಶಾಖೆಯನ್ನು ಆವಲಹಳ್ಳಿಯ ರಾಮಕೃಷ್ಣ ವಿವೇಕಾನಂದ ವೇದಾಂತ ಆಶ್ರಮದ ಅಧ್ಯಕ್ಷ ಸ್ವಾಮಿ ಅಭಯಾನಂದ ಸರಸ್ವತಿ ಅವರು ಉದ್ಘಾಟಿಸಿದರು. ಬೆಂಗಳೂರು ವಲಯದ ಉಪಮಹಾವ್ಯವಸ್ಥಾಪಕ ನಾಗರಾಜ ಐತಾಳ್, ಸಹಾಯಕ ಮಹಾ ವ್ಯವಸ್ಥಾಪಕ ಮಹೇಶ್ ಶೆಟ್ಟಿ ಇದ್ದರು

ನಗರದಲ್ಲಿ ಇಂದು

ರಾಜ್ಯಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ: ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಜಿಲ್ಲಾ ಹಾಪ್‌ಕಾಮ್ಸ್‌ಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರಿಗೆ ತರಬೇತಿ: ಉದ್ಘಾಟನೆ: ಜಿ.ಟಿ. ದೇವೇಗೌಡ, ಅಧ್ಯಕ್ಷತೆ: ಬಿ.ಡಿ. ಭೂಕಾಂತ್, ಮುಖ್ಯ ಅತಿಥಿಗಳು: ಜಗದೀಶ್ ಮಲ್ಲಿಕಾರ್ಜುನ ಕವಟಗಿಮಠ, ಸೂರ್ಯಕುಮಾರ್, ಎ.ಸಿ. ನಾಗರಾಜ್, ಎಚ್.ಎನ್. ಅಶೋಕ್, ಆರ್. ರಾಮರೆಡ್ಡಿ, ಆಯೋಜನೆ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳಿ, ಸ್ಥಳ: ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಭಾಂಗಣ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ಪ್ರವಾಸೋದ್ಯಮ ಮೇಳ: ಉದ್ಘಾಟನೆ: ಸಚಿವ ಆನಂದ್ ಸಿಂಗ್, ಆಯೋಜನೆ: ಪ್ರವಾಸೋದ್ಯಮ ಇಲಾಖೆ, ಸ್ಥಳ: ದಿ ರಾಯಲ್ ಸೆನೆಟ್, ಗೇಟ್ ನಂ.6, ಅರಮನೆ ಮೈದಾನ, ಬೆಳಿಗ್ಗೆ 10.30

ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವ ಪ್ರಯುಕ್ತ ಹರಿನಾಮ ಸಂಕೀರ್ತನೆ: ವಾಣಿ ಶ್ರೀಶ, ವಾದ್ಯ ಸಹಕಾರ: ಅಮಿತ್ ಶರ್ಮಾ, ಸರ್ವೋತ್ತಮ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಶೇಷಾದ್ರಿಪುರ, ಸಂಜೆ 6

ವಾಣಿ ಶ್ರೀಶ

ಸುವರ್ಣ ರಂಗ ಸಂಭ್ರಮ ರಂಗೋತ್ಸವ 2022: ವಿಶೇಷ ಆಹ್ವಾನಿತರು: ಕೆ.ಎ. ದಯಾನಂದ, ವೀಣಾ ಶರ್ಮಾ, ಅನಂತವೇಲು, ಬಿ.ಎಸ್. ಮಂಜುನಾಥ್, ನಾಗೇಶ್ ಹೆಗಡೆ, ಜಗಳೂರು ಲಕ್ಷ್ಮಣರಾವ್, ನಾಟಕ: ‘ವಂದೇ ಭಾರತ’, ಆಯೋಜನೆ: ವಿವೇಕಾನಂದ ಕಲಾಕೇಂದ್ರ, ಸ್ಥಳ: ಸಂಸ್ಕೃತಿ ಸದನ ಸಭಾಂಗಣ, ವಿದ್ಯಾಪೀಠ, ಸಂಜೆ 6.30

‘ಕೆಂಡೋನಿಯನ್ಸ್’ ನಾಟಕದ ದೃಶ್ಯ

ಸಮಷ್ಟಿ ನಾಟಕೋತ್ಸವ: ನಾಟಕ ಪ್ರದರ್ಶನ: ‘ಕೆಂಡೋನಿಯನ್ಸ್’, ನಿರ್ದೇಶನ: ಅರುಣ್ ಲಾಲ್, ಆಯೋಜನೆ: ಸಮಷ್ಟಿ ರಂಗ ತಂಡ, ಸ್ಥಳ: ಎ.ಡಿ.ಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 7

‘ಭಾವಾಂತರಂಗ-2022’ ರಾಜ್ಯಮಟ್ಟದ ನಾಟಕೋತ್ಸವ ಉದ್ಘಾಟನೆ: ಉಪಸ್ಥಿತಿ: ‘ಮುಖ್ಯಮಂತ್ರಿ’ ಚಂದ್ರು, ಶ್ರೀನಿವಾಸ ಜಿ. ಕಪ್ಪಣ್ಣ, ಪ್ರೊ.ಆರ್. ಭೀಮಸೇನ್, ನಾಟಕ: ‘ತುಘಲಕ್’, ತಂಡ: ಸಮುದಾಯ, ನಿರ್ದೇಶನ: ಸ್ಯಾಮ್‌ಕುಟ್ಟಿ ಪಟ್ಟಂಕರಿ, ರಚನೆ: ಗಿರೀಶ ಕಾರ್ನಾಡ, ಆಯೋಜನೆ: ಭಾಗವತರು, ಸ್ಥಳ: ಬಯಲು ರಂಗಮಂದಿರ ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.15

‘ಮುಖ್ಯಮಂತ್ರಿ’ ಚಂದ್ರು

ರಾಘವೇಂದ್ರ ಗುರುಸಾರ್ವಭೌಮರ ಪಟ್ಟಾಭಿಷೇಕ ಮಹೋತ್ಸವದ ಪ್ರಯುಕ್ತ ಸ್ಯಾಕ್ಸೋಫೋನ್ ವಾದನ: ತ್ರಿಧಾತ್ ಶ್ರೀಧರ್ ಸಾಗರ್, ವಾದ್ಯ ಸಹಕಾರ: ಎಸ್. ಶಶಿಧರ್ (ಪಿಟೀಲು), ಆರ್. ಗಣೇಶ್ (ಮೃದಂಗ), ಎಂ. ನಾಗಭೂಷಣ್ (ತಬಲಾ), ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

6ಕ್ಕೆ ಕರ್ನಾಟಕ ಸಂಗೀತ ಕಛೇರಿ

ಬೆಂಗಳೂರು: ಶ್ರೀರಾಮ ಲಲಿತಾ ಕಲಾಮಂದಿರದಲ್ಲಿ ಇದೇ ಭಾನುವಾರ (ಮಾ.6) ಸಂಜೆ 5.30ಕ್ಕೆ ಮಾನಸಿ ಪ್ರಸಾದ್ ಹಾಗೂ ತಂಡದಿಂದ ಕರ್ನಾಟಕ ಸಂಗೀತ ಕಛೇರಿ ಹಮ್ಮಿಕೊಳ್ಳಲಾಗಿದೆ.

ಬನಶಂಕರಿ ಎರಡನೇ ಹಂತದಲ್ಲಿರುವ ಮಂದಿರದ ಕೇಂದ್ರದಲ್ಲಿ ಈ ಸಂಗೀತ ಕಛೇರಿ ನಡೆಯಲಿದೆ. ಮತ್ತೂರು ವಿಶ್ವಜಿತ್ ಅವರು ವಯೋಲಿನ್ ಹಾಗೂ ಆನೂರು ವಿನೋದ್ ಶ್ಯಾಮ್ ಅವರು ಮೃದಂಗದಲ್ಲಿ ಸಾಥ್ ನೀಡಲಿದ್ದಾರೆ. ಈ ಸಂಗೀತ ಕಛೇರಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾನಸಿ ಪ್ರಸಾದ್

ಡಾ. ಎಸ್.ಆರ್.ಚಂದ್ರಶೇಖರ್ ವಾಕ್ ಶ್ರವಣ ಸಂಸ್ಥೆಯಲ್ಲಿ ವಿಶ್ವ ಶ್ರವಣ ದಿನ ಹಾಗೂ ತಾಯಂದಿರ ತರಬೇತಿ ಕೇಂದ್ರದ 15ನೇ ವಾರ್ಷಿಕೋತ್ಸವ ಸಮಾರಂಭ ಗುರುವಾರ ನಡೆಯಿತು. ಫಲಾನುಭವಿಗಳಿಗೆ ಕಿವಿ ಸಂರಕ್ಷಣ ಸಾಧನ ವಿತರಿಸಲಾಯಿತು. ಪತ್ರಕರ್ತೆ ಭಾರತಿ ಹೆಗಡೆ, ವೈಟ್‌ಫೀಲ್ಡ್ ಎಸಿಪಿ ಎಚ್.ಜೆ. ತಿಪ್ಪೇಸ್ವಾಮಿ. ಡಿ.ಜೆ ಜಸ್ಮಿತ್ ಸಿಂಗ್, ಸಂಸ್ಥೆಯ ಡೆಪ್ಯೂಟಿ ಕ್ಲಿನಿಕಲ್ ಡೈರೆಕ್ಟರ್ ಸಾರಿಕಾ ಕುರಾನ ಭಾಗವಹಿಸಿದ್ದರು

ಕಾಂಗ್ರೆಸ್ ಪಕ್ಷ ಹಮ್ಮಿಕೊಂಡಿದ್ದ ಮೇಕೆದಾಟು ಪಾದಯಾತ್ರೆಯ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ (ಎಡಚಿತ್ರ) ಪಾದಯಾತ್ರೆಯು ಮಲ್ಲೇಶ್ವರಂ ಕ್ಷೇತ್ರದ ವ್ಯಾಪ್ತಿಯಲ್ಲಿ ಸಂಚರಿಸಿದಾಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ಅವರ ಮೊಮ್ಮಗ, ಸ್ಥಳೀಯ ಕಾಂಗ್ರೆಸ್ ಮುಖಂಡ ಕೆಂಗಲ್ ಶ್ರೀಪಾದರೇಣು ಸ್ವಾಗತಿಸಿ, ಶುಭಾಶಯ ಕೋರಿದರು –ಪ್ರಜಾವಾಣಿ ಚಿತ್ರ

ಜೆಸಿ ರಸ್ತೆಯಲ್ಲಿ ಮೇಕೆದಾಟು ಯೋಜನೆ ಪಾದಯಾತ್ರೆ ಸಾಗಿದ ಪರಿಣಾಮ ವಾಹನದಟ್ಟಣೆ ಉಂಟಾಗಿತ್ತು –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಪಾದಯಾತ್ರೆಯ ಸಮಾರೋಪ ಸಮಾವೇಶದಲ್ಲಿ ಸಿದ್ದರಾಮಯ್ಯ ಘೋಷಣೆ

ಬಿಜೆಪಿ ಕಿತ್ತೊಗೆಯಲು ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಡಿಯುವ ನೀರಿನ ವಿಷಯದಲ್ಲಿ ರಾಜಕೀಯ ಮಾಡುವುದಿಲ್ಲ. ಕೋಮುವಾದಿ, ಭ್ರಷ್ಟ, ದುರಾಡಳಿತದಿಂದ ಕೂಡಿರುವ ರಾಜ್ಯ ಬಿಜೆಪಿ ಸರ್ಕಾರವನ್ನು ಕಿತ್ತು ಬಿಸಾಕಲು ರಾಜಕೀಯ ಹೋರಾಟವೂ ಅಗತ್ಯವಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಬಸವನಗುಡಿಯ ನ್ಯಾಷನಲ್ ಕಾಲೇಜು ಆಟದ ಮೈದಾನದಲ್ಲಿ ಗುರುವಾರ ನಡೆದ ಮೇಕೆದಾಟು ಪಾದಯಾತ್ರೆಯ ಸಮಾರೋಪ ಸಮಾವೇಶದಲ್ಲಿ, 'ವಿಶ್ವ ಮಟ್ಟದಲ್ಲಿ ಗುರುತಿಸಿಕೊಂಡಿರುವ ಬೆಂಗಳೂರು ನಗರಕ್ಕೆ ನೀರು ಕೊಡಬೇಕೋ ಬೇಡವೋ' ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, 'ರಾಜಕೀಯ ಹೋರಾಟ ಬೇರೆ ಸಮಯದಲ್ಲಿ ಮಾಡುತ್ತೇವೆ. ನೀರಿನ ವಿಚಾರದಲ್ಲಿ ಅಲ್ಲ. ರಾಜಕೀಯ ಹೋರಾಟ

> **ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಬದ್ಧತೆ ಇದ್ದರೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮೇಕೆದಾಟು ಯೋಜನೆಗೆ ₹ 5 ಸಾವಿರ ಕೋಟಿ ಮೀಸಲಿಡಬೇಕು**
> **ಜಿ. ಪರಮೇಶ್ವರ,** ಶಾಸಕ

ಬಹಿರಂಗವಾಗಿ ಮಾಡುವ ಸಮಯ ಬಂದಾಗ ಮಾಡುತ್ತೇವೆ' ಎಂದು ಅವರು ಹೇಳಿದರು.

'ಕಾಂಗ್ರೆಸ್‌ನವರು ತೂಕ ಇಳಿಸಿಕೊಳ್ಳಲು ಪಾದಯಾತ್ರೆ ಮಾಡುತ್ತಿದ್ದಾರೆ, ಬಿಬಿಎಂಪಿ ಚುನಾವಣೆ ಹಿನ್ನೆಲೆಯಲ್ಲಿ ಮಾಡುತ್ತಿದ್ದಾರೆ, ರಾಜಕೀಯ ಕಾರಣಕ್ಕೆ ಮಾಡುತ್ತಿದ್ದಾರೆ ಎಂಬೆಲ್ಲಾ ಟೀಕೆಗಳನ್ನು ಬಿಜೆಪಿಯವರು ಮಾಡಿದ್ದರು. ಆದರೆ, ಪಾದಯಾತ್ರೆಯಲ್ಲಿ ಭಾಗವಹಿಸುವ ಮೂಲಕ ಎಲ್ಲ ಟೀಕೆಗಳಿಗೆ ಜನರೇ ಉತ್ತರ ನೀಡಿದ್ದಾರೆ' ಎಂದರು.

'ಇದು ಡಿ.ಕೆ. ಶಿವಕುಮಾರ್ ಯಶಸ್ಸಲ್ಲ. ಕಾಂಗ್ರೆಸ್ಸಿನ ಯಶಸ್ಸೂ ಅಲ್ಲ. ನಾಡಿನ ಜನರು ಮಾಡಿರುವ

> **ನನ್ನನ್ನು, ಸಿದ್ದರಾಮಯ್ಯ ಅವರನ್ನು ಬಿಂಬಿಸಿಕೊಳ್ಳಲು ಈ ಪಾದಯಾತ್ರೆ ಮಾಡಲಿಲ್ಲ. ಮೇಕೆದಾಟು ವಿಚಾರದಲ್ಲಿ ನಾವು ಜೈಲಿಗೆ ಹೋಗಲೂ ಸಿದ್ಧರಿದ್ದೇವೆ**
> **ಡಿ.ಕೆ. ಶಿವಕುಮಾರ್,** ಕೆಪಿಸಿಸಿ ಅಧ್ಯಕ್ಷ

ಆಶೀರ್ವಾದ. ನನ್ನ ವಿರೋಧ ಪಕ್ಷದವರು ಟೀಕೆ, ಟಿಪ್ಪಣಿ ಮೂಲಕ ಸುಂಟರಗಾಳಿ ಎರಗಿದ್ದರು. ರಾಮನಗರದಲ್ಲಿ ಸಾಕಷ್ಟು ತೊಂದರೆ ಕೊಟ್ಟರು. ನನ್ನನ್ನು ಜೈಲಿಗೆ ಕಳಿಸಬೇಕೆಂದು ಪಣ ತೊಟ್ಟಿದ್ದಾರೆ' ಎಂದು ಡಿ.ಕೆ. ಶಿವಕುಮಾರ್ ಭಾವನಾತ್ಮಕವಾಗಿ ಮಾತನಾಡಿದರು.

'ಯೋಜನೆ ನಮ್ಮ ನೆಲ, ನಮ್ಮ ಹಣ ವೆಚ್ಚವಾಗಲಿದೆ. ಇದು ರಾಜ್ಯಕ್ಕಾಗಿ ಹೋರಾಟ. ರಾಜಕಾರಣ ಮಾಡುವ ಸಂದರ್ಭದಲ್ಲಿ ಅದನ್ನು ಮಾಡೋಣ. ಪಾದಯಾತ್ರೆಗೆ ಹೋಗದಂತೆ ಮುಖ್ಯಮಂತ್ರಿ ಕಚೇರಿಯಿಂದ ಹಲವು ನಟರಿಗೆ ಕರೆ ಮಾಡಲಾಗಿದೆ' ಎಂದ ಅವರು, 'ಪಕ್ಷ ಅಧಿಕಾರಕ್ಕೆ ಬರುವುದು ಖಚಿತ. ಉತ್ತಮ ಆಡಳಿತ ಕೊಡಲು ನಮ್ಮ ನಾಯಕರು ಸಜ್ಜಾಗಿದ್ದಾರೆ' ಎಂದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, 'ಈ ಯೋಜನೆಗೆ ಪರಿಸರ ಸಚಿವಾಲಯದಿಂದ ನಿರಕ್ಷೇಪಣಾ ಪತ್ರ ಬೇಕಾಗಿದೆ. ರಾಜ್ಯ ಸರ್ಕಾರ ಒತ್ತಾಯಿಸಿದರೆ ಕೇಂದ್ರ ಅನುಮತಿ ನೀಡಲಿದೆ. ಕಬ್ಬಿಣದ ಅದಿರು ಗಣಿಗಾರಿಕೆ ಅನುಮತಿ ನೀಡುವ ಕೇಂದ್ರ ಸರ್ಕಾರ, ಮೇಕೆದಾಟು ಯೋಜನೆಗೆ ಮಾತ್ರ ಕೊಡುತ್ತಿಲ್ಲ. ಈ ಯೋಜನೆಗೆ ಕೇಂದ್ರ, ರಾಜ್ಯ ಬಿಜೆಪಿ ಹಾಗೂ ಜೆಡಿಎಸ್‌ನಿಂದ ವಿರೋಧವಿದೆ. ವಿಶ್ವಗುರು ನರೇಂದ್ರ ಮೋದಿಗೆ ರಾಜ್ಯದ ಬಗ್ಗೆ ಯೋಚಿಸುವಷ್ಟು ಸಮಯ ಇಲ್ಲ' ಎಂದು ಟೀಕಿಸಿದರು.

'ಮೇಕೆದಾಟು ಪಾದಯಾತ್ರೆ ರಾಜಕೀಯ ಹೋರಾಟ ಅಲ್ಲ. ಯಾವ ರಾಜಕೀಯ ಪಕ್ಷದ ವಿರುದ್ಧವೂ ಅಲ್ಲ. ಬದಲಾಗಿ ಬೆಂಗಳೂರು ಭಾಗದ ಜನರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಈ ಹೋರಾಟ ಹಮ್ಮಿಕೊಳ್ಳಲಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಮೇಕೆದಾಟು ಯೋಜನೆ ಜಾರಿ ಮಾಡುತ್ತೇವೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

'ರಾಜ್ಯ ಹಾಗೂ ಕೇಂದ್ರದಲ್ಲಿ ಬಿಜೆಪಿಗೆ ಬಹುಮತ ಇದೆ. ಕೇಂದ್ರದಲ್ಲಂತೂ ವಾಂತಿ ಬರುವಷ್ಟು ಬಹುಮತ ಇದೆ. ಆದರೂ ಮೇಕೆದಾಟು ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಮನಸ್ಸು ಮಾಡುತ್ತಿಲ್ಲ. ನಾಗಪುರದಿಂದ ಬರುವ ಸಂದೇಶವನ್ನು ಜಾರಿ ಮಾಡುವ ಸರ್ಕಾರ ರಾಜ್ಯದಲ್ಲಿದೆ. ಇವರು ಸಂವಿಧಾನ ಬದಲಾವಣೆ ಮಾಡಬೇಕು ಎಂದು ಹೇಳುತ್ತಾರೆ' ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದರು.

ವಿಪರೀತ ದಟ್ಟಣೆ: 'ನಮ್ಮ ರಸ್ತೆ, ನಮ್ಮ ಹಕ್ಕು' ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಪಾದಯಾತ್ರೆಯಿಂದಾಗಿ ನಗರದೆಲ್ಲೆಡೆ ವಾಹನಗಳ ದಟ್ಟಣೆ ಉಂಟಾಗಿ, ಇಡೀ ಸಂಚಾರ ವ್ಯವಸ್ಥೆಯೇ ಬುಡಮೇಲಾಯಿತು. ಇದರಿಂದಾಗಿ ಸಾರ್ವಜನಿಕರು ಪರದಾಡುವಂತಾಯಿತು.

ಅರಮನೆ ಮೈದಾನದಿಂದ ಪಾದಯಾತ್ರೆ ಹೊರಡುತ್ತಿದ್ದಂತೆ, ಬಳ್ಳಾರಿ ರಸ್ತೆಯಲ್ಲಿ ವಾಹನಗಳ ಸಂಚಾರ ನಿರ್ಬಂಧಿಸಲಾಯಿತು. ಪಾದಯಾತ್ರೆ ನಿಧಾನವಾಗಿ ಸಾಗಿದ್ದರಿಂದ, ಬಳ್ಳಾರಿ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಲೇ ನಿಲ್ಲಬೇಕಾಯಿತು. ಇದರಿಂದ ಮೂರು ಕಿ.ಮೀ.ನಷ್ಟು ದಟ್ಟಣೆ ಉಂಟಾಯಿತು.

ಪಾದಯಾತ್ರೆ ಸಾಗಿದ ಸದಾಶಿವನಗರ, ಮಲ್ಲೇಶ್ವರ, ಮೆಜೆಸ್ಟಿಕ್, ಕಾಟನ್‌ಪೇಟೆ, ಬಸವನಗುಡಿ ಹಾಗೂ ಸುತ್ತಮುತ್ತ ವಿಪರೀತ ದಟ್ಟಣೆ ಉಂಟಾಯಿತು. ನಿತ್ಯದ ಕೆಲಸಕ್ಕೆ ಹೋಗುತ್ತಿದ್ದ ಸಾರ್ವಜನಿಕರು, ದಟ್ಟಣೆಯಲ್ಲಿ ಸಿಲುಕಿ ಪರದಾಡಿದರು.

ಓಕಳಿಪುರ ಬಳಿ ದಟ್ಟಣೆಯಲ್ಲಿ ಸಿಲುಕಿ ಸುಸ್ತಾದ ಕೆಲ ಸಾರ್ವಜನಿಕರು, ಪಾದಯಾತ್ರೆಗೆ ಅನುಮತಿ ನೀಡಿದ ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ನಮ್ಮ ರಸ್ತೆ, ನಮ್ಮ ಹಕ್ಕು' ಎಂದು ಘೋಷಣೆ ಕೂಗಿ, ಸ್ಥಳದಲ್ಲಿದ್ದ ಪೊಲೀಸ್ ಕಾನ್‌ಸ್ಟೆಬಲ್‌ಗೆ ಬಿಸಿ ಮುಟ್ಟಿಸಿದರು. ಮಧ್ಯಪ್ರವೇಶಿಸಿದ ಪೊಲೀಸ್ ಅಧಿಕಾರಿಯೊಬ್ಬರು, ಪರಿಸ್ಥಿತಿ ತಿಳಿಗೊಳಿಸಿದರು.

ಸವಾರ ಚಂದ್ರಶೇಖರ್, 'ಮನೆಯಲ್ಲಿ ತಿನಿಸು ತಯಾರಿಸಿ ಅಂಗಡಿಗಳಿಗೆ ಪೂರೈಸುವ ಕೆಲಸ ನನ್ನದು. ಈಗಲೂ ತಿನಿಸು ತೆಗೆದುಕೊಂಡು ಹೊರಟಿದ್ದೇನೆ. ಆದರೆ, ಒಂದೂವರೆ ಗಂಟೆಯಿಂದ ದಟ್ಟಣೆಯಲ್ಲಿ ಸಿಲುಕಿದ್ದೇನೆ. ತಡವಾದರೆ, ತಿನಿಸು ಖರೀದಿಸುವುದಿಲ್ಲ' ಎಂದು ಅಳಲು ತೋಡಿಕೊಂಡರು.

'ನಿತ್ಯದ ದುಡಿಮೆ ನಂಬಿರುವ ಜನರಿಗೆ ತೊಂದರೆ ನೀಡಬಾರದು. ದಟ್ಟಣೆಗೆ ಕಾರಣವಾಗುವ ಪಾದಯಾತ್ರೆ ಹಾಗೂ ಇತರೆ ಪ್ರತಿಭಟನೆಗಳಿಗೆ ಅನುಮತಿ ನೀಡುವ ಮುನ್ನ ಪೊಲೀಸರು ಯೋಚಿಸಬೇಕು' ಎಂದೂ ಆಗ್ರಹಿಸಿದರು.

ಗರ್ಭಿಣಿ ಪರದಾಟ: ಹೆರಿಗೆ ನೋವಿನಿಂದ ಬಳಲುತ್ತಿದ್ದ ಗರ್ಭಿಣಿಯೊಬ್ಬರು ಮಲ್ಲೇಶ್ವರ ಬಳಿ ದಟ್ಟಣೆಯಲ್ಲಿ ಸಿಲುಕಿಕೊಂಡು ಪರದಾಡಿದರು. ಅವರನ್ನು ಗಮನಿಸಿದ ಕೆಲ ಕಾಂಗ್ರೆಸ್ ಕಾರ್ಯಕರ್ತರು, ಗರ್ಭಿಣಿ ಇದ್ದ ವಾಹನ ಮುಂದಕ್ಕೆ ಹೋಗಲು ದಾರಿ ಮಾಡಿಕೊಟ್ಟರು.

ವಿಚಾರ ಸಂಕಿರಣವನ್ನು ಮಲ್ಲೇಪುರಂ ಜಿ. ವೆಂಕಟೇಶ್ ಉದ್ಘಾಟಿಸಿದರು. ಪ್ರೊ. ವೈ.ಎಂ.ರಾಜೇಶ್ವರಿ, ಡಾ.ರಾಜ್ ಸಿಂಗ್, ಡಾ.ಎಂ. ಕೊಟ್ರೇಶ್, ಡಾ.ಸದಾನಂದ ನೆಲ್ಕುದರಿ, ಡಾ.ಬಿ.ಸಿ. ಮಹಾಬಳೇಶ್ವರಪ್ಪ ಇದ್ದರು –ಪ್ರಜಾವಾಣಿ ಚಿತ್ರ

'ಯುವ ಪೀಳಿಗೆ ಭಾಷೆ, ಸಂಸ್ಕೃತಿ ರಕ್ಷಿಸುವ ಜವಾಬ್ದಾರಿ ಹೊರಬೇಕು'

ಬೆಂಗಳೂರು: 'ಕರ್ನಾಟಕ ಏಕೀಕರಣ ಕುರಿತು ಯುವ ಪೀಳಿಗೆ ಚಿಂತಿಸುವ ಕಾಲ ಎದುರಾಗಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಭಾಷೆ, ಸಂಸ್ಕೃತಿ ಸಂರಕ್ಷಿಸುವ ಗುರುತರ ಜವಾಬ್ದಾರಿ ಹೊರಬೇಕಾಗಿದೆ' ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ.ಮಲ್ಲೇಪುರಂ ಜಿ. ವೆಂಕಟೇಶ್ ಹೇಳಿದರು.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಮಸ್ಕತ್ ಬಸವ ಬಳಗ, ಉತ್ತರ ಅಮೆರಿಕ ಬಸವ ಕೇಂದ್ರ ಹಾಗೂ ಇಟಲಿ ಕನ್ನಡ ಸಂಘದ ಸಹಯೋಗದಲ್ಲಿ ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ಕನ್ನಡ ಭಾಷಾ ವಿಭಾಗ ಆಯೋಜಿಸಿದ್ದ 'ಕರ್ನಾಟಕದ ಸ್ವಾತಂತ್ರ್ಯ ಮತ್ತು ಏಕೀಕರಣದ ಇತಿಹಾಸ' ಕುರಿತ ಒಂದು ದಿನದ ಅಂತರರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ಪಂಪನ ಹೆಸರಿನ ಸಂಶೋಧನಾ ವೇದಿಕೆಯನ್ನೂ ಉದ್ಘಾಟಿಸಲಾಗಿದೆ. ಭವಿಷ್ಯದಲ್ಲಿ ಅತ್ಯುತ್ತಮ ಕಾರ್ಯಗಳನ್ನು ಈ ವೇದಿಕೆ ನಿರ್ವಹಿಸುತ್ತದೆ ಎಂಬ ಆಶಯ ಹೊಂದಿದ್ದೇನೆ' ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬೆಂಗಳೂರಿನ ವಿಶ್ವವಿದ್ಯಾಲಯದ ಕುಲಸಚಿವ ಡಾ.ಎಂ. ಕೊಟ್ರೇಶ, 'ಭಾರತ ಮತ್ತು ಕರ್ನಾಟಕವನ್ನು ಸ್ವತಂತ್ರ್ಯಗೊಳಿಸುವಲ್ಲಿ ಸಂಸ್ಥಾನಗಳ ಪಾತ್ರ ದೊಡ್ಡದು' ಎಂದರು.

ಪತ್ರಾಗಾರ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಾ.ಸದಾನಂದ ನೆಲ್ಕುದರಿ, ಜೈನ್ ಡೀಮ್ಡ್-ಟು-ಬಿ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ.ರಾಜ್ ಸಿಂಗ್, ಕುಲಸಚಿವ ಎನ್. ವಿ.ಎಚ್. ಕೃಷ್ಣನ್, ಅಕಾಡೆಮಿಕ್ಸ್ ಮತ್ತು ಪ್ಲಾನಿಂಗ್ ನಿರ್ದೇಶಕ ಕೆ. ಆರ್.ಶ್ರೀಧರಮೂರ್ತಿ, ಡಾ. ರಜನಿ ಜಯರಾಮ್, ಪ್ರೊ.ವೈ.ಎಂ.ರಾಜೇಶ್ವರಿ, ಪ್ರೊ. ರಾಜಕುಮಾರ್ ಬಡಿಗೇರ ಪಾಲ್ಗೊಂಡಿದ್ದರು.

'ಮಠಗಳು ಜಾತ್ಯತೀತವಾಗಲಿ'

ಪ್ರಜಾವಾಣಿ ವಾರ್ತೆ

ಮಾಗಡಿ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವುದು ನಮ್ಮೆಲ್ಲರ ಮುಖ್ಯಗುರಿಯಾಗಿದೆ ಎಂದು ಕಾಂಗ್ರೆಸ್ ನಾಯಕ ಸಚಿವ ಕೆ.ಎಚ್. ಮುನಿಯಪ್ಪ ತಿಳಿಸಿದರು.

ತಾಲ್ಲೂಕಿನ ಸೋಲೂರು ಹೋಬಳಿ ಪಾಲನಹಳ್ಳಿ ಶನೇಶ್ವರ ಕ್ಷೇತ್ರದಲ್ಲಿ ಬುಧವಾರ ರಾತ್ರಿ ನಡೆದ ಶಿವರಾತ್ರಿ ಮಹೋತ್ಸವ ಮತ್ತು ಭಗವತಿ ದೇವಿ ಟ್ರಸ್ಟ್ ಉದ್ಘಾಟಿಸಿ, 'ಶಿವಗಂಗೋತ್ರಿ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

'ಎಲ್ಲಾ ಮಠಗಳು ಸಹ ಒಂದು ಜಾತಿಗೆ ಸೀಮಿತವಾಗದೆ, ಸರ್ವಸಮುದಾಯಗಳ ಏಳಿಗೆಗೆ ಶ್ರಮಿಸಬೇಕು. ಪಾಲನಹಳ್ಳಿ ಮಠದಂತಹ ಜಾತ್ಯಾತೀತ ಮಠಗಳ ಸಂಖ್ಯೆ ಹೆಚ್ಚಬೇಕು' ಎಂದು ಅವರು ಹೇಳಿದರು.

ಪಾಲನಹಳ್ಳಿ ಮಠಾಧ್ಯಕ್ಷ ಡಾ.ಸಿದ್ದರಾಜುಸ್ವಾಮಿ ಮಾತನಾಡಿ, 'ರಷ್ಯಾ ಮತ್ತು ಉಕ್ರೇನ್ ನಡುವೆ ನಡೆಯುತ್ತಿರುವ ಭೀಕರ ಯುದ್ಧ ನಿಂತು ಮನುಕುಲ ಉಳಿಯಲಿ. ಸರ್ವರೂ ಸಮಭಾವನೆಯಿಂದ ಬದುಕುವಂತಾಗಲಿ' ಎಂದರು.

ವಿಧಾನ ಪರಿಷತ್ ಸದಸ್ಯ ಡಾ.ಎಲ್. ಹನುಮಂತಯ್ಯ ಮಾತನಾಡಿ, ಪಾಲನಹಳ್ಳಿ ಮಠದ ಶ್ರೀಗಳು ವೇದ, 'ಉಪನಿಷತ್ತುಗಳನ್ನು ಕಲಿತಿದ್ದಾರೆ. ಆ ಮೂಲಕ ಅಸಮಾನತೆ ಕೊಳೆಯನ್ನು ತೊಳೆದು ಅಸ್ಪೃಶ್ಯತೆ ದೂರ ಮಾಡಲು ಸಹಕಾರಿಯಾಗಲಿ' ಎಂದು ಆಶಿಸಿದರು.

ಪಾದಯಾತ್ರೆ: ಕೊನೆ ದಿನವೂ ಉತ್ಸಾಹದ ನಡಿಗೆ

ಕಾಂಗ್ರೆಸ್ ಮುಖಂಡರ ಜೊತೆ ಹೆಜ್ಜೆ ಹಾಕಿದ ಕಾರ್ಯಕರ್ತರು • ಹೂವಿನ ಮಾಲೆ ಹಾಕಿ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪಾದಯಾತ್ರೆಗೆ ಕೊನೆಯ ದಿನವಾದ ಗುರುವಾರವೂ ಉತ್ತಮ ಸ್ಪಂದನೆ ವ್ಯಕ್ತವಾಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ನಗರಕ್ಕೆ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರ ಜೊತೆ ಹೆಜ್ಜೆ ಹಾಕಿ ಪಾದಯಾತ್ರೆಗೆ ಶಕ್ತಿ ತುಂಬಿದರು. 'ನಮ್ಮ ನೀರು, ನಮ್ಮ ಹಕ್ಕು' ಎಂಬ ಘೋಷಣೆಯೊಂದಿಗೆ 'ಮೇಕೆದಾಟು' ಕೂಗು ರಸ್ತೆಯುದ್ದಕ್ಕೂ ಜೋರಾಗಿತ್ತು.

ನಗರದ ಬಳ್ಳಾರಿ ರಸ್ತೆಯ ಅರಮನೆ ಮೈದಾನದಿಂದ ಆರಂಭವಾದ ಪಾದಯಾತ್ರೆ, ಬಸವನಗುಡಿ ನ್ಯಾಷನಲ್ ಕಾಲೇಜು ಆಟದ ಮೈದಾನದಲ್ಲಿ ಸಮಾಪ್ತಿಗೊಂಡಿತು. ಪಾದಯಾತ್ರೆ ಸಾಗುತ್ತಿದ್ದ ರಸ್ತೆಗಳು, ಕಾರ್ಯಕರ್ತರಿಂದ ತುಂಬಿದ್ದವು. ಕಾಂಗ್ರೆಸ್ ಬಾವುಟ, ರಾಷ್ಟ್ರಧ್ವಜ ಹಿಡಿದ ಕಾರ್ಯಕರ್ತರು, ಉತ್ಸಾಹದಿಂದ ಪಾದಯಾತ್ರೆಯಲ್ಲಿ ಸಾಗಿದರು. ರಸ್ತೆಯುದ್ದಕ್ಕೂ ಹಾಕಿದ್ದ ಬೃಹತ್ ಕಟೌಟ್‌ಗಳು, ಬಾವುಟಗಳು, ಮುಖಂಡರು ಹಾಗೂ ಕಾರ್ಯಕರ್ತರನ್ನು ಸ್ವಾಗತಿಸಿದವು.

ಕಾವೇರಿ ಚಿತ್ರಮಂದಿರ ಜಂಕ್ಷನ್, ಭಾಷ್ಯಂ ವೃತ್ತ, ಮಲ್ಲೇಶ್ವರ 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರ ಜೋಡು ರಸ್ತೆ, ಶೇಷಾದ್ರಿಪುರ ರೈಲ್ವೆ ಫ್ಲಾಟ್‌ಫಾರಂ ರಸ್ತೆ, ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆ ವೃತ್ತ, ಕಾಟನ್ ಪೇಟೆ ಮುಖ್ಯರಸ್ತೆ, ಬ್ರಿಯಾಂಡ್ ವೃತ್ತ, ರಾಯನ್ ವೃತ್ತ ಹಾಗೂ ಈದ್ಗಾ ಮೈದಾನದ ಮೂಲಕ ಪಾದಯಾತ್ರೆ ಸಾಗಿತು. ರಸ್ತೆಯುದ್ದಕ್ಕೂ ಪ್ರಮುಖ

ಕಾಂಗ್ರೆಸ್ ಪಕ್ಷ ಆಯೋಜಿಸಿದ್ದ ಮೇಕೆದಾಟು ಯೋಜನೆ ಪಾದಯಾತ್ರೆ ಸದಾಶಿವ ನಗರಕ್ಕೆ ಬಂದಾಗ ಕಾಂಗ್ರೆಸ್ ಸದಸ್ಯರು ಕನ್ನಡ ಧ್ವಜವನ್ನು ಹಿಡಿದು ಸಂಭ್ರಮಿಸಿದ್ದು ಕಂಡುಬಂತು –ಪ್ರಜಾವಾಣಿ ಚಿತ್ರ

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

ವ್ಯಕ್ತಿಗಳ ಪ್ರತಿಮೆಗಳಿಗೆ ಮುಖಂಡರು ಮಾಲಾರ್ಪಣೆ ಮಾಡಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್, ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ಮುಖಂಡರು ಪಾದಯಾತ್ರೆ ನೇತೃತ್ವ ವಹಿಸಿದ್ದರು. ಯುವ ಕಾಂಗ್ರೆಸ್ ಘಟಕದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದು ಕಂಡುಬಂತು.ರಸ್ತೆ ಪಕ್ಕದಲ್ಲಿ ತಾತ್ಕಾಲಿಕ ಶೆಡ್ ಹಾಕಿಕೊಂಡಿದ್ದ ಕಾರ್ಯಕರ್ತರು, ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದವರಿಗಾಗಿ ನೀರು,ಜ್ಯೂಸ್ ವ್ಯವಸ್ಥೆ ಮಾಡಿದ್ದರು. ಕೆಲವೆಡೆ ಉಪಾಹಾರ ವ್ಯವಸ್ಥೆಯೂ ಇತ್ತು.

ಬಿಜೆಪಿ ಕಚೇರಿಗೆ ಬಿಗಿ ಭದ್ರತೆ: ಮಲ್ಲೇಶ್ವರದಲ್ಲಿ ಪಾದಯಾತ್ರೆ ಸಾಗುತ್ತಿದ್ದ ವೇಳೆ ಬಿಜೆಪಿ ಕಚೇರಿಗೆ ಬಿಗಿ ಭದ್ರತೆ ಒದಗಿಸಲಾಗಿತ್ತು. ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿತ್ತು.

ಕಾಂಗ್ರೆಸ್ ಮುಖಂಡನ ಜೇಬಿಗೆ ಕತ್ತರಿ

ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಮುಖಂಡ ಆನಂದ್‌ಕುಮಾರ್ ಜೇಬಿನಲ್ಲಿದ್ದ ಪರ್ಸ್ ಕಳ್ಳತನ ಮಾಡಲಾಗಿದೆ. ಈ ಬಗ್ಗೆ ಸದಾಶಿವನಗರ ಠಾಣೆಗೆ ಆನಂದ್‌ಕುಮಾರ್ ದೂರು ನೀಡಿದ್ದಾರೆ.

'ಅರಮನೆ ಮೈದಾನದಿಂದ ಪಾದಯಾತ್ರೆ ಆರಂಭವಾಗಿತ್ತು. ಯಾರೋ ದುಷ್ಕರ್ಮಿಗಳು, ನನ್ನ ಜೇಬನ್ನು ಬ್ಲೇಡ್‌ನಿಂದ ಕತ್ತರಿಸಿ ಕಳ್ಳತನ ಮಾಡಿದ್ದಾರೆ. ಪರ್ಸ್, ₹ 68 ಸಾವಿರ ನಗದು ಹಾಗೂ ಕ್ರೆಡಿಟ್ ಕಾರ್ಡ್ ಕಳ್ಳತನ ಆಗಿದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ನಗರದ ಕಾವೇರಿ ಜಂಕ್ಷನ್ ಬಳಿ ಪಾದಯಾತ್ರೆಯಲ್ಲಿ ಕಾಂಗ್ರೆಸ್ ಸದಸ್ಯ, ಪುನೀತ್ ರಾಜಕುಮಾರ್ ಅಭಿಮಾನಿ ರಾಜಕುಮಾರ ಮತ್ತು ಪುನೀತ್ ರಾಜಕುಮಾರ್ ಚಿತ್ರವನ್ನು ಹಿಡಿದು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

'ದ್ರಾಕ್ಷಿ, ಕಲ್ಲಂಗಡಿ ಮಾರಾಟ ಮೇಳಕ್ಕೆ ಚಾಲನೆ

'ಹಾಪ್‌ಕಾಮ್ಸ್ ಮಳಿಗೆಗಳನ್ನು ಮೇಲ್ದರ್ಜೆಗೇರಿಸಲು ಚಿಂತನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಾಪ್‌ಕಾಮ್ಸ್ ಮಳಿಗೆಗಳನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ' ಎಂದು ತೋಟಗಾರಿಕಾ ಸಚಿವ ಮುನಿರತ್ನ ತಿಳಿಸಿದರು.

ಹಾಪ್‌ಕಾಮ್ಸ್ ವತಿಯಿಂದ ಲಾಲ್‌ಬಾಗ್‌ನಲ್ಲಿ ಆಯೋಜಿಸಲಾಗಿರುವ 'ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ಮೇಳ'ಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದ ಅವರು, 'ಹಾಪ್‌ಕಾಮ್ಸ್ ಮಳಿಗೆಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಎರಡು ಶೈತ್ಯಾಗಾರ ನಿರ್ಮಾಣಕ್ಕೆ ಬಜೆಟ್‌ನಲ್ಲಿ ಅನುದಾನ ಒದಗಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಲಾಗಿದೆ' ಎಂದು ತಿಳಿಸಿದರು.

'ವಿವಿಧ ತಳಿಯ ದ್ರಾಕ್ಷಿಗಳು ಮಾರುಕಟ್ಟೆಗೆ ಬಂದಿವೆ. ಈ ವರ್ಷವೂ ರೈತರಿಗೆ ಉತ್ತಮ ಮಾರುಕಟ್ಟೆ ಕಲ್ಪಿಸಲು ಮತ್ತು ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ದ್ರಾಕ್ಷಿ, ಕಲ್ಲಂಗಡಿ ಒದಗಿಸಲು ಮೇಳ ಆಯೋಜಿಸಲಾಗಿದೆ' ಎಂದರು.

ಮೇಳದ ವಿವರ ನೀಡಿದ ಹಾಪ್‌ಕಾಮ್ಸ್ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಮಿರ್ಜಿ, 'ಈ ಬಾರಿ ಶೇ 5ರಷ್ಟು ರಿಯಾಯಿತಿ ದರದಲ್ಲಿ ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ಮಾಡಲಾಗುತ್ತಿದ್ದು, ಮೇಳವು ಈ ಋತುಮಾನದ ಅಂತ್ಯದವರೆಗೂ ನಡೆಯಲಿದೆ. ಮಾರಾಟ ಮೇಳದಲ್ಲಿ 13ರಿಂದ 15 ತಳಿಯ ದ್ರಾಕ್ಷಿಗಳು, ನಾಲ್ಕು ಬಗೆಯ ಕಲ್ಲಂಗಡಿ ಹಣ್ಣುಗಳ ಪ್ರದರ್ಶನ ಹಾಗೂ ಮಾರಾಟ ವ್ಯವಸ್ಥೆ ಮಾಡಲಾಗಿದೆ' ಎಂದರು.

ಲಾಲ್‌ಬಾಗ್‌ನಲ್ಲಿ ಗುರುವಾರ ದ್ರಾಕ್ಷಿ ಮತ್ತು ಕಲ್ಲಂಗಡಿ ಮಾರಾಟ ಮೇಳಕ್ಕೆ ತೋಟಗಾರಿಕೆ ಸಚಿವ ಮುನಿರತ್ನ ಚಾಲನೆ ನೀಡಿದರು. ಹಾಪ್‌ಕಾಮ್ಸ್ ಅಧ್ಯಕ್ಷ ಎನ್. ದೇವರಾಜ್, ನಿರ್ದೇಶಕ ಶಿವಮಾದು, ವ್ಯವಸ್ಥಾಪಕ ನಿರ್ದೇಶಕ ಉಮೇಶ ಮಿರ್ಜಿ ಇದ್ದರು

'ಪ್ರಸ್ತುತ ಮೇಳದಲ್ಲಿ ಅಂದಾಜು 400ರಿಂದ 500 ಟನ್ ದ್ರಾಕ್ಷಿ ವಹಿವಾಟು ನಡೆಯುವ ನಿರೀಕ್ಷೆ ಇದೆ. ಮೇಳದಲ್ಲಿ ಬೆಂಗಳೂರು ನೀಲಿ, ಕೃಷ್ಣ ಶರದ್, ಸೊನಾಕ, ತಾಜ್ ಗಣೇಶ್, ಇಂಡಿಯನ್ ರೆಡ್ ಗ್ಲೋಬ್, ಸೂಪರ್ ಸೋನಾಕ, ಜಂಬೂ ಶರದ್ ಆಸ್ಟ್ರೇಲಿಯಾ ರೆಡ್ ಗ್ಲೋಬ್ ಇತ್ಯಾದಿ ತಳಿಗಳನ್ನು ಪ್ರದರ್ಶಿಸಲಾಗಿದೆ' ಎಂದು ವಿವರಿಸಿದರು.

'ಕಿಣ್ ಕಲ್ಲಂಗಡಿ, ನಾಮಧಾರಿ ಕಲ್ಲಂಗಡಿ, ಹಳದಿ ಬಣ್ಣದ ಕಲ್ಲಂಗಡಿ, ಬೀಜರಹಿತ ಕಲ್ಲಂಗಡಿ ಮುಂತಾದ ಕಲ್ಲಂಗಡಿಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗಿದೆ. ಅಂದಾಜು 800ರಿಂದ 1000 ಟನ್ ವಹಿವಾಟು ನಡೆಯುವ ನಿರೀಕ್ಷಿಸಲಾಗಿದೆ' ಎಂದು ತಿಳಿಸಿದರು.

ಪುಟ್ಟರಾಜ ಗವಾಯಿ ಪ್ರಶಸ್ತಿಯಿಂದ ಸರ್ಕಾರಕ್ಕೆ ಗೌರವ

ಹೊಸದುರ್ಗ: ಪುಟ್ಟರಾಜ ಗವಾಯಿ ಅವರ ಹೆಸರಿನಲ್ಲಿ ಸರ್ಕಾರ ಪ್ರಶಸ್ತಿ ಕೊಡುವುದರಿಂದ ಸರ್ಕಾರದ ಗೌರವ ಹೆಚ್ಚುತ್ತದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಕಾರಾತ್ಮಕವಾಗಿ ಯೋಚಿಸಬೇಕು ಎಂದು ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಂ.ಪುಟ್ಟರಾಜ ಗುರುವರ್ಯರ ಹುಟ್ಟುಹಬ್ಬದ ಅಂಗವಾಗಿ ಪಂಡಿತ ಪುಟ್ಟರಾಜ ಸೇವಾ ಸಮಿತಿ ಗದಗ, ಕಲಾ ವಿಕಾಸ್ ಪರಿಷತ್ ಗದಗ, ಶಿವಕುಮಾರ ಕಲಾ ಸಂಘ ಸಾಣೇಹಳ್ಳಿ ಇವರ ಸಹಯೋಗದಲ್ಲಿ ಗುರುವಾರ ಸಾಣೇಹಳ್ಳಿಯಲ್ಲಿ ಆಯೋಜಿಸಿದ್ದ 'ಕಲಾ ವಿಕಾಸ್ ದಿವಸ್ ಆಚರಣೆ' ಕಾರ್ಯಕ್ರಮದಲ್ಲಿ ಮಾತನಾಡಿದರು.

'ಅಂಗವಿಕಲತೆ ಸಾಧನೆಗೆ ಅಡ್ಡಿಯಲ್ಲ. ಪಂಚಾಕ್ಷರಿ ಗವಾಯಿ ಮತ್ತು ಪುಟ್ಟರಾಜ ಗವಾಯಿ ಅವರು ಅಂಧತ್ವದ ಕಾರಣ ಲೋಕವನ್ನು ನೋಡದಿದ್ದರೂ ಇಡೀ ಲೋಕಕ್ಕೆ ಬೆಳಕು ಚೆಲ್ಲಿದರು. ಕಣ್ಣಿದ್ದವರೂ ಮಾಡಲಾಗದ ಸಾಧನೆಯನ್ನು ಅವರು ಮಾಡಿದ್ದಾರೆ. ವ್ಯಕ್ತಿಯ ಸಾಧನೆಗೆ ಅನುಗುಣವಾಗಿ ಪ್ರಶಸ್ತಿ ನೀಡಿದರೆ ಪ್ರಶಸ್ತಿಯ ಮೌಲ್ಯ ಹೆಚ್ಚುತ್ತದೆ' ಎಂದರು.

ಪಂಡಿತ ಪುಟ್ಟರಾಜ ಸೇವಾ ಸಮಿತಿ ಗೌರವಾಧ್ಯಕ್ಷ ಚನ್ನಬಸವ ಶಿವಚಾರ್ಯ ಸ್ವಾಮೀಜಿ ಮಾತನಾಡಿ, 'ಕವಿಗಳಿಗೆ ಕಲಾವಿದರಿಗೆ ಸದಾ ಪ್ರೋತ್ಸಾಹ ನೀಡುವ ಕ್ಷೇತ್ರ ಸಾಣೇಹಳ್ಳಿ. ಪುಟ್ಟರಾಜ ಗವಾಯಿ ಅವರ ಹೆಸರಿನಲ್ಲಿ ಸಂಗೀತ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ ಸಾಧಕರಿಗೆ ಸರ್ಕಾರ ₹ 10 ಲಕ್ಷ ಪ್ರಶಸ್ತಿ ನೀಡುವಂತೆ ಸಾಣೇಹಳ್ಳಿ ಶ್ರೀ ಅವರು ಸರ್ಕಾರಕ್ಕೆ ಮನವಿ ಮಾಡಬೇಕು' ಎಂದು ಮನವಿ ಮಾಡಬೇಕು.

ತಿಮ್ಮಾಪುರ ಕಲ್ಯಾಣ ಆಶ್ರಮದ ಮಹಾಂತಸ್ವಾಮಿ, ಶಿಕ್ಷಣ ತಜ್ಞ ಡಾ.ಎಸ್.ವೈ. ಚಿಕ್ಕಟ್ಟಿ, ಸಮಾಜ ಸೇವಕ ವಿ.ಕೆ. ಶಂಕರಪ್ಪ, ವಯೋಲಿನ್ ವಾದಕ ನಾರಾಯಣ ಹಿರೇಕೊಳಚಿ, ಗಾಯಕರಾದ ಅಯ್ಯಪ್ಪಯ್ಯ ಹಲಗಲಿ ಮಠ ಮತ್ತು ಪಂಡಿತ ತೋಟಪ್ಪ ಉತ್ತಂಗಿ ಅವರಿಗೆ 'ಪಂಡಿತ ಪುಟ್ಟರಾಜ ಕೃಪಾ ಭೂಷಣ ರಾಷ್ಟ್ರೀಯ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಪಂಡಿತ ಪುಟ್ಟರಾಜ ಸೇವಾ ಸಮಿತಿಯ ರಾಜ್ಯ ಸಂಚಾಲಕಿ ಶಶಿಕಲಾ ಮೂರ್ತಿ, ಸಂಸ್ಥಾಪಕ ಅಧ್ಯಕ್ಷ ವೇದಮೂರ್ತಿ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಪಿ. ಓಂಕಾರಪ್ಪ ಇದ್ದರು.

ವೈದ್ಯ ಶಿಕ್ಷಣ ಪಡೆಯಲು ವಲಸೆ: ಮೋದಿ ಆರೋಪ

'ಹಿಂದಿನ ಸರ್ಕಾರಗಳು ಕಾರಣ'

ವಾರಾಣಸಿ (ಪಿಟಿಐ): 'ವೈದ್ಯಕೀಯ ಶಿಕ್ಷಣಕ್ಕಾಗಿ ದೇಶದಿಂದ ಅತ್ಯಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿದೇಶಗಳಿಗೆ ತೆರಳಲು ಈ ಹಿಂದೆ ಆಡಳಿತ ನಡೆಸಿದ್ದ ಸರ್ಕಾರಗಳೇ ಕಾರಣ' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಆರೋಪಿಸಿದರು.

ಒಂದು ವೇಳೆ ದೇಶದಲ್ಲಿಯೇ ಅಗತ್ಯವಿರುವಷ್ಟು ವೈದ್ಯಕೀಯ ಕಾಲೇಜುಗಳು ಇದ್ದಿದ್ದರೆ ಇಲ್ಲಿಯೇ ಸೇರುತ್ತಿದ್ದರು ಎಂದು ಹೇಳಿದರು. ಯುದ್ಧ ಬಾಧಿತ ಉಕ್ರೇನ್‌ನಿಂದ ವಾಪಸಾದ ವಿದ್ಯಾರ್ಥಿಗಳ ಜೊತೆಗೆ ಸಂವಾದ ನಡೆಸುವಾಗ ಅವರು ಈ ಮಾತು ಹೇಳಿದರು.

ಒಂದು ಹಂತದಲ್ಲಿ ವಿದ್ಯಾರ್ಥಿಗಳು ಮತ್ತು ಅವರ ಕುಟುಂಬದವರ ಆಕ್ರೋಶವನ್ನೂ ಪ್ರಧಾನಿ ಎದುರಿಸಬೇಕಾಯಿತು. 'ಇಂಥ ಬಿಕ್ಕಟ್ಟಿನ ಸಂದರ್ಭದಲ್ಲಿ ಆಕ್ರೋಶ, ಕೋಪ ಸಹಜ. ಅವರು ವಿಪರೀತ ಚಳಿಯಲ್ಲಿ ಸಂಕಷ್ಟ ಸ್ಥಿತಿ ಎದುರಿಸಿ ಬಂದಿದ್ದಾರೆ' ಎಂದು ಹೇಳಿದರು.

ಒಂದು ಹಂತದಲ್ಲಿ ಪರಿಸ್ಥಿತಿ ಪೂರ್ಣ ಅರ್ಥವಾದ ಬಳಿಕ ಅವರೇ ನಮ್ಮೆಡೆಗೆ ಪ್ರೀತಿ ತೋರುತ್ತಾರೆ ಎಂದೂ ಮೋದಿ ಹೇಳಿದರು.

ತದನಂತರ ವಿದ್ಯಾರ್ಥಿಗಳು, ಸಂಕಷ್ಟ ಕಾಲದಲ್ಲಿ ತಮ್ಮನ್ನು ವಾಪಸು ಕರೆತಂದಿದ್ದಕ್ಕಾಗಿ ಪ್ರಧಾನಿಗೆ ಕೃತಜ್ಞತೆ ಸಲ್ಲಿಸಿದರು.

ಯುದ್ಧಬಾಧಿತ ಉಕ್ರೇನ್‌ನಿಂದ ಮರಳಿದ ವಿದ್ಯಾರ್ಥಿಗಳ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಗುರುವಾರ ಸಂವಾದ ನಡೆಸಿದರು –ಪಿಟಿಐ ಚಿತ್ರ

'ಶಕ್ತಿಯುತ ಭಾರತ ಮಾತ್ರವೇ ಈ ಎಲ್ಲ ಸಮಸ್ಯೆಗಳಿಗೂ ಉತ್ತರ ಹೇಳಬಲ್ಲದು. ಯುವ ವಯಸ್ಸಿನಲ್ಲಿಯೇ ಇಂತದೊಂದು ಅನುಭವಕ್ಕೆ ಅವರು ಎದುರಾಗಬೇಕಾದ ವಿದ್ಯಾರ್ಥಿಗಳ ಬಗ್ಗೆ ತಮಗೆ ಅನುಕಂಪವಿದೆ' ಎಂದರು.

'ಇಂತಹ ಸ್ಥಿತಿ ನಿರ್ಮಾಣವಾಗಲು ಈ ಹಿಂದೆ ಆಡಳಿತ ನಡೆಸಿದ್ದ ಸರ್ಕಾರಗಳೇ ಕಾರಣ. ನಮ್ಮ ಸರ್ಕಾರ ಹಿಂದಿನ ಎಲ್ಲ ತಪ್ಪುಗಳನ್ನು ಸರಿಪಡಿಸಲು ಕ್ರಮ ವಹಿಸುತ್ತಿದೆ. ಪ್ರತಿ ಜಿಲ್ಲೆಗೂ ಒಂದು ವೈದ್ಯ ಕಾಲೇಜು ಸ್ಥಾಪಿಸಲು ನಾವು ಯತ್ನಿಸುತ್ತಿದ್ದೇವೆ' ಎಂದು ಅವರು ಹೇಳಿದರು.

'ಮೊದಲು ದೇಶದಲ್ಲಿ 300 ರಿಂದ 400 ವೈದ್ಯಕೀಯ ಕಾಲೇಜುಗಳಿದ್ದವು. ಅಲ್ಲಿ 80,000– 90,000 ಸೀಟುಗಳಿದ್ದವು. ಈಗ ಕಾಲೇಜುಗಳ ಸಂಖ್ಯೆ 700ಕ್ಕೆ ಹತ್ತಿರವಾಗಿದೆ. ಸೀಟುಗಳ ಸಂಖ್ಯೆಯೂ 1.5 ಲಕ್ಷಕ್ಕೆ ಏರಿಕೆ ಆಗಿದೆ 'ಎಂದು ಪ್ರಧಾನಿ ಮೋದಿ ಮಾಹಿತಿ ನೀಡಿದರು.

ಪ್ರಧಾನಿ ಮೋದಿ ಲೋಕಸಭಾ ಕ್ಷೇತ್ರದಲ್ಲಿ ಏಳನೇ ಹಂತದಲ್ಲಿ ಮತದಾನ

ಎಲ್ಲರ ಕಣ್ಣು ವಾರಾಣಸಿಯತ್ತ

ವಾರಾಣಸಿ (ಪಿಟಿಐ): ಉತ್ತರ ಪ್ರದೇಶ ವಿಧಾನಸಭೆಯ ಮತದಾನವು ಕೊನೆಯ ಹಂತಕ್ಕೆ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ ಪ್ರತಿನಿಧಿಸುತ್ತಿರುವ ವಾರಾಣಸಿಯತ್ತ ಈಗ ಎಲ್ಲರ ಕಣ್ಣು ನೆಟ್ಟಿದೆ. ಮೋದಿ ಮತ್ತು ಎಲ್ಲ ಪಕ್ಷಗಳ ಪ್ರಮುಖ ನಾಯಕರು ಅಲ್ಲಿ ಅಬ್ಬರದ ಪ್ರಚಾರ ನಡೆಸಲಿದ್ದಾರೆ.

ಮತದಾನದ ಎಲ್ಲ ಹಂತಗಳಲ್ಲಿಯೂ ಮೋದಿ ಅವರು ಉತ್ತರ ಪ್ರದೇಶಕ್ಕೆ ಹಲವು ಬಾರಿ ಭೇಟಿ ಕೊಟ್ಟಿದ್ದಾರೆ. ಶುಕ್ರವಾರ ಮತ್ತು ಶನಿವಾರ ಅವರು ವಾರಾಣಸಿಯಲ್ಲಿ ಪ್ರಚಾರ ನಡೆಸಲಿದ್ದಾರೆ. ವಾರಾಣಸಿ ಜಿಲ್ಲೆಯ ಎಂಟು ಕ್ಷೇತ್ರಗಳಿಗೆ ಇದೇ 7ರಂದು ಮತದಾನ ನಡೆಯಲಿದೆ.

ಮೋದಿ ಅವರು ವಾರಾಣಸಿಯ ವಿವಿಧ ಸ್ಥಳಗಳಲ್ಲಿ ಶನಿವಾರ ರೋಡ್‌ಶೋ ನಡೆಸಲಿದ್ದಾರೆ. ಖಜುರಿ ಗ್ರಾಮದಲ್ಲಿ ಸಮಾವೇಶ ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಬಿಜೆಪಿ ವಾರಾಣಸಿ ಘಟಕದ ಅಧ್ಯಕ್ಷ ವಿದ್ಯಾಸಾಗರ್ ರಾಯ್ ಹೇಳಿದ್ದಾರೆ.

ಕಂಟೋನ್ಮೆಂಟ್, ವಾರಾಣಸಿ ಉತ್ತರ ಮತ್ತು ವಾರಾಣಸಿ ದಕ್ಷಿಣ ಕ್ಷೇತ್ರಗಳಲ್ಲಿ ಮೋದಿ ಅವರು ರೋಡ್‌ಶೋ ನಡೆಸಲಿದ್ದಾರೆ. ಕಾಶಿ ವಿಶ್ವನಾಥ ದೇವಾಲಯಕ್ಕೂ ಅವರು ಭೇಟಿ ನೀಡಲಿದ್ದಾರೆ.

ಬಿಜೆಪಿಯೇತರ ಪಕ್ಷಗಳ ಪ್ರಮುಖ ನಾಯಕರು ಕೂಡ ಜಿಲ್ಲೆಯಲ್ಲಿ ಪ್ರಚಾರ ನಡೆಸಲಿದ್ದಾರೆ. ಟಿಎಂಸಿ ಮುಖ್ಯಸ್ಥೆ ಮಮತಾ ಬ್ಯಾನರ್ಜಿ, ಎಸ್‌ಪಿ ಅಧ್ಯಕ್ಷ ಅಖಿಲೇಶ್ ಯಾದವ್ ಮತ್ತು ಎಸ್‌ಪಿಯ ಮಿತ್ರ ಪಕ್ಷ ಆರ್‌ಎಲ್‌ಡಿ ಮುಖ್ಯಸ್ಥ ಜಯಂತ್ ಚೌಧರಿ ಅವರು ಜಂಟಿ ರ‍್ಯಾಲಿ ನಡೆಸಲಿದ್ದಾರೆ. ಎಸ್‌ಪಿ ನೇತೃತ್ವದ ಮೈತ್ರಿಕೂಟದಲ್ಲಿ ಇರುವ ಎಲ್ಲ ಪಕ್ಷಗಳ ಮುಖಂಡರು ರ‍್ಯಾಲಿಯಲ್ಲಿ ಭಾಗಿಯಾಗಲಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಭಾರಿ ಅಂತರದಿಂದ ಸೋಲಿಸಿರುವ ಮಮತಾ ಅವರು ಲೋಕಸಭೆಯ ಮುಂದಿನ ಚುನಾವಣೆಯ ಹೊತ್ತಿಗೆ ಬಿಜೆಪಿ ವಿರೋಧಿ ಪಕ್ಷಗಳ ಮೈತ್ರಿಕೂಟದ ನಾಯಕತ್ವ ವಹಿಸಿಕೊಳ್ಳುವ ಹುರುಪಿನಲ್ಲಿ ಇದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ವಾರಾಣಸಿ ಮತ್ತು ಸಮೀಪದ ಪ್ರದೇಶಗಳಲ್ಲಿ ಈಗಾಗಲೇ ಪ್ರಚಾರ ನಡೆಸಿದ್ದಾರೆ.

ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರು ವಾರಾಣಸಿಗೆ ಭೇಟಿ ನೀಡಲಿದ್ದಾರೆಯೇ ಎಂಬುದು ತಿಳಿದುಬಂದಿಲ್ಲ. ಎಎಪಿ ಸಂಸದ ಸಂಜಯ್ ಸಿಂಗ್ ಅವರು ವಾರಾಣಸಿ ಮತ್ತು ಸುತ್ತಲಿನ ಪ್ರದೇಶಗಳಲ್ಲಿ ಕೆಲವು ದಿನಗಳಿಂದ ಪ್ರಚಾರ ನಡೆಸುತ್ತಿದ್ದಾರೆ. ಬಹಿರಂಗ ಪ್ರಚಾರಕ್ಕೆ ಶನಿವಾರ ಕೊನೆಯ ದಿನವಾಗಿದೆ.

ಬಿಜೆಪಿ ಮತ್ತು ಎಸ್‌ಪಿ ನಡುವೆ ತೀವ್ರ ಸ್ಪರ್ಧೆ ಇದೆ ಎಂದು ಹೇಳಲಾಗುತ್ತಿದೆ. ಕೊನೆಯ ಸುತ್ತಿನಲ್ಲಿ 54 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. 2017ರ ವಿಧಾನಸಭಾ ಚುನಾವಣೆಯಲ್ಲಿ 'ಮೋದಿ ಅಲೆ'ಯ ಬೆನ್ನೇರಿ ಇಲ್ಲಿನ ಎಲ್ಲ ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಮಿತ್ರ ಪಕ್ಷಗಳೂ ಗೆದ್ದಿದ್ದವು. ನೆರೆಯ ಜಿಲ್ಲೆಗಳಲ್ಲಿಯೂ ಹೆಚ್ಚಿನ ಕ್ಷೇತ್ರಗಳು ಬಿಜೆಪಿಗೆ ಸಿಕ್ಕಿದ್ದವು.

ಈ ಬಾರಿ ಚಿತ್ರಣ ಬದಲಾದಂತೆ ಕಾಣಿಸುತ್ತಿದೆ. ಮುಸ್ಲಿಮರು ಎಸ್‌ಪಿ ಪರವಾಗಿ ಧ್ರುವೀಕರಣಗೊಂಡಿದ್ದಾರೆ. ಜಾತಿ ಸಮೀಕರಣದಲ್ಲಿ ಬದಲಾವಣೆ ಕಾಣಿಸಿದೆ. ಹಾಗಾಗಿ ಈ ಬಾರಿಯ ಫಲಿತಾಂಶ ಏಕಪಕ್ಷೀಯವಾಗಿರಬಹುದು ಎಂದು ಹೇಳಲು ಸಾಧ್ಯವಿಲ್ಲ.

ಬಿಜೆಪಿಯ ಮಿತ್ರ ಪಕ್ಷಗಳಾದ ಅಪ್ನಾ ದಳ (ಸೋನೆಲಾಲ್) ಮತ್ತು ನಿಷಾದ್ ಪಕ್ಷ, ಎಸ್‌ಪಿಯ ಮಿತ್ರ ಪಕ್ಷಗಳಾದ ಅಪ್ನಾ ದಳ (ಕೆ) ಮತ್ತು ಓಂಪ್ರಕಾಶ್ ರಾಜ್‌ಭರ್ ಅವರ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷ (ಎಸ್‌ಬಿಎಸ್‌ಪಿ) ಈ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಲಿವೆ. ಕಳೆದ ಚುನಾವಣೆಯಲ್ಲಿ ಬಿಜೆಪಿ ಜತೆಗಿದ್ದ ಎಸ್‌ಬಿಎಸ್‌ಪಿ, ಈ ಬಾರಿ ಅಖಿಲೇಶ್ ಅವರ ಜತೆಗಿದೆ. ಹಿಂದುಳಿದ ವರ್ಗಗಳ ನಾಯಕರಾದ ಸ್ವಾಮಿ ಪ್ರಸಾದ್ ಮೌರ್ಯ, ದಾರಾ ಸಿಂಗ್ ಚೌಹಾನ್ ಮತ್ತು ಬಿಜೆಪಿಯಿಂದ ಎಸ್‌ಪಿ ಸೇರಿರುವ ಇತರ ಮುಖಂಡರು ಈ ಪ್ರದೇಶದಲ್ಲಿ ಪ್ರಭಾವಿಗಳೇ ಆಗಿದ್ದಾರೆ.

ಇಲ್ಲಿನ ಏಳು ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸಿದೆ. ಒಂದನ್ನು ಅಪ್ನಾ ದಳ (ಎಸ್)ಗೆ ಬಿಟ್ಟು ಕೊಟ್ಟಿದೆ. ಎಸ್‌ಪಿ ನಾಲ್ಕರಲ್ಲಿ ಸ್ಪರ್ಧಿಸಿದ್ದರೆ, ಅಪ್ನಾ ದಳ (ಕೆ) ಮತ್ತು ಎಸ್‌ಬಿಎಸ್‌ಪಿಗೆ ತಲಾ ಎರಡು ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಉತ್ತರ ಪ್ರದೇಶದ ಮೌ ಜಿಲ್ಲೆಯ ಮುಹಮ್ಮದಾಬಾದ್‌ನಲ್ಲಿ ಗುರುವಾರ ಪ್ರಚಾರ ನಡೆಸಿದರು ಪಿಟಿಐ ಚಿತ್ರ

ಮತದಾರರ ಸಂಖ್ಯೆ

3.25 ಲಕ್ಷ ವೈಶ್ಯರು	3 ಲಕ್ಷ ಮುಸ್ಲಿಮರು	2.5 ಲಕ್ಷ ಬ್ರಾಹ್ಮಣರು	2 ಲಕ್ಷ ಕುರ್ಮಿ
1.5 ಲಕ್ಷ ಯಾದವರು	1 ಲಕ್ಷ ಠಾಕೂರರು	80,000 ದಲಿತರು	

'ತೆರವು ಕಾರ್ಯವನ್ನು ಬಿಜೆಪಿ ರಾಜಕೀಯಗೊಳಿಸುತ್ತಿದೆ'

ವಾರಾಣಸಿ (ಪಿಟಿಐ): ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರುತ್ತಿರುವುದನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಜಕೀಯಗೊಳಿಸುತ್ತಿದೆ ಎಂದು ರಾಷ್ಟ್ರೀಯ ಲೋಕ ದಳ (ಆರ್‌ಎಲ್‌ಡಿ) ಮುಖ್ಯಸ್ಥ ಜಯಂತ್ ಚೌಧರಿ ಗುರುವಾರ ಆರೋಪಿಸಿದರು.

ಭಾರತೀಯರನ್ನು ತೆರವುಗೊಳಿಸುವ ಕಾರ್ಯಾಚರಣೆಗೆ 'ಆಪರೇಷನ್ ಗಂಗಾ' ಎಂದು ಹೆಸರಿಡಲಾಗಿದೆ. ವಾರಾಣಸಿ ಮತ್ತು ಉತ್ತರ ಪ್ರದೇಶದ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡೇ ಕೇಂದ್ರ ಸರ್ಕಾರ ಈ ಹೆಸರಿಟ್ಟಿದೆ ಎಂದು ಹೇಳಿದರು.

ಸಮಾಜವಾದಿ ಪಕ್ಷ (ಎಸ್‌ಪಿ) ತನ್ನ ಮಿತ್ರ ಪಕ್ಷಗಳ ಜೊತೆ ಸೇರಿ ವಾರಾಣಸಿಯಲ್ಲಿ ನಡೆಸಿದ ಜಂಟಿ ರ‍್ಯಾಲಿಯಲ್ಲಿ ಜಯಂತ್ ಮಾತನಾಡಿದರು. 'ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರು ಸುರಕ್ಷಿತವಾಗಿ ಅವರವರ ಮನೆಗಳನ್ನು ತಲುಪಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಈ ವಿಚಾರದಲ್ಲಿ ಸಾಕಷ್ಟು ನಾಟಕ ನಡೆಯುತ್ತಿದೆ' ಎಂದರು.

ಈ ಪರಿಸ್ಥಿತಿಯನ್ನು ಚುನಾವಣಾ ವಿಚಾರವನ್ನಾಗಿಸುವ ಸಲುವಾಗಿ ಮೋದಿ ಅವರು ಈ ಕಾರ್ಯಾಚರಣೆಗೆ ಆಪರೇಷನ್ ಗಂಗಾ ಎಂದು ಚುನಾವಣಾ ರ‍್ಯಾಲಿಗಳಲ್ಲಿ ಹೆಸರಿಟ್ಟರು
ಜಯಂತ್ ಚೌಧರಿ, ಆರ್‌ಎಲ್‌ಡಿ ಮುಖ್ಯಸ್ಥ

1990ರಲ್ಲಿ ಯುದ್ಧಪೀಡಿತ ಕುವೈತ್‌ನಲ್ಲಿ ನಡೆದಿದ್ದ ಭಾರತೀಯರ ತೆರವು ಕಾರ್ಯಾಚರಣೆಯ ನೆನಪು ಮಾಡಿಕೊಂಡರು. ಕುವೈತ್‌ನಲ್ಲಿ ಯುದ್ಧ ನಡೆಯುತ್ತಿದ್ದ ವೇಳೆ ಲಕ್ಷಾಂತರ ಭಾರತೀಯರು ಅಲ್ಲಿ ಸಂಕಷ್ಟದಲ್ಲಿದ್ದರು. ಅವರನ್ನು ಬಸ್ಸುಗಳಲ್ಲಿ ಕುವೈತ್‌ನಿಂದ ಜೋರ್ಡನ್‌ಗೆ ಕರೆದೊಯ್ದು, ಅಲ್ಲಿಂದ ಭಾರತಕ್ಕೆ ವಿಮಾನಗಳಲ್ಲಿ ಕರೆತರಲಾಗಿತ್ತು. ಆ ಕಾರ್ಯಾಚರಣೆಯನ್ನು ಇಡೀ ವಿಶ್ವವೇ ಕೊಂಡಾಡಿತ್ತು. ಗಿನ್ನಿಸ್ ವಿಶ್ವ ದಾಖಲೆಯಲ್ಲೂ ಈ ಕಾರ್ಯಾಚರಣೆ ಕುರಿತು ಮಾಹಿತಿ ಇದೆ. ಆದರೆ ಆ ಕಾರ್ಯಾಚರಣೆಗೆ ಯಾವ ಹೆಸರನ್ನೂ ನೀಡಿರಲಿಲ್ಲ' ಎಂದರು.

'ಗಂಗಾ ಎಂಬ ಒಳ್ಳೆಯ ಹೆಸರು ಎಲ್ಲರಿಗೂ ಒಳ್ಳೆಯದನ್ನೇ ಮಾಡಲಿ. ಸಂಕಷ್ಟದಲ್ಲಿರುವ ಭಾರತೀಯರು ಸುರಕ್ಷಿತವಾಗಿ ಮನೆಗೆ ಮರಳಲಿ' ಎಂದರು.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಕೂಡಾ ಈ ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಮೈತ್ರಿಕೂಟದ ವಿವಿಧ ಪಕ್ಷಗಳ ನಾಯಕರು ಉಪಸ್ಥಿತರಿದ್ದರು.

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯ ಏಳನೇ ಹಂತದ ಮತದಾನ ಮಾರ್ಚ್ 7ರಂದು ನಡೆಯಲಿದೆ.

ಚುನಾವಣಾ ರ‍್ಯಾಲಿ ಸಮಾಜವಾದಿ ಪಕ್ಷದ ಮೈತ್ರಿಕೂಟ ವಾರಾಣಸಿಯಲ್ಲಿ ಗುರುವಾರ ನಡೆಸಿದ ಚುನಾವಣಾ ರ‍್ಯಾಲಿಯಲ್ಲಿ ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಜೊತೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಭಾಗವಹಿಸಿದ್ದರು –ಪಿಟಿಐ ಚಿತ್ರ

ನುಡಿ–ಕಿಡಿ

ವಂಶಪರಂಪರೆಯ ಪಕ್ಷಗಳು ಪೂರ್ವಾಂಚಲದ ಜನರನ್ನು ಅವರ ಪಾಡಿಗೆ ಬಿಟ್ಟುಬಿಟ್ಟಿದ್ದರು. ಉತ್ತರ ಪ್ರದೇಶವನ್ನು ಜಾತಿಯ ನೆಲೆಯಲ್ಲಿ ವಿಭಜಿಸಲು ಈ ಪಕ್ಷಗಳು ಯತ್ನಿಸಿವೆ. ಆದರೆ, ಇವರ ಪಿತೂರಿಯು ಜನರಿಗೆ ತಿಳಿದಿದೆ. ಹಾಗಾಗಿ, ಅವರು ಒಗ್ಗಟ್ಟಾಗಿ ನಿಂತರು. ಅದಕ್ಕೆ ಕಾರಣ ಸ್ಪಷ್ಟ: ಆಶಯ, ನೀತಿ, ನಿಷ್ಠೆ ಮತ್ತು ನಾಯಕತ್ವ

ನರೇಂದ್ರ ಮೋದಿ, ,ಪ್ರಧಾನಿ

ಈಗ ಇಲ್ಲಿ ಏನಾಗುತ್ತಿದೆ ನೋಡಿ. ಉಕ್ರೇನ್‌ನಲ್ಲಿ ಯುದ್ಧ ನಡೆಯುತ್ತಿದೆ. ಮೋದಿ ಅವರು ಇಲ್ಲಿ ಪ್ರಚಾರ ಮಾಡುತ್ತಿದ್ದಾರೆ. ಉಕ್ರೇನ್‌ನಲ್ಲಿ ಸಿಲುಕಿರುವ ನಮ್ಮ ವಿದ್ಯಾರ್ಥಿಗಳನ್ನು ಕರೆತರುವುದು ಮುಖ್ಯವೇ? ಚುನಾವಣಾ ಪ್ರಚಾರ ನಡೆಸುವುದು ಮುಖ್ಯವೇ? ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ನಿಮ್ಮ ಸಂಬಂಧ ಅಷ್ಟೊಂದು ಚೆನ್ನಾಗಿದ್ದರೆ ಮೂರು ತಿಂಗಳು ಮೊದಲೇ ಯುದ್ಧದ ಮಾಹಿತಿ ಸಿಗುತ್ತಿತ್ತು. ಆಗಲೇ ಏಕೆ ಭಾರತೀಯರನ್ನು ಕರೆತರಲಿಲ್ಲ?

ಮಮತಾ ಬ್ಯಾನರ್ಜಿ, ಟಿಎಂಸಿ ಮುಖ್ಯಸ್ಥೆ

ಮುಂದಿನ ಐದು ವರ್ಷ ಜನರ ಸೇವೆಗೆ ಯಾವ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂಬುದನ್ನು ಚುನಾವಣಾ ಸಂದರ್ಭದಲ್ಲಿ ನಿರ್ಧರಿಸಬೇಕು. ಆದರೆ, ಬಿಜೆಪಿ, ಬಿಎಸ್‌ಪಿ ಮತ್ತು ಎಸ್‌ಪಿಯಂತಹ ಪಕ್ಷಗಳು ಜಾತಿ ಮತ್ತು ಧರ್ಮದ ಆಧಾರದಲ್ಲಿ ಜನರನ್ನು ವಿಭಜಿಸುತ್ತಿವೆ. ಇದರಿಂದಾಗಿ, ಹಣದುಬ್ಬರ, ನಿರುದ್ಯೋಗದಂತಹ ನಿಜವಾದ ಸಮಸ್ಯೆಗಳು ಮರೆಗೆ ಸರಿದಿವೆ

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಜಗತ್ತಿನ ಅತ್ಯಂತ ದೊಡ್ಡ ಪಕ್ಷ ಎಂದು ಬಿಜೆಪಿ ಹೇಳಿಕೊಳ್ಳುತ್ತಿವೆ. ಮಿಸ್ಡ್ ಕಾಲ್ ಮೂಲಕ ಅತಿ ಹೆಚ್ಚು ಸದಸ್ಯರನ್ನು ನೋಂದಾಯಿಸಿಕೊಂಡ ಪಕ್ಷ ಎಂದೂ ಬಿಜೆಪಿ ಹೇಳಿಕೊಳ್ಳುತ್ತಿದೆ. ಆದರೆ, ಡಬಲ್ ಎಂಜಿನ್ ಸರ್ಕಾರದ ಅವಧಿಯನ್ನು ಗಮನಿಸಿದರೆ, ಬಿಜೆಪಿಯಷ್ಟು ಸುಳ್ಳು ಹೇಳುವ ಬೇರೊಂದು ಪಕ್ಷ ಈ ಜಗತ್ತಿನಲ್ಲಿ ಇಲ್ಲವೇ ಇಲ್ಲ ಎನ್ನಬಹುದು

ಅಖಿಲೇಶ್ ಯಾದವ್,, ಎಸ್‌ಪಿ ಮುಖ್ಯಸ್ಥ

ಗೋವಾ ಕಾಂಗ್ರೆಸ್ ಅಭ್ಯರ್ಥಿಗಳ ಮೇಲೆ ಒತ್ತಡ: ಚೋಡಣ್‌ಕರ್

'ಬಿಜೆಪಿಯಿಂದ ದೂರವಾಣಿ ಕದ್ದಾಲಿಕೆ'

ಪ್ರಜಾವಾಣಿ ವಾರ್ತೆ

ಪಣಜಿ: ಗೋವಾ ಕಾಂಗ್ರೆಸ್‌ನ ಮುಖಂಡರ ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ. ಬಿಜೆಪಿ ನಿಯೋಜಿಸಿರುವ ಖಾಸಗಿ ಸಂಸ್ಥೆಯೊಂದು ಈ ಕೆಲಸ ಮಾಡುತ್ತಿದೆ ಎಂದು ಗೋವಾ ಕಾಂಗ್ರೆಸ್ ಅಧ್ಯಕ್ಷ ಗಿರೀಶ್ ಚೋಡಣ್‌ಕರ್ ಆರೋಪಿಸಿದ್ದಾರೆ.

2019ರಲ್ಲಿ ಕರ್ನಾಟಕದಲ್ಲಿ 'ಆಪರೇಷನ್ ಕಮಲ' ಮೂಲಕ ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರವನ್ನು ಉರುಳಿಸಿದ್ದನ್ನು ಗೋವಾದಲ್ಲಿ ಪುನರಾವರ್ತಿಸಲು ಸಿದ್ಧತೆ ನಡೆಸಲಾಗಿದೆ ಎಂದೂ ಅವರು ಆಪಾದಿಸಿದ್ದಾರೆ.

'ಪಕ್ಷದ ನಾಯಕರ ದೂರವಾಣಿ ಕದ್ದಾಲಿಸಲಾಗುತ್ತಿದೆ ಎಂಬುದರ ಬಗ್ಗೆ ಖಚಿತ ಮಾಹಿತಿ ಇದೆ. ನಾವು ಏನು ಮಾತಾಡುತ್ತಿದ್ದೇವೆ ಮತ್ತು ಯಾರ ಜತೆಗೆ ಮಾತುಕತೆ ನಡೆಸುತ್ತಿದ್ದೇವೆ ಎಂಬುದೆಲ್ಲ ಬಿಜೆಪಿ ನಾಯಕರಿಗೆ ಗೊತ್ತಾಗುತ್ತಿದೆ' ಎಂದು ಚೋಡಣ್‌ಕರ್ ಅವರು ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

ದೂರವಾಣಿ ಕದ್ದಾಲಿಕೆ ನಡೆದಿದೆ ಎಂಬುದು ಕರ್ನಾಟಕದಲ್ಲಿ ಸರ್ಕಾರ (ಕಾಂಗ್ರೆಸ್– ಜೆಡಿಎಸ್ ಸರ್ಕಾರ) ಉರುಳಿದ ಬಳಿಕ ಗೊತ್ತಾಗಿತ್ತು
ಗಿರೀಶ್ ಚೋಡಣ್‌ಕರ್
ಗೋವಾ ಕಾಂಗ್ರೆಸ್ ಅಧ್ಯಕ್ಷ

'ದೂರಸಂಪರ್ಕ ಪರಿಣತರೊಬ್ಬರು ಬಳಿ ಬಂದು ನನ್ನ ದೂರವಾಣಿ ಕದ್ದಾಲಿಕೆ ಆಗುತ್ತಿದೆ ಎಂದರು. ವಿರೋಧ ಪಕ್ಷದ ನಾಯಕ ದಿಗಂಬರ ಕಾಮತ್, ಮಾಜಿ ಸಚಿವ ಮೈಕಲ್ ಲೋಬೊ ಅವರ ದೂರವಾಣಿ ಕೂಡ ಕದ್ದಾಲಿಕೆ ಅಗುತ್ತಿದೆ ಎಂದರು. ದೂರವಾಣಿ ಕದ್ದಾಲಿಕೆ ಕಾನೂನುಬಾಹಿರ. ಯಾರ ಅನುಮತಿ ಪಡೆದು ದೂರವಾಣಿ ಕದ್ದಾಲಿಕೆ ಮಾಡಲಾಗುತ್ತಿದೆ ಎಂಬುದನ್ನು ಗೃಹ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಹೇಳಬೇಕು' ಎಂದು ಚೋಡಣ್‌ಕರ್ ಆಗ್ರಹಿಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೈಕಲ್ ಲೋಬೊ ಅವರ ಜತೆಗೆ ಮಾತುಕತೆ ನಡೆಸಿದ್ದಾರೆ. ಬಿಜೆಪಿಗೆ ಬೆಂಬಲ ಕೊಟ್ಟರೆ ಲಾಭದಾಯಕ ಹುದ್ದೆ ಕೊಡಲಾಗುವುದು ಎಂಬ ಭರವಸೆ ಕೊಟ್ಟಿದ್ದಾರೆ ಎಂಬ ವರದಿಯೊಂದು ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಅದಾದ ಬಳಿಕ ಚೋಡಣ್‌ಕರ್ ಅವರು ಮಾಧ್ಯಮಗೋಷ್ಠಿ ನಡೆಸಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಲೋಬೊ ಅವರು ಬಂದರು ಸಚಿವರಾಗಿದ್ದರು. ಬಳಿಕ, ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ.

ಗೆಲ್ಲಬಹುದಾದ ಪಕ್ಷೇತರರು ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಮೇಲೆ ಬಿಜೆಪಿ ಒತ್ತಡ ಹೇರುತ್ತಿದೆ. 40 ಸದಸ್ಯ ಬಲದ ವಿಧಾನಸಭೆಯಲ್ಲಿ ಬಿಜೆಪಿ ಗೆಲ್ಲುವ ಕ್ಷೇತ್ರಗಳ ಸಂಖ್ಯೆ ಈ ಬಾರಿ ಎರಡಂಕಿ ತಲುಪುವುದಿಲ್ಲ. ಹಾಗಾಗಿ, ಅಕ್ರಮ ದಾರಿಯ ಮೂಲಕ ಅಧಿಕಾರಕ್ಕೆ ಬರಲು ಬಿಜೆಪಿ ಯತ್ನಿಸುತ್ತಿದೆ ಎಂದೂ ಚೋಡಣ್‌ಕರ್ ಆರೋಪಿಸಿದ್ದಾರೆ.

ಉ.ಪ್ರ: ಶೇ 53ರಷ್ಟು ಮತದಾನ

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯ ಆರನೇ ಹಂತದಲ್ಲಿ ನಡೆದ ಮತದಾನದಲ್ಲಿ ಸಂಜೆ ಐದರವರೆಗೆ ಶೇ 53.31ರಷ್ಟು ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಸಂಜೆ ಆರರವರೆಗೆ ಮತದಾನ ನಡೆದಿದ್ದು, ಮತದಾನದ ಪ್ರಮಾಣ ಸ್ವಲ್ಪ ಏರಿಕೆಯಾಗುವ ಸಾಧ್ಯತೆ ಇದೆ.

ರಾಜ್ಯದ 10 ಜಿಲ್ಲೆಗಳ 5 ಕ್ಷೇತ್ರಗಳಲ್ಲಿ ಒಟ್ಟು 676 ಅಭ್ಯರ್ಥಿಗಳು ಕಣದಲ್ಲಿ ಇದ್ದರು. 2.15 ಕೋಟಿ ಅರ್ಹ ಮತದಾರರಲ್ಲಿ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಜನರಷ್ಟೇ ಗುರುವಾರ ಮತದಾನ ಮಾಡಿದ್ದಾರೆ. ಮತದಾನವು ಎಲ್ಲೆಡೆ ಶಾಂತಿಯುತವಾಗಿ ನಡೆದಿದೆ. 2017ರ ವಿಧಾನಸಭಾ ಚುನಾವಣೆಯಲ್ಲಿ ಈ 57 ಕ್ಷೇತ್ರಗಳಲ್ಲಿ, ಬಿಜೆಪಿ ಅಭ್ಯರ್ಥಿಗಳು 46 ಕ್ಷೇತ್ರಗಳಲ್ಲಿ ಆರಿಸಿಬಂದಿದ್ದರು.

ಈ ಹಂತದಲ್ಲಿ ಗೋರಖಪುರ ನಗರ ಕ್ಷೇತ್ರದಲ್ಲೂ ಮತದಾನ ನಡೆದಿತ್ತು. ರಾಜ್ಯದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದರು.

ಸಂಜೆ 5ರ ವೇಳೆಗೆ ಗೋರಖಪುರದ ಎಲ್ಲಾ ಕ್ಷೇತ್ರಗಳಲ್ಲಿ ಶೇ 53.89ರಷ್ಟು, ಬಲರಾಮಪುರದಲ್ಲಿ ಶೇ 48.53, ಬಸ್ತಿಯಲ್ಲಿ ಶೇ 54.24, ಡಿಯೋರಾದಲ್ಲಿ ಶೇ 51.50, ಕುಶೀನಗರದಲ್ಲಿ ಶೇ 55, ಮಹಾರಾಜಗಂಜ್‌ನಲ್ಲಿ ಶೇ 57.38 ಮತ್ತು ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ಶೇ 59.55ರಷ್ಟು ಮತದಾನ ನಡೆದಿದೆ.

ಆರು ಹಂತವು ಪೂರ್ಣವಾಗುವುದರೊಂದಿಗೆ, ರಾಜ್ಯದ 403 ಕ್ಷೇತ್ರಗಳಲ್ಲಿ ಈಗ ಒಟ್ಟು 349 ಕ್ಷೇತ್ರಗಳಲ್ಲಿ ಮತದಾನ ಮುಗಿದಿದೆ. ಇನ್ನು 54 ಕ್ಷೇತ್ರಗಳಲ್ಲಿ ಮಾರ್ಚ್ 7ರಂದು ಅಂತಿಮ ಹಂತದ ಮತದಾನ ನಡೆಯಲಿದೆ.

ಉಗ್ರರ ದಾಳಿಗೆ ಪಂಚಾಯಿತಿ ಸದಸ್ಯ ಬಲಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಕುಲ್ಗಾಂ ಜಿಲ್ಲೆಯಲ್ಲಿ ಬುಧವಾರ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಸ್ಥಳೀಯ ಪಂಚಾಯಿತಿ ಸದಸ್ಯ(ಪಂಚ)ರೊಬ್ಬರು ಮೃತಪಟ್ಟಿದ್ದಾರೆ.

ಮೊಹಮ್ಮದ್ ಯಾಕೂಬ್ ದಾರ್ ಮೃತಪಟ್ಟವರು. 'ಕುಲ್ಗಾಂನ ಸ್ರಾಂಡೂ ಪ್ರದೇಶದ ಅವರ ನಿವಾಸದ ಮೇಲೆ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಮೊಹಮ್ಮದ್ ಯೂಕೂಬ್ ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನುಆಸ್ಪತ್ರೆಗೆ ದಾಖಲಿಸಲಾಯಿತಾದರೂ ಬದುಕುಳಿಯಲಿಲ್ಲ' ಎಂದು ಪೊಲೀಸರು ತಿಳಿಸಿದರು.

ಪಂಚರ ಹತ್ಯೆಯನ್ನು ರಾಜಕೀಯ ಪಕ್ಷಗಳು ಖಂಡಿಸಿವೆ.

ಗಡಿ ಹೋರಾಟಕ್ಕೆ ಸರ್ಕಾರ ಬದ್ಧ: ಮಹಾರಾಷ್ಟ್ರ ರಾಜ್ಯಪಾಲ ಕೋಶ್ಯಾರಿ

ಪ್ರಜಾವಾಣಿ ವಾರ್ತೆ

ಮುಂಬೈ: ಗಡಿ ಭಾಗಗಳಲ್ಲಿರುವ ಮರಾಠಿಗರ ಹಕ್ಕುಗಳ ರಕ್ಷಣೆಗಾಗಿ ಹೋರಾಟ ಮಾಡಲು ಮಹಾರಾಷ್ಟ್ರ ಸರ್ಕಾರ ಬದ್ಧವಾಗಿದೆ ಎಂದು ಗುರುವಾರ ಮಹಾರಾಷ್ಟ್ರ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಭಗತ್ ಸಿಂಗ್ ಕೋಶ್ಯಾರಿ ಹೇಳಿದ್ದಾರೆ.

ಅಲ್ಲದೆ ವಿವಾದಿತ ಗಡಿ ಭಾಗಗಳಲ್ಲಿ ಮರಾಠಿಗರ ಮೇಲೆ ಕರ್ನಾಟಕ ಸರ್ಕಾರದ ದೌರ್ಜನ್ಯಗಳು ಖಂಡನೀಯ ಎಂದು ಅವರು ಹೇಳಿದ್ದಾರೆ.

"ಮಹಾರಾಷ್ಟ್ರದ ಗಡಿಗಳಲ್ಲಿ ಬೀಡುಬಿಟ್ಟಿರುವ ಮರಾಠಿ ಭಾಷಿಕರ ಹಕ್ಕುಗಳ ಪರವಾಗಿ ಸರ್ಕಾರ ನಿಲ್ಲಲಿದೆ. 2021ರ ಡಿಸೆಂಬರ್ 16ರಂದು ಬೆಂಗಳೂರಿನಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಯನ್ನು ವಿರೂಪಗೊಳಿಸಿದ್ದು ಮತ್ತು ಬೆಳಗಾವಿಯಲ್ಲಿ ಮಧ್ಯವರ್ತಿ ಮಹಾರಾಷ್ಟ್ರ ಏಕೀಕರಣ ಸಮಿತಿ ಅಧ್ಯಕ್ಷರ ಮೇಲೆ ಕಪ್ಪು ಶಾಯಿ ಎರಚಿದ ಘಟನೆಗಳು ಖಂಡನಾರ್ಹ' ಎಂದು ಹೇಳಿದ್ದಾರೆ.

ಭಗತ್ ಸಿಂಗ್ ಕೋಶ್ಯಾರಿ

ಭಾಷಣ ಮೊಟಕುಗೊಳಿಸಿ ನಿರ್ಗಮಿಸಿದ ರಾಜ್ಯಪಾಲ: ಜಂಟಿ ಅಧಿವೇಶನವನ್ನುದ್ದೇಶಿಸಿ ರಾಜ್ಯಪಾಲರು ಮಾತನಾಡುತ್ತಿದ್ದಾಗ, ಮಹಾವಿಕಾಸ್ ಅಘಾಡಿ ಮೈತ್ರಿ ಸರ್ಕಾರದ ಕಾಂಗ್ರೆಸ್, ಎನ್ ಸಿಪಿ ಮತ್ತು ಶಿವಸೇನಾ ಶಾಸಕರು ಕೋಶ್ಯಾರಿ ಅವರ ವಿರುದ್ಧದ ಘೋಷಣೆಗಳನ್ನು ಮತ್ತು ಛತ್ರಪತಿ ಶಿವಾಜಿ ಮಹಾರಾಜ ಪರ ಜಯ ಘೋಷಣೆಗಳನ್ನು ಕೂಗಿದರು. ಇದರಿಂದ ಕೋಶ್ಯಾರಿ ಅವರು ತಮ್ಮ ಭಾಷಣವನ್ನು ಅರ್ಧಕ್ಕೆ ನಿಲ್ಲಿಸಿ, ವಿಧಾನಮಂಡಲದಿಂದ ಹೊರ ನಡೆದರು.

ಇತ್ತೀಚೆಗೆ ಔರಂಗಬಾದ್ ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ರಾಜ್ಯಪಾಲ ಕೋಶ್ಯಾರಿ ಅವರು, ಶಿವಾಜಿ ಮಹಾರಾಜ ಅವರ ಗುರುವಾಗಿರುವ ಸಮರ್ಥ ರಾಮದಾಸ್ ಅವರು ಇಲ್ಲದಿದ್ದರೆ, ಶಿವಾಜಿ ಅವರನ್ನು ಯಾರು ಕೇಳುತ್ತಿದ್ದರು ಎಂದು ಹೇಳಿದ್ದರು.

ಚಿತ್ರಾವಳಿ

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಗುರುವಾರ ಗೋರಖಪುರದ ಮತಗಟ್ಟೆಯೊಂದರಲ್ಲಿ ಮತ ಚಲಾಯಿಸಿ ಹೊರಬಂದರು —ಪಿಟಿಐ ಚಿತ್ರ

ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ವಾರಾಣಸಿಯಲ್ಲಿ ಗುರುವಾರ ಕಾಂಗ್ರೆಸ್ ಪರ ಪ್ರಚಾರ ನಡೆಸಿದರು —ಪಿಟಿಐ ಚಿತ್ರ

ಕೆರ್ಸೆಣ್ ನಗರ ಪತನ

ಒಂದನೇ ಪುಟದಿಂದ

ರಷ್ಯಾ ಪಡೆಗಳು ಕೆರ್ಸೆಣ್‌ನಿಂದ ಬೇರೊಂದು ಬಂದರು ನಗರ ಮಿಕೊಲಿಯೇವ್ ಕಡೆಗೆ ಸಾಗಿವೆ. ಸೇನಾ ವಾಹನಗಳು ಒಡೆಸಾ ಕಡೆಗೂ ಹೋಗಿವೆ.

ಯುದ್ಧದಲ್ಲಿ ಸುಮಾರು 500 ಸೈನಿಕರು ಮೃತಪಟ್ಟಿದ್ದಾರೆ ಎಂದು ರಷ್ಯಾ ಇದೇ ಮೊದಲ ಬಾರಿಗೆ ಒಪ್ಪಿಕೊಂಡಿದೆ. 1,600 ಸೈನಿಕರು ಗಾಯಗೊಂಡಿದ್ದಾರೆ ಎಂದೂ ರಷ್ಯಾ ಹೇಳಿದೆ. ರಷ್ಯಾದ 9,000 ಸೈನಿಕರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ಹೇಳಿದೆ. ಉಕ್ರೇನ್ ಸೇನೆಗೆ ಆಗಿರುವ ಹಾನಿಯ ಬಗ್ಗೆ ಆ ದೇಶವು ಯಾವುದೇ ಮಾಹಿತಿ ಬಹಿರಂಗಪಡಿಸಿಲ್ಲ.

ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಅವರು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜತೆಗೆ ದೂರವಾಣಿ ಮೂಲಕ ಸುಮಾರು 90 ನಿಮಿಷ ಮಾತನಾಡಿದ್ದಾರೆ. ಇಡೀ ದೇಶವನ್ನು ವಶಕ್ಕೆ ಪಡೆಯುವ ಉದ್ದೇಶ ಪುಟಿನ್ ಅವರಿಗೆ ಇದ್ದಂತಿದೆ ಎಂದು ಮ್ಯಾಕ್ರನ್ ಅವರ ಸಹಾಯಕರೊಬ್ಬರು ಹೇಳಿದ್ದಾರೆ.

ವಿಪಕ್ಷ ಬೆಂಬಲ: ಉಕ್ರೇನ್‌ನಿಂದ ಭಾರತೀಯರನ್ನು ಕರೆತರುವ ವಿಚಾರದಲ್ಲಿ ಸರ್ಕಾರದ ಜತೆಗೆ ಗಟ್ಟಿಯಾಗಿ ನಿಲ್ಲುವುದಾಗಿ ವಿರೋಧ ಪಕ್ಷಗಳು ಹೇಳಿವೆ. ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ತಮ್ಮ ಸಚಿವಾಲಯದ ಸಮಾಲೋಚನಾ ಸಮಿತಿಯ ಸಭೆಯಲ್ಲಿ ಭಾರತೀಯರ ತೆರವು ಕಾರ್ಯಾಚರಣೆಯ ಬಗ್ಗೆ ಮಾಹಿತಿ ನೀಡಿದರು.

ಆರು ಪಕ್ಷಗಳ ಒಂಬತ್ತು ಸಂಸದರು ಸಭೆಯಲ್ಲಿ ಭಾಗವಹಿಸಿದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೂ ಸಭೆಯಲ್ಲಿ ಇದ್ದರು. ಉಕ್ರೇನ್ ಮೇಲೆ ರಷ್ಯಾ ದಾಳಿಗೆ ಸಂಬಂಧಿಸಿ ವಿಶ್ವಸಂಸ್ಥೆಯಲ್ಲಿ ಭಾರತವು ತಟಸ್ಥ ನಿಲುವು ತಳೆದಿರುವುದನ್ನು ಎಲ್ಲ ಪಕ್ಷಗಳು ಬೆಂಬಲಿಸಿವೆ.

'ಒತ್ತೆ ಇಲ್ಲ': ಉಕ್ರೇನ್ ಸೇನೆಯು ಭಾರತೀಯ ವಿದ್ಯಾರ್ಥಿಗಳನ್ನು ಒತ್ತೆ ಇರಿಸಿಕೊಂಡು, ಮಾನವ ಗುರಾಣಿಯಂತೆ ಬಳಸುತ್ತಿದೆ ಎಂದು ರಷ್ಯಾ ಮಾಡಿರುವ ಆರೋಪವನ್ನು ಭಾರತ ಅಲ್ಲಗಳೆದಿದೆ. ಉಕ್ರೇನ್‌ನಲ್ಲಿರುವ ಭಾರತೀಯರ ಜತೆಗೆ ಕೀವ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ನಿರಂತರ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಅರಿಂದಮ್ ಬಗ್ಚಿ ಹೇಳಿದ್ದಾರೆ.

ಯಾವುದೇ ವಿದ್ಯಾರ್ಥಿಯನ್ನು ಒತ್ತೆ ಇರಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಮಾಹಿತಿ ಇಲ್ಲ ಎಂದು ಅವರು ತಿಳಿಸಿದ್ದಾರೆ. ಭಾರತದ ವಿದ್ಯಾರ್ಥಿಗಳನ್ನು ಉಕ್ರೇನ್ ಒತ್ತೆ ಇರಿಸಿಕೊಂಡಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯದ ವಕ್ತಾರ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಬುಧವಾರ ಆರೋಪಿಸಿದ್ದರು.

ಉಕ್ರೇನ್‌ನಿಂದ ಮರಳಿದ ಚಿಕ್ಕಬಳ್ಳಾಪುರದ ಲಿಖಿತಾ ಅನುಭವ

'ರೊಮೇನಿಯಾ ಗಡಿಯಲ್ಲಿ ಬೆದರಿಕೆ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಕೊರೆಯುವ ಚಳಿಯಲ್ಲಿ 15 ಕಿ.ಮೀ ನಡೆದು ರೊಮೇನಿಯಾ ಗಡಿ ತಲುಪಿದೆವು. ಆದರೆ ಅಲ್ಲಿ ಜನಜಂಗುಳಿ. ಗಡಿಯಲ್ಲಿದ್ದ ಉಕ್ರೇನ್ ಸೈನಿಕರು ಮೊದಲಿಗೆ ಉಕ್ರೇನ್ ಪ್ರಜೆಗಳನ್ನು ಗಡಿ ದಾಟಿಸಿದರು. ನಂತರ ನಮಗೆ ಅವಕಾಶ. ಈ ವೇಳೆ ಭಾರತೀಯ ವಿದ್ಯಾರ್ಥಿಗಳನ್ನು ಉಕ್ರೇನ್ ಸೈನಿಕರು ದೂಡಿದರು. ಬಂದೂಕು ತೋರಿಸಿ ಬೆದರಿಸಿದರು'

–ಇದು ಚಿಕ್ಕಬಳ್ಳಾಪುರದ ಎಂ. ಲಿಖಿತಾ ಅವರ ಅನುಭವ.

ಉಕ್ರೇನ್‌ನ ಒಡೆಸ್ಸಾ ನಗರದಲ್ಲಿರುವ ರಾಷ್ಟ್ರೀಯ ವೈದ್ಯಕೀಯ ವಿಶ್ವವಿದ್ಯಾನಿಲಯದಲ್ಲಿ ನಾಲ್ಕನೇ ವರ್ಷದ ವೈದ್ಯಕೀಯ ಶಿಕ್ಷಣ ವ್ಯಾಸಂಗ ಮಾಡುತ್ತಿದ್ದ ಲಿಖಿತಾ ಗುರುವಾರ ತಮ್ಮ ಮನೆ ತಲುಪಿದ್ದಾರೆ. ಒಡೆಸ್ಸಾದಿಂದ ರೊಮೇನಿಯಾ ಗಡಿ ಪ್ರವೇಶಿಸಿದ ಅವರು ತಮ್ಮ ಅನುಭವಗಳನ್ನು 'ಪ್ರಜಾವಾಣಿ' ಜತೆ ಹಂಚಿಕೊಂಡರು.

ಲಿಖಿತಾ

'ಈಗ ಭಾರತದ ರಾಯಭಾರ ಕಚೇರಿಯ ಪ್ರತಿನಿಧಿಗಳು ರೊಮೇನಿಯಾ, ಪೋಲೆಂಡ್ ಗಡಿಭಾಗಗಳಲ್ಲಿ ಇದ್ದಾರೆ. ಆದರೆ, ನಾವು ರೊಮೇನಿಯಾ ಗಡಿ ತಲುಪಿದಾಗ ರಾಯಭಾರ ಕಚೇರಿಯ ಯಾವ ಪ್ರತಿನಿಧಿಗಳು ಇರಲಿಲ್ಲ. ನಾವು ವಾಸವಿದ್ದ ಹಾಸ್ಟೆಲ್‌ನ ಎರಡು ಅಪಾರ್ಟ್‌ಮೆಂಟ್‌ಗಳ ಆಚೆ ಬಾಂಬ್ ಬಿದ್ದಿತು. ತಕ್ಷಣ ನಾವು ಬಂಕರ್‌ಗೆ ತೆರಳಿದೆವು' ಎಂದು ಹೇಳಿದರು.

'ಇಲ್ಲಿದ್ದರೆ ಕಷ್ಟ ಎಂದು ವಾಹನ ಮಾಡಿಕೊಂಡು ರೊಮೇನಿಯಾ ಗಡಿಯತ್ತ ಸಾಗಿದೆವು. ಅಲ್ಲಿ 15 ಕಿ.ಮೀ ಸಂಚಾರ ದಟ್ಟಣೆ ಇತ್ತು. ತಂದಿದ್ದ ಲಗೇಜ್‌ಗಳನ್ನು ಅಲ್ಲಿಯೇ ಬಿಟ್ಟು ನಡೆದು ರೊಮೇನಿಯಾ ಗಡಿ ತಲುಪಿದೆವು. ಅಲ್ಲಿ ಉಕ್ರೇನಿಯನ್ನರು ಆರಾಮವಾಗಿ ಗಡಿ ದಾಟುತ್ತಿದ್ದರು. ನಮ್ಮನ್ನು ದೂಡಿದರು, ಬಂದೂಕು ತೋರಿಸಿ ಬೆದರಿಸಿದರು. ಕೆಲವರ ಮೇಲೆ ಹಲ್ಲೆ ಮಾಡಿದರು. ನಮ್ಮ ರಾಯಭಾರ ಕಚೇರಿಯ ಪ್ರತಿನಿಧಿ ಇದ್ದಿದ್ದರೆ ಆ ರೀತಿಯಲ್ಲಿ ಆಗುತ್ತಿರಲಿಲ್ಲ' ಎಂದರು.

ಉಮರ್ ಖಾಲೀದ್ ಜಾಮೀನು ಅರ್ಜಿ 14ರಂದು ಕೋರ್ಟ್ ಆದೇಶ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಫೆಬ್ರುವರಿ 2020ರಲ್ಲಿ ನಡೆದಿದ್ದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಎನ್‌ಯುನ ಮಾಜಿ ವಿದ್ಯಾರ್ಥಿ ಉಮರ್ ಖಾಲೀದ್ ಜಾಮೀನು ಅರ್ಜಿಗೆ ಸಂಬಂಧಿಸಿದ ಆದೇಶವನ್ನು ದೆಹಲಿ ಕೋರ್ಟ್ ಮಾರ್ಚ್ 14ರಂದು ಪ್ರಕಟಿಸಲಿದೆ.

ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಅಮಿತಾಬ್ ರಾವತ್ ಅವರು, ಆದೇಶವನ್ನು ಕಾಯ್ದಿರಿಸಲಾಗಿದೆ ಎಂದು ಪ್ರಕಟಿಸಿದರು. ದೆಹಲಿ ಗಲಭೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಚು ನಡೆಸಿದ್ದ ಆರೋಪ ಖಾಲೀದ್ ಮೇಲಿದೆ.

ವಿಚಾರಣೆಯ ವೇಳೆ ನಮ್ಮ ವಿರುದ್ಧ ಹೊರಿಸಲಾದ ಆರೋಪ ಸಾಬೀತಿಗೆ ಪೂರಕ ಸಾಕ್ಷ್ಯ ಒದಗಿಸಲು ಪೊಲೀಸರು ವಿಫಲರಾಗಿದ್ದಾರೆ ಎಂದು ಆರೋಪಿ ಕೋರ್ಟ್ ಗಮನಕ್ಕೆ ತಂದರು. ಗಲಭೆಗೆ ಸಂಬಂಧಿಸಿದ ಖಾಲೀದ್ ಮತ್ತು ಇತರರ ವಿರುದ್ಧ ಯುಎಪಿಎ ಕಾಯ್ದೆಯಡಿ ಮೊಕದ್ದಮೆ ದಾಖಲಾಗಿದೆ. ಫೆಬ್ರುವರಿ 2020ರ ಗಲಭೆಯಲ್ಲಿ 53 ಜನರು ಸತ್ತಿದ್ದು, ಇತರೆ 700 ಮಂದಿ ಗಾಯಗೊಂಡಿದ್ದರು.

'ಯುದ್ಧದ ವೇಳೆ ರಾಜಕೀಯ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧ ಪೀಡಿತ ಉಕ್ರೇನ್‌ನಿಂದ ಭಾರತೀಯ ವಿದ್ಯಾರ್ಥಿಗಳನ್ನು ಕರೆತರುವ ಕೆಲಸ ಕೇಂದ್ರ ಸರ್ಕಾರ ಮಾಡುತ್ತಿದ್ದು, ಈ ಸಂದರ್ಭದಲ್ಲಿ ಕೇಂದ್ರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು ಬಿಟ್ಟು ಸಿದ್ದರಾಮಯ್ಯ ಮತ್ತು ಇತರ ಕಾಂಗ್ರೆಸ್ ನಾಯಕರು ರಾಜಕಾರಣ ಮಾಡುತ್ತಿದ್ದಾರೆ ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಹರಿಹಾಯ್ದಿದ್ದಾರೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ಈಗಾಗಲೇ ಉಕ್ರೇನ್‌ನಿಂದ 3 ಸಾವಿರಕ್ಕೂ ಹೆಚ್ಚು ಜನರನ್ನು ಕರೆ ತರಲಾಗಿದೆ. ಹಗಲು–ರಾತ್ರಿ ಎನ್ನದೇ ವಿದ್ಯಾರ್ಥಿಗಳನ್ನು ರಕ್ಷಿಸಿ ಕರೆ ತರುವ ಕೆಲಸವನ್ನು ನಿರಂತರವಾಗಿ ಕೇಂದ್ರ ಸರ್ಕಾರ ಮಾಡುತ್ತಿದೆ ಎಂದರು.

'ಭೀಕರ ಯುದ್ಧ ಭೂಮಿಯಿಂದ ನಮ್ಮವರನ್ನು ರಕ್ಷಿಸಿ ಕರೆ ತರುವುದು ಸುಲಭದ ಕೆಲಸವಲ್ಲ. ಹಾದಿ–ಬೀದಿಯಲ್ಲಿ ಕೂತು ಬಾಯಿಗೆ ಬಂದಂತೆ ಮಾತನಾಡುವುದಕ್ಕಿಂತ ರಚನಾತ್ಮಕ ಸಲಹೆಗಳನ್ನು ನೀಡುವುದು ಸೂಕ್ತ. ಇಂತಹ ವಿಷಯದಲ್ಲಿ ರಾಜಕಾರಣ ಮಾಡುವುದು ಕ್ಷುಲ್ಲಕವಾಗಿ ಮಾತನಾಡುವುದು ಯಾರಿಗೂ ಶೋಭೆ ತರುವುದಿಲ್ಲ. ಯಾವುದೇ ಪ್ರಯೋಜನ ಆಗುವುದಿಲ್ಲ' ಎಂದು ಅವರು ಹೇಳಿದರು.

ಪ್ರಗತಿಯ ಭವಿಷ್ಯ ಬರೆಯಲಿದ್ದಾರಾ ಸಿ.ಎಂ?

ಒಂದನೇ ಪುಟದಿಂದ

ಪತರಗುಟ್ಟಿ ಹೋಗಿರುವ ಕೃಷಿ, ನೀರಾವರಿ, ಗ್ರಾಮೀಣಾಭಿವೃದ್ಧಿ, ಮೂಲಸೌಕರ್ಯ ಕ್ಷೇತ್ರಗಳಿಗೆ ಒತ್ತು ನೀಡಬೇಕಾದ ತುರ್ತು ಕೂಡ ಮುಖ್ಯಮಂತ್ರಿ ಮುಂದಿದೆ. ಶಿಕ್ಷಣ, ಆರೋಗ್ಯ, ಮಹಿಳೆ, ಕಾರ್ಮಿಕ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಜತೆಗೆ, ಪರಿಶಿಷ್ಟ ಹಾಗೂ ಹಿಂದುಳಿದ ಸಮುದಾಯದವರು ಮತ್ತು ರೈತರ ಮನ ಗೆಲ್ಲುವ ಘೋಷಣೆಗಳನ್ನು ನೀಡಬೇಕಾದ ಒತ್ತಡವೂ ಇದೆ.

ದೊಡ್ಡ ಸಂಖ್ಯೆಯಲ್ಲಿರುವ ಸರ್ಕಾರಿ ನೌಕರರನ್ನು ಒಲಿಸಿಕೊಳ್ಳಲು ವೇತನ ಮತ್ತು ಭತ್ಯೆ ಪರಿಷ್ಕರಣೆಗೆ ಅಧಿಕಾರಿಗಳ ವೇತನ ಸಮಿತಿ ಅಥವಾ ಆಯೋಗ ರಚಿಸುವ ಘೋಷಣೆ ಮಾಡುವ ಸಾಧ್ಯತೆ ಇದೆ.

ವಿವಿಧ ಸಮುದಾಯಗಳ ಮಠಾಧೀಶರು, ಜಾತಿ ಸಂಘಟನೆಗಳು ತಮಗೆ ಹೆಚ್ಚಿನ ಅನುದಾನ ನೀಡುವಂತೆ ಬೇಡಿಕೆ ಮಂಡಿಸಿದ್ದಾರೆ. ಒಂದು ವರ್ಷದ ಬಳಿಕ ಚುನಾವಣೆ ಎದುರಿಸಬೇಕಿದ್ದು, ಜಾತಿ–ಧರ್ಮದ ಮತಗಳನ್ನು 'ವಿಶ್ವಾಸ'ಕ್ಕೆ ತೆಗೆದುಕೊಳ್ಳಬೇಕಾದ ಇಕ್ಕಟ್ಟು ಕೂಡ ಇದೆ. ಜುಲೈನಲ್ಲಿ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ ಬೊಮ್ಮಾಯಿ, ಆ ಬಳಿಕ ವಿಧಾನಮಂಡಲದ ಮೂರು ಅಧಿವೇಶನಗಳನ್ನು ಎದುರಿಸಿದ್ದಾರೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

‘ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರ ಬಗ್ಗೆ ನಮಗೆ ಸಹಾನುಭೂತಿ ಇದೆ. ಇದರಲ್ಲಿ ನ್ಯಾಯಾಲಯ ಏನು ಮಾಡಬಹುದೋ ಅದನ್ನೆಲ್ಲವನ್ನೂ ಮಾಡಲಿದೆ’

ಯುದ್ಧ ನಿಲ್ಲಿಸಲು ಪುಟಿನ್‌ಗೆ ಆದೇಶಿಸಲು ಸಾಧ್ಯವೇ?

ನವದೆಹಲಿ (ಪಿಟಿಐ): ‘ಯುದ್ಧ ನಿಲ್ಲಿಸುವಂತೆ ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ನಾವು ಆದೇಶ ನೀಡಲು ಸಾಧ್ಯವೇ?’

– ಇದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ ಅವರು, ತಮ್ಮನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಶ್ನಿಸಿದವರಿಗೆ ನೀಡಿದ ಉತ್ತರ.

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯ ವಿದ್ಯಾರ್ಥಿಗಳ ಸ್ಥಳಾಂತರ ಪ್ರಕ್ರಿಯೆ ಕುರಿತಂತೆ ಸಲ್ಲಿಸಲಾಗಿದ್ದ ತುರ್ತು ಅರ್ಜಿಯ ವಿಚಾರಣೆ ನಡೆಸಿದ ಅವರು ‘ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ಕರೆತರಲು ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿ ಸಾಮಾಜಿಕ ಮಾಧ್ಯಮದಲ್ಲಿ ಕೆಲವರು ಹಾಕಿರುವ ಪೋಸ್ಟ್ ಅನ್ನು ಪ್ರಸ್ತಾಪಿಸಿದರು.

ಎನ್‌.ವಿ. ರಮಣ

‘ಸಿಜೆಐ ಏನು ಮಾಡುತ್ತಿದ್ದಾರೆ? ಎಂದು ಪ್ರಶ್ನಿಸಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿರುವುದನ್ನು ನಾನು ಗಮನಿಸಿದ್ದೇನೆ. ಯುದ್ಧ ನಿಲ್ಲಿಸುವಂತೆ ರಷ್ಯಾ ಅಧ್ಯಕ್ಷರಿಗೆ ನಾನು ನಿರ್ದೇಶನ ಕೊಡಬಹುದೇ?’ ಎಂದು ಮುಖ್ಯ ನ್ಯಾಯಮೂರ್ತಿಗಳು ಹೇಳಿದರು.

ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳುವಂತೆ ಪಾತೀಮಾ ಅಹನಾ ಅವರು ಸಲ್ಲಿಸಿರುವ ಅರ್ಜಿ ಆಲಿಸಿದ, ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ, ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಮುಖ್ಯ ನ್ಯಾಯಮೂರ್ತಿಯವರ ನೇತೃತ್ವದ ಪೀಠವು, ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರಲು ತಮ್ಮ ಅಧಿಕಾರ ಬಳಸುವಂತೆ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರಿಗೆ ನಿರ್ದೇಶನ ನೀಡಿತು.

‘ಇಂತಹ ಒಂದು ಸಾವಿರ ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ಕೆಲವರು ವಾಪಸ್ ಬಂದಿದ್ದಾರೆ. ನಾವು ಇಲ್ಲ ಎಂದು ಹೇಳಲಾಗದು. ಇದಕ್ಕಾಗಿ ಪ್ರಧಾನಿಯವರು ಒಬ್ಬ ಸಚಿವರನ್ನು ಕಳುಹಿಸಿರುವುದು ಪ್ರಸಂಶನೀಯ. ದಯವಿಟ್ಟು ನಿಮ್ಮ ‘ಉತ್ತಮ ಕಚೇರಿ’ಗಳನ್ನು ಬಳಸಿ ಮತ್ತು ಏನಾದರೂ ಮಾಡಿ’ ಎಂದು ಪೀಠವು ಅಟಾರ್ನಿ ಜನರಲ್ ಅವರಲ್ಲಿ ಮನವಿ ಮಾಡಿತು.

ಉಕ್ರೇನ್ ಬಿಕ್ಕಟ್ಟು: ಭಾರತಕ್ಕೆ ಅಮೆರಿಕ ಸಲಹೆ

ರಷ್ಯಾದ ಜತೆ ಅಂತರವಿರಲಿ

ನವದೆಹಲಿ (ರಾಯಿಟರ್ಸ್): ಉಕ್ರೇನ್ ಮೇಲೆ ಆಕ್ರಮಣ ಮಾಡಿರುವ ರಷ್ಯಾದೊಂದಿಗೆ ಅಂತರ ಕಾಯ್ದುಕೊಳ್ಳುವಂತೆ ಅಮೆರಿಕವು ಭಾರತಕ್ಕೆ ಸಲಹೆ ನೀಡಿದೆ. ಆದರೆ ಇದಕ್ಕೆ ಭಾರತದ ಕಡೆಯಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ರಷ್ಯಾದ ಬ್ಯಾಂಕ್‌ಗಳ ಮೇಲೆ ಅಮೆರಿಕ ನಿರ್ಬಂಧ ಹೇರಿದೆ. ಇದು ರಷ್ಯಾದೊಂದಿಗೆ ಶಸ್ತ್ರಾಸ್ತ್ರಗಳ ಖರೀದಿಸುವ ಹಲವು ದೇಶಗಳಿಗೆ ಕಷ್ಟಕರವಾಗಿ ಪರಿಣಮಿಸಲಿದೆ ಎಂದು ಅಮೆರಿಕ ತಿಳಿಸಿದೆ. ರಷ್ಯಾವು ಭಾರತಕ್ಕೆ ಶಸ್ತ್ರಾಸ್ತ್ರಗಳನ್ನು ಪೂರೈಕೆ ಮಾಡುವ ಪ್ರಮುಖ ದೇಶವಾಗಿದೆ.

ರಷ್ಯಾದಿಂದ ಎಸ್– 400 ಕ್ಷಿಪಣಿ ರಕ್ಷಣಾ ವ್ಯವಸ್ಥೆ ಪಡೆಯುವ ಬಗ್ಗೆ 5 ಶತಕೋಟಿ ಡಾಲರ್ ಮೊತ್ತದ ಒಪ್ಪಂದಕ್ಕೆ 2018ರ ಅಕ್ಟೋಬರ್ ತಿಂಗಳಲ್ಲಿ ಅಮೆರಿಕದ ವಿರೋಧದ ನಡುವೆಯೂ ಭಾರತ ಸಹಿ ಹಾಕಿತ್ತು.

‘ಈಗ ರಷ್ಯಾದ ಬ್ಯಾಂಕ್‌ಗಳ ಮೇಲೆ ಹೇರಿರುವ ಕಠಿಣ ನಿರ್ಬಂಧಗಳಿಂದಾಗಿ ಜಗತ್ತಿನ ಯಾವುದೇ ದೇಶವು ರಷ್ಯಾದಿಂದ ಪ್ರಮುಖ ಶಸ್ತ್ರಾಸ್ತ್ರಗಳನ್ನು ಖರೀದಿಸುವುದು ತುಂಬಾ ಕಷ್ಟಕರವಾಗಿದೆ’ ಎಂದು ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ (ದಕ್ಷಿಣ ಏಷ್ಯಾ) ಹಿರಿಯ ಅಧಿಕಾರಿ ಡೊನಾಲ್ಡ್ ಲು, ಸೆನೆಟ್‌ನ ಉಪ ಸಮಿತಿಗೆ ತಿಳಿಸಿದ್ದಾರೆ.

ಈ ನಿರ್ಬಂಧಗಳಿಂದ ಭಾರತಕ್ಕೆ ವಿನಾಯಿತಿ ಸಿಗುತ್ತದೆಯೇ ಎಂಬುದು ನಿರ್ಧಾರವಾಗಿಲ್ಲ ಎಂದು ಅವರು ಹೇಳಿದ್ದಾರೆ.

ರಷ್ಯಾದ ನಡೆಯನ್ನು ಸಾಮೂಹಿಕವಾಗಿ ಖಂಡಿಸುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಿಕೆಯ ಪ್ರಾಮುಖ್ಯತೆ ಕುರಿತು ಅಧ್ಯಕ್ಷ ಜೋ ಬೈಡನ್ ಆಡಳಿತವು ಭಾರತದೊಂದಿಗೆ ನಿರಂತರ ಮಾತುಕತೆಯಲ್ಲಿ ತೊಡಗಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಭಾರತವು ನಮ್ಮ ಪ್ರಮುಖ ಭದ್ರತಾ ಪಾಲುದಾರ. ನಾವು ಅದನ್ನು ಗೌರವಿಸುತ್ತೇವೆ. ಆದರೆ, ಇದೀಗ ರಷ್ಯಾ ತೀವ್ರ ಟೀಕೆಗಳನ್ನು ಎದುರಿಸುತ್ತಿದೆ. ಇಂಥ ಸಂದರ್ಭದಲ್ಲಿ ಭಾರತ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಭಾವಿಸುತ್ತೇನೆ. ಭಾರತವು ರಷ್ಯಾದಿಂದ ದೂರ ಸರಿಯಲು ಇದು ಸಕಾಲ’ ಎಂದು ಅವರು ತಿಳಿಸಿದ್ದಾರೆ.

ಭಾರತವು 2011ರಿಂದಲೇ ರಷ್ಯಾದಿಂದ ರಕ್ಷಣಾ ಉಪಕರಣಗಳ ಆಮದು ಶೇ 53ರಷ್ಟು ಕಡಿಮೆಗೊಳಿಸಿದೆ. ಅಮೆರಿಕದೊಂದಿಗೆ ರಕ್ಷಣಾ ಉಪಕರಣಗಳ ಖರೀದಿಯನ್ನು ಹೆಚ್ಚಿಸಿದೆ.

‘ಕ್ಯಾಸ್ಟಾ’ ನಿರ್ಬಂಧದಿಂದ ವಿನಾಯಿತಿ?

ವಾಷಿಂಗ್ಟನ್: ರಷ್ಯಾದಿಂದ ಎಸ್‌- 400 ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಖರೀದಿಸಲಿರುವ ಭಾರತಕ್ಕೆ ‘ಕ್ಯಾಸ್ಟಾ’ ಕಾನೂನಿನಡಿ ನಿರ್ಬಂಧಗಳನ್ನು ಅನ್ವಯಿಸಬೇಕೆ ಅಥವಾ ವಿನಾಯಿತಿ ನೀಡಬೇಕೆ ಎಂಬುದನ್ನು ಅಮೆರಿಕದ ಅಧ್ಯಕ್ಷ ಜೋ ಬೈಡನ್ ನಿರ್ಧರಿಸುತ್ತಾರೆ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ಸೆನೆಟ್‌ಗೆ ತಿಳಿಸಿದ್ದಾರೆ.

ಇರಾನ್, ಉತ್ತರ ಕೊರಿಯಾ ಅಥವಾ ರಷ್ಯಾದೊಂದಿಗೆ ಮಹತ್ವದ ವಹಿವಾಟು ಹೊಂದಿರುವ ಯಾವುದೇ ದೇಶದ ಮೇಲೆ ನಿರ್ಬಂಧಗಳನ್ನು ವಿಧಿಸಲು ಅಮೆರಿಕ ‘ಕ್ಯಾಸ್ಟಾ’ ಕಾನೂನಿನ ಅಸ್ತ್ರ ಬಳಸಲಿದೆ.

ರಷ್ಯಾ 2014ರಲ್ಲಿ ಕ್ರಿಮಿಯಾ ಸ್ವಾಧೀನಪಡಿಸಿಕೊಂಡ ಬಳಿಕ ಹಾಗೂ 2016ರ ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಹಸ್ತಕ್ಷೇಪ ಮಾಡಿದ್ದಕ್ಕಾಗಿ ಅಮೆರಿಕ ಕಠಿಣವಾದ ‘ಕ್ಯಾಸ್ಟಾ’ ಕಾಯ್ದೆ ಜಾರಿಗೆ ತಂದಿತು. ರಷ್ಯಾದೊಂದಿಗೆ ಪ್ರಮುಖ ಶಸ್ತ್ರಾಸ್ತ್ರಗಳನ್ನು ಖರೀದಿಸುವ ದೇಶಗಳ ಮೇಲೆ ನಿರ್ಬಂಧಗಳನ್ನು ವಿಧಿಸಲು ಈ ಕಾಯ್ದೆ ಆಂತರಿಕವಾಗಿ ಅವಕಾಶ ಕಲ್ಪಿಸುತ್ತದೆ.

ದಿನದ ಬೆಳವಣಿಗೆಗಳು

- ರಷ್ಯಾದ ಸೇನಾ ಕಾರ್ಯಾಚರಣೆ 8ನೇ ದಿನಕ್ಕೆ ಕಾಲಿಟ್ಟಿದೆ.
- ರಷ್ಯಾ ಪಡೆಗಳು ಜನನಿಬಿಡ ಪ್ರದೇಶಗಳನ್ನು ಗುರಿಯಾಗಿಸಿ ನಡೆಸಿರುವ ಶೆಲ್ ದಾಳಿಗೆ ಹಾರ್ಕಿವ್‌ನಲ್ಲಿ 24 ತಾಸುಗಳಲ್ಲಿ 34 ನಾಗರಿಕರ ಸಾವು
- ಆಕ್ರಮಣ ಶುರುವಾದ ಏಳು ದಿನಗಳಲ್ಲಿ 1.39 ಲಕ್ಷ ಉಕ್ರೇನ್ ನಿರಾಶ್ರಿತರು ನೆರೆಯ ರಾಷ್ಟ್ರ ರೊಮೇನಿಯಾದಲ್ಲಿ ಆಶ್ರಯ ಪಡೆದಿದ್ದಾರೆ
- ಉಕ್ರೇನ್ ಮೇಲಿನ ಆಕ್ರಮಣದ ಸುದ್ದಿಗಳು ಜನರಿಗೆ ತಲುಪದಂತೆ ರಷ್ಯಾ ಮಾಧ್ಯಮಗಳಿಗೆ ನಿರ್ಬಂಧ ಹೇರಿದೆ, ಮಾಧ್ಯಮ ಸ್ವಾತಂತ್ರ ಮತ್ತು ಸತ್ಯದ ಮೇಲೂ ಯುದ್ಧ ಸಾರಿದೆ– ಅಮೆರಿಕ ಆರೋಪ
- ಆಕ್ರಮಣ ವಿರೋಧಿಸಿ ರಷ್ಯಾ ಮತ್ತು ಬೆಲರೂಸ್ ಜತೆಗಿನ ತನ್ನ ಎಲ್ಲ ಯೋಜನೆಗಳನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಿದ ವಿಶ್ವ ಬ್ಯಾಂಕ್
- ರಷ್ಯಾದ ಆಕ್ರಮಣ ಖಂಡಿಸುವ ಮತ್ತು ಉಕ್ರೇನ್‌ಲ್ಲಿರುವ ಎಲ್ಲ ಅಣು ಸ್ಥಾವರಗಳ ನಿಯಂತ್ರಣ ಸಾಧಿಸಲು ಅಂತರರಾಷ್ಟ್ರೀಯ ಅಣು ಶಕ್ತಿ ಏಜೆನ್ಸಿ (ಐಎಇಎ) ನಿರ್ಣಯ. ಈ ನಿರ್ಣಯದ ಪರವಾಗಿ 24 ರಾಷ್ಟ್ರಗಳಿಂದ ಮತ ಚಲಾವಣೆ. ರಷ್ಯಾ, ಚೀನಾ ವಿರುದ್ಧವಾಗಿ ಮತ ಚಲಾಯಿಸಿವೆ. ಭಾರತ, ಪಾಕಿಸ್ತಾನ, ದಕ್ಷಿಣ ಆಫ್ರಿಕಾ, ಸೆನೆಗಲ್, ವಿಯೆಟ್ನಾಂ ತಟಸ್ಥವಾಗಿ ಉಳಿದಿವೆ. ಮೆಕ್ಸಿಕೊ ಮತ್ತು ಬುರುಂಡಿ ಗೈರು.
- ನಿರ್ಬಂಧಗಳಿಗೆ ಪ್ರತೀಕಾರವಾಗಿ ಅಮೆರಿಕಕ್ಕೆ ರಾಕೆಟ್ ಎಂಜಿನ್‌ಗಳನ್ನು ಪೂರೈಸದಿರಲು ನಿರ್ಧಾರ– ರಷ್ಯಾ ಬಾಹ್ಯಾಕಾಶ ಸಂಸ್ಥೆಯ ಮುಖ್ಯಸ್ಥ ಡಿಮಿಟ್ರಿ ರೋಗೋಜಿನ್ ಪ್ರಕಟ
- ರಷ್ಯಾ ಪಡೆಗಳ ವಿರುದ್ಧ ಉಕ್ರೇನ್ ಸೇನಾ ಪಡೆಗಳು ಪ್ರತಿದಾಳಿ ನಡೆಸುತ್ತಿವೆ, ನಮ್ಮ ದೇಶವನ್ನು ನಾವು ಪುನರ್ ನಿರ್ಮಿಸುತ್ತೇವೆ– ವೊಲೊಡಿಮಿರ್ ಝೆಲೆನ್‌ಸ್ಕಿ
- ಉಕ್ರೇನ್‌ನಲ್ಲಿ ತಕ್ಷಣವೇ ಕದನ ವಿರಾಮ ಘೋಷಿಸುವಂತೆ ರಷ್ಯಾವನ್ನು ಒತ್ತಾಯಿಸಿದ ಐರೋಪ್ಯ ಒಕ್ಕೂಟ


ಯುದ್ಧಪೀಡಿತ ಉಕ್ರೇನ್‌ನಿಂದ ಸ್ಥಳಾಂತರಗೊಂಡ ಭಾರತೀಯರು ದೇಶಕ್ಕೆ ಮರಳಲು ಗುರುವಾರ ಬುಕಾರೆಸ್ಟ್ ನಲ್ಲಿ ವಾಯುಪಡೆಯ ಸಿ–17 ಗ್ಲೋಬ್‌ಮಾಸ್ಟರ್ ವಿಮಾನಕ್ಕೆ ಹತ್ತಿದರು – ಪಿಟಿಐ ಚಿತ್ರ

‘ಥರ್ಮೋಬಾರಿಕ್ ಶಸ್ತ್ರಾಸ್ತ್ರ ಬಳಕೆ’

ಟ್ಯಾಲಿನ್ (ರಾಯಿಟರ್ಸ್/ಪಿಟಿಐ): ‘ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಉಕ್ರೇನ್‌ನಲ್ಲಿ ಥರ್ಮೋಬಾರಿಕ್ ಅಸ್ತ್ರಗಳನ್ನು ನಿಯೋಜಿಸಿದ್ದಾರೆ. ರಷ್ಯಾ ಪಡೆಗಳು ಅವುಗಳನ್ನು ವ್ಯಾಪಕವಾಗಿ ಮತ್ತು ಉಕ್ರೇನ್ ಆಚೆಗೂ ಬಳಸಬಹುದೆಂಬ ಕಳವಳ ನಮ್ಮದು’ ಎಂದು ಬ್ರಿಟನ್ ರಕ್ಷಣಾ ಕಾರ್ಯದರ್ಶಿ ಬೆನ್ ವ್ಯಾಲೇಸ್ ಗುರುವಾರ ಆತಂಕ ವ್ಯಕ್ತಪಡಿಸಿದ್ದಾರೆ.

ಎಸ್ಟೋನಿಯಾಗೆ ಗುರುವಾರ ಭೇಟಿ ನೀಡಿದ ವೇಳೆ ಅವರು ಮಾತನಾಡಿದರು.

‘ಅವರು (ಪುಟಿನ್) ಎಷ್ಟು ದೂರ ಹೋಗಬಹುದು, ಅವರ ಅಂತಿಮ ಗುರಿ ಸಾಧಿಸಲು ಯಾವೆಲ್ಲ ಶಸ್ತ್ರಾಸ್ತ್ರಗಳನ್ನು ಬಳಸಲಿದ್ದಾರೆ ಎನ್ನುವುದು ತಿಳಿಯದು. ಉಕ್ರೇನ್ ಆಕ್ರಮಣಕ್ಕೆ ಅವರು ಭಾರೀ ಪ್ರಮಾಣದ ಫಿರಂಗಿಗಳನ್ನು ಬಳಸುತ್ತಿರುವುದನ್ನು ನೋಡಿದ್ದೇವೆ. ಥರ್ಮೋಬಾರಿಕ್ ಫಿರಂಗಿ ಶಸ್ತ್ರಾಸ್ತ್ರಗಳನ್ನೂ ಉಕ್ರೇನ್ ನೆಲದಲ್ಲಿ ನಿಯೋಜಿಸಿರುವುದನ್ನೂ ಕಾಣುತ್ತಿದ್ದೇವೆ. ಅವುಗಳ ಗುರಿ ಎಲ್ಲಿಯವರೆಗೆ ವಿಸ್ತರಿಸಲಿದೆಯೋ, ಏನೋ ಎನ್ನುವ ಚಿಂತೆ ನಮ್ಮದು’ ಎಂದು ವ್ಯಾಲೇಸ್ ಅವರು, ಪುಟಿನ್ ಸಾರಿರುವ ವಿಶೇಷ ಮಿಲಿಟರಿ ಕಾರ್ಯಾಚರಣೆ, ಉಕ್ರೇನ್ ಆಚೆಗೂ ಹರಡಬಹುದೆಂಬ ಅಪಾಯವನ್ನು ಸೂಚ್ಯವಾಗಿ ಹೇಳಿದರು.

ಕ್ರೌರ್ಯದ ಅಟ್ಟಹಾಸದ ಪ್ರತೀಕ (ಮೆಲ್ಬರ್ನ್ ವರದಿ): ಉಕ್ರೇನ್ ಸರ್ಕಾರ ಮತ್ತು ಮಾನವ ಹಕ್ಕುಗಳ ಸಂಘಟನೆಗಳು ಹೇಳಿರುವ ವರದಿಗಳ ಪ್ರಕಾರ ಉಕ್ರೇನ್‌ನಲ್ಲಿ ರಷ್ಯಾ ಥರ್ಮೋಬಾರಿಕ್ ಶಸ್ತ್ರಾಸ್ತ್ರಗಳು ಮತ್ತು ಕ್ಲಸ್ಟರ್ ಬಾಂಬ್‌ಗಳನ್ನು ಬಳಕೆಯಾಗಿದೆ.

‘ಇದು ನಿಜವೇ ಆಗಿದ್ದರೆ, ಕ್ರೌರ್ಯದ ಅಟ್ಟಹಾಸದ ಪ್ರತೀಕ. ಅದು ನಮ್ಮೆಲ್ಲರಿಗೂ ಎಚ್ಚರಿಕೆಯ ಗಂಟೆ’ ಎಂದು ಆಸ್ಟ್ರೇಲಿಯಾದ ಕ್ವೀನ್ಸ್‌ಲ್ಯಾಂಡ್ ಯುನಿವರ್ಸಿಟಿ ಕಳವಳ ವ್ಯಕ್ತಪಡಿಸಿದೆ.

ಥರ್ಮೋಬಾರಿಕ್ ಪರಮಾಣು ರಹಿತ ಅಸ್ತ್ರ. ‘ವ್ಯಾಕ್ಯೂಮ್ ಬಾಂಬ್’ ಎನ್ನುವ ಹೆಸರೂ ಇದೆ. ಸಾಂಪ್ರದಾಯಿಕ ಅಸ್ತ್ರಗಳಿಗಿಂತಲೂ ಹೆಚ್ಚು ಶಕ್ತಿಶಾಲಿ. ಈ ಬಾಂಬ್‌ಗಳು ಸ್ಫೋಟಗೊಂಡಾಗ ವಾತಾವರಣದಲ್ಲಿನ ಆಮ್ಲಜನಕವನ್ನು ಆಪೋಶನ ಮಾಡಿ, ಬಿದ್ದ ಜಾಗದಲ್ಲಿ ಬೆಂಕಿಯ ಜ್ವಾಲೆಯನ್ನೇ ಕಾರುತ್ತವೆ. ಈ ಬಾಂಬ್‌ಗಳು ಬಿದ್ದ ಜಾಗದ ಸುತ್ತಲೂ ಮನುಷ್ಯ ಸೇರಿ ಯಾವುದೇ ಜೀವಿ ಬದುಕುಳಿಯುವುದು ವಿರಳ.

ಇವು ಗಗನಚುಂಬಿ ಕಟ್ಟಡಗಳನ್ನು ಕ್ಷಣಾರ್ಧದಲ್ಲಿ ಭಸ್ಮ ಮಾಡುತ್ತವೆ. ಬಂಕರ್‌ಗಳು ಮತ್ತು ಸುರಂಗದೊಳಗಿನ ಸ್ಥಳಗಳನ್ನು ನಿಖರವಾಗಿ ಭೇದಿಸಬಲ್ಲವು.

ಉಕ್ರೇನ್‌ನಲ್ಲಿ 703 ಕನ್ನಡಿಗರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಉಕ್ರೇನ್‌ನಿಂದ ‘ಆಪರೇಷನ್ ಗಂಗಾ’ ಕಾರ್ಯಾಚರಣೆ ಮೂಲಕ ಗುರುವಾರ ಒಂದೇ ದಿನ ಕರ್ನಾಟಕದ 104 ವೈದ್ಯಕೀಯ ವಿದ್ಯಾರ್ಥಿಗಳು ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದಿಳಿದಿದ್ದಾರೆ.

ವಿದ್ಯಾರ್ಥಿಗಳನ್ನು ಕರ್ನಾಟಕ ರಾಜ್ಯ ವಿಕೋಪ ನಿರ್ವಹಣೆ ಪ್ರಾಧಿಕಾರದ ನೋಡಲ್ ಅಧಿಕಾರಿ ಮನೋಜ್ ರಾಜನ್ ಸ್ವಾಗತಿಸಿದರು.

‘ಪ್ರಜಾವಾಣಿ’ಯೊಂದಿಗೆ ಮಾತನಾಡಿ ಅವರು, ‘ಇನ್ನೂ 703 ಕನ್ನಡಿಗರು ಉಕ್ರೇನ್‌ನಲ್ಲಿ ಸಿಲುಕಿದ್ದಾರೆ. ಈಗಾಗಲೇ ಇವರಲ್ಲಿ 193 ಕನ್ನಡಿಗರು ಉಕ್ರೇನ್ ಗಡಿ ದಾಟಿ ಸುರಕ್ಷಿತವಾಗಿದ್ದಾರೆ. ಒಂದೇ ದಿನ ಇಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬೆಂಗಳೂರಿಗೆ ಬಂದಿರುವುದು ಸಂತಸ ತಂದಿದೆ’ ಎಂದರು.

ಉಕ್ರೇನ್‌ನಿಂದ ವಿಮಾನ ನಿಲ್ದಾಣಕ್ಕೆ ಬರುವ ವಿದ್ಯಾರ್ಥಿಗಳಿಗೆ ಸ್ವಂತ ಊರುಗಳಿಗೆ ತೆರಳಲು ಕೆಎಸ್‌ಆರ್‌ಟಿಸಿ ಸಂಸ್ಥೆಯು ಉಚಿತ ಬಸ್ ಸೇವೆ ಒದಗಿಸಿದೆ.

‘ಕೇಂದ್ರ ಸರ್ಕಾರದ ನಾಲ್ವರು ಸಚಿವರು ಉಕ್ರೇನ್‌ಗೆ ಹೋದ ನಂತರ ತ್ವರಿತಗತಿಯಲ್ಲಿ ವಿದ್ಯಾರ್ಥಿಗಳನ್ನು ರಕ್ಷಿಸಲು ಯೋಜನೆ ರೂಪಿಸಿದ್ದು, ಅದರ ಫಲವಾಗಿ ಭಾರತಕ್ಕೆ ವೇಗವಾಗಿ ಬಂದು ತಲುಪುವಂತಾಗಿದೆ’ ಎಂದು ಬಳ್ಳಾರಿಯ ವಿದ್ಯಾರ್ಥಿ ಸೈಯದ್ ಮಾಹಿತಿ ನೀಡಿದರು.

ಕೀವ್, ಹಾರ್ಕಿವ್‌ನಿಂದ ಮರಳಿದ ಮೊದಲ ತಂಡ

ಅಬ್ಬ... ಕೊನೆಗೂ ಬದುಕಿ ಬಂದೆವು!

ಪ್ರಜಾವಾಣಿ ವಾರ್ತೆ

ಲಕ್ಷ್ಮೀನಾರಾಯಣ

ನವದೆಹಲಿ: ‘ನಾವಿದ್ದ ಕೋಣೆಯಿಂದ ಅನತಿ ದೂರದಲ್ಲೇ ಕ್ಷಿಪಣಿಗಳು, ಶೆಲ್‌ಗಳು ಬೀಳುತ್ತಿದ್ದವು. ಉಕ್ರೇನ್– ರಷ್ಯಾ ಯೋಧರು ಪರಸ್ಪರ ಹಾರಿಸುತ್ತಿದ್ದ ಗುಂಡುಗಳ ಸದ್ದು ಕಿವಿಗೆ ಅಪ್ಪಳಿಸುತ್ತಿತ್ತು. ಆದರೂ, ನನಗೆ ಬದುಕಿ ಬರುವ ವಿಶ್ವಾಸ ಇತ್ತು. ಅಬ್ಬ, ಕೊನೆಗೂ ಬದುಕಿಬಂದೆವು’

ಕಳೆದ ನಾಲ್ಕು ವರ್ಷಗಳಿಂದ ಉಕ್ರೇನ್‌ನ ಹಾರ್ಕಿವ್ ನಗರದಲ್ಲಿ ವೈದ್ಯಕೀಯ ಪದವಿಯ ವ್ಯಾಸಂಗ ಮಾಡುತ್ತಿರುವ ರಾಯಚೂರು ಜಿಲ್ಲೆಯ ಸಿಂಧನೂರಿನ ಟಿ.ಲಕ್ಷ್ಮೀನಾರಾಯಣ ಗುರುವಾರ ನವದೆಹಲಿಗೆ ಬಂದಿಳಿದಿದ್ದು, ‘ಪ್ರಜಾವಾಣಿ’ ಜೊತೆ ಹಂಚಿಕೊಂಡ ಯುದ್ಧಭೂಮಿಯ ಅನುಭವ ಇದು.

‘4 ದಿನ ಮೆಟ್ರೋ ನಿಲ್ದಾಣದಲ್ಲಿನ ನೆಲಮಾಳಿಗೆಯಲ್ಲಿ ಇದ್ದೆ. ಅಲ್ಲೇ ಇದ್ದರೆ ಜೀವ ಉಳಿಯಲಿಕ್ಕಿಲ್ಲ ಅನ್ನಿಸಿತು. ಹಾಸ್ಟೆಲ್ ಕೊಠಡಿಗೇ ಮರಳಿದೆ. ಆಗ ಉಕ್ರೇನಿನ ಪಶ್ಚಿಮದ ಗಡಿಯತ್ತ ಹೊರಟು ನಿಂತ ಸ್ನೇಹಿತರ ತಂಡ ಎದುರಾಯಿತು. ಜೀವ ಭಯ ಬಿಟ್ಟು, ಅವರೊಂದಿಗೇ ರೈಲು ನಿಲ್ದಾಣ ತಲುಪಿದೆ. ರೈಲು ಹತ್ತುವವರೆಗೂ ಭರವಸೆ ಇರಲಿಲ್ಲ. ಕಾಲಿಡಲೂ ಜಾಗವಿಲ್ಲದಂತೆ ತುಂಬಿದ್ದ ರೈಲಿನೊಳಗೆ ತೂರಿಕೊಂಡಿದ್ದೇ ತಡ, ಭಾರತದ ದಾರಿ ಸುಲಭವಾಗುತ್ತ ಸಾಗಿತು’ ಎಂದು ಅವರು ಹೇಳಿದಾಗ, ಯುದ್ಧಭೂಮಿಯಲ್ಲಿ ಎದುರಾದ ಆತಂಕ ಇನ್ನೂ ಕಂಡುಬಂತು.

‘ಹಾರ್ಕಿವ್‌ನಿಂದ ಲೀವ್ ನಗರಕ್ಕೆ ಸತತ 22 ಗಂಟೆ ಪ್ರಯಾಣ (ಅಲ್ಲಿಗೆ ಸಾಮಾನ್ಯ ಪ್ರಯಾಣದ ಅವಧಿ 12 ಗಂಟೆ). ರೈಲಿನಲ್ಲಿ ಆಚೀಚೆ ಕೈ-ಕಾಲು ಚಾಚಲೂ ಆಗುತ್ತಿರಲಿಲ್ಲ. ಅಷ್ಟೊಂದು ನೂಕುನುಗ್ಗಲು. ಒಂಟಿಕಾಲಲ್ಲಿ ನಿಂತುಕೊಂಡೇ ಸಾಗಿದೆವು. ಲೀವ್‌ನಿಂದ ಪೋಲೆಂಡ್‌ನ ಗಡಿ ಕೇವಲ 30 ಕಿ.ಮೀ. ಇದ್ದರೂ ಅಲ್ಲಿ ನಮಗೆ ಪ್ರವೇಶ ದೊರೆಯುವುದಿಲ್ಲ ಎಂಬ ಮಾಹಿತಿ ಸಿಕ್ಕಿದ್ದರಿಂದ ಉಕ್ರೇನ್– ಹಂಗರಿ ಗಡಿಯ ಚೋಪ್ ನಗರದತ್ತ ಹೊರಟಿದ್ದ ಬಸ್ ಹಿಡಿದು, ಹತ್ತು ಪಟ್ಟು ಹೆಚ್ಚಿನ ದರ ನೀಡಿ 4 ಗಂಟೆ ಪ್ರಯಾಣ ಮಾಡಿದೆವು. ಅಲ್ಲಿ 5 ಗಂಟೆ ಸರದಿಯಲ್ಲಿ ನಿಂತು ರೈಲಿನ ಟಿಕೆಟ್ ಪಡೆದು ಹಂಗರಿಯ ಜೊಹಾನಿ ನಗರದ ರೈಲು ಹಿಡಿದಾಗ ನಿಟ್ಟುಸಿರು ಬಿಟ್ಟೆ. ಮುಂದೆ ಬುಡಾಪೆಸ್ಟ್‌ಗೆ ರೈಲಿನಲ್ಲಿ ಮತ್ತೆ 6 ಗಂಟೆ ಪ್ರಯಾಣ. ಬುಡಾಪೆಸ್ಟ್‌ನಿಂದ ಭಾರತೀಯ ವಾಯುಪಡೆಯ ವಿಶೇಷ ವಿಮಾನದ ಮೂಲಕ ನವದೆಹಲಿಗೆ ಬಂದೆ’ ಎಂದು ಅವರು ವಿವರಿಸಿದರು.

‘ಹಾರ್ಕಿವ್ ನಗರದಲ್ಲಿ ಮಂಗಳವಾರ ರಷ್ಯಾದ ಶೆಲ್ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ನವೀನ್ ಗ್ಯಾನಗೌಡರ್ ನನ್ನ ಸ್ನೇಹಿತನಾಗಿದ್ದ. ನಾವು ಆಗಾಗ ಭೇಟಿ ಆಗಿ ಹರಟೆ ಹೊಡೆದಿದ್ದೇವೆ. ತುಂಬಾ ಒಳ್ಳೆಯ ಹುಡುಗ. ಆತನ ಸಾವಿನ ಸುದ್ದಿ ಕೇಳಿ ಬಹಳ ದುಃಖವಾಯಿತು’ ಎಂದು ಲಕ್ಷ್ಮೀನಾರಾಯಣ ತೇವಗೊಂಡ ಕಣ್ಣನ್ನು ಒರೆಸಿಕೊಂಡರು.

ದಡ ಸೇರಿದರೆ ರಕ್ಷಣೆ: ಕೀವ್‌ನಲ್ಲಿನ ವಿಭಿನ್ನ ಅನುಭವ

ಮಧುಮೋಹನ್

ಪೋಲೆಂಡ್ ಹಾಗೂ ಟರ್ಕಿಯ ಇಸ್ತಾನ್‌ಬುಲ್ ಮಾರ್ಗವಾಗಿ ಗುರುವಾರ ಮಧ್ಯಾಹ್ನ ನವದೆಹಲಿ ತಲುಪಿದ 40 ವಿದ್ಯಾರ್ಥಿಗಳ ಮತ್ತೊಂದು ತಂಡದೊಂದಿಗಿದ್ದ ಬೆಂಗಳೂರಿನ ಪದ್ಮನಾಭನಗರದ ಸಿ.ಎ. ಮಧುಮೋಹನ್ ಅವರಿಂದ ಕೇಳಿದ್ದು ಕೀವ್ ನಗರದ ವಿಭಿನ್ನ ಅನುಭವ.

‘ನಮಗಂತೂ ಸಮುದ್ರದ ನೀರಿನಲ್ಲಿ ಮುಳುಗುತ್ತಿದ್ದ ಅನುಭವವಾಯಿತು. ಈಜಿ ದಡಕ್ಕೆ ಬಂದರೆ ರಕ್ಷಿಸುತ್ತೇವೆ ಎಂದು ರಾಯಭಾರಿ ಕಚೇರಿಯವರು ಹೇಳುತ್ತಾರೆ. ಈಜು ಬಲ್ಲವರು ಕಷ್ಟಪಟ್ಟು ಹೇಗೋ ದಡ ಸೇರುತ್ತಾರೆ. ಈಜು ಗೊತ್ತಿಲ್ಲದವರ ಗತಿ ಏನು, ಎಂಬ ಪ್ರಶ್ನೆ ನಮ್ಮನ್ನು ಕಾಡಿತು. ದಡಕ್ಕೆ ಬರುವುದು ಅಂದರೆ ಉಕ್ರೇನ್ ಬಿಟ್ಟು ಹೊರ ಬರುವುದು. ಒಮ್ಮೆ ಗಡಿ ಸೇರಿದರೆ ಜೀವ ಉಳಿದಂತೆ. ಆದರೆ, ದಡ ಸೇರುವವರೆಗೂ ಜೀವವನ್ನು ಕೈಲಿ ಹಿಡಿದೇ ಸಾಗಬೇಕಾಯಿತು’ ಎಂದು ಅವರು ಸತತ ಐದು ದಿನಗಳ ‘ಪ್ರಯಾಸ ಕಥನ’ವನ್ನು ಬಿಚ್ಚಿಟ್ಟರು.

‘ಗುಂಡಿನ ಮೊರೆತ, ಕ್ಷಿಪಣಿಗಳ ಆರ್ಭಟ, ಬೆಚ್ಚಿಬೀಳಿಸುತ್ತಿದ್ದ ಶೆಲ್‌ಗಳ ಸದ್ದು ಸತತವಾಗಿ ಕೇಳಿತು. ಆದರೆ, ಉಕ್ರೇನ್ ಮತ್ತು ಭಾರತೀಯ ಸ್ನೇಹಿತರು ನಾವು ದಡ ಸೇರಲು ನೆರವಾದರು. ನಮಗೆ ದಾರಿ ತೋರಿದರು. ಆಹಾರ, ನೀರು ಒದಗಿಸಿದರು. ನಮ್ಮೊಂದಿಗೆ ಕಲಿಯುತ್ತಿದ್ದ ಉಕ್ರೇನ್‌ನ ಅನೇಕ ಗೆಳೆಯರು ದಿಢೀರ್ ಯೋಧರಾಗಿ ಬದಲಾಗಿದ್ದು, ಕೈಯಲ್ಲಿ ಬಂದೂಕು ಹಿಡಿದು ಹೋರಾಡುತ್ತಿದ್ದಾರೆ. ಅವರಲ್ಲಿ ಎಷ್ಟು ಜನ ಬದುಕಿ ಉಳಿಯುತ್ತಾರೋ ಗೊತ್ತಿಲ್ಲ’ ಎಂದಾಗ ಮುಖದಲ್ಲಿ ನೋವಿನ ಗೆರೆಗಳು ಮೂಡಿದವು.

‘ಇರಾನ್ ಮತ್ತಿತರ ದೇಶಗಳ ರಾಯಭಾರಿ ಕಚೇರಿಯವರು ನೇರವಾಗಿ ಕಾಲೇಜಿಗೇ ಬಂದು ತಮ್ಮ ದೇಶದ ವಿದ್ಯಾರ್ಥಿಗಳನ್ನು ಕರೆದೊಯ್ದರು. ಭಾರತದ ಅಧಿಕಾರಿಗಳೂ ಆ ಕ್ರಮವನ್ನೇ ಕೈಗೊಳ್ಳಬಹುದಾಗಿತ್ತು. ಆದರೆ, ಸಾವಿರಾರು ಸಂಖ್ಯೆಯಲ್ಲಿರುವ ನಮ್ಮನ್ನು ಕರೆತರುವುದು ಸರ್ಕಾರಕ್ಕೂ ಸುಲಭವಾಗಿರಲಿಲ್ಲ. ರಷ್ಯಾದ ಮಿತ್ರರಾಷ್ಟ್ರವಾದ ಭಾರತ ಯುದ್ಧ ಬಗ್ಗೆ ತಟಸ್ಥ ನಿಲುವು ತಾಳಿದ್ದೇ ಗಡಿಯಲ್ಲಿ ನಮಗೆ ತೊಂದರೆ ಆಗಲು ಕಾರಣ’ ಎಂದು ಅವರು ತಿಳಿಸಿದರು.

ವಿ.ಗಿರೀಶ್

‘ನಾವು ಪ್ರಾಣ ಉಳಿಸಿಕೊಳ್ಳಲು ಹಾರ್ಕಿವ್ ರೈಲು ನಿಲ್ದಾಣದತ್ತ ಕ್ಯಾಬ್‌ನಲ್ಲಿ ಹೊರಟಾಗ ಪಕ್ಕದ ರಸ್ತೆಯಲ್ಲೇ ಕ್ಷಿಪಣಿಯೊಂದು ಅಪ್ಪಳಿಸಿತು. ಅದೃಷ್ಟವಶಾತ್ ಅದು ಸ್ಫೋಟಿಸಲಿಲ್ಲ. ಒಂದೊಮ್ಮೆ ಸ್ಫೋಟಿಸಿದ್ದರೆ ನಮ್ಮ ದೇಹ ಛಿದ್ರಛಿದ್ರವಾಗುತ್ತಿತ್ತು’ ಎಂದು ಬೆಂಗಳೂರಿನ ವಿ.ಗಿರೀಶ್ ಭಯಾನಕ ಅನುಭವ ಬಿಚ್ಚಿಟ್ಟರು.

‘ಶವ ತರುವ ಜಾಗದಲ್ಲಿ 8 ವಿದ್ಯಾರ್ಥಿಗಳನ್ನು ತರಬಹುದು’

ಪ್ರಜಾವಾಣಿ ವಾರ್ತೆ

ಅರವಿಂದ ಬೆಲ್ಲದ

ಧಾರವಾಡ: ‘ಉಕ್ರೇನ್‌ನಲ್ಲಿ ನಡೆದ ರಷ್ಯಾ ದಾಳಿಯಲ್ಲಿ ಮೃತಪಟ್ಟ ವಿದ್ಯಾರ್ಥಿಯ ದೇಹ ತರಲು ವಿಮಾನದಲ್ಲಿ ಸಾಕಷ್ಟು ಸ್ಥಳಾವಕಾಶ ಬೇಕು. ಆ ಜಾಗದಲ್ಲಿ ಎಂಟು ಜನ ಜೀವಂತ ವಿದ್ಯಾರ್ಥಿಗಳನ್ನು ತರಬಹುದು’ ಎಂದು ಶಾಸಕ ಅರವಿಂದ ಬೆಲ್ಲದ ಹೇಳಿದ್ದಾರೆ.

ಇಲ್ಲಿನ ಕಾರ್ಯಕ್ರಮವೊಂದರಲ್ಲಿ ಗುರುವಾರ ಪಾಲ್ಗೊಂಡ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ವೈದ್ಯಕೀಯ ವಿದ್ಯಾರ್ಥಿ ರಾಣೆಬೆನ್ನೂರಿನ ನವೀನ್ ಗ್ಯಾನಗೌಡರ್ ಶವ ತರಲು ಕೇಂದ್ರ ಸರ್ಕಾರ ತೀವ್ರ ಪ್ರಯತ್ನ ನಡೆಸುತ್ತಿದೆ. ಸ್ವತಃ ಪ್ರಧಾನಿ ಅವರೇ ಮುತುವರ್ಜಿ ವಹಿಸಿದ್ದಾರೆ. ಯುದ್ಧ ಪ್ರದೇಶದಿಂದ ಜೀವಂತ ಇರುವವರನ್ನು ಕರೆತರುವುದೇ ಕಷ್ಟವಾಗಿದೆ. ಇನ್ನು ಶವ ತರುವುದು ತೀರಾ ಕಷ್ಟದ ಕೆಲಸ’ ಎಂದರು.

‘ವಿದ್ಯಾರ್ಥಿಗಳು ರೊಮೇನಿಯಾಗೆ ಬಂದಿದ್ದಾರೆ ಎಂದರೆ ಅಲ್ಲಿ ಸುರಕ್ಷಿತವಾಗಿದ್ದಾರೆ ಎಂದರ್ಥ. ನಮ್ಮ ವಿದೇಶಾಂಗ ಇಲಾಖೆ ಅವರಿಗೆ ಊಟ ಹಾಗೂ ವಸತಿ ವ್ಯವಸ್ಥೆ ಮಾಡಿದೆ’ ಎಂದರು.

‘ನಮ್ಮಲ್ಲಿ ವೈದ್ಯಕೀಯ ಕೋರ್ಸ್ ಕಲಿಕೆ ದುಬಾರಿಯಾಗಿರುವ ಕಾರಣ ನಮ್ಮ ವಿದ್ಯಾರ್ಥಿಗಳು ಹೊರದೇಶಕ್ಕೆ ಹೋಗುತ್ತಿದ್ದಾರೆ. ನಮ್ಮಲ್ಲಿರುವ ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಸೀಟುಗಳು ಅಭಾವ ಸೃಷ್ಟಿಸಿದೆ. ಅಲ್ಲಿಯೂ ಭ್ರಷ್ಟಾಚಾರ ನಡೆಯುವ ಸಾಧ್ಯತೆ ಇದೆ. ಅದರ ಮೇಲೆ ಕ್ರಮ ಕೈಗೊಳ್ಳುವ ಕೆಲಸ ಆಗಬೇಕು’ ಎಂದು ಆಗ್ರಹಿಸಿದರು.

ಎಚ್ಚರದಿಂದ ಪದ ಬಳಸಬೇಕು...

ಬೆಲ್ಲದ ಹೇಳಿಕೆಗೆ ಪ್ರತಿಕ್ರಿಯಿಸಿದ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ, ‘ಯಾವುದೇ ತಪ್ಪು ಮಾಡದ ವಿದ್ಯಾರ್ಥಿ ಜೀವ ಬಲಿಯಾಗಿದೆ. ಅವರ ಕುಟುಂಬ ತೀವ್ರ ನೋವಿನಲ್ಲಿದ್ದಾರೆ. ಇಂಥ ಸಂದರ್ಭದಲ್ಲಿ ಯಾವುದೇ ರಾಜಕೀಯ ಪಕ್ಷಗಳ ಮುಖಂಡರು ಅತ್ಯಂತ ಎಚ್ಚರದಿಂದ ಪದಗಳನ್ನು ಬಳಸಬೇಕು’ ಎಂದರು.

‘ನವೀನ್ ಶವವನ್ನು ಭಾರತಕ್ಕೆ ತರಲು ಎಲ್ಲಾ ಪ್ರಯತ್ನಗಳು ನಡೆದಿವೆ. ಅದು ಎಷ್ಟರ ಮಟ್ಟಿಗೆ ಸಾಧ್ಯವಾಗುತ್ತದೋ ಗೊತ್ತಿಲ್ಲ. ಶವ ಇರುವ ಪ್ರದೇಶಕ್ಕೆ ಹೋಗಿ ಮತ್ತೊಬ್ಬರು ಬಲಿಯಾಗಲು ಯಾರೂ ಸಿದ್ಧರಿಲ್ಲ. ಇಂಥ ವಿಚಿತ್ರ ಪರಿಸ್ಥಿತಿ ಆ ಪ್ರದೇಶದಲ್ಲಿದೆ’ ಎಂದರು.

ನವೀನ್‌ಗೆ 3ನೇ ದಿನದ ತಿಥಿ ಕಾರ್ಯ ನೆರವೇರಿಸಿದ ಕುಟುಂಬ

‘ಮತ್ತೆ ಹುಟ್ಟಿ ಬಾರೋ ಮುದ್ದು ಕಂದಾ’

ಪ್ರಜಾವಾಣಿ ವಾರ್ತೆ

ಚಳಗೇರಿ (ಹಾವೇರಿ): ‘ಮತ್ತೆ ಹುಟ್ಟಿ ಬಾರೋ ನನ್ನ ಮುದ್ದು ಕಂದ’ ಎಂದು ಸಂಕಟದಲ್ಲೇ ಹಾಡು ಹೇಳುತ್ತಾ, ಮಗ ನವೀನ ಗ್ಯಾನಗೌಡರ್ ಭಾವಚಿತ್ರಕ್ಕೆ ತಾಯಿ ವಿಜಯಲಕ್ಷ್ಮಿ ಅವರು ಕುಟುಂಬಸ್ಥರೊಂದಿಗೆ ಗುರುವಾರ ಪೂಜೆ ಸಲ್ಲಿಸಿದರು.

ರಾಣೆಬೆನ್ನೂರು ತಾಲ್ಲೂಕಿನ ಚಳಗೇರಿ ಗ್ರಾಮದ ಮೃತ ನವೀನ ಗ್ಯಾನಗೌಡರ್ ಮನೆಯಲ್ಲಿ 3ನೇ ದಿನದ ತಿಥಿ ಕಾರ್ಯವನ್ನು ಕುಟುಂಬಸ್ಥರು ನೆರವೇರಿಸಿದರು. ನವೀನ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವಾಗ ತಂದೆ ಶೇಖರಪ್ಪ ಮತ್ತು ಅಣ್ಣ ಹರ್ಷ ಅವರು ಬಿಕ್ಕಿ ಬಿಕ್ಕಿ ಅತ್ತರು. ಈ ದೃಶ್ಯವನ್ನು ನೋಡಿದ ಸಂಬಂಧಿಕರ ಕಣ್ಣಾಲಿಗಳು ಕೂಡ ತೇವಗೊಂಡವು.

ಉಕ್ರೇನ್ ದೇಶಕ್ಕೆ ಎಂಬಿಬಿಎಸ್ ಓದಲು ತೆರಳಿದ್ದ ನವೀನ ಗ್ಯಾನಗೌಡರ್ ಅವರು ಶೆಲ್ ದಾಳಿಯಿಂದ ಮಾರ್ಚ್ 1ರ ಮಹಾಶಿವರಾತ್ರಿ ದಿನದಂದು ಮೃತಪಟ್ಟಿದ್ದರು. ಮೂರು ದಿನ ಕಳೆದರೂ ಪಾರ್ಥಿವ ಶರೀರ ಮನೆ ತಲುಪಿಲ್ಲ. ಆದರೆ, ವೀರಶೈವ ಸಂಪ್ರದಾಯದ ಪ್ರಕಾರ ಮೂರನೇ ದಿನ ಎಡೆ ಹಾಕುವ ಕಾರ್ಯವನ್ನು ವಿಧಿವತ್ತಾಗಿ ಮಾಡಲಾಯಿತು. ನವೀನರ ಸಹೋದರ ಹರ್ಷ ಅವರು ಗುರುಗಳ ಪಾದಪೂಜೆ ನೆರವೇರಿಸಿದರು.

‘ನನ್ನ ಮಗನ ಆತ್ಮಕ್ಕೆ ಶಾಂತಿ ಸಿಗಬೇಕು ಎಂದರೆ, ಉಕ್ರೇನ್‌ನಲ್ಲಿ ಸಿಲುಕಿರುವ ಎಲ್ಲ ಮಕ್ಕಳನ್ನು ಸುರಕ್ಷಿತವಾಗಿ ಭಾರತಕ್ಕೆ ಕರೆತರಬೇಕು’ ಎಂದು ನವೀನ ಅವರ ತಾಯಿ ವಿಜಯಲಕ್ಷ್ಮಿ ಮನವಿ ಮಾಡಿದರು.

ರಾಣೆಬೆನ್ನೂರು ತಾಲ್ಲೂಕು ಚಳಗೇರಿಯಲ್ಲಿ ಗುರುವಾರ 3ನೇ ದಿನದ ತಿಥಿ ಕಾರ್ಯದ ಅಂಗವಾಗಿ ಮೃತ ನವೀನ್ ಭಾವಚಿತ್ರಕ್ಕೆ ಅಣ್ಣ ಹರ್ಷ, ತಂದೆ ಶೇಖರಪ್ಪ ಮತ್ತು ತಾಯಿ ವಿಜಯಲಕ್ಷ್ಮಿ ಪೂಜೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

‘ಮೀಸಲಾತಿ ಇಲ್ಲದ್ದಕ್ಕೇ ಪ್ರತಿಭಾವಂತನನ್ನು ಕಳೆದುಕೊಂಡೆವು: ಸ್ವಾಮೀಜಿ ವಿಷಾದ

ಪ್ರಜಾವಾಣಿ ವಾರ್ತೆ

ರಾಣೆಬೆನ್ನೂರು: ‘ನಾವು 2ಎ ಮೀಸಲಾಗಿ ಬೇಡಿಕೆ ಇಟ್ಟಾಗಲೇ ಸರ್ಕಾರ ಕೊಟ್ಟಿದ್ದರೆ ಲಿಂಗಾಯತ ಸಮುದಾಯಕ್ಕೆ ಹೆಚ್ಚಿನ ಅನುಕೂಲವಾಗಿ ಒಬಿಸಿ (2ಎ) ಮೀಸಲಾತಿಯಲ್ಲಿ ನಮ್ಮ ದೇಶದಲ್ಲಿಯೇ ನವೀನ್‌ಗೆ ಉನ್ನತ ಶಿಕ್ಷಣ ಸಿಗುತ್ತಿತ್ತು. ವಿದೇಶಕ್ಕೆ ತೆರಳುವ ಪ್ರಮೇಯ ಬರುತ್ತಿರಲಿಲ್ಲ. ಮೀಸಲಾತಿ ಇಲ್ಲದ ಕಾರಣಕ್ಕೆ ಪ್ರತಿಭಾವಂತನೊಬ್ಬನನ್ನು ಕಳೆದುಕೊಂಡಿದ್ದೇವೆ’ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಚಳಗೇರಿ ಗ್ರಾಮದ ನವೀನ ಅವರ ಮನೆಗೆ ಗುರುವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

’ಈಗಾಗಲೇ ಲಿಂಗಾಯತ ಸಮಾಜದ ಎಂಟು ಜನರು ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಈಗ ಒಂಬತ್ತನೆಯ ಮುಖ್ಯಮಂತ್ರಿ ಆಗಿರುವ ಬಸವರಾಜ ಬೊಮ್ಮಾಯಿ ಅವರು ತಮ್ಮ ಅಧಿಕಾರಾವಧಿಯಲ್ಲಿ 2ಎ ಮೀಸಲಾತಿ ನೀಡಲಿ. ನೀವು ಹಾಗೇ ಹೋಗಬೇಡಿ, ನಿಮ್ಮ ಹೆಸರು ಇತಿಹಾಸದಲ್ಲಿ ಉಳಿಯುವಂತೆ ಮಾಡಿ’ ಎಂದು ಹೇಳಿದರು.

‘ಸರ್ಕಾರ ಮೀಸಲಾತಿ ಕೊಡದೆ ಹೋದಲ್ಲಿ ಮುಂದಿನ ದಿನಗಳಲ್ಲಿ ಮತ್ತೆ ಹೋರಾಟ ಮುಂದುವರೆಯುತ್ತದೆ’ ಎಂದರು.

ನವೀನ್ ಕುಟುಂಬಕ್ಕೆ ಸ್ವಾಮೀಜಿ ₹10 ಸಾವಿರ ಧನ ಸಹಾಯ ನೀಡಿದರು.

ಕನ್ನಡಿಗರ ಜತೆ ಮಾತನಾಡಿದ ಸಿಎಂ

ಬೆಂಗಳೂರು: ಉಕ್ರೇನ್‌ನ ಹಾರ್ಕೀವ್ ನಗರದಲ್ಲಿ ಕರ್ನಾಟಕದ ಸುಮಾರು 200 ವಿದ್ಯಾರ್ಥಿಗಳು ಇದ್ದು, ಅವರನ್ನು ಆದಷ್ಟು ಬೇಗ ಕರೆ ತರುವ ವ್ಯವಸ್ಥೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಉಕ್ರೇನ್‌ನಲ್ಲಿರುವ ವಿದ್ಯಾರ್ಥಿಗಳ ಜತೆ ಗುರುವಾರ ದೂರವಾಣಿ ಮೂಲಕ ಮಾತನಾಡಿ ಅವರ ಸಮಸ್ಯೆಗಳನ್ನು ಆಲಿಸಿದರು.

ತಮ್ಮ ಪರಿಸ್ಥಿತಿಯನ್ನು ವಿವರಿಸಿದ ವಿದ್ಯಾರ್ಥಿಗಳು, ‘ಹಾರ್ಕೀವ್ ನಗರದಿಂದ 30 ಕಿ.ಮೀ ದೂರದ ಪ್ರದೇಶಕ್ಕೆ ನಡೆದುಕೊಂಡೇ ಬಂದಿದ್ದೇವೆ. ಸದ್ಯಕ್ಕೆ ಸುರಕ್ಷಿತವಾಗಿದ್ದೇವೆ’ ಎಂದು ಬೊಮ್ಮಾಯಿ ಅವರಿಗೆ ವಿವರಿಸಿದರು.

‘ರಾಯಭಾರ ಕಚೇರಿ ಕಷ್ಟಕ್ಕೆ ಸ್ಪಂದಿಸಿಲ್ಲ’

ಸಾಗರ: ‘ಉಕ್ರೇನ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಭಾರತದ ವಿದ್ಯಾರ್ಥಿಗಳು ಮರಳಿ ದೇಶಕ್ಕೆ ಬರುವ ಸಂಬಂಧ ಸಕಾಲದಲ್ಲಿ ಕಷ್ಟಕ್ಕೆ ಸ್ಪಂದಿಸಿಲ್ಲ’ ಎಂದು ಉಕ್ರೇನ್‌ನಿಂದ ಇಲ್ಲಿಗೆ ಮರಳಿರುವ ಅಂತಿಮ ವರ್ಷದ ವೈದ್ಯಕೀಯ ವಿದ್ಯಾರ್ಥಿನಿ ಮೋನಿಷಾ ಹೇಳಿದ್ದಾರೆ.

ಗುರುವಾರ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಅವರು, ‘ಕೀವ್ ನಗರದಲ್ಲಿ ಯುದ್ಧದ ತೀವ್ರತೆ ಹೆಚ್ಚಾದಾಗ ವಿದ್ಯಾರ್ಥಿಗಳ ಸುರಕ್ಷತೆಗೆ ಗಮನ ನೀಡುವ ಬದಲು ರಾಯಭಾರ ಕಚೇರಿ ಸಿಬ್ಬಂದಿ ತಮ್ಮ ಸುರಕ್ಷತೆಗೆ ಗಮನಹರಿಸಿದ್ದು ಬೇಸರದ ಸಂಗತಿ’ ಎಂದರು.

‘ಕೀವ್ ಗಡಿ ದಾಟಿ ಪೋಲೆಂಡ್ ಪ್ರವೇಶಿಸಿದಾಗಲೂ ಅಲ್ಲಿ ನೆರವಿಗೆ ಭಾರತದ ರಾಯಭಾರ ಕಚೇರಿ ಸಿಬ್ಬಂದಿ ಇರುತ್ತಾರೆ ಎಂದು ಭಾವಿಸಿದ್ದೆವು. ಅದು ಕೂಡ ಸುಳ್ಳಾಯಿತು’ ಎಂದರು.

ರಷ್ಯಾದಿಂದಲೂ ವಾಪಸ್

ಭದ್ರಾವತಿ (ಶಿವಮೊಗ್ಗ ಜಿಲ್ಲೆ): ಉಕ್ರೇನ್ ಮೇಲೆ ರಷ್ಯಾ ದಾಳಿ ತೀವ್ರಗೊಳಿಸಿರುವುದು ರಷ್ಯಾದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಸ್ಥಳೀಯ ವಿದ್ಯಾರ್ಥಿಗಳ ಪೋಷಕರ ಆತಂಕವನ್ನು ಹೆಚ್ಚಿಸಿದೆ.

ರಷ್ಯಾ ದೇಶದ ಯೋಷ್ಕರ್ ಒಲಾ ನಗರದ ಮಾರಿ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಎಂಬಿಬಿಎಸ್ ಮಾಡುತ್ತಿರುವ ಇಲ್ಲಿಯ 6 ವಿದ್ಯಾರ್ಥಿಗಳು ದೇಶಕ್ಕೆ ಮರಳಲು ಟಿಕೆಟ್ ಕಾಯ್ದಿರಿಸಿದ್ದಾರೆ.

‘ಅಲ್ಲಿ ಆತಂಕ ಪಡಬೇಕಿಲ್ಲ ಎಂಬ ಭರವಸೆಯ ಮಾತುಗಳನ್ನು ಭಾರತೀಯ ರಾಯಭಾರ ಕಚೇರಿ ಹೇಳಿದ್ದರೂ, ಆ ನಗರದಲ್ಲೇ ಪರಮಾಣು ಕೇಂದ್ರ ಇರುವ ಕಾರಣ ಭಯ ಉಂಟಾಗಿದೆ’ ಎಂದು ಪೋಷಕರು ತಿಳಿಸಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ದೇಶಕ್ಕೆ ಮರಳಲು ಮಾರ್ಚ್ 6ಕ್ಕೆ ಹಾಗೂ ಮೂವರು ವಿದ್ಯಾರ್ಥಿನಿಯರು ತವರಿಗೆ ಮರಳಲು ಮಾರ್ಚ್ 18ಕ್ಕೆ ವಿಮಾನ ಟಿಕೆಟ್ ಬುಕ್ ಮಾಡಿದ್ದಾರೆ.

‘ರಾಜಕೀಯ ಹುಡುಕುವ ಸಿದ್ದರಾಮಯ್ಯ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಉಕ್ರೇನ್‌ನಿಂದ ವಿದ್ಯಾರ್ಥಿಗಳನ್ನು ಕರೆತರುವಲ್ಲಿ ಕೇಂದ್ರ ಸರ್ಕಾರ ನಿರ್ಲಕ್ಷ್ಯ ತೋರಿದೆ’ ಎಂಬ ಸಿದ್ದರಾಮಯ್ಯ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಇದರಲ್ಲೂ ಸಿದ್ದರಾಮಯ್ಯ ರಾಜಕೀಯ ಹುಡುಕುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಉಕ್ರೇನ್‌ನಲ್ಲಿ ಸಿಲುಕಿರುವ ದೇಶದ ಪ್ರಜೆಗಳನ್ನು ಕರೆತರುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಎಲ್ಲ ಪ್ರಯತ್ನ ಮಾಡುತ್ತಿದೆ. ವಿದ್ಯಾರ್ಥಿಗಳೂ ಸೇರಿದಂತೆ ದೇಶದ ಜನರನ್ನು ಸುರಕ್ಷಿತವಾಗಿ ಕರೆತರಲು ಪ್ರಧಾನಿ ನಾಲ್ಕು ತಂಡಗಳನ್ನು ರಚಿಸಿದ್ದು, ತಂಡದಲ್ಲಿರುವ ಸಚಿವರು ವಿದೇಶಕ್ಕೆ ತೆರಳಿದ್ದಾರೆ. ಎಲ್ಲ ಸಂಗತಿಗಳ ಅರಿವಿರುವ ಸಿದ್ದರಾಮಯ್ಯ, ಒಬ್ಬ ಮಾಜಿ ಮುಖ್ಯಮಂತ್ರಿಯಾಗಿ ಈ ರೀತಿ ಮಾತನಾಡುವುದು ದೇಶಕ್ಕೇ ಅವಮಾನ. ಇದು ಅವರ ಸಣ್ಣತನವನ್ನು ತೋರಿಸುತ್ತದೆ’ ಎಂದರು.

‘ಉಕ್ರೇನ್‌ನಲ್ಲಿ ಸಿಲುಕಿರುವ ಪ್ರಜೆಗಳನ್ನು ಸ್ವದೇಶಕ್ಕೆ ಕರೆಸಿಕೊಳ್ಳುವಲ್ಲಿ, ವಿಶ್ವದ ಎಲ್ಲ ರಾಷ್ಟ್ರಗಳ ಪೈಕಿ ಭಾರತ ಮುಂಚೂಣಿಯಲ್ಲಿದೆ. ಪ್ರಧಾನಿ ನರೇಂದ್ರ ಮೋದಿ ಖುದ್ದು ಮೇಲ್ವಿಚಾರಣೆ ನಡೆಸುತ್ತಿದ್ದಾರೆ’ ಎಂದು ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.



ವಿನಯ್ ರಾಜ್‌ಕುಮಾರ್

ಆ್ಯಕ್ಷನ್ ಕ್ರೈಂ ಥ್ರಿಲ್ಲರ್... 'ಪೆಪೆ' ಲುಕ್

ಲವರ್ ಬಾಯ್ ಇಮೇಜ್‌ನಿಂದ ಹೊರ ಬಂದಿರುವ ದೊಡ್ಮನೆ ಮೂರನೇ ಕುಡಿ ವಿನಯ್ ರಾಜ್ ಕುಮಾರ್ ಅವರು, 'ಪೆಪೆ' ಸಿನಿಮಾದಲ್ಲಿ ಮಾಸ್ ಅ್ಯಂಡ್ ರಗಡ್ ಲುಕ್‌ನಲ್ಲಿ ಮಿಂಚಿದ್ದಾರೆ. ಈ ಹೊಸ ಪ್ರೊಜೆಕ್ಟ್ ಕುರಿತು 'ಸಿನಿಮಾ ಪುರವಣಿ' ಜೊತೆ ವಿನಯ್ ಮಾತಿಗಿಳಿದು ಹೀಗೆಂದರು...

ಅಭಿಲಾಷ್ ಪಿ.ಎಸ್.

- **ಮೂರು ವರ್ಷ ತೆರೆ ಮೇಲೆ ಕಾಣಿಸಿಕೊಂಡಿರಲಿಲ್ಲ. ಯಾವ್ಯಾವ ಸಿನಿಮಾ ಬಿಡುಗಡೆಗೆ ಸಜ್ಜಾಗಿವೆ?**

ಮೂರು ವರ್ಷ ತೆರೆಯ ಮೇಲೆ ಕಾಣಿಸಿಕೊಳ್ಳದೇ ಇರುವುದಕ್ಕೆ ಮುಖ್ಯ ಕಾರಣ ಕೋವಿಡ್. ಹೆಚ್ಚಿನ ಸಿನಿಮಾಗಳನ್ನು ಒಪ್ಪಿಕೊಂಡಿಲ್ಲ ಎಂದಲ್ಲ. ಪುಷ್ಕರ್ ಮಲ್ಲಿಕಾರ್ಜುನಯ್ಯ ನಿರ್ಮಾಣದ, ಕರ್ಮ್ ಚಾವ್ಲಾ ನಿರ್ದೇಶನದ '10' ಸಿನಿಮಾ ಬಿಡುಗಡೆ ಸಜ್ಜಾಗಿದೆ. ಕೀರ್ತಿ ಅವರು ನಿರ್ದೇಶಿಸಿರುವ 'ಅಂದೊಂದಿತ್ತು ಕಾಲ' ಸಿನಿಮಾದ ಚಿತ್ರೀಕರಣವೂ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳೂ ಪೂರ್ಣಗೊಂಡಿವೆ. ಇದೂ ಬಿಡುಗಡೆಗೆ ಸಿದ್ಧವಿದೆ. ಕೋವಿಡ್ ಕಾರಣದಿಂದ ಇವುಗಳ ಬಿಡುಗಡೆ ವಿಳಂಬವಾಗಿದೆ ಅಷ್ಟೆ. ರಿಲೀಸ್‌ಗೆ ಸೂಕ್ತ ದಿನಾಂಕಕ್ಕೆ ಕಾಯುತ್ತಿದ್ದೇವೆ. ಹೀಗಾಗಿ ತೆರೆಯ ಮೇಲೆ ವಿನಯ್ ಕಾಣಿಸಿಕೊಂಡಿಲ್ಲ.

'ಅಂದೊಂದಿತ್ತು ಕಾಲ' ಚಿತ್ರದಲ್ಲಿ ನಿರ್ದೇಶಕನ ಪಾತ್ರ ನನ್ನದು. 1990ರಿಂದ 2005ರವರೆಗೆ ನಡೆಯುವ ಚಿತ್ರಕಥೆ ಇದು. ಚಿತ್ರದಲ್ಲಿ ಮೂರು ಲುಕ್ ಇವೆ. 16, 21 ಹಾಗೂ 26 ವರ್ಷದ ಯುವಕನಾಗಿ ನಾನು ಕಾಣಿಸಿಕೊಳ್ಳುತ್ತಿದ್ದು, ಇದು ನನಗೆ ಸವಾಲಾಗಿದೆ. ಚಿತ್ರವು ಹಿಂದಿನ ಕಾಲದ ನೆನಪುಗಳನ್ನು ಮೆಲುಕು ಹಾಕುತ್ತದೆ. ಈ ವರ್ಷ ಎರಡು ಸಿನಿಮಾ ಖಂಡಿತಾ ತೆರೆಗೆ ಬರುತ್ತವೆ.

- **'ಪೆಪೆ' ಸಿನಿಮಾ ಬಗ್ಗೆ ನಿರೀಕ್ಷೆ ಏನಿದೆ? 'ಗ್ರಾಮಾಯಣ' ಪ್ರೊಜೆಕ್ಟ್ ಏನಾಯಿತು?**

'ಗ್ರಾಮಾಯಣ' ಚಿತ್ರದ ನಿರ್ಮಾಪಕರು ನಿಧನರಾದ ಕಾರಣ, ಈ ಸಿನಿಮಾವನ್ನು ಯಾರು ಮುನ್ನಡೆಸುತ್ತಾರೆ ಎನ್ನುವುದು ತಿಳಿದಿಲ್ಲ. ಸದ್ಯಕ್ಕೆ ಈ ಪ್ರೊಜೆಕ್ಟ್ ಸ್ಥಗಿತವಾಗಿದೆ. ಶ್ರೀಲೇಶ್ ಎಸ್. ನಾಯರ್ ಆ್ಯಕ್ಷನ್ ಕಟ್ ಹೇಳಿರುವ 'ಪೆಪೆ' ಸಿನಿಮಾದ ಶೂಟಿಂಗ್ ಅಂತಿಮ ಹಂತದಲ್ಲಿದ್ದು, ಇನ್ನು 15 ದಿನಗಳ ಒಂದು ಶೆಡ್ಯೂಲ್ ಬಾಕಿ ಇದೆ. ಶ್ರೀಲೇಶ್ ಅವರು ಮೊದಲ ಬಾರಿಗೆ ಕಮರ್ಷಿಯಲ್ ಸಿನಿಮಾ ಮಾಡುತ್ತಿದ್ದಾರೆ. 'ಪೆಪೆ' ಕಥೆ ಅದ್ಭುತವಾಗಿದೆ. ಮಲೆನಾಡಿನ ಪರಿಸರ, ಅಲ್ಲಿನ ಜೀವನ ಈ ಕಥೆಗೆ ಕನೆಕ್ಟ್ ಆಗಿದೆ. ಇದರಲ್ಲಿನ ಎಲ್ಲ ಪಾತ್ರಗಳಿಗೂ ಪ್ರಾಮುಖ್ಯತೆ ಇದೆ. ಜೊತೆಗೆ ಒಂದು ಕಾರಣವೂ ಈ ಪಾತ್ರಗಳ ಹಿಂದಿದೆ. ಆ್ಯಕ್ಷನ್ ಕ್ರೈಂ ಥ್ರಿಲ್ಲರ್ ಡ್ರಾಮಾ ಇದಾಗಿದ್ದು, ಸಾಮಾಜಿಕ ಸಂದೇಶವೂ ಇದರಲ್ಲಿದೆ.

- **ಕೋವಿಡ್ ಅವಧಿಯಲ್ಲಿ ಸಿಕ್ಕ ಬಿಡುವಿನಲ್ಲಿ ವಿನಯ್ ಕಲಿತದ್ದೇನು?**

'ಪೆಪೆ'ಯಲ್ಲಿನ ಪಾತ್ರಕ್ಕಾಗಿ ದೈಹಿಕವಾಗಿ ನಾನು ಕೊಂಚ ಬದಲಾದೆ. ಈ ಪಾತ್ರಕ್ಕಾಗಿ ಗಡ್ಡ ಬಿಟ್ಟು, ನೈಜ ಲುಕ್‌ನಲ್ಲಿ ನಾನು ಕಾಣಿಸಿಕೊಂಡೆ. ಜೊತೆಗೆ ಜೀವನ ಹಾಗೂ ವೃತ್ತಿ ಜೀವನದ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳುವ ಸಮಯ ಸಿಕ್ಕಿತು. ಈ ಅವಧಿಯಲ್ಲಿ ನನ್ನನ್ನು ನಾನು ಇನ್ನಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡೆ. ಇದೇ ರೀತಿಯ ಸಿನಿಮಾ, ಈ ರೀತಿಯ ಪಾತ್ರವನ್ನೇ ಮಾಡಬೇಕು ಎನ್ನುವ ಆಸೆ ನನಗಿಲ್ಲ. ಇದನ್ನು ಅರ್ಥೈಸಿಕೊಂಡೆ. ಕಥೆ ಕೇಳುವಾಗ ಯಾವ ರೀತಿಯ ನಿರೀಕ್ಷೆಯೂ ನನಗಿಲ್ಲ. ಈ ರೀತಿ ನಿರೀಕ್ಷೆ ಇದ್ದಾಗ ಕಷ್ಟವಾಗುತ್ತದೆ. ಎಲ್ಲ ಕಥೆಗಳಿಗೂ ತೆರೆದುಕೊಂಡಾಗ ಆಯ್ಕೆ ಸುಲಭವಾಗುತ್ತದೆ.

- **ಚಂದನವನದಲ್ಲಿ ಇತ್ತೀಚೆಗೆ ಗ್ರಾಮೀಣ ಭಾಗ ಕಥಾವೇದಿಕೆ ಆಗುತ್ತಿರುವುದರ ಕುರಿತು ಏನು ಹೇಳುತ್ತೀರಿ?**

ಕರ್ನಾಟಕದಲ್ಲಿ ಆಯಾ ಭಾಗದ ಜೀವನ ಕಥನ, ಭಾವನೆ, ಘಟನೆ ಬೇರೆ ಬೇರೆಯದ್ದಾಗಿರುತ್ತದೆ. ರಾಜ್ಯದಲ್ಲಿ ಸಿನಿಮಾ ಕಥೆಗಾಗಿ ಅನ್ವೇಷಣೆ ಮಾಡಬೇಕಾದ ಜಾಗಗಳು ಇನ್ನೂ ಹಲವಿವೆ. ಇದನ್ನು ನಾವು ಮೊದಲು ಅರಿತು ಅನ್ವೇಷಣೆಗಿಳಿಯಬೇಕು. ನಾನೂ ಇಲ್ಲಿಯವರೆಗೆ ಮಾಡಿದ ಪಾತ್ರಗಳಿಗಿಂತ ಭಿನ್ನವಾದ ಪಾತ್ರ 'ಗ್ರಾಮಾಯಣ' ಹಾಗೂ 'ಪೆಪೆ'ಯಲ್ಲಿ ದೊರಕಿದೆ. ನನ್ನೊಳಗಿನ ಕಲಾವಿದನಿಗೂ ಹೆಚ್ಚು ಅನ್ವೇಷಣೆ ಮತ್ತು ನಟನೆ ಮಾಡಲು ಈ ಎರಡೂ ಪಾತ್ರಗಳು ಅವಕಾಶ ನೀಡಿದವು.

ಚಂದನವನದಲ್ಲಿ ಒಳ್ಳೊಳ್ಳೆ ಕಥೆಗಳು ಬರುತ್ತಿವೆ. ಯಾವ ಸಿನಿಮಾವನ್ನೂ ಒಳ್ಳೆಯ ಸಿನಿಮಾ ಅಥವಾ ಕೆಟ್ಟ ಸಿನಿಮಾ ಎನ್ನಲು ಸಾಧ್ಯವಿಲ್ಲ. ಎಲ್ಲ ಸಿನಿಮಾಗಳನ್ನೂ ಕಷ್ಟಪಟ್ಟು, ಉತ್ಸಾಹದಿಂದ ಮಾಡಿರುತ್ತಾರೆ. ಸೋಲು ಗೆಲುವು ನಮ್ಮ ಕೈಯಲ್ಲಿಲ್ಲ. ಪ್ರಸ್ತುತ ಬರುತ್ತಿರುವ ಎಲ್ಲ ಸಿನಿಮಾಗಳ ಕಥೆ, ನಿರೂಪಣೆ, ಪ್ರೇಕ್ಷಕರ ಎದುರಿಗೆ ಇಡುವ ಶೈಲಿಯಲ್ಲಿ ಗುಣಮಟ್ಟವಿದೆ. ಈ ಹಿಂದೆ ದೊಡ್ಡ ಸಿನಿಮಾಗಳಲ್ಲಷ್ಟೇ ಗುಣಮಟ್ಟವಿದೆ ಎಂದುಕೊಳ್ಳುತ್ತಿದ್ದೆವು. ಆದರೆ ಸಣ್ಣ ಬಜೆಟ್ ಸಿನಿಮಾಗಳಲ್ಲೂ ಈಗ ಗುಣಮಟ್ಟವಿದೆ. ನಿರ್ದೇಶಕರು, ಪಾತ್ರ ವರ್ಗ ಅಥವಾ ಒಟ್ಟು ಚಿತ್ರತಂಡದ ಉತ್ಸಾಹ ಇಲ್ಲಿ ಮುಖ್ಯ. ಈ ಬೆಳವಣಿಗೆ ನನಗೆ ವೈಯಕ್ತಿಕವಾಗಿ ಸಂತೋಷ ತಂದಿದೆ.

- **ಪುನೀತ್ ರಾಜ್‌ಕುಮಾರ್ ಅವರನ್ನು ನೆನಪಿಸಿಕೊಂಡರೆ...**

ಹೊಸ ಪ್ರೊಜೆಕ್ಟ್‌ಗಳನ್ನು ಒಪ್ಪಿಕೊಂಡಿದ್ದೇನೆ. ನನ್ನ ಸಿನಿಮಾ ಪಯಣದ ಪ್ರತಿ ಹೆಜ್ಜೆಯಲ್ಲೂ ಪ್ರೀತಿಯ ಚಿಕ್ಕಪ್ಪ 'ಅಪ್ಪು' ಅವರು ಜೊತೆಗಿರುತ್ತಾರೆ. ಇಷ್ಟೇ ಹೇಳಬಯಸುತ್ತೇನೆ.

'ಮೋಕ್ಷ' ಪೋಸ್ಟರ್

ಹೊಸಬರದೇ ಹವಾ!

ಇಂದು ತೆರೆಗೆ

ಈ ವಾರ ಗಾಂಧಿನಗರದಲ್ಲಿ ಹೊಸ ಪ್ರತಿಭೆಗಳದ್ದೇ ಹವಾ! ಇಂದು ಕನ್ನಡದ ಯಾವುದೇ ಬಿಗ್‌ಬಜೆಟ್ ಸಿನಿಮಾಗಳು ತೆರೆಕಾಣುತ್ತಿಲ್ಲ, ಹೀಗಾಗಿ ಹೊಸಬರ ಒಟ್ಟು ಎಂಟು ಚಿತ್ರಗಳು ತೆರೆಯ ಮೇಲೆ ಬರುತ್ತಿವೆ.

ಹಾಸ್ಯ ಪ್ರಧಾನ ಪಾತ್ರಗಳಲ್ಲೇ ಕಾಣಿಸಿಕೊಂಡಿರುವ ನಟ ಡ್ಯಾನಿಶ್ ಸೇಠ್ ಇದೇ ಮೊದಲ ಬಾರಿಗೆ ಕ್ರೈಂ ಥ್ರಿಲ್ಲರ್ ಕಥಾಹಂದರ ಹೊಂದಿರುವ ಸಿನಿಮಾವೊಂದರಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರೇರಣ ಅಗರವಾಲ್ ನಿರ್ದೇಶಿಸಿದ 'ಸೋಲ್ಡ್' ಸಿನಿಮಾದಲ್ಲಿ ಡ್ಯಾನಿಶ್, ಶಿವಾನಿ ಆರ್. ಬಲ್ಲುಕರಾಯ, ದೀಪಂ ಕೊಹ್ಲಿ, ಕಾವ್ಯ ಶೆಟ್ಟಿ, ಭರತ್ ಜೆ.ಬಿ ಮುಂತಾದವರು ನಟಿಸಿದ್ದಾರೆ. ಕಿರುಚಿತ್ರಗಳನ್ನು ನಿರ್ದೇಶಿಸಿ ಅನುಭವವಿರುವ ಪ್ರೇರಣ ಅವರಿಗೆ ಇದು ಚೊಚ್ಚಲ ನಿರ್ದೇಶನದ ಚಿತ್ರ.



ಡ್ಯಾನಿಶ್ ಸೇಠ್

ನೀನಾಸಂ ಮಂಜು ನಿರ್ದೇಶನದಲ್ಲಿ ಮೂಡಿ ಬಂದಿರುವ ನೈಜ ಘಟನೆಯಾಧಾರಿತ ಮಹಿಳಾ ಪ್ರಧಾನ ಸಿನಿಮಾ 'ಕನ್ನೇರಿ', ಸೈಕೋ ಥ್ರಿಲ್ಲರ್ ಕಥಾ ಹಂದರವಿರುವ, ಸಮರ್ಥ್ ನಾಯಕ್ ನಿರ್ದೇಶನದ ಚಿತ್ರ 'ಮೋಕ್ಷ', ಟ್ಯಾಕ್ಸಿ ಚಾಲಕನೊಬ್ಬನ ಜೀವನದ ಕಥಾನಕವಿರುವ, ತ್ರಿಲೋಕ್ ನಿರ್ದೇಶನದ 'ಎಲ್ಲೋ ಬೋರ್ಡ್', ಜ್ಯೂನಿಯರ್ ನರಸಿಂಹರಾಜು ಅವರ ಸಾರಥ್ಯದಲ್ಲಿ ವಾಸುದೇವ ರೆಡ್ಡಿ ನಿರ್ಮಿಸಿ, ನಿರ್ದೇಶಿಸಿರುವ 'ಮೈಸೂರು', ಮುತ್ತು ಅವರು ಕಥೆ,ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಮಾಡಿರುವ 'ಲೀಸ' ಹಾಗೂ 'ಅಘೋರ', 'ಬೆಟ್ಟದ ದಾರಿ' ಎಂಬ ಸಿನಿಮಾಗಳೂ ಇಂದು ಬಿಡುಗಡೆಯಾಗುತ್ತಿವೆ.

'ಮಾಯಾವಿ'ಯ ಬೆನ್ನತ್ತಿ



ಆಕಾಶ್ ಶ್ರೀವತ್ಸ ಚಿತ್ರಕಥೆ ಬರೆದು ನಿರ್ದೇಶಿಸುತ್ತಿರುವ, ನಟ ರಮೇಶ್ ಅರವಿಂದ್ ನಟನೆಯ 'ಶಿವಾಜಿ ಸುರತ್ಕಲ್' ಎರಡನೇ ಭಾಗದಲ್ಲಿ, ಹೊಸ ಪ್ರಕರಣವೊಂದರ ಜೊತೆಗೆ ಶಿವಾಜಿ ಮತ್ತೆ ತೆರೆಯ ಮೇಲೆ ಬರುತ್ತಿದ್ದಾರೆ. ಮೊದಲ ಭಾಗದಲ್ಲಿ 'ರಣಗಿರಿ ರಹಸ್ಯ' ಹೊತ್ತು ತಂದಿದ್ದ ಶಿವಾಜಿ, ಈ ಬಾರಿ 'ದಿ ಮಿಸ್ಟೀರಿಯಸ್ ಕೇಸ್ ಆಫ್ ಮಾಯಾವಿ' ಭೇದಿಸಲು ಸಜ್ಜಾಗಿದ್ದಾರೆ. 'ಯಾರು ಈ ಮಾಯಾವಿ? ಶಿವಾಜಿ ತನಗೆ ಎದುರಾದ ಮತ್ತೊಂದು ವಿಚಿತ್ರ ಪ್ರಕರಣವನ್ನು ಹೇಗೆ ಪರಿಹರಿಸುತ್ತಾರೆ ಎಂಬುವುದೇ ಈ ಸಿನಿಮಾದ ಮೂಲ ಕಥೆ' ಎಂದಿದೆ ಚಿತ್ರತಂಡ.

'ಎರಡನೇ ಭಾಗದಲ್ಲಿ ಶಿವಾಜಿ ಅವರ ಖಾಸಗಿ ಜೀವನವನ್ನು ಮತ್ತಷ್ಟು ಹತ್ತಿರದಿಂದ ನೋಡುತ್ತೇವೆ. ಚಿತ್ರವು ಮೂರು ಕಾಲಘಟ್ಟಗಳನ್ನು ಒಳಗೊಂಡಿದ್ದು, ಮೂರು ತಲೆಮಾರುಗಳನ್ನೂ ಒಟ್ಟಿಗೆ ತರಲಿದೆ. ಶಿವಾಜಿಯವರ ತಂದೆ ವಿಜೇಂದ್ರ ಸುರತ್ಕಲ್ ಮೊದಲ ಬಾರಿಗೆ ಈ ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆ ಪಾತ್ರವನ್ನು ಖ್ಯಾತ ನಟ ನಾಸರ್ ನಿಭಾಯಿಸಿದ್ದಾರೆ. ಅಷ್ಟೇ ಅಲ್ಲ, ಚಿತ್ರದಲ್ಲಿ ಶಿವಾಜಿಯ ಮಗಳಾದ ಸಿರಿ ಸುರತ್ಕಲ್ ಕೂಡ ಕಾಣಿಸಿಕೊಳ್ಳಲಿದ್ದಾರೆ. ಶಿವಾಜಿ ಆಕೆಯನ್ನು ಮುದ್ದಿನಿಂದ ಚುಕ್ಕಿ ಎನ್ನುತ್ತಾರೆ. ಆ ಮುದ್ದು ಮಗಳು ಶಿವಾಜಿಗೆ ಸಿಕ್ಕಿದ್ದೆಲ್ಲಿ? ಈ ಪ್ರಶ್ನೆಗೆ ಉತ್ತರ ಚಿತ್ರದಲ್ಲಿದೆ' ಎಂದು ವಿವರಿಸಿದೆ ಚಿತ್ರತಂಡ.

ರಾಜ್ಯದ ಹಲವೆಡೆ 21 ದಿನಗಳ ಚಿತ್ರೀಕರಣ ಮುಗಿಸಿ ತಂಡವು ಬೆಂಗಳೂರಿಗೆ ಮರಳಿದೆ. ಬೆಂಗಳೂರಿನಲ್ಲಿ ಚಿತ್ರೀಕರಣ ಮುಂದುವರಿಯಲಿದೆ. ರಮೇಶ್ ಅರವಿಂದ್, ರಾಘು ರಮಣಕೊಪ್ಪ ಹಾಗೂ ರಾಧಿಕಾ ನಾರಾಯಣ್ ಅವರು ಮೊದಲ ಚಿತ್ರದಲ್ಲಿ ಕಾಣಿಸಿಕೊಂಡ ಪಾತ್ರಗಳಲ್ಲೇ ಮತ್ತೆ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಹೊಸ ತಾರಾಗಣದಲ್ಲಿ ಡಿಸಿಪಿ ದೀಪಾ ಕಾಮತ್ ಎಂಬ ಪಾತ್ರದಲ್ಲಿ ಮೇಘನಾ ಗಾಂವ್ಕರ್ ನಟಿಸುತ್ತಿದ್ದಾರೆ. ಖ್ಯಾತ ನಟರಾದ ಶೋಭರಾಜ್, ಶ್ರೀನಿವಾಸ ಪ್ರಭು ತಾರಾಗಣ ಸೇರಿದ್ದಾರೆ.

ವಿಎಫ್‌ಎಕ್ಸ್ 'ಗತವೈಭವ'

ದುಷ್ಯಂತ್

'ಸಖತ್' ಸಿನಿಮಾ ಯಶಸ್ಸಿನ ಗುಂಗಲ್ಲಿ 'ಅವತಾರ ಪುರುಷ' ಸಿನಿಮಾ ಬಿಡುಗಡೆಗೆ ಕಾಯುತ್ತಿರುವ ನಿರ್ದೇಶಕ ಸಿಂಪಲ್ ಸುನಿ ತಮ್ಮ ಹೊಸ ಪ್ರೊಜೆಕ್ಟ್ ಘೋಷಿಸಿದ್ದಾರೆ.

ವಿಷ್ಯುವಲ್ ಎಫೆಕ್ಟ್(ವಿಎಫ್‌ಎಕ್ಸ್) ಕಲಾವಿದನ ಪಾತ್ರವೊಂದಕ್ಕೆ ಜೀವ ತುಂಬಿ 'ಗತವೈಭವ' ತೋರಿಸಲು ಸುನಿ ಸಜ್ಜಾಗಿದ್ದಾರೆ. ದೀಪಕ್ ತಿಮ್ಮಪ್ಪ ಹಾಗೂ ಸುನಿ ಜಂಟಿಯಾಗಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.

ತುಮಕೂರಿನ ಗುಬ್ಬಿ ಶಾಸಕ ಶ್ರೀನಿವಾಸ್ ಅವರ ಪುತ್ರ ದುಷ್ಯಂತ್ ಈ ಸಿನಿಮಾ ಮುಖಾಂತರ ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. 'ಗತವೈಭವ' ಎಂದರೆ ಗತಿಸಿ ಹೋದ ವೈಭವ. ಚಿತ್ರದ ನಾಯಕ ವಿಎಫ್‌ಎಕ್ಸ್ ಕಲಾವಿದ. ತನ್ನದೇ ಲೋಕ ಸೃಷ್ಟಿಸಿಕೊಳ್ಳಬಲ್ಲ ಸಾಮರ್ಥ್ಯ ಆತನಿಗಿದೆ. ಚಿತ್ರದಲ್ಲಿ ವಾಸ್ಕೋಡಿಗಾಮನ ಕಥೆ, ಸಮುದ್ರಮಥನದ ದೃಶ್ಯ ಸೇರಿದಂತೆ ಕೆಲವು ಐತಿಹಾಸಿಕ ಸನ್ನಿವೇಶಗಳಿರುತ್ತದೆ. ಕಲ್ಪನಾಲೋಕದ ಕಥೆ ಇಟ್ಟುಕೊಂಡು ಸುನಿ ಅವರು ಕಥೆ ಹೆಣೆದಿದ್ದಾರೆ.

'ದುಡ್ಡಿರುವವರ ಮಕ್ಕಳು ಹೀರೊ ಆಗುತ್ತಾರೆ ಎಂದಿದೆ. ನಾನು ಶಾಸಕನ ಪುತ್ರ. ಆದರೆ ನಮ್ಮ ತಂದೆಗೆ ನಾನು ಚಿತ್ರರಂಗಕ್ಕೆ ಬರುವುದು ಇಷ್ಟವಿಲ್ಲ. ನನಗೆ ಈ ಕ್ಷೇತ್ರಕ್ಕೆ ಬರುವುದು ಬಿಟ್ಟರೆ ಬೇರೆ ಇಷ್ಟವಿಲ್ಲ. ಹೀಗಾಗಿ ನಾನು ನಿರ್ಮಾಪಕರ ಹುಡುಕಿ ಹಣ ಹೊಂದಿಸಲು ಒಂದು ವರ್ಷಕ್ಕೂ ಅಧಿಕ ಸಮಯ ತೆಗೆದುಕೊಂಡೆ' ಎಂದರು ದುಶ್ಯಂತ್.

'ಸಿನಿಮಾ ಭಾಷೆ' ಕಟ್ಟಿದ 'ಪೆದ್ರೊ'

ಹಲವು ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದ ನಟೇಶ್ ಹೆಗಡೆ ನಿರ್ದೇಶನದ ಸಿನಿಮಾ 'ಪೆದ್ರೊ' ಶೀಘ್ರದಲ್ಲೇ ತೆರೆಗೆ ಬರಲಿದೆ. ಚಿತ್ರದ ಪೋಸ್ಟರ್, ಟ್ರೇಲರ್ ಬಿಡುಗಡೆ ಮಾಡಿದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರು, 'ಪೆದ್ರೊದ ಸಿನಿಮಾ ಭಾಷೆ ನೋಡಿ ನಿಜವಾಗಿಯೂ ಬೆರಗಾದೆ' ಎಂದು ಶ್ಲಾಘಿಸಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ನಟೇಶ್ ಅವರ ಚೊಚ್ಚಲ ನಿರ್ದೇಶನದ ಚಿತ್ರ ಇದಾಗಿದೆ. 'ಪೆದ್ರೊ' ಮಧ್ಯಮ ವರ್ಗದ ಎಲೆಕ್ಟ್ರಿಷಿಯನ್ ಒಬ್ಬನ ಕಥೆಯಾಗಿದ್ದು, ಈ ಚಿತ್ರವನ್ನು ನಟ, ನಿರ್ದೇಶಕ ರಿಷಬ್ ಶೆಟ್ಟಿ ನಿರ್ಮಾಣ ಮಾಡಿದ್ದಾರೆ. ಖ್ಯಾತ ನಿರ್ದೇಶಕ ವೆಟ್ರಿಮಾರನ್ ಅವರು ಈ ಸಿನಿಮಾವನ್ನು ಪ್ರಸ್ತುತಪಡಿಸುತ್ತಿದ್ದಾರೆ. ನಟ ರಾಜ್ ಬಿ.ಶೆಟ್ಟಿ ಅವರು ಈ ಚಿತ್ರದಲ್ಲಿ ಬಣ್ಣಹಚ್ಚಿದ್ದು, ಮುಖ್ಯಭೂಮಿಕೆಯಲ್ಲಿ ನಟೇಶ್ ಅವರ ತಂದೆ ಗೋಪಾಲ ಹೆಗಡೆಯವರೇ ನಟಿಸಿದ್ದಾರೆ.



ಗೋಪಾಲ ಹೆಗಡೆ

ಚಿತ್ರದ ಕುರಿತು ಮಾತನಾಡಿದ ಗಿರೀಶ ಕಾಸರವಳ್ಳಿ ಅವರು, 'ಇತ್ತೀಚೆಗಿನ ಕನ್ನಡ ಸಿನಿಮಾಗಳಲ್ಲಿ ಬೇರೆ ಬೇರೆ ರೀತಿಯ ಕನ್ನಡ ಭಾಷೆಯನ್ನು ಸಶಕ್ತವಾಗಿ ಬಳಸುತ್ತಿದ್ದಾರೆ. ಹಿಂದೆ ಬೆಂಗಳೂರು, ಮಂಡ್ಯ ಅಲ್ಲದೇ ಇರುವ ಕನ್ನಡವನ್ನು ಕೇವಲ ಗೇಲಿ ಮಾಡುವುದಕ್ಕಷ್ಟೇ ಬಳಸುವುದು ಎನ್ನುವ ಕಾಲವಿತ್ತು. ಈಗ ಆಯಾ ಭಾಷೆಯಲ್ಲಿ ಇರುವ ಅಂತಃಸತ್ವವನ್ನು ಅರಿತಿದ್ದಾರೆ. 'ಪೆದ್ರೊ'ದಲ್ಲಿ ಈ ಸೊಗಡಿದೆ. ಸಿನಿಮಾ ಭಾಷೆಯ ಬೆಳವಣಿಗೆ 'ಪೆದ್ರೊ'ದಲ್ಲಿ ಚೆನ್ನಾಗಿದೆ. ಇಲ್ಲಿಯವರೆಗೆ ಪರಿಚಿತ ಇಲ್ಲದೇ ಇರುವ ಸಿನಿಮಾ ಭಾಷೆ ಇದರಲ್ಲಿದೆ. ಇತ್ತೀಚಿನ ದಿನಗಳಲ್ಲಿ ನನ್ನನ್ನು ಕಾಡಿದ್ದ ಸಿನಿಮಾಗಳೆಂದರೆ, 'ತಿಥಿ' ಹಾಗೂ 'ಹರಿಕಥಾ ಪ್ರಸಂಗ'. ಇದಕ್ಕೆ ಸೇರ್ಪಡೆ 'ಪೆದ್ರೊ'. 60–70ರ ದಶಕದಲ್ಲಿ ಕನ್ನಡ ಸಿನಿಮಾಗಳಿಗಿದ್ದ ಸ್ಥಾನ ಇಳಿಯುತ್ತಾ, ಪ್ರಸ್ತುತ ತೀರಾ ಕೆಳಮಟ್ಟದಲ್ಲಿದೆ. 'ಪೆದ್ರೊ'ದಂಥ ಕೆಲ ಸಿನಿಮಾಗಳು ಪುನಃ ನಮ್ಮನ್ನು ಆ ವೈಭವದ ಕಾಲಕ್ಕೆ ಕರೆದೊಯ್ಯುತ್ತವೆ' ಎಂದರು.

'ಪೆದ್ರೊ', 'ನೀಲಿ ಹಕ್ಕಿ' ಅಳಲು

ಬೂಸಾನ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಪ್ರಶಸ್ತಿ ಗೆದ್ದ 'ಪೆದ್ರೊ' ಚಿತ್ರಕ್ಕೆ, 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅವಕಾಶ ಸಿಗದಿರುವುದಕ್ಕೆ ಚಿತ್ರತಂಡವು ಬೇಸರ ಹೊರಹಾಕಿದೆ.

ಈ ಬಗ್ಗೆ ಚಿತ್ರದ ನಿರ್ಮಾಪಕ ರಿಷಬ್ ಶೆಟ್ಟಿ ಬಹಿರಂಗ ಪತ್ರ ಬರೆದಿದ್ದು, 'ಸಿನಿಮಾ ಎಂಬ ನದಿಗೆ ಎಲ್ಲ ತೊರೆಗಳು ಬಂದು ಸೇರಬೇಕು. ನಮ್ಮಲ್ಲಿಯ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅದಕ್ಕೆ ತಡೆಗಾಲು ಒಡ್ಡುವ ಪ್ರಯತ್ನ ಮಾಡಿದ್ದಾರೆ. ಒಂದು ಸಿನಿಮಾ ಜನರಿಗೆ ತಲುಪುವುದನ್ನು ತಪ್ಪಿಸುತ್ತೇವೆ ಎಂದುಕೊಂಡರೆ ನೀರನ್ನು ಹಿಮ್ಮುಖ ಹರಿಸುತ್ತೇವೆ ಎಂದುಕೊಂಡಂತೆ' ಎಂದು ಕಿಡಿ ಕಾರಿದ್ದಾರೆ.

'ನೀಲಿಹಕ್ಕಿ' ಚಿತ್ರಕ್ಕೂ ಚಿತ್ರೋತ್ಸವದಲ್ಲಿ ಪ್ರದರ್ಶನದ ಅವಕಾಶ ಸಿಗದಿರುವುದಕ್ಕೆ ನಿರ್ದೇಶಕ ಗಣೇಶ ಹೆಗಡೆ ಬೇಸರ ಹೊರಹಾಕಿದ್ದಾರೆ. ಬೆಂಗಳೂರಿನ ಚಿತ್ರೋತ್ಸವದಲ್ಲಿ ಚಿತ್ರ ಪ್ರದರ್ಶಿಸಲು ಬೇಕಾದ ಮಾನದಂಡಗಳೇನು ಎಂಬುದನ್ನು ಹುಡುಕುತ್ತಿದ್ದೇನೆ ಎಂದು ಅವರು ಬೇಸರ ತೋಡಿಕೊಂಡಿದ್ದಾರೆ.



ಮಾ.27ಕ್ಕೆ

ಕೆ.ಜಿ.ಎಫ್–2 ಟ್ರೇಲರ್

ಚಂದನವನದ ಬಹುನಿರೀಕ್ಷಿತ ಪ್ಯಾನ್ ಇಂಡಿಯಾ ಸಿನಿಮಾ, ಯಶ್ ನಟನೆಯ ಕೆ.ಜಿ.ಎಫ್–2 ಸಿನಿಮಾದ ಟ್ರೇಲರ್ ಯಾವಾಗ ಬಿಡುಗಡೆ ಎನ್ನುವ ಅಭಿಮಾನಿಗಳ ಪ್ರಶ್ನೆಗೆ ಉತ್ತರ ದೊರಕಿದೆ. ಪ್ರಶಾಂತ್ ನೀಲ್ ನಿರ್ದೇಶನದ ಈ ಸಿನಿಮಾದ ಎರಡನೇ ಭಾಗದ ಟ್ರೇಲರ್ ಮಾ.27ರಂದು ಸಂಜೆ 6.40ಕ್ಕೆ ಬಿಡುಗಡೆಯಾಗಲಿದೆ.

ಏಪ್ರಿಲ್ 14ರಂದು ಈ ಸಿನಿಮಾ ತೆರೆ ಕಾಣುತ್ತಿದ್ದು, ಚಿತ್ರದ ಪೋಸ್ಟ್ ಪ್ರೊಡಕ್ಷನ್ ಅಂತಿಮ ಹಂತದಲ್ಲಿದೆ. ಚಿತ್ರದಲ್ಲಿ 'ರಮಿಕಾ ಸೇನ್' ಎಂಬ ಪ್ರಧಾನಿಯ ಪಾತ್ರದಲ್ಲಿ ಕಾಣಿಸಿಕೊಳ್ಳಲಿರುವ ಬಾಲಿವುಡ್ ನಟಿ ರವೀನಾ ಟಂಡನ್ ಇತ್ತೀಚಗೆಷ್ಟೇ ತಮ್ಮ ಪಾತ್ರದ ಡಬ್ಬಿಂಗ್ ಪೂರ್ಣಗೊಳಿಸಿದ್ದರು. ಚಿತ್ರತಂಡವು ಈಗಾಗಲೇ ಪ್ರಚಾರವನ್ನು ಆರಂಭಿಸಿದೆ. ಕೇರಳದಲ್ಲಿ ನಟ ಪೃಥ್ವಿರಾಜ್ ಅವರ ಪೃಥ್ವಿರಾಜ್ ಪ್ರೊಡಕ್ಷನ್ಸ್ ಸಂಸ್ಥೆಯು ಕೆಜಿಎಫ್–2 ಸಿನಿಮಾವನ್ನು ವಿತರಣೆ ಮಾಡಲಿದೆ.

ಹೊಂಬಾಳೆ ಫಿಲಂಸ್ ಬ್ಯಾನರ್‌ನಡಿ ವಿಜಯ್ ಕಿರಗಂದೂರು ನಿರ್ಮಾಣ ಮಾಡುತ್ತಿರುವ 'ಕೆ.ಜಿ.ಎಫ್–2' ಚಿತ್ರದಲ್ಲಿ 'ಅಧೀರ' ಎಂಬ ಪಾತ್ರಕ್ಕೆ ಬಾಲಿವುಡ್ ನಟ ಸಂಜಯ್ ದತ್ ಬಣ್ಣಹಚ್ಚಿದ್ದಾರೆ. ಕಳೆದ ವರ್ಷದ ಜುಲೈನಲ್ಲೇ ಬಿಡುಗಡೆಯಾಗಬೇಕಿದ್ದ ಚಿತ್ರವು ಕೋವಿಡ್ ಎರಡನೇ ಅಲೆಯ ಕಾರಣದಿಂದಾಗಿ ಮುಂದಕ್ಕೆ ಹೋಗಿತ್ತು.

ಚಿತ್ರದ ನಾಯಕಿಯಾಗಿ ಶ್ರೀನಿಧಿ ಶೆಟ್ಟಿ ಬಣ್ಣಹಚ್ಚಿದ್ದು, ಪ್ರಕಾಶ್ ರೈ, ಮಾಳವಿಕಾ ಅವಿನಾಶ್, ಬಿ.ಸುರೇಶ್, ಯಶ್ ಶೆಟ್ಟಿ, ಅರ್ಚನಾ ಜೋಯಿಷ್, ಅಯ್ಯಪ್ಪ ಪಿ.ಶರ್ಮ ಇನ್ನಿತರರು ತಾರಾಬಳಗದಲ್ಲಿದ್ದಾರೆ.

ರಕ್ಷಿತಾ

ಬರುತ್ತಿದ್ದಾಳೆ 'ಮದುಮಗಳು'

ಕಿರುತೆರೆ

ಹೊಸ ಹೊಸ ಧಾರಾವಾಹಿಗಳ ಮೂಲಕ ಜನರನ್ನು ರಂಜಿಸುತ್ತಿರುವ ಉದಯ ವಾಹಿನಿ ಈಗ 'ಮದುಮಗಳು' ಎಂಬ ಮತ್ತೊಂದು ಹೊಸ ಧಾರಾವಾಹಿಯನ್ನು ಪ್ರಸಾರ ಮಾಡುತ್ತಿದೆ. ಈಗಾಗಲೇ ಕಾವ್ಯಾಂಜಲಿ ಧಾರಾವಾಹಿಯ ಮೂಲಕ ಕನ್ನಡಿಗರ ಮನ ಗೆದ್ದಿರುವ ತಂಡ ಈಗ ಮತ್ತೊಂದು ಹೊಸ ಪ್ರಯತ್ನಕ್ಕೆ ಕೈಹಾಕಿದೆ.

ಈ ಧಾರಾವಾಹಿಯಲ್ಲಿ ಕಿರುತೆರೆಯ ಖ್ಯಾತ ನಟಿ ಸಿರಿಜಾ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಧಾರಾವಾಹಿಯಲ್ಲಿ ಭವಿಷ್ ನಾಯಕನಟ ಹಾಗೂ ರಕ್ಷಿತಾ ನಾಯಕಿಯಾಗಿ ನಟಿಸುತ್ತಿದ್ದಾರೆ. ವೀಣಾ ಸುಂದರ್, ರೇಖಾ ರಾವ್ ಸೇರಿದಂತೆ ಹಲವು ಕಿರುತೆರೆ ಖ್ಯಾತ ನಟ–ನಟಿಯರು ಧಾರಾವಾಹಿಯಲ್ಲಿ ಬಣ್ಣ ಹಚ್ಚುತ್ತಿದ್ದಾರೆ.

ಈ ಧಾರಾವಾಹಿಗೆ ಆದರ್ಶ ಹೆಗ್ಡೆ ನಿರ್ದೇಶನವಿದೆ. ಛಾಯಾಗ್ರಾಹಕರಾಗಿ ರುದ್ರಮುನಿ ಬೆಳೆಗೆರೆ, ಸಹ-ಛಾಯಾಗ್ರಾಹಕ ಬಾಲಾಜಿ ರಾವ್ ಧಾರಾವಾಹಿಯನ್ನು ಸೆರೆ ಹಿಡಿಯುತ್ತಿದ್ದಾರೆ. ಶಾಕ್ ಸ್ಟುಡಿಯೋಸ್ ಮುಖ್ಯಸ್ಥ ಶಂಕರ್ ವೆಂಕಟರಮಣ್ 'ಮದುಮಗಳ' ನಿರ್ಮಾಣದ ಜವಾಬ್ದಾರಿಯನ್ನು ಹೊತ್ತಿದ್ದಾರೆ. ಈ ಧಾರಾವಾಹಿ ಮಾರ್ಚ್ 7ರಿಂದ ಪ್ರತಿ ಸೋಮವಾರದಿಂದ ಶನಿವಾರದವರೆಗೆ ಸಂಜೆ 6ಕ್ಕೆ ಪ್ರಸಾರವಾಗಲಿದೆ.

'ಭೀಮ' ಕೆಣಕದಿದ್ರೆ ಕ್ಷೇಮ

ಸಿನಿ ಸಂಕ್ಷಿಪ್ತ

ತಾವು ಆ್ಯಕ್ಷನ್ ಕಟ್ ಹೇಳಿದ ಮೊದಲ ಚಿತ್ರ 'ಸಲಗ' ಯಶಸ್ಸು ಕಂಡ ಬೆನ್ನಲ್ಲೇ ನಟ 'ದುನಿಯಾ' ವಿಜಯ್ ಮತ್ತೊಮ್ಮೆ ನಿರ್ದೇಶನದ ಸುಳಿವು ನೀಡಿದ್ದರು. ಇದೀಗ ಈ ಚಿತ್ರದ ಶೀರ್ಷಿಕೆ ಘೋಷಣೆಯಾಗಿದೆ. 'ಭೀಮ'ನಾಗಿ 'ಕೆಣಕದಿದ್ರೆ ಕ್ಷೇಮ' ಎನ್ನುತ್ತಾ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ ವಿಜಯ್.

ಪ್ರಸ್ತುತ ವಿಜಯ್ ಅವರು ಟಾಲಿವುಡ್ ಅಂಗಳಕ್ಕೆ ಹೆಜ್ಜೆ ಇಟ್ಟಿದ್ದಾರೆ. ತೆಲುಗು ನಟ ನಂದಮೂರಿ ಬಾಲಕೃಷ್ಣ ಅವರ 107ನೇ ಸಿನಿಮಾದಲ್ಲಿ ಖಡಕ್ ವಿಲನ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿರುವ ಅವರು ಐದಾರು ತಿಂಗಳು ಇನ್ನು ಹೈದರಾಬಾದ್‌ನಲ್ಲೇ ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಈ ತೆಲುಗು ಪ್ರೊಜೆಕ್ಟ್ ಪೂರ್ಣಗೊಳಿಸಿಯೇ 'ಭೀಮ' ಕೈಗೆತ್ತಿಕೊಳ್ಳಲಿದ್ದಾರೆ ವಿಜಯ್. 'ಸಲಗ' ಸಿನಿಮಾದ ತಂತ್ರಜ್ಞರ ತಂಡವೇ ಈ ಸಿನಿಮಾದಲ್ಲಿ ಇರಲಿದೆ. ಯುವ ಜನಾಂಗದ ಸಮಸ್ಯೆ, ಸಾಮಾನ್ಯ ಕುಟುಂಬದಲ್ಲಿನ ತೊಡಕುಗಳೇ 'ಭೀಮ'ನ ಕಥೆಯ ಎಳೆಯಾಗಿದೆ.

ಮೂರು ವರ್ಷಗಳು ಕಳೆದರೂ ಪೂರ್ಣಗೊಳ್ಳದ ಕಾವೇರಿ ನೀರು, ಒಳಚರಂಡಿ ಸಂಪರ್ಕ

ಸಮಸ್ಯೆಗಳ ಆಗರ ಹೆಗಡೆ ನಗರ

• ಡಿ.ಸುರೇಶ್

ರಸ್ತೆಯ ಪಕ್ಕದಲ್ಲಿ ಕಸದ ರಾಶಿ ಹಾಕಿರುವುದು

ಹೆಗಡೆ ನಗರದ ರಾಮಣ್ಣ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು

ಹೊರ ವಲಯ ಒಳ ಬೇಗುದಿ

ಯಲಹಂಕ: ಗುಂಡಿಗಳಿಂದ ಕೂಡಿರುವ ರಸ್ತೆಗಳು, ಎಲ್ಲೆಂದರಲ್ಲಿ ಕಸದ ರಾಶಿಗಳು, ಹೂಳಿನಿಂದ ಕಟ್ಟಿಕೊಂಡಿರುವ ಚರಂಡಿಗಳು, ಕಿತ್ತುಹೋದ ಪಾದಚಾರಿ ಮಾರ್ಗಗಳು...

ಇದು ಬ್ಯಾಟರಾಯನಪುರ ಕ್ಷೇತ್ರದ ಥಣಿಸಂದ್ರ ವಾರ್ಡ್ ವ್ಯಾಪ್ತಿಯ ರಾಮಕೃಷ್ಣ ಹೆಗಡೆ ನಗರದ ಸ್ಥಿತಿ. ಇಲ್ಲಿನ ರಸ್ತೆಗಳು ಗುಂಡಿಗಳಿಂದ ಕೂಡಿದ್ದು, ಕೆಲವೆಡೆ ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗಾಗಿ ಅಗೆಯಲಾಗಿದೆ. ಹೀಗಾಗಿ, ಇಲ್ಲಿನ ರಸ್ತೆಗಳಲ್ಲಿ ಪ್ರಯಾಣ ಮಾಡಲು ವಾಹನ ಸವಾರರು ಹರಸಾಹಸ ಪಡಬೇಕಾದ ಪರಿಸ್ಥಿತಿಯಿದೆ. ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾದ 110 ಹಳ್ಳಿಗಳ ಪೈಕಿ ಈ ಬಡಾವಣೆಯೂ ಒಂದಾಗಿದೆ.

ಬಡಾವಣೆಯಲ್ಲಿ ಕಾವೇರಿ ನೀರು ಮತ್ತು ಒಳಚರಂಡಿ ಸಂಪರ್ಕಕ್ಕಾಗಿ ಕಾಮಗಾರಿ ಆರಂಭಿಸಿ 3 ವರ್ಷಗಳು ಕಳೆದರೂ ಪೂರ್ಣಗೊಂಡಿಲ್ಲ. ಜಲಮಂಡಳಿ, ಬಿಬಿಎಂಪಿ, ಬೆಸ್ಕಾಂ ಹಾಗೂ ಜಿಯೋ ಕಂಪನಿ ವತಿಯಿಂದ ನಡೆಸಲಾಗಿರುವ ಕಾಮಗಾರಿಗಳಿಂದ ರಸ್ತೆಗಳು ಹದಗೆಟ್ಟಿವೆ. ಎಲ್ಲೆಂದರಲ್ಲಿ ಅಗೆದು ಹಾಗೆಯೇ ಬಿಡಲಾಗಿದೆ. ಈ ರಸ್ತೆಗಳಲ್ಲಿ ಸಂಚಾರ ದುಸ್ತರವಾಗಿದೆ.

'ಜಿಯೋ ಕಂಪನಿ ಮತ್ತು ಜಲಮಂಡಳಿ ರಸ್ತೆಗಳನ್ನು ಅಗೆದ ಬಳಿಕ ಸರಿಯಾಗಿ ಮುಚ್ಚಿಲ್ಲ. ಅಲ್ಲದೆ, 12ರಿಂದ 15ನೇ ಕ್ರಾಸ್, ಸರ್ಕಾರಿ ಶಾಲೆ ಮತ್ತಿತರ ಕಡೆ ರಸ್ತೆ ಮಧ್ಯದಲ್ಲಿ ಅವೈಜ್ಞಾನಿಕವಾಗಿ ಚೇಂಬರ್‌ಗಳನ್ನು ಅಳವಡಿಸಲಾಗಿದೆ. ಇವು ರಸ್ತೆಯ ಮೇಲ್ಭಾಗಕ್ಕೆ ಇರುವುದರಿಂದ ಮಕ್ಕಳು, ವೃದ್ಧರು ಸೇರಿದಂತೆ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿವೆ. ಹಲವು ಮಂದಿ ವಾಹನಗಳಿಂದ ಬಿದ್ದು, ಗಾಯಗೊಂಡಿದ್ದಾರೆ' ಎಂದು ಸ್ಥಳೀಯ ನಿವಾಸಿ ಸೈಯದ್ ಇಸ್ತಿಯಾಕ್ ಅಹಮದ್ ದೂರಿದರು.

'ರಾಮಣ್ಣ ಮುಖ್ಯರಸ್ತೆಯ ಹಲವು ಕಡೆ ಗುಂಡಿಗಳು ಬಿದ್ದಿವೆ. ಇದರ ಜತೆಗೆ ಒಳಚರಂಡಿ ಗುಂಡಿ ಮುಚ್ಚಳ ತೆರೆದುಕೊಂಡಿದ್ದು, ಕೊಳಚೆ ನೀರು ರಸ್ತೆಯ ಮೇಲೆ ಹರಿಯುತ್ತಿದೆ. ರಸ್ತೆಯ ಪಕ್ಕದಲ್ಲೇ ಕಸದ ರಾಶಿ ಹಾಕಲಾಗುತ್ತಿದೆ. ಸಮರ್ಪಕವಾಗಿ ಕಸವನ್ನು ವಿಲೇವಾರಿ ಮಾಡದ ಕಾರಣ, ರಸ್ತೆಯನ್ನು ಕಸ ಆವರಿಸಿಕೊಳ್ಳುತ್ತಿದೆ. ಇದರಿಂದ ಪ್ರಯಾಣಿಕರು ಮೂಗು ಮುಚ್ಚಿಕೊಂಡು ಸಾಗಬೇಕಾಗಿದೆ. ಮುಖ್ಯರಸ್ತೆಯ ಸಮೀಪದಲ್ಲೇ ಆಂಜನೇಯಸ್ವಾಮಿ ದೇವಸ್ಥಾನವಿದ್ದು, ಭಕ್ತಾದಿಗಳು ಕಿರಿಕಿರಿ ಅನುಭವಿಸಬೇಕಾಗಿದೆ' ಎಂದು ಥಣಿಸಂದ್ರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಖಲೀಲ್ ಉಲ್ಲಾ ಬೇಸರ ವ್ಯಕ್ತಪಡಿಸಿದರು.

ಚರಂಡಿಗಳಲ್ಲಿ ಹೂಳು: 'ಬಡಾವಣೆಯ ಚರಂಡಿಗಳಲ್ಲಿ ಹೂಳು ತುಂಬಿಕೊಂಡು 3 ವರ್ಷಗಳು ಕಳೆದಿವೆ. ಇದರಿಂದಾಗಿ ಮಳೆಗಾಲದಲ್ಲಿ ಕೊಳಚೆನೀರು ರಸ್ತೆಯ ಮೇಲೆ ಹರಿಯುತ್ತದೆ. ಕೆಲವರ ಮನೆಗಳಿಗೆ ಈ ನೀರು ನುಗ್ಗಿದ ಉದಾಹರಣೆಗಳೂ ಇವೆ. ಸರ್ಕಾರಿ ಶಾಲೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬಳಿ ಕಸದ ರಾಶಿ ಹಾಕಲಾಗಿದೆ. ಸಾಂಕ್ರಾಮಿಕ ರೋಗದ ಭೀತಿ ಸಹ ಸುತ್ತಮುತ್ತಲಿನವರು ಎದುರಿಸುತ್ತಿದ್ದಾರೆ' ಎಂದು ಸ್ಥಳೀಯ ನಿವಾಸಿ ಎಸ್‌.ಟಿ. ದಾಸಪ್ಪ ದೂರಿದರು.

'ಅನುದಾನದಲ್ಲಿ ತಾರತಮ್ಯ'



ಕೃಷ್ಣ ಬೈರೇಗೌಡ

'ಕಳೆದ 3 ವರ್ಷಗಳಿಂದ ಕಾವೇರಿ ಮತ್ತು ಒಳಚರಂಡಿ ಸಂಪರ್ಕಕ್ಕಾಗಿ ಕಾಮಗಾರಿಗಳನ್ನು ಕೈಗೊಂಡಿರುವುದರಿಂದ ಎಲ್ಲ ರಸ್ತೆಗಳು ಹಾಳಾಗಿವೆ. ಅಭಿವೃದ್ಧಿಗಾಗಿ ಒಂದು ಸಾವಿರ ಕೋಟಿ ರೂಪಾಯಿ ನೀಡುವುದಾಗಿ ಬಿಜೆಪಿ ಸರ್ಕಾರ ಹೇಳಿತ್ತು. 110 ಹಳ್ಳಿಗಳಲ್ಲಿ ಹೆಚ್ಚಿನ ಪ್ರದೇಶಗಳು ನಮ್ಮ ಕ್ಷೇತ್ರಕ್ಕೆ ಒಳಪಡಲಿವೆ. ಇಷ್ಟಾಗಿಯೂ ಕೇವಲ ₹ 25 ಕೋಟಿ ನೀಡಿ, ಬಿಜೆಪಿ ಶಾಸಕರಿರುವ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ' ಎಂದು ಬ್ಯಾಟರಾಯನಪುರ ಕ್ಷೇತ್ರದ ಶಾಸಕ ಕೃಷ್ಣಬೈರೇಗೌಡ ಆರೋಪಿಸಿದರು.

'ಅನುದಾನದಲ್ಲಿ ತಾರತಮ್ಯ ಮಾಡಿದರೂ ಹೋರಾಟ ಮಾಡಿ, ಆದ್ಯತೆಯ ಮೇರೆಗೆ ತೀರಾ ಹಾಳಾಗಿರುವ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸರ್ಕಾರ ಸಹಕಾರ ನೀಡದಿದ್ದರೆ ಅಭಿವೃದ್ಧಿ ಮಾಡುವುದಾದರೂ ಹೇಗೆ? ಅಭಿವೃದ್ಧಿಯ ವಿಚಾರದಲ್ಲಿ ದ್ವೇಷದ ರಾಜಕಾರಣ ಮಾಡಬಾರದು' ಎಂದರು.

'ಬಡಾವಣೆಯಲ್ಲಿ 25 ಕೊಳವೆ ಬಾವಿಗಳಿವೆಯೆಂದು ಹೇಳಲಾಗುತ್ತಿದ್ದರೂ 6 ತಿಂಗಳಿಂದ ನಲ್ಲಿಗಳಲ್ಲಿ ನೀರು ಬರುತ್ತಿಲ್ಲ. ಇದರಿಂದ ಕುಡಿಯಲು ಮತ್ತು ದಿನನಿತ್ಯದ ಬಳಕೆಗೆ ನೀರಿನ ಸಮಸ್ಯೆ ಕಾಡಲಾರಂಭಿಸಿದೆ. ನೀರಿಗಾಗಿ ಟ್ಯಾಂಕರ್‌ಗಳನ್ನು ಅವಲಂಬಿಸಬೇಕಾಗಿದೆ' ಎಂದು ಹೆಗಡೆ ನಗರದ ನಿವಾಸಿ ಗುಲ್ನಾಜ್ ಬೇಗಂ ಬೇಸರ ವ್ಯಕ್ತಪಡಿಸಿದರು.

ವಿಶ್ವ ಶ್ರವಣ ದಿನಾಚರಣೆ ಪ್ರಯುಕ್ತ ವಿಚಾರ ಸಂಕಿರಣ

'ಶ್ರವಣ ದೋಷ ಸಮಸ್ಯೆ: ಶೀಘ್ರ ಪತ್ತೆಯಿಂದ ಪರಿಹಾರ'

ಪ್ರಜಾವಾಣಿ ವಾರ್ತೆ

'ಡಾ. ಶಾಂತಾ ರಾಧಾಕೃಷ್ಣ ದತ್ತಿ ಪ್ರಶಸ್ತಿ'ಯನ್ನು ಪಿ. ಪ್ರಜ್ವಲ್ ಅವರಿಗೆ ಪ್ರದಾನ ಮಾಡಲಾಯಿತು. ಡಾ.ವಿ. ಶ್ರೀನಿವಾಸ್, ಡಾ. ವಿಶ್ವನಾಥ್ ಭಟ್, ಎಸ್‌ಜಿಎಸ್ ವಾಗ್ದೇವಿ ಸೆಂಟರ್‌ನ ರಾಧಾಕೃಷ್ಣ, ಡಾ. ಶಾಂತಾ ರಾಧಾಕೃಷ್ಣ ಇದ್ದಾರೆ – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಶ್ರವಣದೋಷ ಸಮಸ್ಯೆಯು ಕಲಿಕೆ ಮತ್ತು ಸ್ವಾವಲಂಬಿ ಜೀವನಕ್ಕೆ ಅಡ್ಡಿಪಡಿಸುತ್ತದೆ. ಈ ಸಮಸ್ಯೆಯನ್ನು ಆದಷ್ಟು ಬೇಗ ಗುರುತಿಸಿದಲ್ಲಿ ಪರಿಹಾರ ಒದಗಿಸಲು ಸಾಧ್ಯ' ಎಂದು ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ವಿಶ್ವ ಶ್ರವಣ ದಿನಾಚರಣೆ ಪ್ರಯುಕ್ತ ಎಸ್.ಜಿ.ಎಸ್. ವಾಗ್ದೇವಿ ಸೆಂಟರ್ ನಗರದಲ್ಲಿ ಗುರುವಾರ ಹಮ್ಮಿಕೊಂಡ 26ನೇ ವಾರ್ಷಿಕೋತ್ಸವ ಹಾಗೂ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

'ನವಜಾತ ಶಿಶುಗಳಲ್ಲಿ ಕಾಣಿಸಿಕೊಳ್ಳುವ ಶ್ರವಣ ಸಮಸ್ಯೆಗಳನ್ನು ಪಾಲಕರು ಕಡೆಗಣಿಸಬಾರದು. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಪ್ರತಿ ಸಾವಿರ ಜನರಲ್ಲಿ ಮೂರರಿಂದ ನಾಲ್ಕು ಜನರಿಗೆ ಶ್ರವಣ ದೋಷ ಸಮಸ್ಯೆಯಿದೆ. ಆದರೆ, ಈ ಬಗ್ಗೆ ನಿಖರ ಅಧ್ಯಯನಗಳು ನಡೆದಿಲ್ಲ. ಶ್ರವಣ ದೋಷ ಸಮಸ್ಯೆ ಇರುವ ಮಕ್ಕಳನ್ನು ತಾಳ್ಮೆಯಿಂದ ನೋಡಿಕೊಳ್ಳಬೇಕು. ಪ್ರತಿ ಮಗುವಿಗೆ ಒಬ್ಬ ಶಿಕ್ಷಕರು ಅಗತ್ಯ. ಹೀಗಾಗಿ, ತಾಯಿಯೇ ಮೊದಲ ಗುರುವಾಗಿ ಕಾರ್ಯನಿರ್ವಹಿಸಬೇಕು. ಸದೃಢ ಮನಸ್ಥಿತಿಯಲ್ಲಿ ಕಲಿಕೆಗೆ ಕ್ರಮವಹಿಸಬೇಕು. ಅನುಕಂಪದ ಬದಲು ಸ್ವಾವಲಂಬಿ ಜೀವನಕ್ಕೆ ನೆರವಾಗಬೇಕು' ಎಂದರು.

ಸೇಂಟ್ ಜಾನ್ಸ್ ಆಸ್ಪತ್ರೆಯ ನಾಗ ಪೂರ್ಣಿಮಾ, 'ಎಲ್ಲ ನವಜಾತ ಶಿಶುಗಳಿಗೆ ಶ್ರವಣ ತಪಾಸಣೆಯನ್ನು ನಡೆಸಬೇಕು. ಈ ಸಮಸ್ಯೆ ಬಗ್ಗೆ ಪಾಲಕರಿಗೆ ಜಾಗೃತಿ ಮೂಡಿಸಬೇಕು. ನಮ್ಮ ಆಸ್ಪತ್ರೆಯಿಂದ ಈವರೆಗೆ 36 ಸಾವಿರ ಮಕ್ಕಳನ್ನು ತಪಾಸಣೆಗೆ ಒಳಪಡಿಸಲಾಗಿದೆ. ಶ್ರವಣ ದೋಷವನ್ನು ಪ್ರಾಥಮಿಕ ಹಂತದಲ್ಲೇ ಗುರುತಿಸುವುದು ಮುಖ್ಯ. ಮಕ್ಕಳು ಬೆಳೆಯುತ್ತಾ ಹೋದಂತೆ ಅವರಲ್ಲಿನ ಕೇಳಿಸಿಕೊಳ್ಳುವ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೆ' ಎಂದು ತಿಳಿಸಿದರು.

ರಾಧಾಕೃಷ್ಣ ಸ್ಪೆಷಲಿಸ್ಟ್ ಆಸ್ಪತ್ರೆಯ ಡಾ. ವಿಶ್ವನಾಥ ಭಟ್, 'ನವಜಾತ ಶಿಶುಗಳಿಗೆ 1960ರ ಬಳಿಕ ಶ್ರವಣ ತಪಾಸಣೆ ಪ್ರಾರಂಭಿಸಲಾಯಿತು. ಆಗ ಪ್ರಯೋಗಾಲಯ ಮತ್ತು ತಂತ್ರಜ್ಞಾನ ಕ್ಷೇತ್ರವು ಅಷ್ಟಾಗಿ ಮುಂದುವರೆದಿರಲಿಲ್ಲ. ಆದ್ದರಿಂದ ತಪಾಸಣೆ ದುಬಾರಿ ಆಗುತ್ತಿತ್ತು. ಈಗ ಅಗ್ಗದ ದರದಲ್ಲಿ ತಪಾಸಣೆ ಮಾಡಲಾಗುತ್ತಿದೆ' ಎಂದರು.

ಶ್ರವಣ ದೋಷ ಸಮಸ್ಯೆಯ ನಡುವೆಯೂ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ಪಿ. ಪ್ರಜ್ವಲ್ ಅವರಿಗೆ 'ಡಾ. ಶಾಂತಾ ರಾಧಾಕೃಷ್ಣ ದತ್ತಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಎಸ್.ಜಿ.ಎಸ್. ವಾಗ್ದೇವಿ ಸೆಂಟರ್‌ನ ಮಕ್ಕಳು 'ಪುರಂದರ' ಕಿರು ನಾಟಕ ಪ್ರದರ್ಶಿಸಿದರು.

'ಕಾಕ್ಲಿಯರ್ ಇಂಪ್ಲಾಂಟ್ ದುಬಾರಿ'

'ಶ್ರವಣ ದೋಷ ಸಮಸ್ಯೆ ಇರುವವರು ಸಮಾಜದಲ್ಲಿ ವಿವಿಧ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ರಸ್ತೆಗಳನ್ನು ದಾಟುವಾಗ ಅಪಘಾತ ಸಂಭವಿಸುವ ಸಾಧ್ಯತೆ ಇರುತ್ತದೆ. ನವಜಾತ ಶಿಶುಗಳಿಗೆ ಶ್ರವಣ ದೋಷ ಸಮಸ್ಯೆ ಪತ್ತೆಗೆ ಪರೀಕ್ಷೆ (ಒಎಇ) ನಡೆಸಬೇಕು. ಸಂಬಂಧದಲ್ಲಿ ವಿವಾಹ, ಆನುವಂಶಿಕ ಸೇರಿದಂತೆ ವಿವಿಧ ಕಾರಣದಿಂದ ನವಜಾತ ಶಿಶುಗಳಲ್ಲಿ ಶ್ರವಣ ದೋಷ ಕಾಣಿಸಿಕೊಳ್ಳುತ್ತದೆ. ಈ ಸಮಸ್ಯೆಗೆ ಕಾಕ್ಲಿಯರ್ ಇಂಪ್ಲಾಂಟ್ ಮಾಡಲಾಗುತ್ತದೆ. ಇದಕ್ಕೆ ₹ 15 ಲಕ್ಷದವರೆಗೆ ವೆಚ್ಚ ಆಗುವುದರಿಂದ ಎಲ್ಲರಿಗೂ ಸಾಧ್ಯವಾಗುತ್ತಿಲ್ಲ. ಸರ್ಕಾರ ಈ ನಿಟ್ಟಿನಲ್ಲಿ ಕ್ರಮವಹಿಸಬೇಕು' ಎಂದು ಬಿಜಿಎಸ್ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಇಎನ್‌ಟಿ ತಜ್ಞ ಡಾ.ವಿ. ಶ್ರೀನಿವಾಸ್ ಹೇಳಿದರು.

ಜನಜೀವನ ಪ್ರಭಾವಿಸಲಿದೆ ರಷ್ಯಾ–ಉಕ್ರೇನ್ ಯುದ್ಧ

ಪ್ರಜಾವಾಣಿ ವಾರ್ತೆ



ವೀರೇಂದ್ರ ಹೆಗ್ಗಡೆ

ಚಿತ್ರದುರ್ಗ: 'ರಷ್ಯಾ–ಉಕ್ರೇನ್ ಯುದ್ಧದ ಬೆಂಕಿಯ ಬಿಸಿ ನಮಗೂ ತಟ್ಟಲಾರಂಭಿಸಿದೆ. ಈ ಜ್ವಾಲೆಯ ಕಿಡಿ ಹಾರಿದರೆ ಇನ್ನಷ್ಟು ಅಪಾಯವಿದೆ. ಇಂಧನದ ಬೆಲೆ ಹೆಚ್ಚಾಗಿ, ಜನಜೀವನದ ಮೇಲೆ ಪರಿಣಾಮ ಬೀರಬಹುದು' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಕಳವಳ ವ್ಯಕ್ತಪಡಿಸಿದರು.

ಗುರುವಾರ ಮಂತ್ರಾಲಯಕ್ಕೆ ತೆರಳುತ್ತಿದ್ದ ಅವರು ಚಿತ್ರದುರ್ಗದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ಯುದ್ಧ ಉಕ್ರೇನ್‌ನಲ್ಲಿ ಮಾತ್ರವಲ್ಲ ಪಕ್ಕದ ಮನೆಗೂ ತಲುಪಿದೆ. ನಮ್ಮ ವಿದ್ಯಾರ್ಥಿಗಳೂ ಅಲ್ಲಿ ಸಿಲುಕಿದ್ದಾರೆ. ನಾವು ಇನ್ನಷ್ಟು ಎಚ್ಚರಿಕೆಯಿಂದ ಇರುವ ಅಗತ್ಯವಿದೆ. ವಿಶ್ವಶಾಂತಿ ನಮ್ಮ ಊರಿನದ್ದಲ್ಲ ಎಂಬ ಉದಾಸೀನ ಬೇಡ' ಎಂದು ಹೇಳಿದರು.

'ಯುದ್ಧಪೀಡಿತ ಉಕ್ರೇನ್ ದೇಶದಲ್ಲಿ ಸಿಲುಕಿದ ಭಾರತೀಯರನ್ನು ಕರೆತರುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ. ಅವರನ್ನು ಕರೆತರುವ ಪ್ರಯತ್ನ ಬಿಟ್ಟರೆ ಬೇರೆ ಆಯ್ಕೆಯೇ ಇಲ್ಲವಾಗಿದೆ. ಯುದ್ಧ ನಡೆಯುವ ಸಂಭವ ಕಡಿಮೆ ಎಂಬ ಕಾರಣಕ್ಕೆ ಅನೇಕರು ಅಲ್ಲೇ ಇದ್ದರು. ಯುದ್ಧ ಘೋಷಣೆಯಾಗುವ ಮೊದಲೇ ಹೊರಟಿದ್ದರೆ ಅನುಕೂಲವಾಗುತ್ತಿತ್ತು' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಸೋವಿಯತ್ ಒಕ್ಕೂಟವನ್ನು ಮತ್ತೆ ರಚಿಸುವುದು ರಷ್ಯಾಯ ಉದ್ದೇಶ ಇರಬಹುದು. ಉಕ್ರೇನ್ ನೆರೆಯ ರಾಷ್ಟ್ರಗಳಿಗೂ ಯುದ್ಧ ವಿಸ್ತರಿಸಿದರೆ ಗಡಿ ಭಾಗದಲ್ಲಿರುವ ಹಾಗೂ ನೆರೆಯ ದೇಶಗಳಲ್ಲಿ ಆಶ್ರಯ ಪಡೆದಿರುವ ಭಾರತೀಯರಿಗೆ ಇನ್ನಷ್ಟು ತೊಂದರೆ ಆಗಬಹುದು. ಉಕ್ರೇನ್ ಸುತ್ತಲಿನ ದೇಶಗಳೂ ಸೇರಿ ಇಡೀ ವಿಶ್ವವೇ ಎಚ್ಚರಿಕೆ ಯಿಂದ ಇರುವ ಅಗತ್ಯವಿದೆ' ಎಂದು ಅಭಿಪ್ರಾಯಪಟ್ಟರು.

'ಸಮಾಜದಲ್ಲಿ ನಡೆಯುವ ಯಾವುದೇ ವಿಚಾರಗಳಿಗೆ ವಿದ್ಯಾರ್ಥಿ ಸಮೂಹ ಸ್ಪಂದಿಸುವುದಿಲ್ಲ ಎಂಬ ಆಪಾದನೆ ಬಹುದಿನ ಇತ್ತು. ವ್ಯಾಸಂಗ, ಉದ್ಯೋಗ ಹಾಗೂ ಭವಿಷ್ಯದ ಆಲೋಚನೆಗೆ ಮಾತ್ರ ಸೀಮಿತವಾಗುತ್ತಿದ್ದಾರೆ ಎಂಬ ದೂರು ಗಳಿದ್ದವು. ಪಠ್ಯದಿಂದ ಹೊರಗೂ ಆಲೋಚನೆ ಮಾಡುವ ಮನೋಭಾವ ವಿದ್ಯಾರ್ಥಿಗಳಲ್ಲಿ ಕಾಣುತ್ತಿದೆ. ಆದರೆ, ಈ ವಿದ್ಯಾರ್ಥಿ ಸಮೂಹ ದುರ್ಬಳಕೆ ಆಗಬಾರದು' ಎಂದರು.

'367 ಕೆರೆ ಅಭಿವೃದ್ಧಿ'

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ರಾಜ್ಯದ 367 ಕೆರೆಗಳ ಹೂಳು ತೆಗೆಸಿ ಅಭಿವೃದ್ಧಿ ಮಾಡಲಾಗಿದೆ ಎಂದು ಡಿ.ವೀರೇಂದ್ರ ಹೆಗ್ಗಡೆ ಮಾಹಿತಿ ನೀಡಿದರು.

'ಕಳೆದ ಕೆಲ ವರ್ಷಗಳ ಹಿಂದೆ ರಾಜ್ಯದಲ್ಲಿ ತಲೆದೋರಿದ ಬರ ಪರಿಸ್ಥಿತಿಯ ಭೀಕರತೆಯನ್ನು ಗಮನಿಸಿದೆವು. ಧರ್ಮಸ್ಥಳದಲ್ಲಿ ಕೂಡ ನೀರಿಗೆ ಅಭಾವ ಸೃಷ್ಟಿಯಾಗಿತ್ತು. ಉತ್ತರ ಕರ್ನಾಟಕದ ಹಲವೆಡೆ ನೀರಿಗೆ ತೊಂದರೆ ಉಂಟಾಗಿತ್ತು. ಕೆರೆಯ ಹೂಳು ತೆಗೆದು ಅಭಿವೃದ್ಧಿ ಮಾಡುವ ಕಾರ್ಯಕ್ಕೆ ಇದು ಪ್ರೇರಣೆ ನೀಡಿತು' ಎಂದರು.

'ರಾಜಕಾರಣಿಗಳು ಜಲಾಶಯಗಳಿಂದ ಕೆರೆಗೆ ನೀರು ಹರಿಸುತ್ತಾರೆ. ಇದರಿಂದ ಕೆರೆಗಳ ರಕ್ಷಣೆಯ ಬಗ್ಗೆ ಜನರಲ್ಲಿ ತಾತ್ಸಾರ ಭಾವನೆ ಮೂಡಿದೆ. ಜನರನ್ನೂ ಒಳಗೊಳ್ಳಬೇಕು ಎಂಬ ಉದ್ದೇಶದಿಂದ ನಮ್ಮ ಊರು, ನಮ್ಮ ಕೆರೆ ಎಂಬ ಹೆಸರಿನಲ್ಲಿ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ಹೂಳು ತೆಗೆದ ಬಳಿಕ ಈ ಕೆರೆಗಳಿಗೆ ಜೀವಕಳೆ ಬಂದಿದೆ' ಎಂದು ಅಭಿಪ್ರಾಯಪಟ್ಟರು.

ಸೀಮಿತ ಅವಧಿ, ಸೀಮಿತ ಮಾರ್ಗದಲ್ಲಿ ಕದನವಿರಾಮ

ಒಂದನೇ ಪುಟದಿಂದ...

ಜನರ ಸುರಕ್ಷತೆಗಾಗಿ ತೆಗೆದುಕೊಂಡ ತೀರ್ಮಾನವನ್ನು ರಷ್ಯಾ ದೃಢಪಡಿಸಿದೆ. ಪೋಲೆಂಡ್ ಮತ್ತು ಬೆಲರೂಸ್ ಗಡಿ ಭಾಗದಲ್ಲಿ ರಷ್ಯಾ ಮತ್ತು ಉಕ್ರೇನ್‌ನ ಅಧಿಕಾರಿಗಳು, ಸಂಧಾನಕಾರರ ನಡುವೆ ಮಾತುಕತೆ ನಡೆಯಿತು.

ಮಾತುಕತೆಯಲ್ಲಿ ಪಾಲ್ಗೊಂಡಿದ್ದ ರಷ್ಯಾ ಪರ ಮುಖ್ಯ ಸಂಧಾನಕಾರರಾದ ವ್ಲಾಡಿಮಿರ್ ಮೆಡಿನ್ಸ್ಕಿ ಅವರು ಈ ಬೆಳವಣಿಗೆಯನ್ನು 'ಗಣನೀಯವಾದ ಪ್ರಗತಿ' ಎಂದು ಬಣ್ಣಿಸಿದ್ದಾರೆ.

'2ನೇ ಸುತ್ತಿನ ಚರ್ಚೆ ಮುಗಿದಿದೆ. ದುರದೃಷ್ಟವಶಾತ್ ಉಕ್ರೇನ್ ಬಯಸಿದ್ದ ಫಲಿತಾಂಶ ದೊರೆತಿಲ್ಲ. ಕೇವಲ ಮಾನವೀಯತೆಯ ಮಾರ್ಗರೂಪಿಸಲು ನಿರ್ಧರಿಸಲಾಯಿತು' ಎಂದು ಉಕ್ರೇನ್ ಅಧ್ಯಕ್ಷರ ಸಲಹೆಗಾರ ಮೈಖೈಲೊ ಪೊಡೊಲ್ಯಾಕ್ ಟ್ವೀಟ್ ಮಾಡಿದ್ದಾರೆ.

'ಈ ಒಪ್ಪಂದವನ್ನು ಆದಷ್ಟು ಕೂಡಲೇ ಜಾರಿಗೊಳಿಸಲಾಗುವುದು' ಎಂದು ರಷ್ಯಾದ ಇನ್ನೊಬ್ಬ ಸಂಧಾನಕಾರ, ಸಂಸದ ಲಿಯೊನಿಡ್ ಸ್ಲಟ್ಸ್ಕಿ ಅವರೂ ಪ್ರತಿಕ್ರಿಯಿಸಿದರು.

ಉಕ್ರೇನ್‌ನ ಅಧ್ಯಕ್ಷರ ಸಲಹೆಗಾರ ಮೈಖೈಲೊ ಪೊಡೊಲ್ಯಾಕ್ ಅವರು, ನಾಗರಿಕರು ಸುರಕ್ಷಿತವಾಗಿ ನಿರ್ಗಮಿಸುವ ವಾತಾವರಣ ಕಲ್ಪಿಸಲು ತಾತ್ಕಾಲಿಕವಾಗಿ ಕದನ ವಿರಾಮ ಘೋಷಿಸುವುದನ್ನು ಉಭಯ ಬಣಗಳು ಪ್ರತಿಪಾದಿಸಿದವು ಎಂದು ತಿಳಿಸಿದರು.

'ಆದರೆ, ಹೀಗೆ ಕದನ ವಿರಾಮ ಘೋಷಿಸುವುದು ಎಲ್ಲೆಡೆ ಅಲ್ಲ. ಎಲ್ಲಿ, ಮಾನವೀಯ ಮಾರ್ಗಗಳನ್ನು ರೂಪಿಸಲಾಗುವುದೋ ಅಲ್ಲಿಗೆ ಮಾತ್ರ ಹಾಗೂ ನಾಗರಿಕರು ನಿರ್ಗಮಿಸುವ ಅವಧಿಗಷ್ಟೇ ಸೀಮಿತವಾಗಿರಲಿದೆ' ಎಂದು ಸ್ಪಷ್ಟಪಡಿಸಿದರು.

ಕದನವು ತೀವ್ರ ಸ್ವರೂಪವನ್ನು ಪಡೆದುಕೊಂಡಿರುವ ನಗರಗಳು, ಪ್ರದೇಶಗಳಲ್ಲಿ ಔಷಧ ಮತ್ತು ಆಹಾರ ಸಾಮಗ್ರಿಯನ್ನು ಪೂರೈಸುವ ಕುರಿತಂತೆಯೂ ಉಭಯ ಬಣಗಳು ಒಪ್ಪಿವೆ ಎಂದು ಮೂಲಗಳು ತಿಳಿಸಿವೆ.

ರಷ್ಯಾದ ಸೇನೆಗಳು ಉಕ್ರೇನ್ ಮೇಲೆ ದಾಳಿ ಆರಂಭಿಸಿದ ಒಂದು ವಾರದ ತರುವಾಯ, ಉಭಯ ಬಣಗಳು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಇದೇ ಮೊದಲ ಬಾರಿಗೆ ಒಮ್ಮತದ ತೀರ್ಮಾನಕ್ಕೆ ಬಂದಂತಾಗಿದೆ.

ಮೂರನೇ ಸುತ್ತಿನ ಚರ್ಚೆ: ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧದ ಸ್ಥಿತಿಯನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ಮೂರನೇ ಸುತ್ತಿನ ಮಾತುಕತೆಯು ಮುಂದಿನ ವಾರದ ಆರಂಭದಲ್ಲಿ ನಡೆಯಲಿದೆ. ಉಕ್ರೇನ್ ಅಧ್ಯಕ್ಷರ ಸಲಹೆಗಾರರಾದ ಮೈಖೈಲೊ ಪೊಡೊಲ್ಯಾಕ್ ಈ ವಿಷಯ ತಿಳಿಸಿದ್ದಾರೆ.

ರಷ್ಯಾ ದಾಳಿ: ಕ್ವಾಡ್ ಸಭೆಯಲ್ಲೂ ಚರ್ಚೆಯಿಂದ ದೂರ ಉಳಿದ ಭಾರತ

ನವದೆಹಲಿ (ಎಎಫ್‌ಪಿ): ಕ್ವಾಡ್ ರಾಷ್ಟ್ರಗಳ ಸಭೆಯಲ್ಲಿಯೂ ಗುರುವಾರ ಪ್ರಧಾನಿ ಮೋದಿ ಅವರು ಉಕ್ರೇನ್ ಮೇಲೆ ರಷ್ಯಾದ ದಾಳಿ ವಿಷಯ ಪ್ರಸ್ತಾಪಿಸದೆ ಅಂತರ ಕಾಯ್ದುಕೊಂಡರು.

ಕ್ವಾಡ್ ಸಮೂಹದ ಅಮೆರಿಕ, ಆಸ್ಟ್ರೇಲಿಯಾ ಮತ್ತು ಜಪಾನ್ ರಷ್ಯಾದ ದಾಳಿ ಖಂಡಿಸಿದವು. ಆದರೆ, ಪ್ರಧಾನಿ ಮೋದಿ ಅವರು, ಸಮೂಹವೂ ಆದಷ್ಟು ಪ್ರಾದೇಶಿಕ ವಿಷಯಗಳತ್ತಲೇ ಗಮನ ಕೇಂದ್ರೀಕರಿಸಬೇಕು ಎಂದು ಸಲಹೆ ಮಾಡಿದರು.

ಈ ಕುರಿತು ಸರ್ಕಾರ ಹೇಳಿಕೆ ನೀಡಿದ್ದು, ಅಮೆರಿಕ ಅಧ್ಯಕ್ಷರ ಭೇಟಿಯ ಬಳಿಕ ಪ್ರಧಾನಿಯು ಆಸ್ಟ್ರೇಲಿಯಾ ಪ್ರಧಾನಿ, ಜಪಾನ್ ಪ್ರಧಾನಿ ಜೊತೆಗೂ ಭೇಟಿಯಾಗಿದ್ದರು ಎಂದು ತಿಳಿಸಿದರು.

ಉಕ್ರೇನ್ ಬೆಳವಣಿಗೆಯನ್ನು ಸಭೆಯಲ್ಲಿ ಚರ್ಚಿಸಲಾಯಿತು. ಆದರೆ, ಸೌಹಾರ್ದ ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮಾತುಕತೆಯ ಮೂಲಕವಷ್ಟೇ ಪರಿಹಾರ ಕಂಡುಕೊಳ್ಳಬೇಕು ಎಂದು ಮೋದಿ ಪ್ರತಿಪಾದಿಸಿದರು ಎಂದು ತಿಳಿಸಿದೆ.

'ರಷ್ಯಾ– ಉಕ್ರೇನ್ ನಾಗರಿಕರು ಒಂದೇ'

- ರಷ್ಯಾ ಮತ್ತು ಉಕ್ರೇನ್ ನಡುವಿನ ಬಿಕ್ಕಟ್ಟು ತೀವ್ರಗೊಂಡಿರುವ ಬೆನ್ನಲ್ಲೇ, 'ಉಕ್ರೇನ್ ಮತ್ತು ರಷ್ಯಾದ ನಾಗರಿಕರು ಒಂದೇ' ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿರುವುದು ಮಹತ್ವಪಡೆದುಕೊಂಡಿದೆ.
- ಇನ್ನೊಂದೆಡೆ, ಭಾರತವು ಈ ಮೊದಲೇ ಸೂಚಿಸಿರುವ ಮೂರು ಸುರಕ್ಷಿತ ತಾಣಗಳಿಗೆ ನಿರ್ಗಮಿಸಬೇಕು ಎಂದು ಉಕ್ರೇನ್‌ನಲ್ಲಿ ಅತಂತ್ರರಾಗಿರುವ ತನ್ನ ನಾಗರಿಕರಿಗೆ ಹೇಳಿದೆ.
- ಈ ಮಧ್ಯೆ, ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು, ತ್ವರಿತಗತಿಯಲ್ಲಿ ಸದಸ್ಯತ್ವ ನೀಡುವ ನಿಟ್ಟಿನಲ್ಲಿ ಕಾರ್ಯತತ್ಪರವಾಗಬೇಕು ಎಂದು ಯೂರೋಪ್ ಒಕ್ಕೂಟಕ್ಕೆ ಆಗ್ರಹಪಡಿಸಿದ್ದಾರೆ.
- ಉಕ್ರೇನ್ ದೇಶ ತೊರೆದವರ ಸಂಖ್ಯೆ 10 ಲಕ್ಷವನ್ನು ದಾಟಿದೆ
- ಕೆರ್ಸನ್ ನಗರದಲ್ಲಿ 2.80 ಲಕ್ಷ ಜನರಿದ್ದಾರೆ
- ರಷ್ಯಾ–ಉಕ್ರೇನ್ ನಡುವೆ ಶಾಂತಿ ಮಾತುಕತೆ ಗುರುವಾರವೂ ನಡೆದಿದೆ
- ಮುಂದಿನ ಎರಡು ದಿನಗಳಲ್ಲಿ 7,400 ಭಾರತೀಯರನ್ನು ಉಕ್ರೇನ್‌ನಿಂದ ಕರೆತರುವ ನಿರೀಕ್ಷೆ ಇದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ಹೇಳಿದೆ. ಫೆಬ್ರುವರಿ 22ರ ಬಳಿಕ ಈವರೆಗೆ 6,998 ಮಂದಿಯನ್ನು ವಿಶೇಷ ವಿಮಾನದಲ್ಲಿ ಕರೆತರಲಾಗಿದೆ
- ಹಾರ್ಕಿವ್‌ನಲ್ಲಿ ಇರುವ ಭಾರತೀಯರು ತಕ್ಷಣವೇ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡಿ, ಮಾಹಿತಿ ನೀಡಬೇಕು ಎಂದು ವಿದೇಶಾಂಗ ಸಚಿವಾಲಯ ಹೇಳಿದೆ

ಉಕ್ರೇನ್‌ನಿಂದ ಸುರಕ್ಷಿತವಾಗಿ ಬೆಂಗಳೂರು ತಲುಪಿದ ಸಂತಸದಲ್ಲಿ ಪೋಷಕರೊಂದಿಗೆ ಖುಷಿ ವ್ಯಕ್ತಪಡಿಸಿದ ವಿದ್ಯಾರ್ಥಿನಿಯರು

ವಿಶ್ವ ಚಿಂದಿ ಆಯುವವರ ದಿನಾಚರಣೆ: ಬಿಬಿಎಂಪಿಗೆ ಮನವಿ ಸಲ್ಲಿಕೆ

ಚಿಂದಿ ಆಯುವವರಿಗೆ ವಸತಿ ಸೌಲಭ್ಯ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ತ್ಯಾಜ್ಯ ಪುನರುತ್ಪಾದನೆ ಕುರಿತ ಮಾದರಿಯನ್ನು ಪರಿಶೀಲಿಸಿದರು.

ಬೆಂಗಳೂರು: ಚಿಂದಿ ಆಯುವವರಿಗೆ ವಸತಿ ಸೌಲಭ್ಯ ಕಲ್ಪಿಸುವಂತೆ ತ್ಯಾಜ್ಯ ಶ್ರಮಿಕ ಸಂಘಟನೆ ಒತ್ತಾಯಿಸಿದೆ.

ನಗರದಲ್ಲಿ ಗುರುವಾರ ನಡೆದ ವಿಶ್ವ ತ್ಯಾಜ್ಯ ಆಯುವವರ ದಿನಾಚರಣೆ ಕಾರ್ಯಕ್ರಮದಲ್ಲಿ ತಮ್ಮ ಬೇಡಿಕೆಗಳ ಮನವಿಯನ್ನು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರಿಗೆ ಸಲ್ಲಿಸಲಾಯಿತು.

ಬೆಂಗಳೂರು, ಮೈಸೂರು, ಮಂಗಳೂರು, ಚಿಂತಾಮಣಿ, ಮಡಿಕೇರಿ, ದಾವಣಗೆರೆ, ಹುಬ್ಬಳ್ಳಿ ಮತ್ತು ಧಾರವಾಡ ಸೇರಿದಂತೆ ರಾಜ್ಯದಾದ್ಯಂತ 25 ಸಾವಿರಕ್ಕೂ ಹೆಚ್ಚು ಚಿಂದಿ ಆಯುವವರು ಇದ್ದಾರೆ. ನಾಗರಿಕರು ಬಳಸಿ ಬಿಸಾಡಿದ ಒಣ ಕಸವನ್ನು ಸಂಗ್ರಹಿಸಿ ಪುನರ್ ಉತ್ಪಾದನೆಗೆ ಮಾಡುವ ಕಾರ್ಖಾನೆಗೆ ಕಳುಹಿಸುವ ಕಾರ್ಯವನ್ನು ಚಿಂದಿ ಆಯುವವರು ಮಾಡುತ್ತಿದ್ದಾರೆ. ಇದರಿಂದ, ತ್ಯಾಜ್ಯಕ್ಕೂ ಬೆಲೆ ಬರುವ ಕಾಯಕದಲ್ಲಿ ತೊಡಗಿದ್ದಾರೆ. ಆದರೆ, ಸೂರಿಗಾಗಿ ಪರದಾಡುತ್ತಿದ್ದಾರೆ ಎಂದು ಸಂಘಟನೆ ಮುಖಂಡರು ಹೇಳಿದರು.

ಕಸ ಸಂಗ್ರಹದಲ್ಲಿ ತೊಡಗಿರುವವರಲ್ಲಿ ಹೆಚ್ಚಿನವರು ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ್ದಾರೆ. ಇವರು ಹೆಚ್ಚು ಜನರು ಅವಿದ್ಯಾವಂತರಾಗಿದ್ದಾರೆ ಮತ್ತು ವಸತಿ ರಹಿತರಾಗಿದ್ದಾರೆ. ಇವರ ವಸತಿ ಯೋಜನೆಗೆ ಅಗತ್ಯ ಇರುವ ಸ್ಥಳವನ್ನು ಮೀಸಲಿಡಬೇಕು ಎಂದು ಕೋರಿದರು.

ಪೌರಕಾರ್ಮಿಕರ ಕುಟುಂಬಗಳಿಗೆ ಕೌಶಲ ತರಬೇತಿ ಮತ್ತು ಮಾರುಕಟ್ಟೆ ಸೌಲಭ್ಯವನ್ನು ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಒದಗಿಸಬೇಕು. ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಕೇಂದ್ರ ಸರ್ಕಾರ ₹3 ಸಾವಿರ ವಿದ್ಯಾರ್ಥಿ ವೇತನ ನೀಡುತ್ತಿದೆ. ರಾಜ್ಯ ಸರ್ಕಾರವು ₹2 ಸಾವಿರ ಸೇರಿಸಿ, ಒಂದು ಮಗುವಿಗೆ ವರ್ಷಕ್ಕೆ ₹5 ಸಾವಿರ ನೀಡಬೇಕು ಎಂದು ಒತ್ತಾಯಿಸಿದರು.

ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ನಗರದ ತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿಸಿಕೊಂಡಿರುವ ಚಿಂದಿ ಆಯುವವರು ಅಸಂಘಟಿತ ವಲಯದಲ್ಲಿದ್ದಾರೆ. 'ಹಸಿರು ದಳ' ಸಂಸ್ಥೆಯು ತ್ಯಾಜ್ಯ ಶ್ರಮಿಕ ಸಂಘಟನೆ ರಚಿಸಿ ಸಬಲೀಕರಣ ಮಾಡುವಲ್ಲಿ ಸಹಕಾರಿಯಾಗಿದೆ ಎಂದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಮಾತನಾಡಿ, 'ಚಿಂದಿ ಆಯುವವರಿಗೆ ವಸತಿ ಸೌಲಭ್ಯ ಮತ್ತು ಕಲ್ಯಾಣ ನಿಧಿ ಸ್ಥಾಪಿಸಲು ಕ್ರಮಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು. ಶಾಸಕಿ ಸೌಮ್ಯರೆಡ್ಡಿ ಹಾಜರಿದ್ದರು. ಅರ್ಚನಾ, ಮೀನಾಕ್ಷಿ ಇದ್ದರು.

ತ್ಯಾಜ್ಯ ಶ್ರಮಿಕ ಸಂಘಟನೆ ಬೇಡಿಕೆಗಳು

- ಚಿಂದಿ ಆಯುವವರಿಗೆ ಗುರುತಿನ ಚೀಟಿಯನ್ನು ಬಿಬಿಎಂಪಿ ನವೀಕರಣ ಮಾಡಬೇಕು.
- ಬಿಬಿಎಂಪಿಗೆ ತ್ಯಾಜ್ಯ ನಿರ್ವಹಣೆಯಲ್ಲಿ ಬರುವ ತೆರಿಗೆ ಹಣದಲ್ಲಿ ಚಿಂದಿ ಆಯುವವರ ಕಲ್ಯಾಣ ನಿಧಿಯನ್ನು ಸ್ಥಾಪಿಸಬೇಕು.
- ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳ ಕಟ್ಟಡದ ಅಳತೆಯನ್ನು ವಿಸ್ತರಿಸಬೇಕು ಮತ್ತು ಮೂಲಸೌಕರ್ಯಗಳನ್ನು ಕಲ್ಪಿಸಬೇಕು.
- ಬೆಂಗಳೂರು ಒನ್ ಮಾದರಿಯಲ್ಲಿ ಪ್ರತಿ ವಾರ್ಡ್‌ಗಳಲ್ಲಿ ಕಾರ್ಮಿಕ ಇಲಾಖೆಯ ಮೂಲಕ ಕಾರ್ಮಿಕರ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸಬೇಕು.
- ಸಾಮಾಜಿಕ ಭದ್ರತೆ ಒದಗಿಸಬೇಕು.
- ಶೂನ್ಯ ಮೊತ್ತದಲ್ಲಿ ಬ್ಯಾಂಕ್ ಖಾತೆ ಮಾಡಿಕೊಡಬೇಕು.
- ಕಾರ್ಮಿಕರಿಗೆ ಜೀವ ವಿಮೆ ಮಾಡಿಕೊಡಬೇಕು

ಸುಭಾಷಿತ

ಸ್ವಯಂ ಸುಧಾರಣೆ ಬಯಸುವವರು ಸಾಧಿಸಬಹುದಾದ ಗುರಿಗಳನ್ನು ಹಾಕಿಕೊಳ್ಳಬೇಕು. ಇದು, ಸ್ವಯಂ ಸುಧಾರಣೆಯ ದಿಸೆಯಲ್ಲಿ ಮೊದಲ ಹೆಜ್ಜೆ.

– ಜೆ.ಕೆ.ರೋಲಿಂಗ್

ಡಿಸೆಂಬರ್ ತ್ರೈಮಾಸಿಕದ ಜಿಡಿಪಿ ಆರ್ಥಿಕ ಚಟುವಟಿಕೆ ಕುಗ್ಗುವ ಸೂಚನೆ?

ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರ ಶೇಕಡ 5.4ರಷ್ಟು ಇತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ವರದಿ ಹೇಳಿದೆ. 2020ರ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ 0.5ರಷ್ಟು ಮಾತ್ರ ಬೆಳವಣಿಗೆ ಸಾಧಿಸಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಕಂಡುಬಂದಿರುವ ಜಿಡಿಪಿ ಬೆಳವಣಿಗೆಯು ದೊಡ್ಡ ಮಟ್ಟದಲ್ಲಿಯೇ ಆಗಿದೆ ಎಂಬುದು ನಿಜ. ಆದರೆ, 2021–22ನೇ ಆರ್ಥಿಕ ವರ್ಷದಲ್ಲಿ ಇದುವರೆಗೆ ಕಂಡುಬಂದಿರುವ ಬೆಳವಣಿಗೆ ಪ್ರಮಾಣವನ್ನು ಗಮನಿಸಿದರೆ, ಕಳವಳಕ್ಕೆ ಕಾರಣವಾಗುವ ಕೆಲವು ಅಂಶಗಳು ಕಾಣಿಸುತ್ತವೆ. ಜೂನ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯು ದಾಖಲೆಯ ಶೇ 20.3ರಷ್ಟು ಇತ್ತು. ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ಜಿಡಿಪಿಯು ಹಿಂಜರಿತ ಸ್ಥಿತಿಯಲ್ಲಿ ಇತ್ತು. ಅದಕ್ಕೆ ಹೋಲಿಸಿದರೆ, ಈ ಬಾರಿಯ ಜೂನ್ ತ್ರೈಮಾಸಿಕ ಬೆಳವಣಿಗೆಯು ದೊಡ್ಡದಾಗಿತ್ತು. ನಂತರ, ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ಪ್ರಮಾಣವು ಶೇ 8.5ರ ಮಟ್ಟಕ್ಕೆ ಬಂತು. ಈಗ, ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 5.4ಕ್ಕೆ ತಲುಪಿದೆ. ಅಂದರೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯ ದರವು ಒಂದು ತ್ರೈಮಾಸಿಕದಿಂದ ಇನ್ನೊಂದು ತ್ರೈಮಾಸಿಕಕ್ಕೆ ಇಳಿಕೆ ಕಾಣುತ್ತಿದೆ. ಡಿಸೆಂಬರ್ ತ್ರೈಮಾಸಿಕದಲ್ಲಿ ಪ್ರಮುಖ ಹಬ್ಬಗಳು ಕೂಡ ಇದ್ದವು. ನವರಾತ್ರಿ, ದೀಪಾವಳಿ ಹಾಗೂ ಕ್ರಿಸ್ಮಸ್ ಈ ಮೂರು ತಿಂಗಳ ಅವಧಿಯಲ್ಲಿ ಬಂದುಹೋಗಿವೆ. ಅಲ್ಲದೆ, ಕೊರೊನಾ ವೈರಾಣುವಿನ ಹಾವಳಿಯು ಈ ಅವಧಿಯಲ್ಲಿ ಹೆಚ್ಚಿನ ಮಟ್ಟದಲ್ಲಿ ಇರಲಿಲ್ಲ. ಹಬ್ಬಗಳ ಸಂದರ್ಭದಲ್ಲಿ ಜನರು ಹೊಸ ಉತ್ಪನ್ನಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸುವುದು ವಾಡಿಕೆ. ನೌಕರ ವರ್ಗದವರಿಗೆ ಬೋನಸ್ ರೂಪದಲ್ಲಿ ಹಣ ಸಿಗುವುದು ಕೂಡ ಸಾಮಾನ್ಯವಾಗಿ ದೀಪಾವಳಿ, ನವರಾತ್ರಿ ಹಬ್ಬಗಳ ಸಂದರ್ಭದಲ್ಲಿ. ಮಾರುಕಟ್ಟೆಯ ಚಟುವಟಿಕೆಗಳಿಗೆ ಇವೆಲ್ಲ ಪೂರಕ ವಾತಾವರಣ ನಿರ್ಮಿಸಿ ಕೊಡುತ್ತವೆ. ಇಷ್ಟೆಲ್ಲ ಇದ್ದರೂ ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರವು ಇಳಿಕೆ ಕಂಡಿದ್ದಕ್ಕೆ ಕಾರಣ ಏನು ಎಂಬುದರ ಕುರಿತು ಕೇಂದ್ರ ಸರ್ಕಾರ ಗಮನ ಹರಿಸಬೇಕಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆ ದರವು ಇಳಿಕೆ ಕಂಡಿದ್ದಕ್ಕೆ ಕಾರಣ ಏನು ಎಂಬುದರ ಕುರಿತು ಗಮನ ಹರಿಸಬೇಕಿದೆ

ಜನವರಿ ತಿಂಗಳಿನಲ್ಲಿ ದೇಶದ ಚಿಲ್ಲರೆ ಹಣದುಬ್ಬರ ದರವು ಶೇ 6ರ ಗಡಿಯನ್ನು ದಾಟಿಹೋಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರವು ಏರುಗತಿಯಲ್ಲಿ ಸಾಗುತ್ತಿದೆ. ಉತ್ತರಪ್ರದೇಶ ವಿಧಾನಸಭೆ ಚುನಾವಣೆ ಮುಗಿದ ನಂತರ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ದೊಡ್ಡ ಮಟ್ಟದಲ್ಲಿ ಹೆಚ್ಚಿಸುವ ಸಾಧ್ಯತೆ ಇದೆ. ಆಗ ಹಣದುಬ್ಬರ ಪ್ರಮಾಣವು ದೇಶದಲ್ಲಿ ಇನ್ನಷ್ಟು ಜಾಸ್ತಿ ಆಗುತ್ತದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ದೇಶಿ ಮಾರುಕಟ್ಟೆಯಲ್ಲಿ ಹೆಚ್ಚಳ ಕಂಡರೆ, ಜನಸಾಮಾನ್ಯರು ಆಗ ಉತ್ಪನ್ನಗಳ ಖರೀದಿಯನ್ನು ಕಡಿಮೆ ಮಾಡುವುದು ಸಹಜ. ಹಣದುಬ್ಬರವು ಈಗಿನ ಮಟ್ಟಕ್ಕಿಂತ ಇನ್ನಷ್ಟು ಹೆಚ್ಚಾಗುವ, ಗ್ರಾಹಕರ ಖರೀದಿ ಶಕ್ತಿ ಕುಗ್ಗುವ, ಮಾರುಕಟ್ಟೆಯಲ್ಲಿ ಲವಲವಿಕೆ ಕುಂದುವ ಸ್ಥಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಾಗೂ ಸರ್ಕಾರಗಳು ಹೇಗೆ ನಿಭಾಯಿಸುತ್ತವೆ ಎಂಬುದನ್ನು ಆಧರಿಸಿ ಮುಂದಿನ ಆರ್ಥಿಕ ಬೆಳವಣಿಗೆಗಳ ಗತಿ ತೀರ್ಮಾನ ಆಗಬಹುದು. ತೈಲ ಬೆಲೆ ಏರಿಕೆಯನ್ನು ಕೇಂದ್ರ ಸರ್ಕಾರ, ಆರ್‌ಬಿಐ ಹಾಗೂ ಜನಸಾಮಾನ್ಯರು ಒಂದು ಹಂತದವರೆಗೆ ನಿರೀಕ್ಷೆ ಮಾಡಿದ್ದರು. ಆದರೆ, ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಹಾಗೂ ಅದರಿಂದ ಆಗಬಹುದಾದ ಆರ್ಥಿಕ ಪರಿಣಾಮವನ್ನು ಸರ್ಕಾರಗಳು ನಿರೀಕ್ಷಿಸಿರಲಿಲ್ಲ. ರಷ್ಯಾ ದೇಶದ ಮೇಲೆ ವಿಧಿಸಲಾಗಿರುವ ಆರ್ಥಿಕ ದಿಗ್ಬಂಧನಗಳು ಕಚ್ಚಾ ತೈಲದ ಬೆಲೆಯ ಮೇಲೆ ಮಾತ್ರವೇ ಅಲ್ಲದೆ, ಇತರ ಕೆಲವು ಉತ್ಪನ್ನಗಳ ಮೇಲೆ ಯಾವ ರೀತಿಯಲ್ಲಿ ಪರಿಣಾಮ ಉಂಟುಮಾಡಬಹುದು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಉಕ್ರೇನ್ ಮತ್ತು ರಷ್ಯಾ ಅಡುಗೆ ಎಣ್ಣೆ ಹಾಗೂ ಗೋಧಿಯನ್ನು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುತ್ತವೆ. ಯುದ್ಧದಿಂದಾಗಿ ಇವುಗಳ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವುದು ಬಹುತೇಕ ಖಚಿತ. ಆಗ ಇವುಗಳ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಏರಿಕೆ ಕಾಣುವುದು ತಪ್ಪುವುದಿಲ್ಲ. ದೇಶಿ ಮಾರುಕಟ್ಟೆಯಲ್ಲಿ ಅದರ ಪರಿಣಾಮ ಏನಾಗಬಹುದು ಎಂಬುದು ಗಮನಾರ್ಹ. ಇಡೀ ವರ್ಷಕ್ಕೆ (2021–22) ಜಿಡಿಪಿ ಬೆಳವಣಿಗೆ ದರವು ಶೇ 9.2ರಷ್ಟು ಇರಲಿದೆ ಎಂದು ಈ ಹಿಂದೆ ಅಂದಾಜು ಮಾಡಿದ್ದ ಎನ್‌ಎಸ್‌ಒ, ಈ ಅಂದಾಜನ್ನು ಪರಿಷ್ಕರಿಸಿ ಬೆಳವಣಿಗೆಯು ಶೇ 8.9ರಷ್ಟು ಇರಲಿದೆ ಎಂದು ಹೇಳಿದೆ. ಈ ಎಲ್ಲ ಅಂಶಗಳನ್ನು ಸಮಗ್ರವಾಗಿ ಗ್ರಹಿಸಲು ಯತ್ನಿಸಿದಾಗ, ಹಾಲಿ ತ್ರೈಮಾಸಿಕದಲ್ಲಿ (ಜನವರಿಯಿಂದ ಮಾರ್ಚ್‌ವರೆಗಿನ ಅವಧಿ) ಜಿಡಿಪಿ ಬೆಳವಣಿಗೆ ದರವು ತೀರಾ ದೊಡ್ಡ ಮಟ್ಟದಲ್ಲಿ ಇರುವುದಿಲ್ಲ ಎಂಬ ಸೂಚನೆ ಖಂಡಿತ ಸಿಗುತ್ತದೆ.

ಪರಿಸರ ಅನುಮೋದನೆ ನೀಡುವ ಪ್ರಾಧಿಕಾರಕ್ಕೆ ‘ಸ್ಟಾರ್ ರೇಟಿಂಗ್’ ವ್ಯವಸ್ಥೆ

ಹೆಚ್ಚು ಪ್ರಶ್ನೆ ಕೇಳಿದರೆ ಕಡಿಮೆ ಅಂಕ!

ವಿಶ್ಲೇಷಣೆ

ಡಾ. ಎಚ್.ಆರ್.ಕೃಷ್ಣಮೂರ್ತಿ

ಗ್ರಾಹಕರಿಗೆ ಒದಗಿಸುವ ವಿಶಿಷ್ಟ ಸೌಕರ್ಯಗಳು ಮತ್ತು ಉತ್ತಮ ಗುಣಮಟ್ಟದ ಸೇವೆಯ ಆಧಾರದ ಮೇಲೆ ಹೋಟೆಲ್‌ಗಳನ್ನು ಶ್ರೇಣೀಕರಿಸಿ, ಅವುಗಳಿಗೆ ಒಂದರಿಂದ ಐದು ‘ಸ್ಟಾರ್’ ದರ್ಜೆಯನ್ನು ನೀಡುವ ವ್ಯವಸ್ಥೆ ‘ಸ್ಟಾರ್ ರೇಟಿಂಗ್ ಸಿಸ್ಟಮ್’ ನಮ್ಮ ದೇಶದಲ್ಲಿದೆ. ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದ ಭಾಗವಾದ ‘ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ ಅಪ್ರೂವಲ್ ಆ್ಯಂಡ್ ಕ್ಲಾಸಿಫಿಕೇಶನ್ ಕಮಿಟಿ’ ಈ ವರ್ಗೀಕರಣದ ಕೆಲಸವನ್ನು ಮಾಡುತ್ತದೆ. ಇದೀಗ ಇದೇ ಹೋಲಿಕೆಯ ‘ಸ್ಟಾರ್ ವರ್ಗೀಕರಣ ವ್ಯವಸ್ಥೆ’ಯನ್ನು ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯ ಈ ವರ್ಷದ ಜನವರಿಯಿಂದ ಜಾರಿಗೆ ತಂದಿದೆ.

ರಾಜ್ಯಗಳ ಹಂತದಲ್ಲಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ‘ಪರಿಸರ ಅನುಮೋದನೆ’ಯನ್ನು ನೀಡುವ ಅಧಿಕಾರವಿರುವ, ‘ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ’ದ (ಸ್ಟೇಟ್ ಎನ್‌ವೈರನ್‌ಮೆಂಟ್ ಇಂಪ್ಯಾಕ್ಟ್ ಅಸೆಸ್‌ಮೆಂಟ್ ಅಥಾರಿಟಿ) ದಕ್ಷತೆ ಮತ್ತು ಕಾರ್ಯಾಚರಣೆಯ ಯಶಸ್ಸನ್ನು ಈ ಸ್ಟಾರ್ ರೇಟಿಂಗ್ ವ್ಯವಸ್ಥೆ ಮಾಪನ ಮಾಡಿ ‘ಸ್ಟಾರ್ ದರ್ಜೆ’ಯನ್ನು ನೀಡಲಿದೆ.

2006ರ ಪರಿಸರ ಪರಿಣಾಮ ಮೌಲ್ಯಮಾಪನ ಅಧಿಸೂಚನೆಯಂತೆ 39 ವಿವಿಧ ರೀತಿಯ ಯೋಜನೆಗಳಿಗೆ ಪರಿಸರ ಮೌಲ್ಯಮಾಪನ ವರದಿ ಅಗತ್ಯ. ಈ ಯೋಜನೆಗಳನ್ನು ‘ಎ’ ಮತ್ತು ‘ಬಿ’ ಎಂದು ಎರಡು ಭಾಗಗಳಾಗಿ ವಿಂಗಡಿಸಲಾಗಿದೆ. ‘ಎ’ ಗುಂಪಿನಲ್ಲಿ ಬರುವ ಯೋಜನೆಗಳಿಗೆ ಕೇಂದ್ರ ಪರಿಸರ ಸಚಿವಾಲಯದ ಅನುಮೋದನೆ ಅಗತ್ಯ. ‘ಬಿ’ ಗುಂಪಿನಲ್ಲಿ ಬರುವ ಯೋಜನಾ ಪ್ರಸ್ತಾವಗಳನ್ನು ರಾಜ್ಯ ಪ್ರಾಧಿಕಾರ ಪರಿಶೀಲಿಸಿ ಒಪ್ಪಿಗೆ ನೀಡುತ್ತದೆ ಅಥವಾ ತಿರಸ್ಕರಿಸುತ್ತದೆ.

ವಿವಿಧ ಯೋಜನೆಗಳಿಗೆ ಪರಿಸರ ಅನುಮೋದನೆ ನೀಡುವ ಪ್ರಕ್ರಿಯೆಯಲ್ಲಿ ಪ್ರಾಥಮಿಕ ಪರಿಶೀಲನೆ (ಸ್ಕ್ರೀನಿಂಗ್), ವಿಚಾರಣಾ ವ್ಯಾಪ್ತಿ (ಟರ್ಮ್ಸ್ ಆಫ್ ರೆಫರೆನ್ಸ್), ಸಾರ್ವಜನಿಕ ಸಮಾಲೋಚನೆ (ಪಬ್ಲಿಕ್ ಕನ್ಸಲ್ಟೇಶನ್) ಮತ್ತು ಮೌಲ್ಯ ನಿರ್ಣಯ (ಅಪ್ರೈಸಲ್) ಎಂಬ ನಾಲ್ಕು ಹಂತಗಳಿವೆ. ಮೊದಲನೆಯ ಹಂತದಲ್ಲಿ ಯೋಜನಾ ಪ್ರಸ್ತಾವದ ಸ್ಥೂಲ ಪರಿಶೀಲನೆ ನಡೆದರೆ, ಎರಡನೆಯ ಹಂತದಲ್ಲಿ ಪರಿಸರ ಪರಿಣಾಮ ಮೌಲ್ಯಮಾಪನದ ಅಗತ್ಯ, ಅದರ ಸ್ವರೂಪ, ಕಟ್ಟುನಿಟ್ಟಾಗಿ ಪರಿಶೀಲಿಸಬೇಕಾದ ಅಂಶಗಳು, ಅವುಗಳ ವ್ಯಾಪ್ತಿ ಮುಂತಾದವುಗಳ ಬಗ್ಗೆ ಯೋಜನಾಕಾರರಿಗೆ ಸ್ಪಷ್ಟವಾಗಿ ತಿಳಿಸಲಾಗುತ್ತದೆ. ಮೂರನೆಯ ಹಂತದಲ್ಲಿ ಯೋಜನೆಯ ಪ್ರಸ್ತಾವ, ಪರಿಸರ ಪರಿಣಾಮ ವರದಿಯಲ್ಲಿರುವ ವಿಷಯಗಳ ಬಗ್ಗೆ, ಯೋಜನೆಯ ಪರಿಣಾಮಗಳಿಗೆ ಒಳಗಾಗುವ ಸ್ಥಳೀಯ ಜನಸಮುದಾಯದೊಡನೆ ಚರ್ಚೆ, ಸಮಾಲೋಚನೆಗಳು ನಡೆಯುತ್ತವೆ. ಅಂತಿಮವಾಗಿ ಈ ಎಲ್ಲ ಹಂತಗಳಲ್ಲಿ ಬಂದ ಸಲಹೆ, ಸೂಚನೆ, ಮಾಹಿತಿಗಳನ್ನು ಒಟ್ಟುಗೂಡಿಸಿ ವಿವರವಾಗಿ ಪರಿಶೀಲಿಸುವ ‘ತಜ್ಞ ಮೌಲ್ಯ ನಿರ್ಣಯ ಸಮಿತಿ’ (ಎಕ್ಸ್‌ಪರ್ಟ್ ಅಪ್ರೈಸಲ್ ಕಮಿಟಿ) ತನ್ನ ಶಿಫಾರಸುಗಳನ್ನು ಕೇಂದ್ರದ ಹಂತದಲ್ಲಿ ಪರಿಸರ ಸಚಿವಾಲಯಕ್ಕೆ ಅಥವಾ ರಾಜ್ಯದ ಹಂತದಲ್ಲಿ ರಾಜ್ಯ ಪ್ರಾಧಿಕಾರಕ್ಕೆ ಸಲ್ಲಿಸುತ್ತದೆ. ಈ ಶಿಫಾರಸನ್ನು ಆಧರಿಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ.

ಅಭಿವೃದ್ಧಿ ಯೋಜನೆಗಳ ಪ್ರಸ್ತಾವಕ್ಕೆ ಪರಿಸರ ಅನುಮೋದನೆ ನೀಡುವ ರಾಜ್ಯ ಪ್ರಾಧಿಕಾರಗಳ ಕೆಲಸ ಕಾರ್ಯಗಳಲ್ಲಿ ಪಾರದರ್ಶಕತೆ, ದಕ್ಷತೆ ಮತ್ತು ಉತ್ತರದಾಯಿತ್ವವನ್ನು ತರುವ ಉದ್ದೇಶದಿಂದ ಈ ಸ್ಟಾರ್ ರೇಟಿಂಗ್ ವ್ಯವಸ್ಥೆಯನ್ನು ಜಾರಿಗೆ ತಂದಿರುವುದಾಗಿ ಕೇಂದ್ರ ಪರಿಸರ ಸಚಿವಾಲಯ ತಿಳಿಸಿದೆ. ಪ್ರತೀ ಆರು ತಿಂಗಳಿಗೊಮ್ಮೆ, ಏಳು ಅಂಶಗಳ ಆಧಾರದ ಮೇಲೆ ರಾಜ್ಯ ಪ್ರಾಧಿಕಾರಗಳ ಮೌಲ್ಯಮಾಪನ ನಡೆಯಲಿದೆ. ಇದರಲ್ಲಿ ಐದು ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳು ದೊರೆತ ಪ್ರಾಧಿಕಾರಕ್ಕೆ ‘5 ಸ್ಟಾರ್ ಮಾನ್ಯತೆ’ ದೊರೆಯುತ್ತದೆ. ಈ ಅಂಕ ಪ್ರದಾನ ಹೇಗೆ ನಡೆಯುತ್ತದೆ ಎಂಬುದು ಕುತೂಹಲಕಾರಿ.

ಯೋಜನಾ ಪ್ರಸ್ತಾವಗಳ ಸ್ಥೂಲ ಪರಿಶೀಲನೆ ನಡೆಸಿ, ಪ್ರಸ್ತಾವಗಳನ್ನು ಐದು ದಿನಗಳ ಒಳಗಾಗಿ, ಮುಂದಿನ ಪ್ರಕ್ರಿಯೆಗಳಿಗೆ ಅಧಿಕೃತವಾಗಿ ಸ್ವೀಕರಿಸಿದರೆ ಒಂದು ಅಂಕ ದೊರೆಯುತ್ತದೆ. ಐದರಿಂದ ಏಳು ದಿನಗಳ ಒಳಗೆ ಸ್ವೀಕರಿಸಿದರೆ 0.5 ಮತ್ತು ಏಳು ದಿನಗಳ ನಂತರ ಸೊನ್ನೆ ಅಂಕ ದೊರೆಯುತ್ತದೆ. ಮುಂದಿನ ಹೆಜ್ಜೆ ‘ಟರ್ಮ್ಸ್ ಆಫ್ ರೆಫರೆನ್ಸ್’ (ಟಿಒಆರ್) ನೀಡಿಕೆ. ಬಂದ ವಿವಿಧ ಪ್ರಸ್ತಾವಗಳಲ್ಲಿ, 30 ದಿನಗಳ ಒಳಗಾಗಿ ಶೇ 90 ಮತ್ತು ಅದಕ್ಕಿಂತ ಹೆಚ್ಚಿನ ಪ್ರಸ್ತಾವಗಳಿಗೆ ಟಿಒಆರ್ ನೀಡಿದರೆ ಒಂದು ಅಂಕ, ಶೇ 80ರಿಂದ ಶೇ 90ಕ್ಕೆ 0.5 ಅಂಕ ದೊರೆಯುತ್ತದೆ. ಶೇ 80ಕ್ಕಿಂತಕಡಿಮೆ ಪ್ರಸ್ತಾವಗಳಿಗೆ ಟಿಒಆರ್ ನೀಡಿದರೆ ಯಾವ ಅಂಕವೂ ದೊರೆಯುವುದಿಲ್ಲ.

ಯೋಜನಾ ಪ್ರಸ್ತಾವಕ್ಕೆ ಸಂಬಂಧಪಟ್ಟಂತೆ ಕೆಲವೊಮ್ಮೆ ಅರ್ಜಿದಾರರಿಂದ ಹೆಚ್ಚಿನ ಮಾಹಿತಿ, ದಾಖಲೆಗಳನ್ನು ಕೇಳಬೇಕಾಗುತ್ತದೆ. ಬಂದ ಅರ್ಜಿಗಳಲ್ಲಿ ಶೇ 10ಕ್ಕಿಂತ ಕಡಿಮೆ ಪ್ರಕರಣಗಳಲ್ಲಿ ಒಂದು ಬಾರಿ ಮಾತ್ರ ಹೆಚ್ಚಿನ ಮಾಹಿತಿಗಳನ್ನು ಕೇಳಬಹುದು. ಇದನ್ನು ಪಾಲಿಸಿದರೆ ಒಂದು ಅಂಕ. ಶೇ 30ಕ್ಕಿಂತ ಹೆಚ್ಚಿನ ಪ್ರಸ್ತಾವಗಳಲ್ಲಿ, ಒಂದಕ್ಕಿಂತ ಹೆಚ್ಚು ಬಾರಿ ಹೆಚ್ಚಿನ ಮಾಹಿತಿ ಕೇಳಿದರೆ ದೊರೆಯುವುದು ಶೂನ್ಯ ಅಂಕ. ಹೀಗಾಗಿ ಹೆಚ್ಚು ಪ್ರಶ್ನೆ ಕೇಳಿದಷ್ಟೂ ದೊರೆಯುವ ಅಂಕ ಕಡಿಮೆಯಾಗುತ್ತದೆ. ಹಲವಾರು ಸಂದರ್ಭಗಳಲ್ಲಿ ಅನುಮೋದನೆ ನೀಡುವ ಮುನ್ನ, ಯೋಜನಾ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸುವುದು ಅಗತ್ಯವಾಗುತ್ತದೆ. ಆದರೆ ಸ್ಟಾರ್ ರೇಟಿಂಗ್ ವ್ಯವಸ್ಥೆ ಇಂತಹ ಕ್ಷೇತ್ರಭೇಟಿಗಳನ್ನು ಪ್ರೋತ್ಸಾಹಿಸುವುದಿಲ್ಲ. ಕ್ಷೇತ್ರಭೇಟಿಗಳನ್ನು ಶೇ 10ರಷ್ಟು ಅರ್ಜಿಗಳಿಗೆ ಮಾತ್ರ ಸೀಮಿತಗೊಳಿಸಿದರೆ ಒಂದು ಅಂಕ ದೊರೆಯುತ್ತದೆ. ಶೇ 20ಕ್ಕಿಂತ ಹೆಚ್ಚಿನ ಯೋಜನಾ ಪ್ರದೇಶಗಳಿಗೆ ಭೇಟಿ ನೀಡಿದರೆ ಶೂನ್ಯಾಂಕ ಸಂಪಾದನೆ ಖಚಿತ. ಅನುಮೋದನೆ ನೀಡುವ ಮುನ್ನ ಎಷ್ಟು ಬಾರಿ ಯೋಜನಾ ಪ್ರದೇಶಕ್ಕೆ ಭೇಟಿ ನೀಡಬಹುದೆಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲ.

2006ರ ಅಧಿಸೂಚನೆಯಲ್ಲಿ, ಅನುಮೋದನೆ ನೀಡುವ ಮುನ್ನ ಅಗತ್ಯಕ್ಕೆ ಅನುಗುಣವಾಗಿ ಎಷ್ಟು ಬಾರಿಯಾದರೂ ಕ್ಷೇತ್ರಭೇಟಿ ಮಾಡಬಹುದಿತ್ತು. ಆರು ತಿಂಗಳ ಅವಧಿಯಲ್ಲಿ ಪ್ರಾಧಿಕಾರಕ್ಕೆ ಬಂದ ಎಲ್ಲ ದೂರು, ಸ್ಪಷ್ಟೀಕರಣ ಕೋರಿಕೆ ಮುಂತಾದವುಗಳಿಗೆ ಉತ್ತರ ನೀಡಿದಲ್ಲಿ ಒಂದು ಅಂಕ, ಶೇ 50ರಷ್ಟಕ್ಕೆ ಉತ್ತರಿಸಿ-ದ್ದರೆ 0.5 ಅಂಕ ನೀಡಲಾಗುತ್ತದೆ. ಅದಕ್ಕಿಂತ ಕಡಿಮೆ ಸ್ಪಷ್ಟೀಕರಣಗಳಿಗೆ ಯಾವ ಅಂಕವೂ ಇಲ್ಲ.

ಈ ಮೊದಲು ಪರಿಸರ ಅನುಮೋದನೆ ನೀಡಲು 105 ದಿನಗಳ ಕಾಲಾವಧಿಯನ್ನು ನಿಗದಿಗೊಳಿಸಲಾಗಿತ್ತು. ಸ್ಟಾರ್ ರೇಟಿಂಗ್ ವ್ಯವಸ್ಥೆ ಇದನ್ನು ಬದಲಿಸಿದೆ. ಈಗ 80 ದಿನಗಳ ಒಳಗಾಗಿ ಅನುಮೋದನೆ ನೀಡಿದರೆ, ಪ್ರಾಧಿಕಾರಕ್ಕೆ 2 ಅಂಕಗಳು ದೊರೆಯುತ್ತವೆ. 80ರಿಂದ 105 ದಿನಗಳಿಗೆ ಒಂದು ಅಂಕ, 105ರಿಂದ 120 ದಿನಗಳಿಗೆ 0.5 ಅಂಕ ಸಿಗುತ್ತದೆ. 120 ದಿನಗಳ ನಂತರ ಅನುಮೋದನೆ ನೀಡಿದರೂ ದೊರೆಯುವ ಅಂಕ ಮಾತ್ರ ಸೊನ್ನೆ.

2006ರಿಂದ 2021ರ ಜುಲೈವರೆಗೆ ಪರಿಸರ ಪರಿಣಾಮ ಮೌಲ್ಯಮಾಪನಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ‘ಸರಾಗ ವ್ಯವಹಾರ’ಕ್ಕಾಗಿ (ಈಸ್ ಆಫ್ ಡೂಯಿಂಗ್ ಬಿಸಿನೆಸ್) 67 ಬಾರಿ ಬದಲಾವಣೆಗಳನ್ನು ತರಲಾಗಿದೆ. ಇಂದು ಕೆಲವು ಯೋಜನೆಗಳಿಗೆ ಪರಿಸರ ಪರಿಣಾಮ ಮೌಲ್ಯಮಾಪನ ಅನಗತ್ಯ, ಸಾರ್ವಜನಿಕ ಸಮಾಲೋಚನೆ ಅನಗತ್ಯ, ಕೆಲವಕ್ಕೆ ಪರಿಸರ ಅನುಮೋದನೆ ಬೇಡ. ಅನುಮೋದನೆಯೇ ಇಲ್ಲದೆ ಪ್ರಾರಂಭವಾಗಿರುವ ಯೋಜನೆಗಳನ್ನು, 2021ರ ಜುಲೈನಲ್ಲಿ ಪ್ರಕಟಿಸಿದ ‘ಸ್ಟ್ಯಾಂಡರ್ಡ್ ಆಪರೇಟಿಂಗ್ ಪ್ರೊಸೀಜರ್’ನಂತೆ ದಂಡ ನೀಡಿ ಸರಿಪಡಿಸಿಕೊಳ್ಳಲು ಸಾಧ್ಯ. ಇದೀಗ ಸ್ಟಾರ್ ರೇಟಿಂಗ್ ವ್ಯವಸ್ಥೆಗೆ ಬಂದಿರುವ ವ್ಯಾಪಕ ಟೀಕೆಗಳಿಗೆ ಉತ್ತರ ನೀಡಿರುವ ಸರ್ಕಾರ ‘ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯನ್ನು ತ್ವರಿತಗೊಳಿಸುವುದು ಮಾತ್ರ ಈ ಹೊಸ ವ್ಯವಸ್ಥೆಯ ಉದ್ದೇಶವೇ ವಿನಾ ಕೂಲಂಕಷ ಪರಿಶೀಲನೆಯಿಲ್ಲದೇ ಪರವಾನಗಿ ನೀಡುವುದು ಅಲ್ಲ’ ಎಂದಿದೆ.

ತ್ವರಿತಗತಿಯ ನಿರ್ಧಾರಗಳು ಬಂಡವಾಳ ಹೂಡಿಕೆಯನ್ನು ಉತ್ತೇಜಿಸಿ ದೇಶದ ಒಟ್ಟಾರೆ ಆರ್ಥಿಕತೆಯನ್ನು ಸುಧಾರಿಸುತ್ತವೆ ಎಂಬುದು ನಿಜ. ಆದರೆ ‘ಫೈವ್ ಸ್ಟಾರ್ ಮಾನ್ಯತೆ’ಪಡೆಯುವಅಮಿತೋತ್ಸಾಹದಲ್ಲಿಕಟ್ಟುನಿಟ್ಟಾದ, ಆಮೂಲಾಗ್ರವಾದ, ಕೂಲಂಕಷವಾದ ಮೌಲ್ಯಮಾಪನವನ್ನು ಉಪೇಕ್ಷಿಸಿ, ಕಡೆಗಣಿಸುವ ಸ್ಪಷ್ಟ ಸಾಧ್ಯತೆ ಇದೆ ಎಂಬುದೇ ಪರಿಸರ ತಜ್ಞರು, ಸಂಘಟನೆಗಳ ಪ್ರಾಮಾಣಿಕ ಕಳವಳಕ್ಕೆ ಕಾರಣ.

ಚುರುಮುರಿ

ಭತ್ಯೆ ಬಾತ್

• ಆನಂದ

‘ಭಲೋ ಆಯಿತು ನೋಡ್ರಿ ಸಂಬಳ, ಭತ್ಯೆ ಹೆಚ್ಚಾದದ್ದು’ ಅಂದರು ಮಂತ್ರಿಗಳ ಹೆಂಡತಿ.

‘ಹೌದ್ರೀ, ಗದ್ದಲದಲ್ಲಿ ಆ ಮಸೂದೆ ಪಾಸಾಗುತ್ತೋ ಇಲ್ಲವೋ ಅಂತ ಹೆದರಿದ್ದೆ. ಸದ್ಯ ಯಾರೂ ಚಕಾರ ಎತ್ತಲಿಲ್ಲ ನೋಡ್ರಿ’ ಅಂದರು ಶಾಸಕರ ವೈಫು.

‘ಈ ವಿಷಯದಲ್ಲೆಲ್ಲ ಅವರು ಜಾಣರು ಬಿಡ್ರಿ. ಮನೆ ನಿರ್ವಹಣೆಗೆ ನಮಗೀಗ 10 ಸಾವಿರ ರೂಪಾಯಿ ಹೆಚ್ಚು ಸಿಗುತ್ತೆ ನೋಡ್ರಿ’.

‘ಶಾಸಕರಿಗೂ ಮನೆ ನಿರ್ವಹಣೆ ಇದೆ. ಆದರೆ ನಮಗಿಲ್ರೀ ಆ ಭತ್ಯೆ. ಸೆಷನ್ ನಡೆಯುವಾಗ ದಿನಕ್ಕೆ 5,000 ಹೆಚ್ಚಿಗೆ ಭತ್ಯೆ ಮಾಡಿದಾರಲ್ರೀ ನಿಮ್ಮವರಿಗೆ. ಸೆಷನ್ ಹೆಚ್ಚು ದಿನ ನಡೀಬೇಕ್ರಿ. ಮತ್ತೆ ಗೈರಾಗಬೇಡಿ ಅಂತ ಮನೆಯವರಿಗೆ ಹೇಳಬೇಕ್ರಿ’.

‘ನಮ್ಮ ಮನೆಯವರಿಗೆ ಈಗ ತಿಂಗಳಿಗೆ 2 ಸಾವಿರ ಲೀಟರ್ ಪೆಟ್ರೋಲ್ ಭತ್ಯೆ ಸಿಗುತ್ತೆ. ನಮ್ಮಿಬ್ಬರ ಮಕ್ಕಳೂ ಬೇರೆ ಬೇರೆ ಕಾರ್ ಉಪಯೋಗಿಸಬಹುದು ಕಾಲೇಜಿಗೆ ಹೋಗೋಕೆ, ರೌಂಡ್ಸ್ ಹಾಕೋಕೆ’.

‘ಅಯ್ಯೋ, ನಮಗೆ ಪ್ರಯಾಣ ಭತ್ಯೆ ವರ್ಷಕ್ಕೆ 2.50 ಲಕ್ಷ. ಅದರಲ್ಲೇ ಅಡ್ಜಸ್ಟ್ ಮಾಡಬೇಕು’.

‘ನಿಮಗೆ ಆತಿಥ್ಯ ಭತ್ಯೆ ಸಿಗೋದಿಲ್ಲ ನೋಡ್ರಿ. ಅದಕ್ಕೆ ಮಂತ್ರಿ ಆಗ್ಬೇಕು ಅಂತೀನಿ. ಈಗ 1 ಲಕ್ಷ ಹೆಚ್ಚು ಸಿಗುತ್ತೆ, ಅಂದರೆ ವರ್ಷಕ್ಕೆ 4 ಲಕ್ಷ ಬರುತ್ತೆ ಆತಿಥ್ಯ ಭತ್ಯೆ. ನಮ್ಮ ಆತಿಥ್ಯಾನೂ ಚಲೋ ಮಾಡಕೋಬಹುದು ನೋಡ್ರಿ’.

‘ಅದೃಷ್ಟವಂತರು. ನಮ್ಮ ಆಪ್ತ ಸಹಾಯಕನ ವೇತನ ಹೆಚ್ಚಿಸೇ ಇಲ್ಲ ನೋಡ್ರಿ. 20,000ನೇ ಇದೆ’.

‘ಬಿಡ್ರಿ ಅವರು ದುಡುಕೋತಾರೆ’.

‘ನಮ್ಮ ಕೆಲಸದಾಕಿ ಪಗಾರ ಹೆಚ್ಚು ಮಾಡೀ ಅಂತಿದಾಳೆ. ತೊಗರಿಬೇಳೆ 120 ಆಗಿದೆಯಂತೆ. ಮಗನ ಫೀಸ್…’

‘ಅವರು ಕೇಳ್ತಾನೇ ಇರ್ತಾರೆ. 100 ರೂಪಾಯಿ ಹೆಚ್ಚು ಮಾಡಿ ಸಾಕು’.

‘ಸಾಕಂತೀರಾ? ಸರಿ, ನಾ ಬರ್ತೀನ್ರಿ’.

‘ಹೋಗಿ ಬರ್ರಿ. ನಿಮ್ಮವರು ಮಂತ್ರಿ ಆದಾರು ಬಿಡ್ರಿ. ಆಗ ಹೆಚ್ಚು ಭತ್ಯೆ ಸಿಗುತ್ತೆ’.

ದಿನದ ಟ್ವೀಟ್

ಅಮೋಘ ಶತಕ

ವಿರಾಟ್ ಕೊಹ್ಲಿ ಅವರ 100ನೇ ಟೆಸ್ಟ್ ಕ್ರಿಕೆಟ್ ಪಂದ್ಯ ಸಂಭ್ರಮಿಸಲು ನೂರು ಕಾರಣಗಳಿವೆ. ಇದೊಂದು ಅಮೋಘ ಶತಕ. ಕಣದಲ್ಲಿ ತಮ್ಮ ಆಟವನ್ನು ನೋಡುವುದೇ ಚೆಂದ. ಚಾಂಪ್ (ವಿರಾಟ್) ಈ ಕ್ಷಣವನ್ನು ಮನಃಪೂರ್ವಕವಾಗಿ ಆನಂದಿಸಿ.

ರವಿಶಾಸ್ತ್ರಿ, ಭಾರತ ತಂಡದ ಮಾಜಿ ಕೋಚ್

ಕಿಡಿನುಡಿ

ದೇಶದಲ್ಲಿ ಇಂಧನ ದರವನ್ನು ನಿಯಂತ್ರಣ ಮುಕ್ತ ಮಾಡಲಾಗಿದೆ. ಆದಾಗ್ಯೂ ಈ ನಿಯಂತ್ರಣಮುಕ್ತ ಕ್ರಮವನ್ನು ಚುನಾವಣಾ ಸಮಯದಲ್ಲಿ ನಿಯಂತ್ರಿಸಲಾಗುತ್ತದೆ.

ಡಿ.ಮುತ್ತುಕೃಷ್ಣನ್, ಹವ್ಯಾಸಿ ಹೂಡಿಕೆದಾರ

25 ವರ್ಷಗಳ ಹಿಂದೆ

ಮಂಗಳವಾರ, 4-3-1997

• **ಸಂಸತ್ತಿನಲ್ಲಿ ಮಹಿಳೆಯರಿಗೆ ಸ್ಥಾನ ಮೀಸಲಿಗೆ ವಿರೋಧ: ಗುಜ್ರಾಲ್**

ನವದೆಹಲಿ, ಮಾ. 3 (ಪಿಟಿಐ)– ಸಂಸತ್ತು ಮತ್ತು ವಿಧಾನ ಮಂಡಲಗಳಲ್ಲಿ ಮಹಿಳೆಯರಿಗಾಗಿ ಶೇಕಡ ಮೂರನೇ ಒಂದರಷ್ಟು ಸ್ಥಾನಗಳನ್ನು ಮೀಸಲಿಡ ಬಯಸುವ ಮಸೂದೆಗೆ ಬಲವಾದ ವಿರೋಧವಿದೆ ಎಂಬ ಅಂಶವನ್ನು ಕೇಂದ್ರ ವಿದೇಶಾಂಗ ವ್ಯವಹಾರ ಸಚಿವ ಐ.ಕೆ. ಗುಜ್ರಾಲ್ ಇಂದು ಒಪ್ಪಿಕೊಂಡಿದ್ದಾರೆ.

‘ಸಂಸತ್ತಿನ ಕೆಲವು ಅತ್ಯಂತ ಸುಶಿಕ್ಷಿತ ಪುರುಷ ಸದಸ್ಯರೂ ಈ ಮಸೂದೆಯನ್ನು ಹಾನಿಕಾರಕ ಎಂದು ಕರೆದಿದ್ದಾರೆ’ ಎಂದು ತಿಳಿಸಿದ ಅವರು, ‘ಕಾನೂನುಗಳನ್ನು ಬದಲಾಯಿಸುವುದು ಸುಲಭ; ಆದರೆ ಮನೋಭಾವಗಳನ್ನು ಅಷ್ಟು ಸುಲಭವಾಗಿ ಬದಲಿಸಲಾಗುವುದಿಲ್ಲ’ ಎಂದರು.

‘ಮಹಿಳೆಯರ ಉದ್ಯೋಗ, ವಿವಾಹ ವಯಸ್ಸು ಹಾಗೂ ಜನಸಂಖ್ಯೆ’ ಕುರಿತಂತೆ ಐತಿಹಾಸಿಕ ಜನಸಂಖ್ಯಾ ಅಂತರ ರಾಷ್ಟ್ರೀಯ ಆಯೋಗದ (ಸಿಐಡಿಎಚ್) ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

• **ಕರ್ನಾಟಕ ಎಕ್ಸ್‌ಪ್ರೆಸ್ ಹಳಿ ತಪ್ಪಿ 100 ಮಂದಿಗೆ ಗಾಯ**

ಭೋಪಾಲ್, ಮಾ. 3 (ಪಿಟಿಐ)– ದೆಹಲಿಯಿಂದ ಬೆಂಗಳೂರಿಗೆ ಬರುತ್ತಿದ್ದ ‘ಕರ್ನಾಟಕ ಎಕ್ಸ್‌ಪ್ರೆಸ್’ ರೈಲಿನ 16 ಬೋಗಿಗಳು ಇಂದು ಮುಂಜಾನೆ ಇಲ್ಲಿಗೆ ಸುಮಾರು 150 ಕಿ.ಮೀ. ದೂರದ ಬೀನಾ ರೈಲು ನಿಲ್ದಾಣದ ಬಳಿ ಹಳಿ ತಪ್ಪಿದ್ದರಿಂದ 100ಕ್ಕೂ ಹೆಚ್ಚು ಪ್ರಯಾಣಿಕರಿಗೆ ಗಾಯಗಳಾದವು.

50 ವರ್ಷಗಳ ಹಿಂದೆ

ಶನಿವಾರ, 4-3-1972

• **ಬಲವಂತ, ಬೆದರಿಕೆಗೆ ಅಂಜದೇ ಮತ ಚಲಾಯಿಸಲು ಜನತೆಗೆ ಚುನಾವಣೆ ಕಮಿಷನರ್ ಮನವಿ**

ನವದೆಹಲಿ, ಮಾ. 3– ಬಲಾತ್ಕಾರ ಅಥವಾ ಭಯೋತ್ಪಾದನೆಗೆ ಅಂಜದೇ ಭಾನುವಾರ ಮತ ಚಲಾಯಿಸುವಂತೆ ಪ್ರಧಾನ ಚುನಾವಣೆ ಕಮಿಷನರ್ ಎಸ್.ಪಿ.ಸೇನ್ ವರ್ಮಾ ಅವರು ಇಂದು ರಾಜ್ಯಗಳ ಮತದಾರರಿಗೆ ಮನವಿ ಮಾಡಿಕೊಂಡರು.

ಹದಿನಾರು ರಾಜ್ಯಗಳು ಮತ್ತು ಎರಡು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಧಾನಸಭೆ ಚುನಾವಣೆಗೆ ಪೂರ್ವಭಾವಿಯಾಗಿ ಪ್ರಸಾರ ಭಾಷಣ ಮಾಡಿದ ಸೇನ್ ವರ್ಮಾ ಅವರು ಆಖೈರಾಗಿ ನೀವೇ ರಾಷ್ಟ್ರದ ಆಡಳಿತಗಾರರು ಎಂದು ಮತದಾರರಿಗೆ ನೆನಪು ಮಾಡಿಕೊಟ್ಟರು.

‘ಮತಗಟ್ಟೆಗಳಲ್ಲಿ ನಿಮ್ಮ ನಿರ್ಧಾರದ ಮೇಲೆ ಪ್ರಭಾವ ಬೀರಲು ಬೇರೆಯವರಿಗೆ ಅವಕಾಶ ಕೊಡಬೇಡಿ. ನೀವು ಯಾರಿಗೆ ಬೇಕಾದರೂ ಮತ ನೀಡಬಹುದು. ಆದರೆ ಆಯ್ಕೆ ನಿಮ್ಮದೇ’ ಎಂದು ಅವರು ಹೇಳಿದರು.

• **ಇಂದಿರಾ ಶ್ರೇಷ್ಠ ನಾಯಕಿ, ಅತ್ಯುತ್ತಮ ರಾಷ್ಟ್ರೀಯವಾದಿ**

ಅಹಮದಾಬಾದ್, ಮಾ. 3– ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ರಾಷ್ಟ್ರದ ಇತರ ನಾಯಕರಿಗಿಂತ ಹೆಚ್ಚು ರಾಷ್ಟ್ರೀಯ-ವಾದಿಗಳು ಮತ್ತು ಉತ್ತಮ ರಾಜಕಾರಣಿ ಎಂದು ಹಿಂದೂ ಮಹಾಸಭೆ ಉಪಾಧ್ಯಕ್ಷ ಬ್ರಿಜ್ ನಾರಾಯಣ ಬ್ರಿಜೇಶ್ ಇಂದು ಇಲ್ಲಿ ತಿಳಿಸಿದರು.

ಶ್ರೀಮತಿ ಇಂದಿರಾ ಗಾಂಧಿಯವರು ಭಾರತಕ್ಕೆ ಬಿಹಾರಿ ಮುಸ್ಲಿಮರನ್ನು ಕರೆಸಿಕೊಳ್ಳಲು ನಿರಾಕರಿಸಿರುವುದು ಹಾಗೂ ಷೇಖ್ ಅಬ್ದುಲ್ಲಾ ಅವರು ಕಾಶ್ಮೀರ ಪ್ರವೇಶಿಸದಂತೆ ಹೊರಡಿಸಿರುವ ಗಡಿಪಾರು ಆಜ್ಞೆ ರದ್ದುಪಡಿಸಲು ನಿರಾಕರಿಸಿರುವುದು ತಮ್ಮ ಈ ಅಭಿಪ್ರಾಯಕ್ಕೆ ಆಧಾರವೆಂದು ಬ್ರಿಜೇಶ್ ತಿಳಿಸಿದರು.

ಸಂಗತ

ವೈದ್ಯಶಿಕ್ಷಣ: ಕೈಗೆಟಕುವ ದ್ರಾಕ್ಷಿಯಾಗಲಿ

ಉಕ್ರೇನ್‌ನಂತಹ ರಾಷ್ಟ್ರಗಳು ಮತ್ತು ನಮ್ಮಲ್ಲಿನ ವೈದ್ಯಕೀಯ ಶಿಕ್ಷಣ ವೆಚ್ಚಕ್ಕೆ ಅಜಗಜಾಂತರ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳಬೇಕಿದೆ

• ನೆಂಪೆ ದೇವರಾಜ್

ಉಕ್ರೇನಿನ ಮೇಲೆ ಬೃಹತ್ ರಷ್ಯಾ ದೇಶ ದಾಳಿ ಮಾಡುತ್ತಿರುವ ಬೆನ್ನಲ್ಲೇ ಉಕ್ರೇನಿನಲ್ಲಿ ದೊರೆಯುತ್ತಿರುವ ವೈದ್ಯಕೀಯ ಶಿಕ್ಷಣದ ವಿಚಾರವೀಗ ಭಾರತದಲ್ಲಿ ಚರ್ಚೆಗೆ ಬಂದಿದೆ. ಇಪ್ಪತ್ತೈದು ಸಾವಿರಕ್ಕಿಂತಲೂ ಹೆಚ್ಚು ಭಾರತೀಯ ವಿದ್ಯಾರ್ಥಿಗಳು ಉಕ್ರೇನಿನಂತಹ ದೇಶದಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡುತ್ತಿರುವುದು ತಿಳಿದು ಬರುತ್ತಿರುವ ಸಂದರ್ಭದಲ್ಲೇ ಅಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ತಗಲುವ ವೆಚ್ಚವು ಭಾರತಕ್ಕಿಂತ ಅತ್ಯಂತ ಕಡಿಮೆ ಎಂಬ ವಿಚಾರ ಬೆಳಕಿಗೆ ಬರುತ್ತಿದೆ. ಮಾತ್ರವಲ್ಲ, ಭಾರತದ ಕೆಲವು ಖಾಸಗಿ ವೈದ್ಯ ಕಾಲೇಜುಗಳ ಹಣದ ಹಪಹಪಿತನದ ದಿವ್ಯ ದರ್ಶನವೂ ಆಗುತ್ತಿದೆ.

ರಷ್ಯಾ ಮತ್ತು ಅದರ ಅಕ್ಕಪಕ್ಕದ ರಾಷ್ಟ್ರಗಳಲ್ಲಿ ವಿದ್ಯಾರ್ಥಿಗಳಿಗೆ ತಗಲುವ ವೈದ್ಯಕೀಯ ಶಿಕ್ಷಣ ವೆಚ್ಚಕ್ಕಿಂತಲೂ ಆರೇಳು ಪಟ್ಟು ಜಾಸ್ತಿ ಹಣ ಪೀಕುವ ಇಲ್ಲಿಯ ಕೆಲವು ಮೆಡಿಕಲ್ ಕಾಲೇಜುಗಳು ಅಂತರ-ರಾಷ್ಟ್ರೀಯ ವೈದ್ಯ ಶಿಕ್ಷಣದ ಮಾನ್ಯತೆಯ ದೃಷ್ಟಿಯಿಂದ ಕೆಳಮಟ್ಟದಲ್ಲಿವೆ ಎಂದು ಕೆಲವು ವರದಿಗಳು ಕೂಡಾ ಹೇಳುತ್ತಿವೆ. ಆದರೂ ಇಲ್ಲಿಯ ಕೆಲವು ಕಾಲೇಜುಗಳು ನೀಡುವ ಪ್ರಚಾರ ಫಲಕಗಳಲ್ಲಿ ತಾವು ಹೊಂದಿರುವ ಸವಲತ್ತುಗಳ ಬಗ್ಗೆ ಪುಂಖಾನುಪುಂಖವಾಗಿ ಹೇಳಿ-ಕೊಳ್ಳುತ್ತಲೇ ಹೋಗುತ್ತಿವೆ. ಇವರುಗಳ ಮಾತನ್ನೇ ನಂಬುವುದಾದರೆ, ಉಕ್ರೇನ್, ಉಜ್ಬೇಕಿಸ್ತಾನಕ್ಕಿಂತಲೂ ಇಲ್ಲಿಯ ಕಾಲೇಜು ಶಿಕ್ಷಣ ವ್ಯವಸ್ಥೆ ಗುಣಮಟ್ಟದಲ್ಲಿ ಮೇಲಿದೆಯೇ ಅಥವಾ ಕಡಿಮೆ ದುಡ್ಡಿನಲ್ಲಿ ಶಿಕ್ಷಣ ನೀಡುವ ವಿದೇಶಿ ವೈದ್ಯಕೀಯ ಸಂಸ್ಥೆಗಳು ಅಗ್ಗದ ದರಕ್ಕೆ ಮುಗ್ಗಿದ ಜೋಳ ನೀಡುವಂತಹವುಗಳೇ?

ವಿದೇಶದಲ್ಲಿ ಅದರಲ್ಲೂ ಯುರೋಪ್ ಖಂಡದಲ್ಲಿ ಓದಿ ಹೊರಬಂದರೆ ಅತಿ ಹೆಚ್ಚು ಮರ್ಯಾದೆ ಸಿಗುತ್ತದೆ ಮತ್ತು ವೃತ್ತಿಯಲ್ಲಿ ಹುಸಿ ಘನತೆ, ಗೌರವಗಳು ಪ್ರಾಪ್ತಿ-ಯಾಗುತ್ತವೆ ಎಂಬ ಕಾರಣಕ್ಕಾಗಿ ಪೂರ್ವ ಯುರೋಪ್ ರಾಷ್ಟ್ರಗಳನ್ನು ಆರಿಸಿಕೊಳ್ಳಲಾಗುತ್ತಿದೆಯೇ? ಇವೆಲ್ಲವೂ ಇದೀಗ ಖಂಡಿತವಾಗಿ ಚರ್ಚೆಯಾಗಬೇಕಾದ ವಿಷಯಗಳು.

ಕೊರೊನಾದ ಮೊದಲ ಅಲೆಯ ಸಂದರ್ಭದಲ್ಲಿ, ನನ್ನ ಸ್ನೇಹಿತರ ಮಗನೊಬ್ಬ ಚೀನಾದ ಕಾಲೇಜೊಂದರಲ್ಲಿ ವೈದ್ಯಕೀಯ ಶಿಕ್ಷಣ ಓದುತ್ತಿದ್ದವ ತನ್ನ ಊರಿಗೆ ಬಂದಿದ್ದ. ಈ ಹುಡುಗ ಕೇವಲ ₹ 17 ಲಕ್ಷದಲ್ಲಿ ಮೆಡಿಕಲ್ ಶಿಕ್ಷಣ ಪದವಿ ಪಡೆಯುವ ಒಪ್ಪಂದದ ಆಧಾರದ ಮೇಲೆ ಸದರಿ ಶಿಕ್ಷಣ ಸಂಸ್ಥೆಗೆ ಸೇರಿಕೊಂಡಿದ್ದ. ಅವನು ಓದುತ್ತಿದ್ದ ಕಾಲೇಜು ಮತ್ತು ಹಾಸ್ಟೆಲ್ಲಿನಲ್ಲಿ ಇದ್ದ ಅತ್ಯಾಧುನಿಕ ಸವಲತ್ತುಗಳನ್ನು ವಿಡಿಯೊವೊಂದರಲ್ಲಿ ನೋಡಿ ದಂಗಾಗಿ ಹೋದೆ. ಪ್ರಯೋಗಾಲಯದಲ್ಲಿದ್ದ ಸಲಕರಣೆಗಳು ವಿಶ್ವದ ಬೇರಾವ ದೇಶದಲ್ಲೂ ಇಲ್ಲ ಎಂಬುದನ್ನು ತನ್ನ ಮಾತುಗಳ ಮೂಲಕ ಸಾಬೀತು-ಪಡಿಸುತ್ತಿದ್ದ. ಭಾರತದಲ್ಲಿ ಇಂತಹ ಶಿಕ್ಷಣ ನೀಡುವ ಕಾಲೇಜುಗಳೇ ಇಲ್ಲವೆಂಬುದು ಅವನ ವಾದವಾಗಿತ್ತು.

ಮಧ್ಯಮ ವರ್ಗದ ಜೇಬಿಗೆ ಹೆಚ್ಚು ಹೆಚ್ಚು ಹರಿತವಾದ ಕತ್ತರಿಯ ಜೊತೆ ಕೊಡಲಿಯನ್ನೇ ಹಾಕುವುದರ ಮೂಲಕ ತಾವು ನೀಡುವ ಶೈಕ್ಷಣಿಕ ಗುಣಮಟ್ಟದ ಬಗ್ಗೆ ಭ್ರಮಾಲೋಕವೊಂದನ್ನು ಸೃಷ್ಟಿ ಮಾಡಿ ಮೋಸಪಡಿಸುವ ವ್ಯವಸ್ಥೆಯ ಬಹುದೊಡ್ಡ ಜಾಲವೊಂದು ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಲಿದೆಯೇ ಎಂಬ ಅನುಮಾನ ಕಾಡುತ್ತಿದೆ. ರಾಜ್ಯ ಅಥವಾ ದೇಶದಲ್ಲಿರುವ ಬಹುತೇಕ ಮೆಡಿಕಲ್ ಕಾಲೇಜುಗಳು ಹಾಲಿ ಮಂತ್ರಿಗಳು ಮತ್ತು ಮಾಜಿ ಮಂತ್ರಿಗಳ ಕೈಯಲ್ಲೋ ಮಠಾಧೀಶರ ಕೈಯಲ್ಲೋ ಇರುವುದರಿಂದ ಇವುಗಳ ಮೇಲಿನ ಸರ್ಕಾರದ ನಿಯಂತ್ರಣ ಮರೀಚಿಕೆಯಾಗಿಯೇ ಕಾಣಿಸುತ್ತದೆ.



ನಾಲ್ಕೈದು ವರ್ಷಗಳ ಹಿಂದಿನ ಸಂಗತಿಯೊಂದು ನೆನಪಿಗೆ ಬರುತ್ತಿದೆ. ಅಂದು, ದಿವಂಗತ ಅನಂತಕುಮಾರ್ ಅವರು ಕೇಂದ್ರ ಆರೋಗ್ಯ ಸಚಿವರಾಗಿದ್ದರು. ಹೃದಯಸಂಬಂಧಿ ಕಾಯಿಲೆಗಳಿಗೆ ಬಳಸುವ ಸ್ಟೆಂಟ್, ಪೇಸ್‌ಮೇಕರ್ ಹಾಗೂ ಇತರ ಉಪಕರಣಗಳಿಗೆ ಲಕ್ಷಾಂತರ ರೂಪಾಯಿಯನ್ನು ಖಾಸಗಿ ಆಸ್ಪತ್ರೆಯವರು ನಿರ್ದಯವಾಗಿ ವಸೂಲು ಮಾಡುತ್ತಿದ್ದರು. ಹೃದಯಸಂಬಂಧಿ ಕಾಯಿಲೆಗಳ ಉಪಶಮನಕ್ಕೆ ಇಂತಹ ಉಪಕರಣಗಳನ್ನು ಮಧ್ಯಮ ಮತ್ತು ಕೆಳವರ್ಗದವರು ಅಳವಡಿಸಿಕೊಳ್ಳಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ ಇತ್ತು. ಇವುಗಳಿಗೆ ನೀಡಬೇಕಿದ್ದ ಲಕ್ಷಾಂತರ ರೂಪಾಯಿಯಲ್ಲಿ ಶೇ 90ರಷ್ಟು ಹಣ ಇವುಗಳನ್ನು ಉತ್ಪಾದಿಸುವ ಕಂಪನಿಗಳು ಮತ್ತು ಖಾಸಗಿ ಆಸ್ಪತ್ರೆಗಳ ನಡುವಿನ ಅನೈತಿಕ ಹಣಕಾಸು ಒಪ್ಪಂದದ ಆಧಾರದ ಮೇಲೆ ವಿಲೇವಾರಿಯಾಗುತ್ತಿತ್ತು. ಇವುಗಳಿಗೆ ನಾಲ್ಕಾರು ಪಟ್ಟು ಹೆಚ್ಚಿಗೆ ಬೆಲೆಯನ್ನು ನೀಡಬೇಕಾದ ಅನಿವಾರ್ಯ ಪರಿಸ್ಥಿತಿಗೆ ಹುಸಿ ಕಾರಣಗಳನ್ನು ನೀಡಿ ರೋಗಿಗಳನ್ನು ಒಪ್ಪಿಸಲಾಗುತ್ತಿತ್ತು. ಇಂತಹ ಶೋಷಣೆಯನ್ನು ಅರ್ಥಮಾಡಿಕೊಂಡ ಸಚಿವ ಅನಂತಕುಮಾರ್, ಈ ಉಪಕರಣಗಳನ್ನು ಸಾಮಾನ್ಯರ ಕೈಗೆಟಕುವ ದರದಲ್ಲಿ ನೀಡುವಂತೆ ಆದೇಶಿಸಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಬೇಕಿದೆ.

ಈಗಲೂ ಅಂತಹುದೇ ಸಂದರ್ಭವೊಂದು ನಮ್ಮ ಸರ್ಕಾರಗಳಿಗೆ ಎದುರಾಗಿದೆ. ಅದು ಕೂಡಾ ಉಕ್ರೇನ್ ಮತ್ತು ರಷ್ಯಾ ನಡುವೆ ಉಂಟಾಗಿರುವ ಕದನದ ಮೂಲಕ. ಉಕ್ರೇನ್‌ನಲ್ಲಿ ₹ 14 ಲಕ್ಷಕ್ಕೆ ದೊರೆಯುವ ಮೆಡಿಕಲ್ ಶಿಕ್ಷಣಕ್ಕೆ ಇಲ್ಲಿ ಒಂದೂವರೆ ಕೋಟಿ ರೂಪಾಯಿ ಖರ್ಚಾಗಲು ಕಾರಣವೇನು ಎಂಬುದನ್ನು ಚರ್ಚೆಗೆ ಒಳಪಡಿಸಬೇಕಿದೆ. ನಿಯಂತ್ರಣ ಕ್ರಮಗಳ ಕುರಿತೂ ಯೋಚಿಸಬೇಕಿದೆ. ಖಾಸಗಿಯಾಗಿ ನಮ್ಮ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೂ ಉಕ್ರೇನ್‌ನಂತಹ ದೇಶಗಳಲ್ಲಿ ಸಿಗುವಂತೆ ಇಲ್ಲೂ ಮೆಡಿಕಲ್ ಸೀಟುಗಳು ಕೈಗೆ ಸಿಗುವ ದ್ರಾಕ್ಷಿಯಾಗಬೇಕಿದೆ.

ವಾಚಕರ ವಾಣಿ

ಚೆನ್ನಭೈರಾದೇವಿಗೆ ಗೌರವ ಸಲ್ಲಲಿ

ರಾಣಿ ಚೆನ್ನಭೈರಾದೇವಿ ಕಟ್ಟಿಸಿದ ಕೋಟೆಯನ್ನು ಪುನರುಜ್ಜೀವಗೊಳಿಸಬೇಕೆಂದು ಪತ್ರಕರ್ತ ಸಿ.ರುದ್ರಪ್ಪ ನೇತೃತ್ವದ ನಿಯೋಗವು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದ್ದನ್ನು ಪತ್ರಿಕೆಯಲ್ಲಿ ಓದಿದೆ (ಪ್ರ.ವಾ., ಫೆ. 27). ಆ ವಿಷಯ ನನ್ನ ಮನಸ್ಸಿಗೆ ತುಂಬಾ ಮುದ ನೀಡಿತು. ಕ್ರಿ.ಶ. 1548ರಿಂದ 1600ರ ವರೆಗೂ ಸುದೀರ್ಘವಾಗಿ ರಾಜ್ಯಭಾರ ಮಾಡಿದ ಏಕೈಕ ರಾಣಿ ಚೆನ್ನಭೈರಾದೇವಿ. ಆಕೆ ರಾಣಿ ಮಾತ್ರವಲ್ಲ, ಮಹಾಮಂಡಲೇಶ್ವರಿಯಾಗಿ ರಾಜ್ಯಭಾರ ಮಾಡಿದವಳು. ಕರ್ನಾಟಕದ ಇತಿಹಾಸದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನು ಅರವತ್ತು ವರ್ಷ ರಾಜ್ಯಭಾರ ಮಾಡಿದ್ದನ್ನು ಬಿಟ್ಟರೆ ಅಷ್ಟು ನೀಳಾಳಿಕೆ ಮಾಡಿದ ಎರಡನೆಯವಳೇ ಮಹಾಮಂಡಲೇಶ್ವರಿ ಚೆನ್ನಭೈರಾದೇವಿ ಎಂಬುದು ಗಮನಾರ್ಹ.

ಕರಿಮೆಣಸಿನ ರಾಣಿ, ಕಾರ್ನಾಡ ರಾಣಿ ಎಂದು ಖ್ಯಾತನಾಮಳಾದ ಚೆನ್ನಭೈರಾದೇವಿ ಗೇರುಸೊಪ್ಪೆಯಿಂದ ಆಳಿದ ಸಾಳ್ವ ವಂಶದವಳು. ಹೊನ್ನಾವರ (ಸುವರ್ಣಪುರ), ಹಾಡುವಳ್ಳಿ (ಸಂಗೀತಪುರ), ಅಂಕೋಲ, ಬಾರಕೂರು, ಗೇರುಸೊಪ್ಪೆ ಒಳಗೊಂಡ ದೊಡ್ಡ ಪ್ರದೇಶವನ್ನು ಸಮರ್ಥವಾಗಿ ಆಳಿದ ಧೀರೆ. ತನ್ನ ರಾಜ್ಯವನ್ನು ಹಿಗ್ಗಿಸಿದಳು, ರಾಜ್ಯದ ಕೋಟೆಗಳನ್ನು ಭದ್ರಪಡಿಸಿದಳು, ಬಂದರುಗಳನ್ನು ಅಭಿವೃದ್ಧಿಗೊಳಿಸಿದಳು ಹಾಗೂ ಮುಖ್ಯ ಪಟ್ಟಣಗಳನ್ನು ಉನ್ನತ ಸ್ಥಿತಿಗೆ ಮುಟ್ಟಿಸಿದ ದಕ್ಷರಾಣಿ ಎಂಬ ಕೀರ್ತಿಗೆ ಪಾತ್ರಳಾದಳು. ಗೇರುಸೊಪ್ಪೆಯನ್ನು ಆಳಿದವರ ಪೈಕಿ ಚೆನ್ನಭೈರಾದೇವಿ ನಮಗೆ ಹೆಚ್ಚು ಆಸಕ್ತಿಯನ್ನು ಮೂಡಿಸುತ್ತಾಳೆ. ಈಕೆಯ ಕಾಲದಲ್ಲಿ ಗೇರುಸೊಪ್ಪೆಯ ಖ್ಯಾತಿ ಕಡಲಾಚೆಗೂ ದಾಂಗುಡಿಯಿಟ್ಟಿತು. ತನ್ನ ನಾಡಿನಲ್ಲಿ ಯಥೇಚ್ಛವಾಗಿ ಬೆಳೆಯುತ್ತಿದ್ದ ಕರಿಮೆಣಸಿನ ವ್ಯಾಪಾರವನ್ನು ವೃದ್ಧಿಗೊಳಿಸಿ ವಿದೇಶಗಳಿಗೂ ವಿಸ್ತರಿಸಿದಳು. ಪೋರ್ಚುಗೀಸರು ಈಕೆಯನ್ನು ‘ಕರಿಮೆಣಸಿನ ರಾಣಿ’ ಎಂದು ಗುರುತಿಸಿದರು. ತನ್ನ ನೆಲೆವೀಡಾದ ಗೇರುಸೊಪ್ಪೆಯನ್ನು ಬಸದಿಗಳ ಬೀಡನ್ನಾಗಿ ಬೆಳೆಸಿದಳು. ಗೇರುಸೊಪ್ಪದಲ್ಲಿ ಈಕೆ ಕಟ್ಟಿಸಿದ ಸರ್ವಾಂಗ ಸುಂದರ ಚತುರ್ಮುಖ ಬಸದಿ ಇಂದಿಗೂ ವಾಸ್ತುಶಿಲ್ಪದ ವೈಭವವನ್ನು ಸಾರುತ್ತಿದೆ.

ಪೋರ್ಚುಗೀಸಿನ ಪ್ರವಾಸಿ ಡಾಂದು ಅರ್ತೆದ ಮೆನಜಿಸ್ ಮತ್ತು ಇಟಲಿಯ ಪ್ರವಾಸಿ ಪಿಯತ್ರೊ ದಲ್ಲ ವಲ್ಲೆ ಅವರು ಚೆನ್ನಭೈರಾದೇವಿಯನ್ನು ಕುರಿತು- ‘ಈ ರಾಣಿಯು ಶೀಲಸಂಪನ್ನೆ ಮತ್ತು ವಿವೇಕಿ’ ಎಂದು ಶ್ಲಾಘಿಸಿದ್ದಾರೆ. ಮೆಟ್ಟಿಲು ಮೆಟ್ಟಿಲಾಗಿ ಕಟ್ಟಿದ ರಾಜ್ಯವನ್ನು ನಿರಂತರ ಪರಿಶ್ರಮದಿಂದ ಯಶಸ್ವಿಯಾಗಿ ರೂಪಿಸಿದ ಚೆನ್ನಭೈರಾದೇವಿಯ ಆಳ್ವಿಕೆಯ ಕಡೆಯ ದಿನಗಳು ದುರಂತಮಯವಾದವು. ಆರಂಭದಲ್ಲಿ ಮಿತ್ರರಾಗಿದ್ದ ವಿದೇಶಿ ಪೋರ್ಚುಗೀಸರೂ ಸ್ವದೇಶಿ ಕೆಳದಿಯ ವೆಂಕಟಪ್ಪನಾಯಕನೂ ಪರಮ ಶತ್ರುಗಳಾದರು. ಅಂತಿಮವಾಗಿ ಕೆಳದಿಯರಸರು ಚೆನ್ನಭೈರಾದೇವಿಯನ್ನು ಬಂಧಿಸಿ ಸೆರೆಮನೆಯಲ್ಲಿಟ್ಟು ಆಕೆಯ ರಾಜ್ಯವನ್ನು ವಶಪಡಿಸಿಕೊಂಡರು. ರಾಣಿಯು ಬಂದೀಖಾನೆಯಲ್ಲೇ ಕಡೆಯುಸಿ-ರೆಳೆದಳು. ಕರ್ನಾಟಕದ ಹಿರಿಮೆಯನ್ನು ಜಾಗತಿಕ ಮಟ್ಟದಲ್ಲಿ ಬಿಂಬಿಸಿದ ರಾಣಿಯ ರೋಚಕವೂ ಸಾರ್ಥಕವೂ ಆದ ಯಶೋಗೀತೆ ಮರೆಯಾಗದೆ ಪುನರುಜ್ಜೀವಗೊಳ್ಳಲೆಂಬ ಸದಾಶಯದಿಂದ ರುದ್ರಪ್ಪ ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ಸಮಂಜಸವಾಗಿದೆ.

ಚೆನ್ನಭೈರಾದೇವಿಯ ಮಹತ್ಸಾಧನೆಗಳ ಪ್ರತೀಕವಾಗಿ ಉಳಿದಿರುವ ಕೋಟೆಕೊತ್ತಲ, ಬಂದರು, ಬಸದಿಗಳು ಜೀರ್ಣೋದ್ಧಾರಗೊಂಡು ಸುವ್ಯವಸ್ಥಿತಗೊಳ್ಳಬೇಕು. ಕರಾವಳಿಯಿಂದ ಬೆಂಗಳೂರು, ಮುಂಬೈ, ಚೆನ್ನೈಗೆ ಹೋಗಿಬರುವ ರೈಲಿಗೆ ‘ರಾಣಿ ಚೆನ್ನಭೈರಾದೇವಿ ಎಕ್ಸ್‌ಪ್ರೆಸ್’ ಎಂದು ಹೆಸರಿಡುವುದು ಸೂಕ್ತ. ಶಾಲಾ ಪಠ್ಯಗಳಲ್ಲಿ ಈಕೆಯನ್ನು ಪರಿಚಯಿಸುವ ಬರಹಗಳು ಸೇರಬೇಕು. ಇದರಿಂದ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಸಂಪನ್ನವಾದ ರಾಜ್ಯವನ್ನು ರೂಪಿಸಿ, ಅದನ್ನು ಕಬಳಿಸಲು ಬಂದ ವಿದೇಶಿಯರನ್ನು ದಿಟ್ಟವಾಗಿ ಎದುರಿಸಿದ ಧೀರ ರಾಣಿಗೆ ಗೌರವ ಸಲ್ಲಿಸಿದಂತೆ ಆಗುತ್ತದೆ.

ಕಮಲಾ ಹಂಪನಾ, ಬೆಂಗಳೂರು

ಬೇಕು ಮಾಹಿತಿ ಪೋರ್ಟಲ್

ಲಕ್ಷಾಂತರ ಭಾರತೀಯರು ಬೇರೆ ಬೇರೆ ದೇಶಗಳಲ್ಲಿ ನೆಲೆಸಿದ್ದರೂ ಪ್ರಾಯಶಃ ಅವರೆಲ್ಲರ ಪೂರ್ಣ ಮಾಹಿತಿಯು ಸರ್ಕಾರದ ಬಳಿ ಲಭ್ಯವಿಲ್ಲ ಅನಿಸುತ್ತದೆ. ಹಲವು ಸಂದರ್ಭಗಳಲ್ಲಿ ಅಂತಹ ದೇಶಗಳಲ್ಲಿ ಆಂತರಿಕ ಕ್ಷೋಭೆಯುಂಟಾದಾಗ ಅಥವಾ ಯುದ್ಧ ನಡೆಯುವಾಗ ಅಲ್ಲಿರುವ ಭಾರತೀಯರನ್ನು ಕರೆತರಲು ಸರ್ಕಾರ ಹರಸಾಹಸ ಪಡುವುದು ಎಲ್ಲರಿಗೂ ತಿಳಿದಿರುವ ವಿಷಯವೇ. ವಿದೇಶಗಳಲ್ಲಿ ನೆಲೆಸಿರುವ ಭಾರತೀಯರೆಲ್ಲರೂ ತಮ್ಮ ತಮ್ಮ ಸಂಪರ್ಕ ಸಂಖ್ಯೆಗಳನ್ನು, ವಿಳಾಸಗಳನ್ನು ಆಗಾಗ ಒಂದು ಪೋರ್ಟಲ್‌ನಲ್ಲಿ ಭರ್ತಿ ಮಾಡುವಂತಹ ವ್ಯವಸ್ಥೆಯ ಬಗ್ಗೆ ಸರ್ಕಾರ ತುರ್ತಾಗಿ ಗಮನ ಹರಿಸಬೇಕಾಗಿದೆ.

ಭರತ್ ಬಿ.ಎನ್., ಬೆಂಗಳೂರು

ಎಸ್‌ಡಿಎಂಸಿ: ಮರೆಯಾಗದಿರಲಿ ನೈಜ ಆಶಯ

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ (ಎಸ್‌ಡಿಎಂಸಿ) ರಚನೆಯ ನೈಜ ಆಶಯವೇ ಶಾಲಾ ಅಭಿವೃದ್ಧಿಗೆ ಶ್ರಮಿಸುವುದು ಹಾಗೂ ಕಲಿಕಾ ಚಟುವಟಿಕೆಗಳ ಮೇಲುಸ್ತುವಾರಿಯೇ ಆಗಿದೆ. ಆದರೆ ಪ್ರಸ್ತುತ ಶಾಲೆಗಳಲ್ಲಿನ ಬಹುತೇಕ ಎಸ್‌ಡಿಎಂಸಿಗಳು ರಾಜಕೀಯಪ್ರೇರಿತವಾಗಿ ಇಂತಹ ನೈಜ ಆಶಯಕ್ಕೆ ಧಕ್ಕೆ ತರುತ್ತಿರುವುದು ಆತಂಕದ ಸಂಗತಿ. ಈ ಕುರಿತು ಅರವಿಂದ ಚೊಕ್ಕಾಡಿ ಅವರ ಲೇಖನ (ಪ್ರ.ವಾ., ಮಾರ್ಚ್ 2) ವಾಸ್ತವ ಸಂಗತಿಗಳನ್ನು ಅನಾವರಣಗೊಳಿಸಿದೆ. ಈಗಿನ ಎಸ್‌ಡಿಎಂಸಿಗಳಲ್ಲಿ ಶೇಕಡ 50ರಷ್ಟು ಸಮಿತಿಗಳು ಶಾಲಾ ಪ್ರಗತಿಗೆ ಅವಿರತ ಶ್ರಮಿಸಿ, ಅಗತ್ಯ ಬೆಂಬಲ ನೀಡುತ್ತಿದ್ದರೆ, ಇನ್ನುಳಿದವು ಮುಖ್ಯಗುರುಗಳಿಗೆ, ಶಿಕ್ಷಕರಿಗೆ ಕಿರುಕುಳ ನೀಡುತ್ತಾ ಅಧಿಕಾರದ ದರ್ಪ ಮೆರೆಯುತ್ತಿರುವುದು ಅಲ್ಲಲ್ಲಿ ವರದಿಯಾಗುತ್ತಿದೆ. ಹಣ ದುರ್ಬಳಕೆಯಂತಹ ಗಂಭೀರ ಅಪರಾಧಕ್ಕಾಗಿ ಸಾವಿರಾರು ರೂಪಾಯಿ ದಂಡ ಹಾಗೂ ಜೈಲು ಶಿಕ್ಷೆಗೆ ಗುರಿಯಾಗಿರುವ ಸಂಗತಿಯೂ ಇತ್ತೀಚೆಗಷ್ಟೇ ವರದಿಯಾದದ್ದನ್ನು ಗಮನಿಸಿದ್ದೇವೆ.

ಕೇವಲ ಕಾಮಗಾರಿಗಳಾಸೆಗೆ, ಹಣದಾಸೆಗೆ ಜಿದ್ದಿಗೆ ಬಿದ್ದು ಎಸ್‌ಡಿಎಂಸಿ ಅಧ್ಯಕ್ಷರಾಗುವುದು, ಪಂಚಾಯಿತಿ ಸದಸ್ಯರು, ಶಾಸಕರ ಬೆಂಬಲಿಗರೆಂದು ಬಿಂಬಿಸಿಕೊಳ್ಳುತ್ತ ಅತಿರೇಕದ ವರ್ತನೆ ತೋರುವುದು ಶಾಲಾ ಕಲಿಕಾ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈಗ ಕಾಮಗಾರಿಗಳ ಜವಾಬ್ದಾರಿ ಇಲ್ಲದಿರುವುದು ಮುಖ್ಯ ಗುರುಗಳನ್ನು ಕೊಂಚ ನಿರಾಳವಾಗಿಸಿದೆ ಎನ್ನಬಹುದು. ಇಲಾಖೆಯಿಂದ ಸಮಿತಿಗಳ ಸಬಲೀಕರಣಕ್ಕಾಗಿ ನೀಡಲಾಗುತ್ತಿರುವ ನಾಲ್ಕು ಹಂತಗಳ ತರಬೇತಿಯ ಗರಿಷ್ಠ ಪ್ರಯೋಜನವನ್ನು ಸದಸ್ಯರು ಪಡೆದು, ಶಾಲಾಭಿವೃದ್ಧಿ ಮಾಡುವತ್ತ ಚಿತ್ತ ಹರಿಸಬೇಕಿದೆ ಹಾಗೂ ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸುವಂತೆ ಸಶಕ್ತವಾಗಬೇಕಿದೆ.

ಸುರೇಶ್ ಕಲಾಪ್ರಿಯಾ, ಗಂಗಾವತಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಆದ್ಯತಾ ವಲಯವಾಗಿ ಪರಿಗಣಿಸಲು ಕೇಂದ್ರ ಸರ್ಕಾರ, ಬ್ಯಾಂಕಿಂಗ್ ಕ್ಷೇತ್ರಕ್ಕೆ ನೀತಿ ಆಯೋಗದ ಶಿಫಾರಸು

ಬ್ಯಾಟರಿ ವಾಹನಕ್ಕೆ ಶಕ್ತಿ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ಬಳಕೆ ಇನ್ನೂ ಆರಂಭಿಕ ಹಂತದಲ್ಲಿದೆ. ಇ.ವಿ.ಗಳ ಬಳಕೆಯನ್ನು ಉತ್ತೇಜಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು. ಇ.ವಿ.ಗಳ ಖರೀದಿಗೆ ಸಾಲ ನೀಡಿಕೆ, ಚಾರ್ಜಿಂಗ್ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ನೀತಿ ಆಯೋಗವು 'ಭಾರತದಲ್ಲಿ ಇ.ವಿ.ಗಳ ಬ್ಯಾಂಕಿಂಗ್' ಎಂಬ ವರದಿಯಲ್ಲಿ ಹೇಳಿದೆ.

ಇ.ವಿ.ಗಳನ್ನು ಆದ್ಯತಾ ವಲಯವಾಗಿ ಪರಿಗಣಿಸಬೇಕು ಎಂದು ನೀತಿ ಆಯೋಗವು ತನ್ನ ವರದಿಯಲ್ಲಿ ಹೇಳಿದೆ. ಇ.ವಿ.ಗಳ ಮಾರಾಟ ಮತ್ತು ಖರೀದಿಯಲ್ಲಿ ಇರುವ ತೊಡಕುಗಳು, ಅವುಗಳ ನಿರ್ವಹಣೆಯಲ್ಲಿರುವ ಸವಾಲುಗಳು ಮತ್ತು ಇ.ವಿ.ಗಳಿಂದಾಗುವ ಲಾಭಗಳ ಬಗ್ಗೆ ನೀತಿ ಆಯೋಗವು ತನ್ನ ವರದಿಯಲ್ಲಿ ವಿವರಿಸಿದೆ. ಈ ಮೂಲಕ, ಈ ವಲಯವನ್ನು ಆದ್ಯತಾ ವಲಯವನ್ನಾಗಿ ಏಕೆ ಪರಿಗಣಿಸಬೇಕು ಎಂಬುದನ್ನು ವಿವರಿಸಿದೆ.

ಸ್ವಂತ ಬಳಕೆಗಾಗಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳು, ವಾಣಿಜ್ಯ ಬಳಕೆಗಾಗಿ ವಿದ್ಯುತ್ ಚಾಲಿತ ದ್ವಿಚಕ್ರ ವಾಹನಗಳ ಬಳಕೆಯ ಅಗತ್ಯ ಮತ್ತು ಲಾಭಗಳನ್ನು ವರದಿಯಲ್ಲಿ ವಿವರಿಸಲಾಗಿದೆ. ವಿದ್ಯುತ್ ಚಾಲಿತ ಸರಕು ಸಾಗಣೆ ಆಟೊ, ವಿದ್ಯುತ್ ಚಾಲಿತ ಟ್ಯಾಕ್ಸಿಗಳ ಬಳಕೆಯಿಂದ ಒಟ್ಟು ನಿರ್ವಹಣೆಯ ವೆಚ್ಚ ಕಡಿಮೆಯಾಗುತ್ತದೆ. ದೀರ್ಘಾವಧಿಯಲ್ಲಿ ಇದರಿಂದ ಮಾಲೀಕರಿಗೆ ಲಾಭ ಹೆಚ್ಚಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮುಂದಿನ ದಿನಗಳಲ್ಲಿ ಇ.ವಿ. ವಲಯವನ್ನು ದೇಶದ ಮೂಲಸೌಕರ್ಯ ವಲಯದಲ್ಲಿ ಒಂದು ಪ್ರಮುಖ ಉಪವಲಯವನ್ನಾಗಿ ಪರಿಗಣಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಇ.ವಿ. ಮತ್ತು ಚಾರ್ಜಿಂಗ್ ಮೂಲಸೌಕರ್ಯದಲ್ಲಿ ಹೂಡಿಕೆ

ದೇಶದಲ್ಲಿ ಇ.ವಿ.ಗಳ ತಯಾರಿಕೆ ಮತ್ತು ಚಾರ್ಜಿಂಗ್ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಖಾಸಗಿ ಕಂಪನಿಗಳು ಗರಿಷ್ಠ ಪ್ರಮಾಣದಲ್ಲಿ ಹೂಡಿಕೆ ಮಾಡಿವೆ. ಇದರಲ್ಲಿ ಸರ್ಕಾರ ನೇರವಾಗಿ ಮತ್ತು ಸರ್ಕಾರಿ ಸಂಸ್ಥೆಗಳ ಮೂಲಕ ಹೂಡಿಕೆ ಮಾಡಬೇಕು ಎಂದು ಆಯೋಗವು ಹೇಳಿದೆ.

ಇ.ವಿ. ವಲಯದ ಮೂಲಸೌಕರ್ಯ ಅಭಿವೃದ್ಧಿಗಾಗಿ 2025ರ ವೇಳೆಗೆ ಒಟ್ಟು ₹40,000 ಕೋಟಿ ಹೂಡಿಕೆಯ ಅವಶ್ಯಕತೆ ಇದೆ. 2030ರ ವೇಳೆಗೆ ₹3.7 ಲಕ್ಷ ಕೋಟಿ ಹೂಡಿಕೆಯ ಅವಶ್ಯಕತೆ ಇದೆ. ಇದು ಕ್ಷಿಪ್ರವಾಗಿ ಬೆಳೆಯುತ್ತಿರುವ ವಲಯವಾದ ಕಾರಣ, ಬ್ಯಾಂಕಿಂಗ್ ವಲಯವು ಇದನ್ನೂ ಆದ್ಯತಾ ವಲಯವಾಗಿ ಪರಿಗಣಿಸಬೇಕು. ಈ ವಲಯದಲ್ಲಿ ಹೂಡಿಕೆಗೆ ಅಗತ್ಯವಿರುವ ಹಣಕಾಸು ನೆರವನ್ನು ಬ್ಯಾಂಕಿಂಗ್ ವಲಯವು ಒದಗಿಸಬೇಕು. ಇದು ಎರಡೂ ವಲಯಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಖಾಸಗಿ ಕಂಪನಿಗಳ ಹೂಡಿಕೆ

(ಕೋಟಿ ₹ ಗಳಲ್ಲಿ)



- ಡೀಸೆಲ್ ಅಥವಾ ಪೆಟ್ರೋಲ್ ಎಂಜಿನ್ ಇರುವ ಸರಕು ಸಾಗಣೆ ಆಟೊ ಬೆಲೆಗೆ ಹೋಲಿಸಿದರೆ, ಸಹಾಯಧನದೊಂದಿಗೆ ಇ.ವಿ. ಖರೀದಿಗೆ ₹1 ಲಕ್ಷವನ್ನು ಹೆಚ್ಚುವರಿಯಾಗಿ ಹೂಡಿಕೆ ಮಾಡಬೇಕಾಗುತ್ತದೆ
- ಡೀಸೆಲ್ ಅಥವಾ ಪೆಟ್ರೋಲ್ ಎಂಜಿನ್ ಇರುವ ಸರಕು ಸಾಗಣೆ ಆಟೊವನ್ನು ಒಂದು ಕಿ.ಮೀ. ಚಲಾಯಿಸಲು ₹6.20 ವೆಚ್ಚ ಮಾಡಬೇಕಾಗುತ್ತದೆ. ಆದರೆ ಇ.ವಿ.ಯನ್ನು ಒಂದು ಕಿ.ಮೀ. ಚಾಲನೆ ಮಾಡಲು ₹1.90 ವೆಚ್ಚವಾಗುತ್ತದೆ. ಇಲ್ಲಿ ಮಾಲೀಕನಿಗೆ ಅಂದಾಜು ₹4 ಉಳಿತಾಯವಾಗುತ್ತದೆ. ದೀರ್ಘಾವಧಿಯಲ್ಲಿ ಇದರಿಂದ ಲಾಭದ ಪ್ರಮಾಣ ಹೆಚ್ಚಾಗಲಿದೆ

ಖರೀದಿ ವೆಚ್ಚ ಹೆಚ್ಚು, ನಿರ್ವಹಣೆ ವೆಚ್ಚ ಕಡಿಮೆ

ಈಗಿನ ಪರಿಸ್ಥಿತಿಯಲ್ಲಿ ಪೆಟ್ರೋಲ್/ಡೀಸೆಲ್ ಎಂಜಿನ್ ವಾಹನಗಳಿಗಿಂತ ಇ.ವಿ.ಗಳು ದುಬಾರಿ. ಹೀಗಾಗಿ ಇ.ವಿ. ಖರೀದಿಯಲ್ಲಿ ಹೆಚ್ಚಿನ ಹಣ ಹೂಡಿಕೆ ಮಾಡಬೇಕಾಗುತ್ತದೆ. ಪೆಟ್ರೋಲ್/ಡೀಸೆಲ್ ಎಂಜಿನ್ ವಾಹನಗಳು ಮತ್ತು ಇ.ವಿ.ಗಳ ಬೆಲೆಯಲ್ಲಿ ಭಾರಿ ಅಂತರವಿದೆ. ದ್ವಿಚಕ್ರ ವಾಹನಗಳ ವಿಚಾರದಲ್ಲಿ ಈ ಅಂತರದ ಪ್ರಮಾಣ ಹೆಚ್ಚು. ಆಟೊಗಳು ಮತ್ತು ವಾಣಿಜ್ಯ ಬಳಕೆಯ ಕಾರುಗಳಲ್ಲೂ ಈ ಅಂತರ ದೊಡ್ಡದೇ ಇದೆ. ಆದರೆ, ದೀರ್ಘಾವಧಿಯಲ್ಲಿ ಇ.ವಿ.ಗಳ ಒಟ್ಟು ನಿರ್ವಹಣಾ ವೆಚ್ಚ ಕಡಿಮೆ ಇದೆ. ಪೆಟ್ರೋಲ್/ಡೀಸೆಲ್ ಎಂಜಿನ್ ವಾಹನಗಳು ಮತ್ತು ಇ.ವಿ.ಗಳ ಒಟ್ಟು ನಿರ್ವಹಣಾ ವೆಚ್ಚದ ನಡುವೆ ಭಾರಿ ಅಂತರವಿದೆ. ಹೀಗಾಗಿ ಖರೀದಿ ವೇಳೆ ಹೆಚ್ಚು ಹಣ ಹೂಡಿಕೆ ಮಾಡಬೇಕಿದ್ದರೂ, ದೀರ್ಘಾವಧಿಯಲ್ಲಿ ಇ.ವಿ.ಗಳು ಹೆಚ್ಚು ಲಾಭ ತಂದುಕೊಡಲಿವೆ ಎಂದು ನೀತಿ ಆಯೋಗವು ತನ್ನ ವರದಿಯಲ್ಲಿ ಹೇಳಿದೆ.

ಆಟೊ ರಿಕ್ಷಾ



- ಡೀಸೆಲ್ ಅಥವಾ ಪೆಟ್ರೋಲ್ ಎಂಜಿನ್ ಇರುವ ಸರಕು ಸಾಗಣೆ ಆಟೊ ಖರೀದಿಗೆ ಅಂದಾಜು ₹3 ಲಕ್ಷ ವೆಚ್ಚ ಮಾಡಬೇಕಾಗುತ್ತದೆ. ಆದರೆ ಅದೇ ಸಾಮರ್ಥ್ಯದ ವಿದ್ಯುತ್ ಚಾಲಿತ ಸರಕು ಸಾಗಣೆ ಆಟೊ ಖರೀದಿಸಲು ₹5.71 ಲಕ್ಷ ವೆಚ್ಚ ಮಾಡಬೇಕಾಗುತ್ತದೆ. ಸರ್ಕಾರದ ಸಹಾಯಧನ ದೊರೆತರೆ ಖರೀದಿ ವೆಚ್ಚ ₹4 ಲಕ್ಷಕ್ಕೆ ಇಳಿಯುತ್ತದೆ

ವಾಣಿಜ್ಯ ಬಳಕೆಯ ಪ್ರಯಾಣಿಕರ ಕಾರು



- ವಾಣಿಜ್ಯ ಬಳಕೆಗೆ, ಡೀಸೆಲ್ ಅಥವಾ ಪೆಟ್ರೋಲ್ ಎಂಜಿನ್ ಇರುವ ಪ್ರಯಾಣಿಕರ ಕಾರು ಖರೀದಿಸಲು ಅಂದಾಜು ₹9 ಲಕ್ಷದಿಂದ ₹12 ಲಕ್ಷ ವೆಚ್ಚ ಮಾಡಬೇಕಾಗುತ್ತದೆ. ಆದರೆ ಅದೇ ಸಾಮರ್ಥ್ಯದ ವಿದ್ಯುತ್ ಚಾಲಿತ ಕಾರನ್ನು ಖರೀದಿಸಲು ₹ 21 ಲಕ್ಷ ವೆಚ್ಚವಾಗುತ್ತದೆ. ಸರ್ಕಾರದ ಸಹಾಯಧನ ದೊರೆತರೆ ಅದೇ ಕಾರು ಅಂದಾಜು ₹ 15.75 ಲಕ್ಷಕ್ಕೆ ದೊರೆಯುತ್ತದೆ.
- ಡೀಸೆಲ್ ಅಥವಾ ಪೆಟ್ರೋಲ್ ಎಂಜಿನ್ ಕಾರಿನ ಬೆಲೆಗೆ ಹೋಲಿಸಿದರೆ, ಸಹಾಯಧನದೊಂದಿಗೆ ಇ.ವಿ. ಖರೀದಿಗೆ ಅಂದಾಜು ₹3 ಲಕ್ಷದಿಂದ ₹6 ಲಕ್ಷವನ್ನು ಹೆಚ್ಚುವರಿಯಾಗಿ ಹೂಡಿಕೆ ಮಾಡಬೇಕಾಗುತ್ತದೆ
- ವಾಣಿಜ್ಯ ಬಳಕೆಯ, ಡೀಸೆಲ್ ಅಥವಾ ಪೆಟ್ರೋಲ್ ಎಂಜಿನ್ ಇರುವ ಪ್ರಯಾಣಿಕರ ಕಾರನ್ನು ಒಂದು ಕಿ.ಮೀ. ಚಲಾಯಿಸಲು ಅಂದಾಜು ₹10ರಿಂದ ₹12 ವೆಚ್ಚ ಮಾಡಬೇಕಾಗುತ್ತದೆ. ಆದರೆ ಇ.ವಿ.ಯನ್ನು ಒಂದು ಕಿ.ಮೀ. ಚಾಲನೆ ಮಾಡಲು ₹6 ವೆಚ್ಚವಾಗುತ್ತದೆ. ಇಲ್ಲಿ ಮಾಲೀಕನಿಗೆ ಅಂದಾಜು ₹4ರಿಂದ ₹6 ಉಳಿತಾಯವಾಗುತ್ತದೆ. ದೀರ್ಘಾವಧಿಯಲ್ಲಿ ಇದರಿಂದ ಲಾಭದ ಪ್ರಮಾಣ ಹೆಚ್ಚಾಗಲಿದೆ

ಹಲವು ಲಾಭಗಳು

ಇ.ವಿ.ಗಳ ಬಳಕೆಯಿಂದ ಆರ್ಥಿಕ ಲಾಭವಷ್ಟೇ ಆಗುವುದಿಲ್ಲ. ಬದಲಿಗೆ ಇಂಗಾಲದ ಡೈ ಆಕ್ಸೈಡ್‌ನ ಮಾಲಿನ್ಯದ ಪ್ರಮಾಣವೂ ಇಳಿಕೆಯಾಗುತ್ತದೆ. ಇದರಿಂದ ಜಾಗತಿಕ ತಾಪಮಾನ ನಿಯಂತ್ರಣ ಸಾಧ್ಯವಾಗುತ್ತದೆ. ಹೀಗೆ ಇ.ವಿ.ಗಳ ಬಳಕೆಯಿಂದ ಏಕಕಾಲದಲ್ಲಿ ಎರಡು ರೀತಿಯ ಅನುಕೂಲಗಳು ಇವೆ.

159 ಟನ್ — ದೆಹಲಿಯಲ್ಲಿ 5 ಲಕ್ಷದಷ್ಟು ಇ.ವಿ.ಗಳು ಬಳಕೆಗೆ ಬಂದರೆ, ಪಿ.ಎಂ.2.5 ಗಾತ್ರದ ಮಾಲಿನ್ಯಕಾರಕ ಕಣಗಳ ಮಾಲಿನ್ಯದಲ್ಲಿ ಆಗುವ ಇಳಿಕೆ ಪ್ರಮಾಣ

74 ಲಕ್ಷ ಟನ್ — ಕೇಂದ್ರ ಸರ್ಕಾರದ ಫೇಮ್–2 ಸಹಾಯಧನ ಯೋಜನೆ ಅಡಿ ರಸ್ತೆಗೆ ಇಳಿಯುವ ಎಲ್ಲಾ ವಾಹನಗಳ ಬಳಕೆಯಿಂದ, ಅವುಗಳ ಜೀವಿತಾವಧಿಯಲ್ಲಿ ಇಂಗಾಲದ ಡೈ ಆಕ್ಸೈಡ್ ಹೊರಸೂಸುವಿಕೆಯಲ್ಲಿ ಆಗುವ ಇಳಿಕೆ

₹17,000 ಕೋಟಿ — ಕೇಂದ್ರ ಸರ್ಕಾರದ ಫೇಮ್–2 ಸಹಾಯಧನ ಯೋಜನೆ ಅಡಿ ರಸ್ತೆಗೆ ಇಳಿಯುವ ಎಲ್ಲಾ ವಾಹನಗಳ ಬಳಕೆಯಿಂದ, ಅವುಗಳ ಜೀವಿತಾವಧಿಯಲ್ಲಿ ದೇಶದ ಕಚ್ಚಾತೈಲ ಆಮದು ವೆಚ್ಚದಲ್ಲಿ ಆಗುವ ಇಳಿಕೆ

ಆಧಾರ: ನೀತಿ ಆಯೋಗದ 'ಭಾರತದಲ್ಲಿ ಇ.ವಿ.ಗಳ ಬ್ಯಾಂಕಿಂಗ್' ವರದಿ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 60

ಶಿವಲಿಂಗ ನಿರ್ಮಾಣ ಪೂಜಾಕ್ರಮ

ಈಗ ಸೂತಮುನಿ, ಶಿವಪೂಜಾಕ್ರಮವನ್ನು ಮತ್ತು ಲಿಂಗನಿರ್ಮಾಣದ ನಿಯಮವನ್ನು ತಿಳಿಸುತ್ತಾನೆ.

'ಸದ್ಯೋಜಾತಂ' ಎಂಬ ಮಂತ್ರದಿಂದ ಮಣ್ಣನ್ನು ತರಬೇಕು. 'ವಾಮದೇವಾಯ ನಮಃ' ಎಂಬ ಮಂತ್ರದಿಂದ ಜಲದಿಂದ ಮಣ್ಣನ್ನು ಶೋಧಿಸಬೇಕು. 'ಅಘೋರೇಭ್ಯೋ' ಎಂಬ ಮಂತ್ರದಿಂದ ಲಿಂಗವನ್ನು ನಿರ್ಮಿಸಬೇಕು. 'ತತ್ಪುರುಷಾಯ' ಎಂಬ ಮಂತ್ರದಿಂದ ವಿಧಿವತ್ತಾಗಿ ಶಿವನನ್ನು ಆಹ್ವಾನಿಸಬೇಕು. ನಂತರ 'ಈಶಾನಃ' ಎಂಬ ಮಂತ್ರದಿಂದ ಶಿವನನ್ನು ಪೀಠದಲ್ಲಿ ಪ್ರತಿಷ್ಠಾಪಿಸಬೇಕು. ಗುರು ಉಪದೇಶಿಸಿರುವಂತಹ ಶಿವಪಂಚಾಕ್ಷರೀಮಂತ್ರದಿಂದ ಷೋಡಶೋಪಚಾರಗಳನ್ನರ್ಪಿಸಿ ವಿಧಿವತ್ತಾಗಿ ಪೂಜಿಸಬೇಕು.

ಭವಾಯ (ಜಗದ್ರೂಪನಾದಂತಹ) ಭವನಾಶಾಯ (ಸಂಸಾರವನ್ನು ನಾಶಮಾಡುವಂತಹ) ಮಹಾದೇವಾಯ (ದೇವದೇವನಾದ ಪರಮೇಶ್ವರ) ಧೀಮಹಿ (ಪೂಜೆಯಿಂದ ಸಂತೋಷಗೊಳಿಸುವ). ಉಗ್ರಾಯ (ಉಗ್ರನೂ) ಉಗ್ರನಾಶಾಯ (ಕ್ರೂರರನ್ನು ನಾಶಮಾಡುವವ) ಶಶಿಮೌಲಿನೆ (ಚಂದ್ರಕಲೆಯನ್ನು ಧರಿಸಿರುವವನು) ಶರ್ವಾಯ (ಶಿವನಿಗೆ ನಮಸ್ಕಾರ) – ಎಂಬ ವೈದಿಕ ಮಂತ್ರದಿಂದ ಭಕ್ತಿಪೂರ್ವಕವಾಗಿ ಪೂಜಿಸಬೇಕು. ಜನಸಾಮಾನ್ಯರು ಓಂಕಾರವು ಆದಿಯುಲ್ಲುಳ್ಳ, ಚತುರ್ಥೀವಿಭಕ್ತ್ಯಂತವಾದ ಮತ್ತು ಕೊನೆಯಲ್ಲಿ ನಮಃ ಪದವುಳ್ಳ ಎಂಟು ಶಿವನಾಮಗಳನ್ನು ಉಚ್ಚರಿಸಿ ಮಣ್ಣನ್ನು ತರಬೇಕು. ಅದಕ್ಕೆ ಜಲದಿಂದ ಕಲಸಿ ಲಿಂಗವನ್ನು ನಿರ್ಮಿಸಬೇಕು. ನಂತರ 'ಓಂ ಹರಾಯ ನಮಃ, ಓಂ ಮಹೇಶ್ವರಾಯ ನಮಃ, ಓಂ ಶಂಭವೇ ನಮಃ, ಓಂ ಶೂಲಪಾಣಿಯೇ ನಮಃ, ಓಂ ಪಿನಾಕಧರಾಯ ನಮಃ, ಓಂ ಶಿವಾಯ ನಮಃ, ಓಂ ಪಶುಪತಯೇ ನಮಃ, ಓಂ ಮಹಾದೇವಾಯ ನಮಃ' ಅಂತ ಮಂತ್ರೋಚ್ಚಾರ ಮಾಡಿ ಶಿವಲಿಂಗ ಪ್ರತಿಷ್ಠಾಪನೆ ಮಾಡಿ ಪೂಜಿಸಬೇಕು. ಆಹ್ವಾನ, ಅಭಿಷೇಕ, ಪೂಜೆ ನಂತರ, ಕ್ಷಮಿಸು ಎಂದು ಹೇಳಿ ವಿಸರ್ಜನೆಮಾಡಬೇಕು. ಆರು ಅಂಗನ್ಯಾಸ ಮತ್ತು ಕರನ್ಯಾಸಗಳನ್ನು ವಿಧಿವತ್ತಾಗಿ ಮಾಡಿದ ಬಳಿಕ 'ಓಂ ನಮಃ ಶಿವಾಯ' ಎಂಬ ಷಡಕ್ಷರಮಂತ್ರದಿಂದ ಶಿವಧ್ಯಾನವನ್ನು ಮಾಡಬೇಕು.

ಕೈಲಾಸದ ರಜತಪೀಠದ ಮಧ್ಯದಲ್ಲಿ ಕುಳಿತಿರುವ, ಸನಂದ ಮುಂತಾದವರಿಂದ ಅರ್ಚಿಸಲ್ಪಡುತ್ತಿರುವ, ಚಕ್ಷುರಾದಿ ಪ್ರಯಾಣಗಳಿಗೆ ಅಗೋಚರನಾಗಿರುವ, ಪಾರ್ವತಿಯಿಂದ ಆಲಂಗಿಸಲ್ಪಟ್ಟಿರುವ, ಸಕಲಾಭರಣಗಳಿಂದ ಅಲಂಕೃತನಾಗಿರುವ, ಜಗತ್ತಿಗೆ ಅಲಂಕಾರಪ್ರಾಯನಾದ ಶಿವನೇ; ಬೆಳ್ಳಿಯ ಬೆಟ್ಟದಂತೆ ಶುಭ್ರವಾದ ವರ್ಣದಿಂದ ವಿರಾಜಿಸುವವನೇ, ಶಿರಸ್ಸಿನಲ್ಲಿ ಚಂದ್ರಕಲೆಯಿರುವವನೆ, ರತ್ನಾಭರಣಗಳ ಕಾಂತಿಯಿಂದ ಪ್ರಕಾಶಿಸುತ್ತಲಿರುವವವನೆ, ಕೈಗಳಲ್ಲಿ ಕೊಡಲಿ, ಜಿಂಕೆ, ವರದಮುದ್ರೆ ಮತ್ತು ಅಭಯಮುದ್ರೆಗಳನ್ನು ಧರಿಸಿರುವವನೆ, ಪ್ರಸನ್ನವಾದ ಮುಖದಿಂದ ಬೆಳಗುತ್ತಿರುವವನೇ, ಪದ್ಮಾಸನದಲ್ಲಿ ಕುಳಿತು ಹುಲಿಯ ಚರ್ಮವನ್ನುಟ್ಟಿರುವವನೆ, ನೀನೇ ಜಗತ್ತಿಗೆ ಆದಿಪುರುಷನು, ಆದಿಕರಣನು; ಸಕಲ ಭಯವನ್ನೂ ಹೋಗಲಾಡಿಸುವವನು, ಐದು ಮುಖಗಳಿಂದಲೂ, ಮೂರು ಕಣ್ಣುಗಳಿಂದಲೂ ಶೋಭಿಸುತ್ತಿರುವನು – ಅಂತ ಶಿವನನ್ನು ಧ್ಯಾನಿಸಿ ಪ್ರಾರ್ಥಿವಲಿಂಗವನ್ನು ಪೂಜಿಸಬೇಕು. ಬಳಿಕ ಪಂಚಾಕ್ಷರಮಂತ್ರವನ್ನು ಗುರುವಿನ ಉಪದೇಶದಂತೆ ವಿಧಿವತ್ತಾಗಿ ಜಪಿಸಬೇಕು.

ಶಿವನನ್ನು ನಮಸ್ಕರಿಸುತ್ತಾ ಅನೇಕ ವಿಧವಾಗಿ ಸ್ತೋತ್ರಗಳಿಂದ ಸ್ತುತಿಸಬೇಕು. ಶತರುದ್ರೀಯವನ್ನು ನೂರು ಬಾರಿ ಪಠಿಸಬೇಕು. ಅಕ್ಷತೆ-ಪುಷ್ಪಗಳನ್ನು ಅಂಜಲಿಯಲ್ಲಿ ಧರಿಸಿ ಭಕ್ತಿಯಿಂದ 'ಭೂತನಾಥನಾದ ಓ ಶಿವನೇ! ಓ ದಯಾಮೂರ್ತಿಯೇ! ನಾನು ನಿನ್ನವನು, ನಿನ್ನ ಗುಣಗಳೇ ಪ್ರಾಣ. ನಿನ್ನ ಗುಣಗಳನ್ನೇ ಪ್ರೀತಿಸುವವನು, ನಿನ್ನಲ್ಲಿಯೇ ನೆಟ್ಟ ಮನಸ್ಸುಳ್ಳವನು ಎಂದು ತಿಳಿದು ನನ್ನಲ್ಲಿ ಪ್ರಸನ್ನನಾಗು!' ಅಂತ ಪ್ರಾರ್ಥಿಸಬೇಕು.

'ಓ ಮಹಾದೇವ! ವೇದಗಳು, ಪುರಾಣಗಳು, ಶಾಸ್ತ್ರಗಳು ಮತ್ತು ಋಷಿಗಳೂ ನಿನ್ನ ಸ್ವರೂಪವನ್ನು ತಿಳಿಯಲಾರರು. ಇಂತಹ ನಿನ್ನನ್ನು ನಾನು ಹೇಗೆ ತಿಳಿಯಬಲ್ಲೆನು? ಓ ಮಹೇಶ್ವರ! ಹೇಗಾದರೂ ನಾನು ಸರ್ವವಿಧಗಳಿಂದಲೂ ನಿನ್ನವನಾಗಿರುವವನು. ಆದುದರಿಂದ ಓ ಪರಮೇಶ್ವರ! ಪ್ರಸನ್ನನಾಗು, ನನ್ನನ್ನು ರಕ್ಷಿಸು' ಎಂದು ಪ್ರಾರ್ಥಿಸಿ ಅಕ್ಷತೆ-ಪುಷ್ಪಗಳನ್ನು ಶಿವಲಿಂಗದ ಮೇಲೆ ಹಾಕಿ ಪೂಜಿಸಬೇಕು. ಭಕ್ತಿಯಿಂದ ಶಂಕರನಿಗೆ ಸಾಷ್ಟಾಂಗ ನಮಸ್ಕಾರಗಳನ್ನು ಮಾಡಬೇಕು; ವಿಧಿವತ್ತಾಗಿ ಪ್ರದಕ್ಷಿಣವನ್ನು ಮಾಡಬೇಕು. ಬಳಿಕ ಮಹಾದೇವನನ್ನು ಶ್ರದ್ಧೆ-ಭಕ್ತಿಯಿಂದ ಸ್ತುತಿಸಿ, ನಮ್ರತೆಯಿಂದ ನಮಸ್ಕರಿಸಬೇಕು. ಕೊನೆಯಲ್ಲಿ 'ನನ್ನಿಂದ ಯಾವುದಾದರೂ ತಪ್ಪಾಗಿದ್ದರೆ ಕ್ಷಮಿಸು' ಎಂದು ವಿಸರ್ಜನವನ್ನು ಮಾಡಬೇಕು ಎಂದು ಸೂತಮುನಿ ಹೇಳುವುದರೊಂದಿಗೆ ವಿದ್ಯೇಶ್ವರ ಸಂಹಿತೆಯ ಇಪ್ಪತ್ತನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಯುದ್ಧಪೀಡಿತ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರು ವಿಶೇಷವಾಗಿ ವಿದ್ಯಾರ್ಥಿಗಳು ತಮ್ಮನ್ನು ತೆರವುಗೊಳಿಸುವಂತೆ ವಿಡಿಯೊ ಸಂದೇಶಗಳನ್ನು ಕಳಿಸುತ್ತಿದ್ದಾರೆ. ಅಂತಹ ಒಂದು ವಿಡಿಯೊ ಸಂದೇಶ ಈಗ ವೈರಲ್ ಆಗಿದೆ. ವೈಶಾಲಿ ಯಾದವ್ ಎಂಬ ವಿದ್ಯಾರ್ಥಿನಿಯು ತಮ್ಮನ್ನೂ ಸೇರಿ ಇತರ ಭಾರತೀಯ ವಿದ್ಯಾರ್ಥಿಗಳನ್ನು ರಕ್ಷಿಸುವಂತೆ ವಿಡಿಯೊ ಮೂಲಕ ಭಾರತ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಈ ವಿದ್ಯಾರ್ಥಿನಿಯು ಸಮಾಜವಾದಿ ಪಕ್ಷದ ಮುಖಂಡ ಮಹೇಂದ್ರ ಯಾದವ್ ಅವರ ಮಗಳು. ಆಕೆ ಉಕ್ರೇನ್‌ನಲ್ಲಿ ಇಲ್ಲ. ಮೋದಿ ನೇತೃತ್ವದ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ತಮ್ಮ ಮನೆಯಿಂದಲೇ ಈ ವಿಡಿಯೊ ಮಾಡಿದ್ದಾರೆ ಎಂದು ವಿಡಿಯೊವನ್ನು ಬಿಂಬಿಸಲಾಗುತ್ತಿದೆ.

ವೈಶಾಲಿ ಯಾದವ್ ಮನೆಯಲ್ಲೇ ಇದ್ದರು ಎಂಬುದು ಸುಳ್ಳು ಮಾಹಿತಿ ಎಂದು ದಿ ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. 'ವೈಶಾಲಿಯ ತಂದೆ ಮಹೇಂದ್ರ ಯಾದವ್ ಅವರು ಎಸ್‌ಪಿ ಮುಖಂಡರು ಎಂಬುದು ಸತ್ಯ. ವೈಶಾಲಿ ಉಕ್ರೇನ್‌ನಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾರೆ. ವಿಡಿಯೊ ಮಾಡಿದಾಗ ಆಕೆ ರೊಮೇನಿಯಾದಲ್ಲಿ ಇದ್ದರು. ಭಾರತಕ್ಕೆ ಇನ್ನೂ ಬಂದಿರಲಿಲ್ಲ' ಎಂದು ಉತ್ತರ ಪ್ರದೇಶದ ಹರ್ದೋಯಿ ಪೊಲೀಸ್ ಠಾಣೆಯ ಅಧಿಕಾರಿ ರಾಜೇಶ್ ದ್ವಿವೇದಿ ತಿಳಿಸಿದ್ದಾರೆ. ವೈಶಾಲಿ ರೊಮೇನಿಯಾದಿಂದ ಭಾರತಕ್ಕೆ ಬುಧವಾರ ರಾತ್ರಿ ಹೊರಟಿದ್ದಾರೆ ಎಂದು ಆಕೆಯ ತಂದೆ ಮಾಹಿತಿ ನೀಡಿದ್ದಾರೆ.

ಗುಂಡಣ್ಣ



ಆತ್ಮಶಕ್ತಿಯ ವೃದ್ಧಿ

ಕಿಡಿ ಸಣ್ಣದನು ಮೇಲೆ ಬಿದ್ದ ಕೊರಡಾರಿಪುದು |
ಸುಡುವುದಾ ಕಿಡಿಯುರಿಯೆ ನೂರು ಕೊರಡುಗಳು ||
ಉಡುಗಿ ನಿನ್ನಾತ್ಮವಿರೆ ಬಿಡು ಹೆಗ್ಗಲಸಗಳನು |
ತೊಡಗಾತ್ಮ ಬಲಿತಂದು – ಮಂಕುತಿಮ್ಮ || 577 ||

ಪದ-ಅರ್ಥ: ಕೊರಡಾರಿಪುದು = ಕೊರಡು+ಆರಿಪುದು (ಆರಿಸುವುದು), ಕಿಡಿಯುರಿಯೆ = ಕಿಡಿ + ಉರಿಯೆ, ಉಡುಗಿ = ಕುಗ್ಗಿ, ಕುಸಿದು, ನಿನ್ನಾತ್ಮವಿರೆ = ನಿನ್ನ + ಆತ್ಮವಿರೆ (ಆತ್ಮವಿದ್ದರೆ), ಹೆಗ್ಗಲಸಗಳನು = ದೊಡ್ಡ ಕಾರ್ಯಗಳನ್ನು, ತೊಡಗಾತ್ಮ ಬಲಿತಂದು = ತೊಡಗು + ಆತ್ಮ + ಬಲಿತಂದು (ಬಲಿತಾಗ, ಧೃಢವಾದಾಗ).

ವಾಚ್ಯಾರ್ಥ: ಕಿಡಿ ಸಣ್ಣದಾಗಿದ್ದಾಗ ಅದರ ಮೇಲೆ ಕೊರಡು ಬಿದ್ದರೆ ಆರಿಹೋಗುತ್ತದೆ. ಆದರೆ ಅದೇ ಕಿಡಿ ಉರಿಯಾದಾಗ ನೂರು ಕೊರಡುಗಳನ್ನು ಸುಡುತ್ತದೆ. ನಿನ್ನ ಚೈತನ್ಯ ಕುಸಿದಾಗ, ಸ್ಥೈರ್ಯವನ್ನು ಕಳೆದುಕೊಂಡಾಗ ದೊಡ್ಡ ಕಾರ್ಯಗಳನ್ನು ಮಾಡಬೇಡ. ಮತ್ತೆ ಚೈತನ್ಯ ಉಕ್ಕಿದಾಗ ಕೆಲಸಕ್ಕೆ ತೊಡಗು.

ವಿವರಣೆ: ಜುಲೈ 2014ರಲ್ಲಿ ಅಮೆರಿಕದ ವಾಷಿಂಗ್‌ಟನ್ ಹತ್ತಿರ ಒಂದು ಭಯಂಕರವಾದ ಅಗ್ನಿ ಅಪಘಾತವಾಯಿತು. ಅದನ್ನು ಕಾರ್ಲಟನ್ ಕಾಂಪ್ಲೆಕ್ಸ್ ಅನಾಹುತ ಎಂದು ಕರೆಯುತ್ತಾರೆ. ಆ ಅನಾಹುತದಲ್ಲಿ 2,56,000 ಎಕರೆಯಷ್ಟು ಕಾಡು ಸುಟ್ಟು ಭಸ್ಮವಾಯಿತು. ಅದರಲ್ಲಿ ಎಷ್ಟು ನಿರುಪದ್ರವಿ ಪ್ರಾಣಿ, ಪಕ್ಷಿಗಳು ದಹಿಸಿ ಹೋದವೋ ತಿಳಿಯದು. ಮತ್ತೆ ಅಂತಹ ದಟ್ಟವಾದ ಕಾಡು ಬೆಳೆಯಲು ದಶಕಗಳೇ ಬೇಕು. ಆ ಬೆಂಕಿ ಹತ್ತಿದ್ದು ಹೇಗೆ ಎಂದು ಅರಣ್ಯಾಧಿಕಾರಿಗಳು ತನಿಖೆ ಮಾಡಿದಾಗ ಅವರಿಗೆ ತಿಳಿದದ್ದು ಆಶ್ಚರ್ಯವನ್ನು ತಂದಿತ್ತು. ಇಬ್ಬರು ಗೆಳೆಯರು ಮನರಂಜನೆಗಾಗಿ ಕಾರು ಓಡಿಸುತ್ತ ಅರಣ್ಯದ ಹತ್ತಿರ ಬಂದಿದ್ದರಂತೆ. ಅಲ್ಲಿ ಕಾರಿನಿಂದ ಹೊರಗೆ ಬಂದು ಕುಡಿದು, ತಿಂದು ಮಜಾ ಮಾಡಿದರು. ನಂತರ ಮೈಯನ್ನು ಬೆಚ್ಚಗಾಗಿಸಲು ಸುತ್ತಮುತ್ತಲಿದ್ದ ಪುರಳೆಯನ್ನು ಕೂಡಿ ಹಾಕಿ ಬೆಂಕಿ ಮಾಡಲು ಪ್ರಯತ್ನಿಸಿದರಂತೆ. ಗಾಳಿ ಬಹಳ ಜೋರಾಗಿದ್ದುದರಿಂದ ಬೆಂಕಿಯ ಜ್ವಾಲೆ ಪ್ರಜ್ವಲಿಸಲಿಲ್ಲ. ಅವರು ಬೇಜಾರು ಮಾಡಿಕೊಂಡು ಅಲ್ಲಿಂದ ಹೊರಟರಂತೆ. ಆದರೆ ಅವರು ಬೆಂಕಿ ಮಾಡಲು ಹೊರಟ ಸ್ಥಳದಲ್ಲಿ ಒಂದೆರಡು ಕಿಡಿಗಳು ಇದ್ದುವಲ್ಲ, ಅವು ಗಾಳಿಗೆ ಹಾರಿ ಅರಣ್ಯದಲ್ಲಿ ಬಿದ್ದಿದ್ದ ಒಣಗಿದ ಎಲೆಗಳಿಗೆ ತಾಗಿರಬೇಕು. ಬೆಂಕಿಯಾಗದ ಒಂದು ಕಿಡಿ ತರಗೆಲೆಗಳಿಗೆ ಅಂಟಿಕೊಂಡಿತು. ಬೀಸಿದ ಗಾಳಿ ಸಹಾಯಕವಾಯಿತು. ಅಲ್ಲಿ ಬೆಂಕಿ ಎದ್ದು ಹರಡಿತು. ಅಪಾರ ಹಾನಿಯನ್ನುಂಟು ಮಾಡಿತು.

ಕಗ್ಗ ಅದನ್ನೇ ಹೇಳುತ್ತದೆ. ಒಂದು ಕಿಡಿಯ ಮೇಲೆ ಒಂದು ದಪ್ಪನಾದ ಕೊರಡು ಬಿದ್ದರೆ ಕಿಡಿ ನಂದಿಹೋಗುತ್ತದೆ. ಆದರೆ ಆ ಪುಟ್ಟ ಕಿಡಿಗೆ ತಂಗಾಳಿಯ ಸಹಕಾರ ದೊರೆತರೆ ಅದು ನೂರಾರು ಕೊರಡುಗಳನ್ನು ಭಸ್ಮ ಮಾಡಬಲ್ಲದು. ಒಂದೇ ಕಿಡಿ ಅಶಕ್ತವಾದದ್ದು ಅದಕ್ಕೇ ಒಂದು ಕೊರಡು ಅದನ್ನು ಆರಿಸಿ ಬಿಡುತ್ತದೆ. ಅದರಂತೆಯೇ ಮನುಷ್ಯನ ಚೈತನ್ಯ ಅಶಕ್ತವಾಗಿದ್ದಾಗ, ಅವನು ಅಸಹಾಯಕನೆನ್ನಿಸಿದಾಗ, ಮಹಾನ್ ಕಾರ್ಯಗಳಿಗೆ ಕೈ ಹಾಕುವುದು ಉಚಿತವಲ್ಲ. ಇರುವಷ್ಟು ಶಕ್ತಿಯೂ ಅಳಿದುಹೋದೀತು. ಹಾಗಾದರೆ ಯಾವ ಪ್ರಯತ್ನವನ್ನೂ ಮಾಡಬಾರದೆ? ಹಾಗಲ್ಲ. ಮೊದಲು ಮಾಡಬೇಕಾದದ್ದು ಆತ್ಮದ ಶಕ್ತಿಯ ವರ್ಧನೆ. ಅದು ಆಗುವುದು ಪುಟ್ಟ ಸಾಧನೆಗಳು ತರುವ ಆತ್ಮವಿಶ್ವಾಸದಿಂದ. ನಂತರ ಸರಿಯಾದ ಚಿಂತನೆ, ಸಮಾನ ಮನಸ್ಕರೊಡನೆ ಸಹಕಾರ ಭಾವ ಮತ್ತು ಎಡೆಬಿಡದ ಪ್ರಯತ್ನ ಇವುಗಳು ಆತ್ಮಶಕ್ತಿಯನ್ನು ಬಲಪಡಿಸುತ್ತವೆ. ಒಂದು ಸಲ ಆತ್ಮಬಲ ಹೆಚ್ಚಿತೋ ಆಗ ಅದು ಪುಟ್ಟ ಕಿಡಿಯಲ್ಲ, ಅದೊಂದು ಪ್ರಜ್ವಲಿಸುವ ಬೆಂಕಿ. ಎಂಥ ಕಾರ್ಯವನ್ನೂ ಸಾಧಿಸಿಬಿಡುತ್ತದೆ. ಕಿಡಿಯಂತಿದ್ದ ಆತ್ಮಶಕ್ತಿಯನ್ನು ಧಗಧಗಿಸುವ ಬೆಂಕಿಯನ್ನಾಗಿಸುವುದು ಸ್ವಪ್ರಯತ್ನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮಾರ್ಚ್ 4, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಕುಂಭ ಮಾಸದ 20ನೇ ದಿನ ತಿಥಿ: (ಫಾಲ್ಗುಣ ಶುಕ್ಲ) ದ್ವಿತೀಯ ಗಂ. 20-46 ನಕ್ಷತ್ರ: ಉತ್ತರಾಭಾದ್ರಾ ಗಂ. 25-52 ಯೋಗ: ಶುಭ ಗಂ. 25-44, ಕರಣ: ಬಾಲವ ಗಂ. 09-06. ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-48 ಸೂರ್ಯಾಸ್ತ : 06-36 ಮುಸ್ಲಿಂ ದಿನಾಂಕ : 30 ರಜಬ್ ದಿನ ವಿಶೇಷ : ರಾಮಕೃಷ್ಣಪರಮಹಂಸ ದೇವರ ಜನ್ಮದಿನ (ತಿಥಿ ಪ್ರಕಾರ) ಅದೃಷ್ಟ ಸಂಖ್ಯೆ: 2, 9

ಮೇಷ: ಬದುಕನ್ನು ವಿಲಾಸಿಯಾಗಿ ಕಳೆಯುವ ಹೊರತಾಗಿ ಅನೇಕ ಜವಾಬ್ದಾರಿಗಳಿವೆ ಎಂಬುದನ್ನು ಮರೆಯದಿರಿ. ಖರ್ಚು ವೆಚ್ಚಗಳು ಅಧಿಕವಾಗಬಹುದು. ದುಸ್ಸಹವಾಸ, ದುರಭ್ಯಾಸದಿಂದ ಹೊರಬರುವ ಯೋಚನೆಯನ್ನು ಮಾಡಿರಿ.

ವೃಷಭ: ಇಂದಿನ ನಿಮ್ಮ ಮನಸ್ಥಿತಿ ಯಾರೊಂದಿಗೂ ಹೆಚ್ಚಾಗಿ ಬೆರೆಯದೆ, ಕೆಲಸ ಕಾರ್ಯಗಳತ್ತಲೇ ಇರುವುದು. ವಿಶೇಷ ತೀರ್ಮಾನಗಳನ್ನು ಮಡದಿಯಲ್ಲಿ ಕೇಳಿ. ನಿಮ್ಮೊಡನೆ ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ.

ಮಿಥುನ: ಹೊರಗುತ್ತಿಗೆ ವ್ಯವಹಾರಗಳಲ್ಲಿ ಶ್ರಮ, ಒತ್ತಡ ಹೆಚ್ಚಲಿದೆ ಹಾಗೂ ಅವುಗಳಿಂದ ವರಮಾನ ಹೆಚ್ಚಲಿದೆ. ತಂದೆಯವರ ವ್ಯವಹಾರದ ವಿಷಯಗಳನ್ನು ತಿಳಿದುಕೊಂಡು ಮುಂದುವರಿಯುವಿರಿ.

ಕರ್ಕಾಟಕ: ವೃತ್ತಿಪರ ಜಾಣ್ಮೆ ತೋರಿದಲ್ಲಿ ಅದೃಷ್ಟ ನಿಮ್ಮದಾಗಲಿದೆ. ನಿಮ್ಮ ಅತಿಯಾದ ಆತ್ಮವಿಶ್ವಾಸ, ಧನಾತ್ಮಕ ಮನೋಭಾವವೇ ಸೋಲಿಗೆ ಕಾರಣ. ಕೃಷಿಯಲ್ಲಿ ಜೀವನಕ್ಕೆ ಸಾಕಾಗುವಷ್ಟು ಉಳಿತಾಯ ಮಾಡುವಿರಿ.

ಸಿಂಹ: ನಿಮ್ಮ ಒಳ್ಳೆಯತನ ದುರುಪಯೋಗವಾಗದಂತೆ ಎಚ್ಚರ ವಹಿಸಿ. ಅವಶ್ಯಕತೆಗಿಂತ ಹೆಚ್ಚಾಗಿ ಹಣ ಬರಲಿದೆ. ವಿದ್ಯಾರ್ಥಿಗಳು ಸ್ವಲ್ಪ ಶ್ರಮ ವಹಿಸಿ ಓದಿದರೆ ನಿರೀಕ್ಷೆಗಿಂತ ಹೆಚ್ಚಿನ ಯಶಸ್ಸು ಲಭ್ಯವಾಗುವುದು. ಕೆಂಪು ಬಣ್ಣ ಶುಭ ತರಲಿದೆ.

ಕನ್ಯಾ: ಸ್ವಂತ ಮನೆ ನಿರ್ಮಾಣ ಮಾಡಲು, ಕೊಳ್ಳಲು ಸುಸಮಯ. ಕುಲದೇವತೆಯ ಪ್ರಾರ್ಥನೆಯಿಂದ ಆರೋಗ್ಯದ ಸ್ಥಿತಿ ಉತ್ತಮವಾಗುವುದು. ರಾಜಕೀಯ ವ್ಯಕ್ತಿಗಳಿಗೆ ಅನಿವಾರ್ಯವಾಗಿ ಓಡಾಟ ಹೆಚ್ಚಲಿದೆ.

ತುಲಾ: ನಿಮ್ಮನ್ನು ದೂಷಿಸಿದ ವ್ಯಕ್ತಿಗಳಿಗೆ ನಿಮ್ಮ ಅಭಿವೃದ್ಧಿಯನ್ನು ನೋಡಿ ಸಹಿಸಲಾಗದಂತಾಗುವುದು. ತಂದೆ ತಾಯಿಯ ಆರೋಗ್ಯದಲ್ಲಿ ಸಣ್ಣ-ಪುಟ್ಟ ಬದಲಾವಣೆ. ನವದಂಪತಿಗಳಿಗೆ ಸಂತಾನ ಭಾಗ್ಯ ದೊರೆತು ಸಂತಸ.

ವೃಶ್ಚಿಕ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕವಾದ ಆಲಸ್ಯತನ ಉಂಟಾಗಿ ಕೆಲಸ ಬಾಕಿಯಾಗುವುದು. ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯ. ಕಬ್ಬಿಣ ವ್ಯಾಪಾರಿಗಳಿಗೆ ಉತ್ತಮ ದಿನ.

ಧನು: ಯೋಜನಾ ಬದ್ಧ ಕೆಲಸಗಳಿಂದ ಹೆಚ್ಚಿನ ಅನುಕೂಲ. ತಿಳಿಯಾದ ಮನಸ್ಸಿನಿಂದ ಆಲೋಚಿಸಿ ಅಥವಾ ಅನುಭವಸ್ಥರ ಅಭಿಪ್ರಾಯ ತಿಳಿದು ಸೂಕ್ತ ನಿರ್ಧಾರ ಕೈಗೊಳ್ಳಿರಿ. ಚಾಲಕ ವರ್ಗದವರಿಗೆ ಉತ್ತಮ ಆದಾಯವಿರುವುದು.

ಮಕರ: ಸ್ವಂತವಾಗಿ ವ್ಯಾಪಾರ ಆರಂಭ ಮಾಡುವ ಯೋಚನೆಯು ಸದ್ಯಕ್ಕೆ ಸರಿಯಲ್ಲ. ಕುಟುಂಬದಲ್ಲಿ ಹೊಸ ಜವಾಬ್ದಾರಿಗಳು ನಿಮ್ಮ ಹೆಗಲೇರಲಿವೆ. ಮನೆಯಲ್ಲಿ ಮಂಗಳ ಕಾರ್ಯದ ತಯಾರಿ ನಡೆಯುವುದು.

ಕುಂಭ: ಯಾವುದೇ ವಿಷಯದಲ್ಲಿ ಮುಂದುವರಿಯುವ ಮೊದಲು ಅದರ ಲಾಭ-ನಷ್ಟ, ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಗಮನವಿರಲಿ. ತಾಯಿಯ ಆರೋಗ್ಯ ಸುಧಾರಣೆ ಹಂತ ತಲುಪುವುದು. ದೇವತಾ ಆರಾಧನೆ ನಡೆಸಿ.

ಮೀನ: ಜೀವನದಲ್ಲಿ ನಿಮ್ಮದ್ದೇ ಆದ ನಿಯಮ ರೂಢಿಸಿಕೊಳ್ಳಿ. ಉದ್ಯೋಗದಲ್ಲಿ ಅನಿರೀಕ್ಷಿತ ಲಾಭ. ಮಾನಸಿಕ ಸಮತೋಲನದಿಂದ ಈ ದಿನ ಶುಭ ಮತ್ತು ನಿಮ್ಮ ಪಾಲಿಗೆ ಉತ್ತಮ ಅಭಿವೃದ್ಧಿದಾಯಕವಾಗಲಿದೆ.

ಪದಬಂಧ 4887

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅತ್ಯಂತ ಕೊನೆಯ ಮಿತಿ (5)
3.ಹೆಪ್ಪಾದ ಹಾಲು (3)
5.ಶಿರೋನಾಮೆ ಇಲ್ಲಿದೆ (5)
7.ಶಿಶಿರದಲ್ಲಿ ಕಾಣಿಸಿದ ತಲೆ! (2)
9.ವಠಾರದವರು ಹಿಡಿದಿರುವ ಕೊಡಲಿ! (3)
11.ಸಂಸಾರ ಬಂಧನಕ್ಕೆ ಒಳಗಾದವನು! (2)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಕನ್ನಡಿಗ ನೀಡಿರುವ ಡೊನೇಷನ್! (3)
16.ಈತ ಅತ್ಯಾಸೆಯುಳ್ಳವನು (5)

ಮೇಲಿಂದ ಕೆಳಕ್ಕೆ
1.ಯಾರೂ ದಿಕ್ಕಿಲ್ಲದ ಅನಾಥ (4)
2.ಈಕೆ ಹೆಂಗಸು (3)
4.ಹತ್ತಿರಕ್ಕೊಂದು ಪರ್ಯಾಯ ಪದ (3)
6.ಬರದಲ್ಲಿರುವ ಅಸಂಸ್ಕೃತ! (3)
8.ವಜ ಮಾಡುವಿಕೆ (2)
9.ಒಳ್ಳೆಯ ಕುಲದಲ್ಲಿ ಹುಟ್ಟಿದವ (3)
10.ಖರ್ಚು ಕಳೆದು ಉಳಿದುದು (2)
12.ಈತ ನಾಶ ಮಾಡುವವನು (4)
13.ಬಿನ್ನಹವನ್ನು ಹೀಗೆನ್ನಿ (3)
14.ಕಲ್ಲು, ಲೋಹ ಮುಂತಾದವುಗಳ ಮೇಲೆ ಮಾಡುವ ಕೆತ್ತನೆ ಕೆಲಸ (3)



4886ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸಪ್ತಸ್ವರ 3.ನಕ್ಷತ್ರಕ 4.ಪರಿಸು 5.ಪ್ರೀತಿಪಾತ್ರ 7.ಮಡಿವಾಳ 9.ಪರಧನ 11.ಸವಕಲು 12.ವಠಾರ 14.ಅರುಹಂತ 15.ತಿರುಬೋಕಿ

ಮೇಲಿಂದ ಕೆಳಕ್ಕೆ: 1ಸನ್ನಿ 2.ರಕ್ಷಾಪತ್ರ 3.ನವಸುಮ 6.ತಿಮಿರ 8.ವಾದಕ 10.ನವನೀತ 11.ಸರಸ್ವತಿ 13.ಬೆಂಕಿ

ಸುಡೊಕು 5273

	7	6		4				9
5			6		9			2
2				7		3		
7	8						5	
			4	9		6		7
6		5		8			2	
		7	2				9	5
	5				7			
9				5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5272 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಮಜೂರಿ ಶುಲ್ಕದ ಮೇಲೆ ಶೇ 50ರ ರಿಯಾಯಿತಿ: ಜೋಯಾಲುಕ್ಕಾಸ್

ಪ್ರಜಾವಾಣಿ ವಾರ್ತೆ

ಸಾಂದರ್ಭಿಕ ಚಿತ್ರ

ಬೆಂಗಳೂರು: ಚಿನ್ನಾಭರಣ ಕಂಪನಿ ಜೋಯಾಲುಕ್ಕಾಸ್ ತನ್ನ ಗ್ರಾಹಕರಿಗೆ 'ದಿ ಇನ್‌ಕ್ರೆಡಿಬಲ್ 50' ಕೊಡುಗೆಯನ್ನು ಘೋಷಿಸಿದ್ದು, ಆ ಮೂಲಕ ಆಭರಣಗಳ ಮಜೂರಿ ಶುಲ್ಕದ ಮೇಲೆ ಶೇಕಡ 50 ರಿಯಾಯಿತಿ ನೀಡಲಿದೆ.

ಶುಕ್ರವಾರದಿಂದ ಇದೇ 20ರವರೆಗೆ ದೇಶದಾದ್ಯಂತ ಇರುವ ಕಂಪನಿಯ ಎಲ್ಲ ಮಳಿಗೆಗಳಲ್ಲಿ ಕೊಡುಗೆ ಲಭ್ಯವಿರಲಿದೆ. ಈ ಕೊಡುಗೆಯ ಜೊತೆ ಹೆಚ್ಚುವರಿಯಾಗಿ ಒಂದು ವರ್ಷದ ಉಚಿತ ವಿಮೆ; ಖರೀದಿಸಿದ ಎಲ್ಲಾ ಆಭರಣಗಳಿಗೆ ಉಚಿತ ಆಜೀವ ನಿರ್ವಹಣೆ ಮತ್ತು ಚಿನ್ನ ವಿನಿಮಯ ಕೊಡುಗೆಗಳನ್ನೂ ಪಡೆಯಬಹುದು ಎಂದು ಹೇಳಿದೆ.

'ಜೋಯಾಲುಕ್ಕಾಸ್ ಯಾವಾಗಲೂ ತನ್ನ ಗ್ರಾಹಕರಿಗೆ ಅತ್ಯುತ್ತಮ ಕೊಡುಗೆ ಮತ್ತು ಅನುಭವ ನೀಡಲು ಹೆಚ್ಚಿನ ಗಮನ ಹರಿಸುತ್ತದೆ. ಗ್ರಾಹಕರು ಚಿನ್ನ, ವಜ್ರ ಮತ್ತು ಇತರ ಆಭರಣಗಳ ಮಜೂರಿ ಮೇಲೆ ಶೇ 50ರ ರಿಯಾಯಿತಿ ಪಡೆಯಬಹುದು' ಎಂದು ಜಾಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜಾಯ್ ಅಲುಕ್ಕಾಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾತುಕತೆ ಮೂಲಕ ವಿವಾದ ಇತ್ಯರ್ಥಕ್ಕೆ ಅಮೆಜಾನ್–ಫ್ಯೂಚರ್ ಒಪ್ಪಿಗೆ

ನವದೆಹಲಿ (ರಾಯಿಟರ್ಸ್): ಅಮೆಜಾನ್ ಮತ್ತು ಫ್ಯೂಚರ್ ಸಮೂಹವು ಮಾತುಕತೆಯ ಮೂಲಕ ಕಾನೂನು ವಿವಾದವನ್ನು ಬಗೆಹರಿಸಿಕೊಳ್ಳಲು ಮುಂದಾಗಿವೆ.

ಫ್ಯೂಚರ್ ಸಮೂಹವು ತನ್ನ ರಿಟೇಲ್ ಹಾಗೂ ಸಗಟು ವಹಿವಾಟು ವಿಭಾಗಗಳನ್ನು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ಗೆ ಮಾರಾಟ ಮಾಡುವುದನ್ನು ವಿರೋಧಿಸಿ ಅಮೆಜಾನ್ ನ್ಯಾಯಾಲಯದ ಮೆಟ್ಟಿಲೇರಿದೆ.

ಎರಡೂ ಕಂಪನಿಗಳ ಪ್ರತಿನಿಧಿಗಳು ಸಂಧಾನ ಮಾತುಕತೆ ನಡೆಸುವಂತೆ ಅಮೆಜಾನ್ ಪರ ವಕೀಲ ಗೋಪಾಲ್ ಸುಬ್ರಮಣಿಯಂ ಅವರು ಗುರುವಾರ ಸುಪ್ರೀಂ ಕೋರ್ಟ್ ವಿಚಾರಣೆಯ ವೇಳೆ ಸಲಹೆ ನೀಡಿದರು.

'ಈ ಕಾನೂನು ಸಮರದಲ್ಲಿ ಯಾರೊಬ್ಬರೂ ಜಯಿಸುವುದಿಲ್ಲ' ಎಂದು ಹೇಳುವ ಮೂಲಕ ಫ್ಯೂಚರ್ ಸಮೂಹದ ವಕೀಲರು ಮಾತುಕತೆಗೆ ಒಪ್ಪಿಗೆ ನೀಡಿದರು. ಮಾತುಕತೆ ನಡೆಸಿ ಒಂದು ತೀರ್ಮಾನಕ್ಕೆ ಬರಲು ಎರಡೂ ಕಡೆಯವರು 10 ದಿನ ತೆಗೆದುಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,606
ಇಂದಿನ ಅಂತ್ಯ	16,498
▼	108
ದಿನದ ಕನಿಷ್ಠ	16,442

ವಿನಿಮಯ ದರ

$ ಡಾಲರ್	75.99
£ ಪೌಂಡ್	101.52
€ ಯುರೊ	84.08
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹390
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹395

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹1610 (1600)
ಸೂರ್ಯಕಾಂತಿ (ರಿಫೈನ್ಡ್)	--- (---)
ಪಾಮೋಲಿನ್	₹1572 (1562)

'ಹುವಾವೆ ಕಂಪನಿಯಿಂದ ತೆರಿಗೆ ವಂಚನೆ'

ನವದೆಹಲಿ (ರಾಯಿಟರ್ಸ್): ಚೀನಾ ಮೂಲದ ಹುವಾವೆ ಟೆಕ್ನಾಲಜೀಸ್ ಕಂಪನಿಯು ತನ್ನ ವಹಿವಾಟಿನ ದಾಖಲೆಗಳ ತಿದ್ದಿ, ತೆರಿಗೆಗೆ ಒಳಪಡುವ ಆದಾಯವನ್ನು ಕಡಿಮೆ ತೋರಿಸಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ.

ಕೇಂದ್ರ ಹಣಕಾಸು ಸಚಿವಾಲಯವು ಗುರುವಾರ, 'ದೂರಸಂಪರ್ಕ ವಲಯದ ಪ್ರಮುಖ ಕಂಪನಿಯೊಂದು ₹ 400 ಕೋಟಿ ಆದಾಯವನ್ನು ತೋರಿಸಿಲ್ಲ. ಹಾಗೂ ₹ 480 ಕೋಟಿ ವೆಚ್ಚವೊಂದನ್ನು ತೋರಿಸಿದೆ. ಆದರೆ ಈ ವೆಚ್ಚವನ್ನು ಸಮರ್ಥಿಸಿಕೊಳ್ಳಲು ಕಂಪನಿ ವಿಫಲವಾಗಿದೆ' ಎಂದು ಹೇಳಿದೆ. ಸಚಿವಾಲಯವು ಕಂಪನಿಯ ಹೆಸರು ಉಲ್ಲೇಖಿಸಿಲ್ಲ.

ಈ ಕುರಿತು ಹುವಾವೆ ವಕ್ತಾರರು ಪ್ರತಿಕ್ರಿಯೆ ನೀಡಿಲ್ಲ. ತೆರಿಗೆ ಅಧಿಕಾರಿಗಳು ಹುವಾವೆ ಕಂಪನಿಯ ನವದೆಹಲಿ, ಗುರುಗ್ರಾಮ, ಬೆಂಗಳೂರು ಕಚೇರಿಗಳ ಮೇಲೆ ಈಚೆಗೆ ಶೋಧ ನಡೆಸಿದ್ದರು. ಅಲ್ಲದೆ, ಕಂಪನಿಯ ಕೆಲವು ಹಿರಿಯ ಅಧಿಕಾರಿಗಳ ನಿವಾಸಗಳ ಮೇಲೆಯೂ ತೆರಿಗೆ ಅಧಿಕಾರಿಗಳ ದಾಳಿ ನಡೆದಿತ್ತು.

ಮುಂಬೈ ಧಾರಣೆ

ಶೇಂಗಾ

3-3-2022

ಜಾವಾ 70/80(ಹೊಸ)	10100-10200
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ(ಹೊಸ)	9600-9650
ದಪ್ಪ ಗುಜರಾತ್(ಹೊಸ)	8500-8600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	1545 (1600)
ಪಾಮ್ ವಾರದ ಡೆಲಿವರಿ	1570 (1560)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
51,350 (51,120)
ಬೆಳ್ಳಿ ಕೆ.ಜಿ 68,050 (67,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಶ್ರೀರಾಮಕೃಷ್ಣ: ದೈವಕೇಂದ್ರಿತ ವಿಶ್ವಮಾನವ

• ರಘು ವಿ.

ಶ್ರೀ ರಾಮಕೃಷ್ಣ ಪರಮಹಂಸರು ಬಾಲ್ಯದಿಂದಲೇ ದೈವಕೇಂದ್ರಿತ ಬದುಕನ್ನು ನಡೆಸಿದರು; ಮುಂದೆ ತಮ್ಮ ಶಿಷ್ಯರಿಗೂ ಜೀವರಲ್ಲಿ ಶಿವನನ್ನು ಕಾಣುವ ತತ್ತ್ವವನ್ನೇ ಬೋಧಿಸಿದರು.

ಶ್ರೀರಾಮಕೃಷ್ಣರ ಬದುಕನ್ನು ನಾಲ್ಕು ಮಜಲುಗಳಲ್ಲಿ ಗಮನಿಸಬಹುದು. ಬಾಲ್ಯ, ಸಾಧನೆಯ ಹಾದಿ, ಸಿದ್ಧಪುರುಷ, ಪ್ರಸಿದ್ಧ ಪುರುಷ - ಪರಮಹಂಸ. ಸಾಮಾನ್ಯವಾಗಿ ಧರ್ಮಗುರುಗಳು ತಮ್ಮ ಮತ–ಪಂಥದ ಪ್ರಮುಖರಾಗಿ, ಮಾರ್ಗದರ್ಶಕರಾಗಿ ಕಂಗೊಳಿಸುತ್ತಾರೆ; ತಾವು ಕಂಡಷ್ಟನ್ನೇ ಪರಮಸತ್ಯವೆಂದು ಜಗತ್ತಿಗೆ ಬೋಧಿಸುತ್ತಾರೆ. ಆದರೆ ಶ್ರೀರಾಮಕೃಷ್ಣರು ಈ ಜಗತ್ತು ಗುರುತಿಸಿದ ಎಲ್ಲಾ ಮತಗಳ ನಂಬಿಕೆಗಳನ್ನು ತಮ್ಮದಾಗಿಸಿಕೊಂಡು ಅವುಗಳದೇ ಮಾರ್ಗದಲ್ಲಿ ಮುಂದುವರೆದು ಅವೆಲ್ಲವೂ ಒಂದೇ ಸತ್ಯದ ನೆಲೆಯನ್ನು ಮುಟ್ಟುತ್ತವೆ ಎಂಬುದನ್ನು ಅರಿತರು. ಅಂತರ್ಧರ್ಮೀಯ ಭಿನ್ನತೆಗಳನ್ನು ಮತ್ತು ಸ್ವಧರ್ಮದಲ್ಲಿ ಇರುವ ಪರಮತ ಅಸಹಿಷ್ಣುತೆಯ ಮೊನಚನ್ನು ತಮ್ಮದೇ ಶೈಲಿಯಲ್ಲಿ ನಿರಾಕರಿಸಿದರು. ಹೇಗೆ ನೀರನ್ನು 'ಜಲ್', 'ಪಾನಿ', 'ವಾಟರ್', 'ಆಕ್ವಾ' – ಎಂದು ಕರೆಯುತ್ತಾರೋ ಹಾಗೆ ಒಬ್ಬನೇ ಭಗವಂತನನ್ನು ಬೇರೆ ಬೇರೆ ಧರ್ಮದವರು ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ ಎಂದು ಅವರು ತಿಳಿಸಿದರು.

ಮತೀಯ ಭಿನ್ನತೆಗಳನ್ನು ಕುರಿತಂತೆ ಒಂದು ಸಂದರ್ಭದಲ್ಲಿ ಅವರು ಸಮನ್ವಯವನ್ನು ತಿಳಿಸುವ ಕ್ರಮ ಸೊಗಸಾಗಿದೆ. ಶಿವ ದೊಡ್ಡವನೋ, ವಿಷ್ಣು ದೊಡ್ಡವನೋ ಎಂಬ ಚರ್ಚೆ ತಾರಕಕ್ಕೇರಿದ ಸಂದರ್ಭದಲ್ಲಿ ಉದ್ಧಾಮ ಪಂಡಿತರೊಬ್ಬರು 'ತಾವು ಶಿವನನ್ನೂ ಕಂಡಿಲ್ಲ, ವಿಷ್ಣುವನ್ನೂ ಕಂಡಿಲ್ಲ; ಆದ್ದರಿಂದ ಅವರವರ ಭಾವಕ್ಕೆ ತಕ್ಕಂತೆ ಅವರವರ ದೈವಗಳು ದೊಡ್ಡವು' ಎಂದು ಘೋಷಿಸುತ್ತಾರೆ. ಸ್ವತಃ ದೇವದೇವತೆಗಳ ಅನುಭವವನ್ನು ಮತ್ತು ಸಮಾಧಿಸ್ಥಿತಿಯ ಅನುಭವವನ್ನು ಪಡೆದುಕೊಂಡ ಪರಮಹಂಸರು 'ಧರ್ಮಕ್ಕೆ ಅನುಭವವೇ ಪ್ರಮಾಣ, ತರ್ಕವಲ್ಲ' ಎಂದು ಸ್ಪಷ್ಟಪಡಿಸುತ್ತಾರೆ. ಸೊಗಸಾದ ತೋಟವನ್ನು ನೋಡಲು ಹೋದವರಲ್ಲಿ ಒಬ್ಬ ತೋಟದ ಪ್ರಾಂಗಣದ ಗೋಡೆಯನ್ನು ಏರಿ ಅತ್ತ ಕಡೆಯ ಸೌಂದರ್ಯವನ್ನು ಸವಿದು 'ಹಾ!' ಎಂದು ಉದ್ಗರಿಸಿ ಅತ್ತ ಕಡೆಗೆ ಧುಮುಕಿದನಂತೆ. ಅದನ್ನು ನೋಡಿ ಮತ್ತೊಬ್ಬ ತಾನು ಆ ತೋಟವನ್ನು ನೋಡಿ ವಿವರಿಸುವುದಾಗಿ ಭಾವಿಸಿ ಗೋಡೆಯನ್ನು ಏರಿ ಅತ್ತ ನೋಡಿ 'ಹಾ!' ಎಂದು ಉದ್ಗರಿಸಿ ಅತ್ತಲೇ ಧುಮುಕಿದನಂತೆ. ಇದು ದೈವಸಾಕ್ಷಾತ್ಕಾರದ ಅನುಭವವನ್ನು ಕುರಿತು ಪರಮಹಂಸರ ನುಡಿ. ಸಾಕ್ಷಾತ್ಕಾರವು ಅನುಭವನಿಷ್ಠವೇ ಹೊರತು ಪದಗಳಿಗೆ ದಕ್ಕದಷ್ಟೆ.



ಇಂದು ಪರಮಹಂಸರ ಜಯಂತಿ

ಪರಮಹಂಸರೆಂದು ವಿದ್ವಾಂಸರ ಸಭೆ ಅವರನ್ನು ಗುರುತಿಸುವ ಸಂದರ್ಭದಲ್ಲಿ ಅವರು ಮಡಿಲಲ್ಲಿದ್ದ ಮಂಡಕ್ಕಿಯನ್ನು ಮೆಲ್ಲುತ್ತ ಯಾರದೋ ಕುರಿತಾದ ಚರ್ಚೆ ಎಂಬಂತೆ ಆಲಿಸುತ್ತ ಕುಳಿತ್ತಿದ್ದರಂತೆ. ತಾವು ಪರಮಹಂಸರೆಂದು ವಿದ್ವತ್‌ಸಭೆ ಘೋಷಿಸಿದಾಗ 'ಸದ್ಯ ಹುಚ್ಚ ಎಂದಾಗಲಿಲ್ಲ' ಎಂದು ಉದ್ಗರಿಸಿದರಂತೆ. ಇದು ಅವರ ನಿರಹಂಕಾರದ ಪ್ರತೀಕ.

ಜೀವರಲ್ಲಿ ಶಿವನನ್ನು ಕಾಣುವ ಅವರ ಭಾವ ಎಷ್ಟು ಅತ್ಯುನ್ನತ ಮಟ್ಟದ್ದಾಗಿತ್ತೆಂದರೆ, ಒಮ್ಮೆ ಅವರು ಪ್ರವಾಸದಲ್ಲಿದ್ದ ಸಂದರ್ಭದಲ್ಲಿ ತೀರ ಬಡತನದ ಮತ್ತು ಕಷ್ಟಗಳಿಂದ ನರಳುತ್ತಿದ್ದ ಗ್ರಾಮವಾಸಿಗಳನ್ನು ಕಂಡು ತಮಗೆ ಪ್ರವಾಸ ಏರ್ಪಡಿಸಿದ್ದ ಶ್ರೀಮಂತ ವ್ಯಕ್ತಿಯನ್ನು ಕರೆದು ಅವರಿಗೆಲ್ಲಾ ಊಟ ಮತ್ತು ಕನಿಷ್ಠ ಅವಶ್ಯಕತೆಗಳನ್ನು ನೀಡದಿದ್ದರೆ ತಾವು ತೀರ್ಥಯಾತ್ರೆಯನ್ನು ಮುಂದುವರೆಸುವುದಿಲ್ಲವೆಂದು ಹಠ ಹಿಡಿದರು; ಅವನು ಆ ವ್ಯವಸ್ಥೆ ಮಾಡಿದ ಬಳಿಕವೇ ತೀರ್ಥಯಾತ್ರೆಯನ್ನು ಮುಂದುವರೆಸಿದರಂತೆ. ಇದೇ ಭಾವವನ್ನು ಅವರ ಶಿಷ್ಯ ಸ್ವಾಮಿ ವಿವೇಕಾನಂದರು ಕೂಡ ವಿಸ್ತರಿಸಿ ಮುಂದುವರೆಸಿದುದನ್ನು ಚರಿತ್ರೆ ದಾಖಲಿಸುತ್ತದೆ. ಸಾಧಕರಾಗಿ, ಸಿದ್ಧರಾಗಿ, ಪರಮಹಂಸರಾಗಿ ಅವರು ಗಳಿಸಿದ ಅತ್ಯಂತ ಶ್ರೇಷ್ಠ ಜ್ಞಾನವು ಅತಿ ಸರಳಭಾಷೆಯ 'ವಚನವೇದ'ವಾಗಿ ನಮಗಿಂದು ಲಭ್ಯವಿದೆ. ಇಂದು ರಾಮಕೃಷ್ಣ ಪರಮಹಂಸರ ಜಯಂತಿ. ವಚನವೇದದ ತತ್ತ್ವಗಳನ್ನು ಅಧ್ಯಯನ ಮಾಡಲು ಇದು ಸಕಾಲ.

ಅಮೆರಿಕ, ಯುರೋಪಿನ ದೇಶಗಳಿಂದ ನಿರ್ಬಂಧ

ರಷ್ಯಾದ ಕಂಪನಿಗಳ ವಹಿವಾಟಿಗೆ ಎಸ್‌ಬಿಐ ತಡೆ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಬ್ಯಾಂಕ್ ಆಗಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ), ಪಾಶ್ಚಿಮಾತ್ಯ ದೇಶಗಳಿಂದ ನಿರ್ಬಂಧಕ್ಕೆ ಗುರಿಯಾಗಿರುವ ರಷ್ಯಾದ ಕಂಪನಿಗಳು, ಸಂಸ್ಥೆಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು ಸ್ಥಗಿತಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಈ ವಿಚಾರವಾಗಿ ಎಸ್‌ಬಿಐ ಸುತ್ತೋಲೆಯೊಂದನ್ನು ಹೊರಡಿಸಿದೆ. ನಿರ್ಬಂಧಕ್ಕೆ ಗುರಿಯಾಗಿರುವ ಯಾವುದೇ ಸಂಸ್ಥೆ, ಕಂಪನಿ ಅಥವಾ ಯಾವುದೇ ವಲಯದ ಜೊತೆಗಿನ ವಹಿವಾಟಿನಿಂದಾಗಿ ತನ್ನ ಮೇಲೆಯೂ ನಿರ್ಬಂಧಗಳು ಜಾರಿಗೆ ಬರಬಹುದು ಎಂಬ ಆತಂಕ ಎಸ್‌ಬಿಐಗೆ ಇದೆ ಎಂದು ಮೂಲಗಳು ವಿವರಿಸಿವೆ.

ಅಮೆರಿಕ, ಐರೋಪ್ಯ ಒಕ್ಕೂಟ ಅಥವಾ ವಿಶ್ವಸಂಸ್ಥೆ ಹೊರಡಿಸಿರುವ ನಿರ್ಬಂಧಗಳ ಪಟ್ಟಿಯಲ್ಲಿ ಇರುವ ಸಂಸ್ಥೆಗಳು, ಕಂಪನಿಗಳು, ಬ್ಯಾಂಕ್‌ಗಳು, ಬಂದರುಗಳು ಅಥವಾ ಹಡಗುಗಳಿಗೆ ಸಂಬಂಧಿಸಿದ ಯಾವುದೇ ವಹಿವಾಟನ್ನು ಪೂರ್ಣಗೊಳಿಸುವುದಿಲ್ಲ. ಅವು ಯಾವುದೇ ಕರೆನ್ಸಿಯಲ್ಲಿ ವಹಿವಾಟು ನಡೆಸುತ್ತಿದ್ದರೂ ಈ ನಿಯಮ ಅನ್ವಯ ಆಗುತ್ತದೆ ಎಂದು ಮೂಲಗಳು ವಿವರಿಸಿವೆ.

ಇಂತಹ ಸಂಸ್ಥೆ, ಕಂಪನಿಗಳಿಗೆ ಸಂಬಂಧಿಸಿದ ಪಾವತಿಗಳನ್ನು ಬ್ಯಾಂಕ್ ಮೂಲಕ ನಡೆಸುವಂತೆ ಇಲ್ಲ; ಬೇರೆ ಮಾರ್ಗದ ಮೂಲಕ ಪೂರ್ಣಗೊಳಿಸಿಕೊಳ್ಳಬಹುದು ಎಂದು ಮೂಲಗಳು ಹೇಳಿವೆ. ಎಸ್‌ಬಿಐ ಜಂಟಿ ಸಹಭಾಗಿತ್ವದಲ್ಲಿ ಮಾಸ್ಕೊದಲ್ಲಿ 'ಕಮರ್ಷಿಯಲ್ ಇಂಡೊ ಬ್ಯಾಂಕ್'ಅನ್ನು ನಡೆಸುತ್ತಿದೆ. ಇದರಲ್ಲಿ ಕೆನರಾ ಬ್ಯಾಂಕ್ ಶೇಕಡ 40ರಷ್ಟು ಪಾಲು ಹೊಂದಿದೆ.

ಈ ವಿಚಾರವಾಗಿ ಬ್ಯಾಂಕ್ ಕಡೆಯಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಇಂಧನ, ಖನಿಜ ತೈಲ, ಮುತ್ತುಗಳು, ಅಮೂಲ್ಯ ಹರಳುಗಳು, ಅಣು ರಿಯಾಕ್ಟರ್‌ಗಳು, ರಸಗೊಬ್ಬರ, ಯಂತ್ರಗಳನ್ನು ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತದೆ. ವಾಹನಗಳು, ಫಾರ್ಮಾ ಉತ್ಪನ್ನಗಳು, ಎಲೆಕ್ಟ್ರಿಕಲ್ ಉಪಕರಣಗಳನ್ನು ಭಾರತವು ರಷ್ಯಾಕ್ಕೆ ರಫ್ತು ಮಾಡುತ್ತದೆ.

ಮುಖ್ಯಾಂಶಗಳು

- ಎಸ್‌ಬಿಐಗೆ ತನ್ನ ಮೇಲೆಯೂ ನಿರ್ಬಂಧ ಜಾರಿಯಾಗುವ ಆತಂಕ
- ರಷ್ಯಾದಲ್ಲಿ 'ಕಮರ್ಷಿಯಲ್ ಇಂಡೊ ಬ್ಯಾಂಕ್' ನಡೆಸುತ್ತಿರುವ ಎಸ್‌ಬಿಐ

ಪ್ಯಾನ್, ಆಧಾರ್ ವಿವರ: ಸಿಬಿಐಸಿ ಎಚ್ಚರಿಕೆ

ನವದೆಹಲಿ (ಪಿಟಿಐ): ಸಕಾರಣ ಇಲ್ಲದೆಯೆ, ಹಣಕಾಸಿನ ಲಾಭ ಗಮನದಲ್ಲಿ ಇರಿಸಿಕೊಂಡು ಪ್ಯಾನ್ ಹಾಗೂ ಆಧಾರ್ ಸಂಖ್ಯೆ ಹಂಚಿಕೊಳ್ಳುವುದು ಸರಿಯಲ್ಲ ಎಂದು ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಐಸಿ) ಗುರುವಾರ ಎಚ್ಚರಿಕೆ ನೀಡಿದೆ. ಹೀಗೆ ಪ್ಯಾನ್ ಮತ್ತು ಆಧಾರ್ ಸಂಖ್ಯೆಯನ್ನು ಪಡೆದು, ಅವುಗಳನ್ನು ಜಿಎಸ್‌ಟಿ ವಂಚಿಸಲು ಬಳಸಿಕೊಳ್ಳಬಹುದು ಎಂದು ಸಿಬಿಐಸಿ ಕಿವಿಮಾತು ಹೇಳಿದೆ.

ಆಧಾರ್ ಮತ್ತು ಪ್ಯಾನ್ ವಿವರ ಬಳಸಿ ನಕಲಿ ಕಂಪನಿ ರಚಿಸಬಹುದು, ಆ ಮೂಲಕ ಜಿಎಸ್‌ಟಿ ವಂಚನೆ ಎಸಗಬಹುದು. ಹೀಗಾಗಿ, ನಿರ್ದಿಷ್ಟ ಕಾರಣ ಇಲ್ಲದಿದ್ದರೆ ಈ ವಿವರಗಳನ್ನು ಜನ ಬೇರೆಯವರ ಜೊತೆ ಹಂಚಿಕೊಳ್ಳಬಾರದು ಎಂದು ಸಿಬಿಐಸಿ ಹೇಳಿದೆ.

ಕಚ್ಚಾತೈಲ ದರ ಏರಿಕೆ: ತಗ್ಗಿದ ಷೇರುಪೇಟೆ ವಹಿವಾಟು



ಮುಂಬೈ (ಪಿಟಿಐ): ರಷ್ಯಾ-ಉಕ್ರೇನ್ ಸಂಘರ್ಷದಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಏರಿಕೆ ಕಾಣುತ್ತಿರುವುದು ದೇಶದ ಷೇರುಪೇಟೆಗಳ ವಹಿವಾಟಿನ ಮೇಲೆ ಪರಿಣಾಮ ಬೀರುತ್ತಿದೆ. ಕಚ್ಚಾ ತೈಲ ಬೆಲೆ ಹೆಚ್ಚಳಕ್ಕೆ ಬೆದರಿದ ಷೇರುಪೇಟೆ ಸೂಚ್ಯಂಕಗಳು, ಆರಂಭದಲ್ಲಿ ಗಳಿಕೆ ಕಂಡಿದ್ದರೂ, ಕೊನೆಯಲ್ಲಿ ಕುಸಿತ ಕಂಡವು.

ಜಾಗತಿಕವಾಗಿ ಕಚ್ಚಾ ತೈಲ ಉತ್ಪಾದನೆಯಲ್ಲಿ ರಷ್ಯಾ ಪಾಲು ಶೇಕಡ 10ರಷ್ಟು ಇದೆ. ಐರೋಪ್ಯ ಒಕ್ಕೂಟವು ರಷ್ಯಾದ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ವಿಧಿಸಿರುವುದರಿಂದಾಗಿ ತೈಲ ಪೂರೈಕೆಗೆ ಅಡ್ಡಿಯಾಗುವ ಆತಂಕ ಎದುರಾಗಿದೆ. ಹೀಗಾಗಿ ಕಚ್ಚಾ ತೈಲ ದರವು ಗುರುವಾರ ಬ್ಯಾರಲ್‌ಗೆ 120 ಡಾಲರ್‌ಗಳ ಸಮೀಪಕ್ಕೆ ಬಂದಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಸಹ ಸೂಚ್ಯಂಕದ ಇಳಿಕೆಗೆ ಕಾರಣವಾಗಿವೆ ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು ವಹಿವಾಟಿನ ಆರಂಭದಲ್ಲಿ 527 ಅಂಶ ಏರಿಕೆ ಕಂಡಿತ್ತು. ಆ ಬಳಿಕ ಮಾರಾಟದ ಒತ್ತಡಕ್ಕೆ ಸಿಲುಕಿ ಕುಸಿಯಿತು. ದಿನದ ಅಂತ್ಯಕ್ಕೆ 366 ಅಂಶ ಇಳಿಕೆ ಕಂಡು 55,102 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 108 ಅಂಶ ಇಳಿಕೆ ಆಗಿ 16,498 ಅಂಶಗಳಿಗೆ ತಲುಪಿತು.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 14 ಪೈಸೆ ಇಳಿಕೆ ಕಂಡಿದ್ದು ಒಂದು ಡಾಲರ್‌ಗೆ ₹ 75.94ರಂತೆ ವಿನಿಮಯಗೊಂಡಿತು.

ಮುಖ್ಯಾಂಶಗಳು

- ಅಲ್ಟ್ರಾಟೆಕ್ ಸಿಮೆಂಟ್ ಷೇರು ಮೌಲ್ಯ ಶೇ 6.47ರಷ್ಟು ಗರಿಷ್ಠ ಇಳಿಕೆ
- ವಿದೇಶಿ ಬಂಡವಾಳ ಹೊರಹರಿವು ಮುಂದುವರಿಕೆ
- ವಾಹನ ವಲಯ ಶೇ 2.24ರಷ್ಟು ಕುಸಿತ

ಏಪ್ರಿಲ್‌ನಿಂದ ಔಡಿ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಿಸುವ ಔಡಿ ಕಂಪನಿಯು ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ತನ್ನ ಎಲ್ಲ ಮಾದರಿಗಳ ಬೆಲೆಯನ್ನು ಶೇಕಡ 3ರವರೆಗೆ ಹೆಚ್ಚಳ ಮಾಡುವುದಾಗಿ ಗುರುವಾರ ತಿಳಿಸಿದೆ.

ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದು ಹಾಗೂ ವಿದೇಶಿ ವಿನಿಮಯ ದರದಲ್ಲಿ ಆಗುತ್ತಿರುವ ಬದಲಾವಣೆಗಳಿಂದಾಗಿ ಇಷ್ಟು ಪ್ರಮಾಣದ ಬೆಲೆ ಏರಿಕೆಗೆ ಮಾಡುವ ಅಗತ್ಯ ಎದಾಗಿದೆ ಎಂದು ಔಡಿ ಇಂಡಿಯಾದ ಭಾರತದ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಅವರು ಕಂಪನಿಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇ.ವಿ. ಚಾರ್ಜಿಂಗ್ ಮೂಲಸೌಕರ್ಯಕ್ಕೆ 'ಎಂಜಿ ಚಾರ್ಜ್'

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳಿಗೆ (ಇ.ವಿ.) ಚಾರ್ಜಿಂಗ್ ಮೂಲಸೌಕರ್ಯ ಕಲ್ಪಿಸಲು ಎಂಜಿ ಮೋಟರ್ ಇಂಡಿಯಾ ಕಂಪನಿಯು 'ಎಂಜಿ ಚಾರ್ಜ್' ಎನ್ನುವ ಹೊಸ ಕಂಪನಿಯ ಆರಂಭವನ್ನು ಘೋಷಿಸಿದೆ.

ದೇಶದಾದ್ಯಂತ ವಸತಿ ಪ್ರದೇಶಗಳಲ್ಲಿಒಂದು ಸಾವಿರ ದಿನಗಳಲ್ಲಿ ಒಂದು ಸಾವಿರ ಚಾರ್ಜರ್‌ಗಳನ್ನು ಅಳವಡಿಸುವ ಗುರಿಯನ್ನು ಕಂಪನಿ ಇಟ್ಟುಕೊಂಡಿದೆ. ಸದ್ಯ ಮಾರುಕಟ್ಟೆಯಲ್ಲಿ ಇರುವ ಮತ್ತು ಭವಿಷ್ಯದಲ್ಲಿ ಬರಲಿರುವ ವಾಹನಗಳನ್ನು ಚಾರ್ಜ್ ಮಾಡುವ ಸಾಮರ್ಥ್ಯವನ್ನು ಈ ಜಾರ್ಜರ್‌ಗಳು ಹೊಂದಿರಲಿವೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತದಲ್ಲಿ ಇ.ವಿ. ವ್ಯವಸ್ಥೆಯ ವಿಸ್ತರಣೆಗೆ ಕಂಪನಿ ನಿರಂತರವಾಗಿ ಕೆಲಸ ಮಾಡುತ್ತಿದೆ. 'ಎಂಜಿ ಚಾರ್ಜ್'ನಿಂದ ಗ್ರಾಹಕರಿಗೆ ಸುಲಭವಾಗಿ ಚಾರ್ಜಿಂಗ್ ಸೌಲಭ್ಯ ಸಿಗುವಂತೆ ಮಾಡಲಿದ್ದು, ಆ ಮೂಲಕ ವಿದ್ಯುತ್ ಚಾಲಿತ ವಾಹನಗಳನ್ನು ಖರೀದಿಸುವಂತೆ ಉತ್ತೇಜಿಸಲಾಗುವುದು' ಎಂದು ಕಂಪನಿಯ ಭಾರತದ ಅಧ್ಯಕ್ಷ ರಾಜೀವ್ ಛಾಬಾ ಹೇಳಿದ್ದಾರೆ.

ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳೊಂದಿಗೆ (ಆರ್‌ಡಬ್ಲ್ಯುಎ) ಒಪ್ಪಂದ ಮಾಡಿಕೊಂಡು, ಚಾರ್ಜರ್‌ಗಳ ಅಳವಡಿಕೆಗೆ ಅಗತ್ಯವಾದ ಎಲ್ಲ ನೆರವನ್ನು ನೀಡಲಾಗುವುದು ಎಂದು ಕಂಪನಿಯು ತಿಳಿಸಿದೆ.

ಟಾಟಾ ಮೋಟರ್ಸ್‌ನಿಂದ ಸಂಚಾರಿ ಷೋರೂಂ

ಬೆಂಗಳೂರು: ಗ್ರಾಮೀಣ ಪ್ರದೇಶಗಳನ್ನು ಇನ್ನಷ್ಟು ಹೆಚ್ಚಿನ ಪ್ರಮಾಣದಲ್ಲಿ ತಲುಪುವ ಉದ್ದೇಶದಿಂದ, ಗ್ರಾಮೀಣ ಪ್ರದೇಶಗಳ ಜನರಿಗೆ ತಾವಿರುವಲ್ಲೇ ಕಾರು ಖರೀದಿಸುವ ಅವಕಾಶ ದೊರೆಯುವಂತೆ ಆಗಲು 'ಅನುಭವ್' ಎನ್ನುವ ಸಂಚಾರಿ ಷೋರೂಂ ಅನ್ನು ಟಾಟಾ ಮೋಟರ್ಸ್ ಆರಂಭಿಸಿದೆ.

ಗ್ರಾಮೀಣ ಭಾಗಗಳಲ್ಲಿ ಕಂಪನಿಯ ಬ್ರ್ಯಾಂಡ್ ಬಗ್ಗೆ ಜಾಗೃತಿ ಮೂಡಿಸಲು 103 ಸಂಚಾರಿ ಷೋರೂಂಗಳು ಕಾರ್ಯನಿರ್ವಹಿಸಲಿವೆ. ಹೊಸ ಕಾರುಗಳು ಮತ್ತು ಎಸ್‌ಯುವಿಗಳು, ಬಿಡಿಭಾಗಗಳು, ಹಣಕಾಸು ಯೋಜನೆಗಳು, ಟೆಸ್ಟ್‌ಡ್ರೈವ್ ಮತ್ತು ವಿನಿಮಯ ಕುರಿತಾಗಿ ಗ್ರಾಹಕರಿಗೆ ತಿಳಿಸಲು ಆಯಾ ಪ್ರದೇಶಗಳಲ್ಲಿ ಲಭ್ಯ ಇರುವ ವಿತರಕರಿಗೆ ಈ ಸಂಚಾರಿ ಷೋರೂಂಗಳು ನೆರವಾಗಲಿವೆ ಎಂದು ಕಂಪನಿಯು ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಚಿತ್ರದುರ್ಗ	
ಆಪಿ	45219-45629
ಬೆಟ್ಟೆ	36249-36659
ಕೆಂಪುಗೋಟು	30800-31210
ರಾಶಿ	44739-45169
ಕಾರ್ಕಳ	
ಹೊಸತು	40000-44500
ಹಳತು	46000-53000
ಕುಮಟ	
ಚಿಪ್ಪು	22669-32088
ಕೋಕ	12500-28500
ಹಳೆಚಾಲಿ	51500-52500
ಹೊಸಚಾಲಿ	43500-44500
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22699-30769
ಹೊಸಚಾಲಿ	35108-40569
ಕೋಕ	20699-28009
ಕೆಂಪುಗೋಟು	28989-32499
ರಾಶಿ	44519-46889
ತಟ್ಟಿಬೆಟ್ಟೆ	35989-43099
ಶಿರಸಿ	
ಬೆಟ್ಟೆ	35199-45161
ಬಿಳಿಗೋಟು	22099-32900
ಚಾಲಿ	30209-41431
ರಾಶಿ	44519-47499
ಯಲ್ಲಾಪುರ	
ಬಿಳಿಗೋಟು	26811-32899
ಹೊಸಚಾಲಿ	35019-40750
ಹಳೆಚಾಲಿ	46666-46666
ಕೋಕ	18900-29499
ಕೆಂಪುಗೋಟು	28899-35342
ರಾಶಿ	45699-52399
ತಟ್ಟಿಬೆಟ್ಟೆ	38399-45019
ಶಿವಮೊಗ್ಗ	
ಬೆಟ್ಟೆ	47219-52069
ಗೊರಬಲು	18000-34219
ರಾಶಿ	43169-46199
ಸರಕು	52069-76530
ರೇಷ್ಮೆಗೂಡು	
ಮಿಶ್ರ ತಳಿ	400-765
ದ್ವಿತಳಿ	356-950

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15900	15700	15650	229.20 ಸೆಂಟ್ಸ್
ಎಸಿ	7560	7600	7800	
ಆರ್‌ಪಿ	7900	8000	8300	ಲಂಡನ್
ಆರ್‌ಸಿ	4000	3850	3900	2030 ಡಾಲರ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ವಿದ್ಯಾಸಂಸ್ಥೆಗೆ ಲೇಡಿ ವಾರ್ಡನ್ ಬೇಕಾಗಿದ್ದಾರೆ. ಮಂಗಳೂರು ಮೂಲದ ವಿದ್ಯಾಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದವರಿಗೆ ಮೊದಲ ಆದ್ಯತೆ. ಉತ್ತಮ ಸಂಬಳ ನೀಡಲಾಗುವುದು ಸಂಪರ್ಕಿಸಿ : 9591552943/ 9611380290 .

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ SSLC, PUC, Degree ಸಂಬಳ- 15000 to 28000 ಸಂಪರ್ಕಿಸಿರಿ 8904879948/ 8904879491

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002.

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ /ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ot 17800/- 68000/- 8884666597, 8884666594.

ನಮ್ಮ ಕಂಪನಿಯ ಆಯುರ್ವೇದಿಕ್ ಉತ್ಪನ್ನಗಳನ್ನು ಕಾರಿನಲ್ಲಿ ತೆರಳಿ ಪ್ರಮೋಟ್ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ. ಉಚಿತ ವಸತಿಯೊಂದಿಗೆ ದಿನಕ್ಕೆ 900- 1200 ಸಂಪಾದಿಸಲು ಸಂಪರ್ಕಿಸಿ: 8904379634/ 9513670249

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000/- ವರೆಗೆ ಸಂಪಾದಿಸಿ.(ಕೊರಿಯರ್ ಯಿದೆ). 8884686861, 8884686860.

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೆ ಅಣಬೆ ಬೇಸಾಯ, ಕಡಿಮೆ ಜಾಗ ಹಾಗೂ ಕಡಿಮೆ ಖರ್ಚಿನಲ್ಲಿಯೇ ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ. 8431781442/ 8095555516

Wanted

ಶ್ರೀ ಶಕ್ತಿ ಹೆಲ್ತ್ ಕೇರ್ ಯುವಕ-ಯುವತಿಯರು Helper ಕೆಲಸಕ್ಕೆ ಬೇಕಾಗಿದ್ದಾರೆ. ತಿಂಗಳಿಗೆ ವೇತನ 10,000/- ರಿಂದ 12,000 ಊಟ ವಸತಿಯೊಂದಿಗೆ ಕೆಲಸ ಖಾಲಿ ಇದೆ.ಸ್ಥಳ: ಶೇಷಾದ್ರಿಪುರಂ, ಬೆಂಗಳೂರು- 90196 26612

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High end Luxury Flats in Mysore, Zoo Road, near Mysore-Mall, Rera-003588, www.govianu.com. 8103990990

ವ್ಯಾಪಾರ

Business Offers

Finance

COMPANY PROVIDES All Types of Loan Personal, Property, Project & Business. ROI 4% (Per Annum) Required Agents & DSA, 55000/- Salary & 4% Commission: 7495037212

General

ಪ್ರತಿತಿಂಗಳು 65,000/ ರಿಂದ 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್ಸ್, ಟೀಕಪ್ಸ್ ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟಿರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 9958628785

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6 ದಿನಗಳು. 06.04.2022 ರಾಮೇಶ್ವರ, ಕನ್ಯಾಕುಮಾರಿ, ಮದುರೈ,ತಿರುಚೆಂದೂರ್ ಇತ್ಯಾದಿ.13.04.2022 ಮಂತ್ರಾಲಯ, ಶ್ರೀಶೈಲ,ಅಹೋಬಿಲಂ, ನವನರಸಿಂಹ ಇತ್ಯಾದಿ. 25.04.2022 ಶಿರಡಿ, ಪಂಡರಾಪುರ, ಇತ್ಯಾದಿ. 13.02.2022 ಗೋವಾ,ಕಾರವಾರ, ಗೋಕರ್ಣ, ಕೊಲ್ಲೂರು, ಕೇರಳ, ಗುಜರಾತ್, ಮಧ್ಯಪ್ರದೇಶ,ವೈಷ್ಣೋದೇವಿ, ಚಾರ್‌ದಾಮ್. 9448390735

15 ದಿನಗಳ ಕಾಶಿ, ದೆಹಲಿ. 16 ದಿನಗಳ ಕಾಶಿ,ವೈಷ್ಣೋದೇವಿ, ದೆಹಲಿ,ಅಮೃತ್ಸರ್. 17 ದಿನಗಳ ಬದರಿನಾಥ್, ಕೇದಾರನಾಥ್, ಗಂಗೋತ್ರಿ, ಯಮುನೋತ್ರಿ, ಚಾರ್‌ಧಾಮ್ ಮತ್ತು ಜುಲೈ ತಿಂಗಳಲ್ಲಿ ಅಮರನಾಥ್ ಯಾತ್ರೆ ಸಂಪರ್ಕಿಸಿ: ನವಕರ್ನಾಟಕ ಕಿಸಾನ್ ಯಾತ್ರ ಸೇವಾಸಂಘ, ಗಿರಿನಗರ ಬೆಂಗಳೂರು-86. 9916473906, 8861111568

22-03-2022 ಕಾಶಿ, ಪ್ರಯಾಗ್ ರಾಜ್, ಗಯಾ, 21-04-2022 ದೆಹಲಿ, ಆಗ್ರಾ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ,8-5-2022 ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್. 26-6-2022 ಅಮರ್‌ನಾಥ್ ಯಾತ್ರೆ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

13.05.2022 12/16 ದಿನಗಳು ಸಿಮ್ಲಾ,ಕುಲುಮನಾಲಿ, ವೈಷ್ಣೋದೇವಿ,ಸಪ್ತಶಕ್ತಿಪೀಠಗಳು, 17.03.2022 3 ದಿನಗಳು ತಿರುನಲ್ಲಾರು,ನವಗ್ರಹ ದೇವಸ್ಥಾನ ಪ್ರವಾಸ. ಆರ್.ಗಾಂಧಿ ಟೂರ್ಸ್. 9945445809/ 9902433500

ಸುವರ್ಣಯಾತ್ರ, ಪುರಿ, ಜಗನ್ನಾಥ ಟೆಂಪಲ್, ಕೋನಾರ್ಕ್, ಭುವನೇಶ್ವರ ಹಾಗೂ ಇತರೆ - 28-03-2022.ಸಂಪೂರ್ಣ ಗುಜರಾತ್ ಪ್ರವಾಸ ಸೋಮನಾಥ ನಾಗೇಶ್ವರ ಇತರೆ 20-03-2022 ವಿಮಾನದಲ್ಲಿ 9019462508, 8970949434.

ಭವಿಷ್ಯ

Astrology

ಬ್ರಹ್ಮ ಜ್ಞಾನ ಪಂಡಿತ ಶಂಕರ್ ಗುರೂಜಿ ಪ್ರಖ್ಯಾತ ವಾಸ್ತು ಜ್ಯೋತಿಷ್ಯರು ಪ್ರೀತಿಯಲ್ಲಿ ನಂಬಿ ಮೋಸ ಸ್ತ್ರೀ ಪುರುಷ ಗುಪ್ತ ಸಮಸ್ಯೆ ಶತ್ರುಕಾಟ ಆಸ್ತಿಯಲ್ಲಿ ಕಿರಿಕಿರಿ ಪ್ರಯೋಗ ನಿಮ್ಮ ಜೀವನದ ಯಾವುದೇ ಕಠಿಣ ಹಾಗೂ ಗುಪ್ತ ಸಮಸ್ಯೆಗಳಿಗೆ ಸಂಪರ್ಕಿಸಿ 9845167316

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

॥ಉಚಿತ ಭವಿಷ್ಯ॥: *ವಶೀಕರಣ ಸ್ಪೆಷಲಿಸ್ಟ್* ಯಾವುದೇ ಕಠಿಣ ಸಮಸ್ಯೆಗಳಿಗೆ 20 ನಿಮಿಷಗಳಲ್ಲಿ 100% ಪರಿಹಾರ. ಪಂಡಿತ್. ಪವನ್‌ಭಟ್. 8095569819

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

condition apply*

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com

ಮಹಿಳೆಯರ ವಿಶ್ವಕಪ್ ಕ್ರಿಕೆಟ್: ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಎದುರಾಳಿ

ಭಾರತಕ್ಕೆ ಚೊಚ್ಚಲ ಪ್ರಶಸ್ತಿ ಕನಸು

ಮೌಂಟ್ ಮಾಂಗನೂಯಿ: ನಿವೃತ್ತಿಯ ಅಂಚಿನಲ್ಲಿರುವ ಮಿಥಾಲಿ ರಾಜ್ ಅವರು ಭಾರತಕ್ಕೆ ಮೊದಲ ವಿಶ್ವಕಪ್ ಪ್ರಶಸ್ತಿ ಗೆದ್ದುಕೊಡುವ ಹುಮ್ಮಸ್ಸಿನಲ್ಲಿದ್ದಾರೆ. ಶುಕ್ರವಾರ ಆರಂಭವಾಗುವ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಭಾರತವೂ ಒಂದು.

ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಆತಿಥೇಯ ನ್ಯೂಜಿಲೆಂಡ್ ತಂಡ ವೆಸ್ಟ್ ಇಂಡೀಸ್ ವಿರುದ್ಧ ಸೆಣಸಲಿದ್ದು ಭಾರತದ ಮೊದಲ ಪಂದ್ಯ ಭಾನುವಾರ ಪಾಕಿಸ್ತಾನ ವಿರುದ್ಧ ನಡೆಯಲಿದೆ. ಪ್ರಶಸ್ತಿ ಉಳಿಸಿಕೊಳ್ಳಲು ಇಂಗ್ಲೆಂಡ್ ನಾಯಕಿ ಹಿದರ್ ನೈಟ್ ಪ್ರಯತ್ನಿಸಲಿದ್ದು ಆಸ್ಟ್ರೇಲಿಯಾ ತಂಡ ಏಳನೇ ಪ್ರಶಸ್ತಿ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿದೆ.

ಭಾರತ ಕಳೆದ ಬಾರಿ ಮತ್ತು 2005ರಲ್ಲಿ ರನ್ನರ್ ಅಪ್ ಆಗಿತ್ತು. ನ್ಯೂಜಿಲೆಂಡ್ 2000ನೇ ಇಸವಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತ್ತು. ನಾಲ್ಕು ಬಾರಿ ಚಾಂಪಿಯನ್ ಆಗಿರುವ ಇಂಗ್ಲೆಂಡ್ ತನ್ನ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ಎದುರಿಸಲಿದೆ.

ಒಂದು ವರ್ಷ ಮುಂದೂಡಲಾದ ಟೂರ್ನಿಯ ಪಂದ್ಯಗಳು ಆರು ಕ್ರೀಡಾಂಗಣಗಳಲ್ಲಿ ನಡೆಯಲಿವೆ. ಈ ಟೂರ್ನಿಗೆ ಬಯೊಬಬಲ್ ನಿರ್ಬಂಧವಿಲ್ಲ. ಆದರೆ ಆಟಗಾರ್ತಿಯರು 'ನಿರ್ದಿಷ್ಟ ಪ್ರದೇಶ'ಗಳಲ್ಲಿ ಇರಬೇಕು ಎಂದು ಐಸಿಸಿ ಸೂಚಿಸಿದೆ.

ಲೀಗ್ ಮಾದರಿಯಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಎಲ್ಲ ಎಂಟು ತಂಡಗಳು ಒಂದು ಬಾರಿ ಮುಖಾಮುಖಿಯಾಗಲಿವೆ. ಅಗ್ರ ನಾಲ್ಕು ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಮಿಥಾಲಿ ರಾಜ್ –ಟ್ವಿಟರ್ ಚಿತ್ರ

ಜೂಲನ್ ಗೋಸ್ವಾಮಿ

ಪಂದ್ಯಗಳ ಆರಂಭ: ಬೆಳಿಗ್ಗೆ 6.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಿಆರ್‌ಎಸ್ ಸೌಲಭ್ಯ

ವಿಶ್ವಕಪ್ ಟೂರ್ನಿಯಲ್ಲಿ ಈ ಬಾರಿಯೂ ತೀರ್ಪು ಮರುಪರಿಶೀಲನೆ ಸೌಲಭ್ಯ (ಡಿಆರ್‌ಎಸ್) ಇದೆ ಎಂದು ಐಸಿಸಿ ತಿಳಿಸಿದೆ. ಏಪ್ರಿಲ್ ಮೂರರ ವರೆಗೆ ಟೂರ್ನಿ ನಡೆಯಲಿದೆ. 2017ರಲ್ಲಿ ಮೊದಲ ಬಾರಿ ಮಹಿಳಾ ವಿಶ್ವಕಪ್‌ನಲ್ಲಿ ಡಿಆರ್‌ಎಸ್ ಜಾರಿಗೆ ತರಲಾಗಿತ್ತು.

ಟೂರ್ನಿಯಲ್ಲಿ ಪಾಲ್ಗೊಳ್ಳುವ ತಂಡಗಳ ಸಾಧನೆ–ಸಾಮರ್ಥ್ಯ

ಭಾರತ: ಎರಡು ಬಾರಿ ಪ್ರಶಸ್ತಿ ಹಂತದಲ್ಲಿ ನಿರಾಸೆ ಕಂಡಿರುವ ಭಾರತ ಈ ಬಾರಿ ಭಾರಿ ನಿರೀಕ್ಷೆಯಲ್ಲಿದೆ. ಕೊನೆಯ ವಿಶ್ವಕಪ್ ಆಡಲಿರುವ ಮಿಥಾಲಿ ರಾಜ್ ಮತ್ತು ವೇಗದ ಬೌಲರ್ ಜೂಲನ್ ಗೋಸ್ವಾಮಿ ಅವರಿಗಂತೂ ಈ ಟೂರ್ನಿ ಅತಿ ಮಹತ್ವದ್ದು. ನ್ಯೂಜಿಲೆಂಡ್ ವಿರುದ್ಧ ಈಚೆಗೆ ನಡೆದ ಸರಣಿಯಲ್ಲಿ 5–0ಯಿಂದ ಸೋತಿದ್ದರೂ ಅಭ್ಯಾಸ ಪಂದ್ಯಗಳಲ್ಲಿ ಭಾರತ ಉತ್ತಮ ಸಾಧನೆ ಮಾಡಿದೆ.

ಆಸ್ಟ್ರೇಲಿಯಾ: 2017ರ ಸೆಮಿಫೈನಲ್‌ನಲ್ಲಿ ಭಾರತದ ವಿರುದ್ಧ ಸೋತಿದ್ದರೂ ಈಗಲೂ ಆಸ್ಟ್ರೇಲಿಯಾ ಬಲಿಷ್ಠ ತಂಡವಾಗಿಯೇ ಉಳಿದಿದೆ. ಹೀಗಾಗಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದೆನಿಸಿದೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಈ ತಂಡ ಏಕದಿನ ಕ್ರಿಕೆಟ್‌ನಲ್ಲಿ ಮಾಡಿರುವ ಸಾಧನೆ ಅಪಾರ. ಈ ಅವಧಿಯಲ್ಲಿ ಆಡಿರುವ 30 ಪಂದ್ಯಗಳ ಪೈಕಿ ಒಂದರಲ್ಲಿ ಮಾತ್ರ ಸೋತಿದೆ. ಇಂಗ್ಲೆಂಡ್ ವಿರುದ್ಧದ ಸರಣಿಯನ್ನು 3–0ಯಿಂದ ಗೆದ್ದು ಇಲ್ಲಿಗೆ ಬಂದಿದೆ.

ಇಂಗ್ಲೆಂಡ್: ವಿಶ್ವಕಪ್‌ನಲ್ಲಿ ಅತಿ ಹೆಚ್ಚು ಪ್ರಶಸ್ತಿ ಗೆದ್ದಿರುವ ಎರಡನೇ ತಂಡ ಇದು. ಆ್ಯಷಸ್ ಸರಣಿಯಲ್ಲಿ ವೈಟ್ ವಾಷ್‌ಗೆ ಒಳಗಾಗಿದ್ದರೂ ಏಕದಿನ ಕ್ರಿಕೆಟ್‌ನಲ್ಲಿ ಈ ತಂಡದ ಸಾಮರ್ಥ್ಯ ಅಪಾರ. 2019ರಿಂದ ಇಂಗ್ಲೆಂಡ್‌ಗಾಗಿ ಅತಿ ಹೆಚ್ಚು ವಿಕೆಟ್ ಗಳಿಸಿರುವ ಕೇಟ್ ಕ್ರಾಸ್ ಅವರು ವಿಶ್ವಕಪ್‌ನಲ್ಲಿ ಪದಾರ್ಪಣೆ ಮಾಡಲು ಸಜ್ಜಾಗಿದ್ದಾರೆ.

ನ್ಯೂಜಿಲೆಂಡ್: ಈ ದೇಶದಲ್ಲಿ ಮಹಿಳೆಯರ ವಿಶ್ವಕಪ್ ಟೂರ್ನಿ ನಡೆದು ಎರಡು ದಶಕಗಳು ಕಳೆದಿವೆ. ಈ ಬಾರಿ ಟೂರ್ನಿಗೆ ಆತಿಥ್ಯ ವಹಿಸಿರುವ ತಂಡ ಪ್ರಶಸ್ತಿಯನ್ನೂ ಗೆದ್ದು ಸಂಭ್ರಮಿಸುವ ವಿಶ್ವಾಸದಲ್ಲಿದೆ. ಅಭ್ಯಾಸ ಪಂದ್ಯಗಳಲ್ಲಿ ತಂಡ ಅಮೋಘ ಸಾಮರ್ಥ್ಯ ತೋರಿರುವುದರಿಂದ ಈಗ ಭರವಸೆಯ ಅಲೆಯಲ್ಲಿದೆ.

ದಕ್ಷಿಣ ಆಫ್ರಿಕಾ: ವೆಸ್ಟ್ ಇಂಡೀಸ್, ಪಾಕಿಸ್ತಾನ ಮತ್ತು ಭಾರತದ ಎದುರಿನ ಸರಣಿಗಳನ್ನು ಗೆದ್ದುಕೊಂಡಿರುವ ದಕ್ಷಿಣ ಆಫ್ರಿಕಾ ವಿಶ್ವಕಪ್‌ನಲ್ಲಿ ಚೊಚ್ಚಲ ಪ್ರಶಸ್ತಿ ಗೆಲ್ಲುವ ಕನಸು ಕಾಣುತ್ತಿದೆ. 2017ರ ವಿಶ್ವಕಪ್ ನಂತರ ಅತಿಹೆಚ್ಚು ಏಕದಿನ ಪಂದ್ಯಗಳನ್ನು ಆಡಿರುವ ತಂಡ ದಕ್ಷಿಣ ಆಫ್ರಿಕಾ. ಹೀಗಾಗಿ ಅದು ಈಗ ಅನುಭವದಲ್ಲಿ ಶ್ರೀಮಂತವಾಗಿದೆ.

ವೆಸ್ಟ್ ಇಂಡೀಸ್: ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿರುವ ರ‍್ಯಾಂಕಿಂಗ್ ಆಧಾರದಲ್ಲಿ ವೆಸ್ಟ್ ಇಂಡೀಸ್ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸಿದೆ. ಕೋವಿಡ್‌ನಿಂದಾಗಿ ಅರ್ಹತಾ ಪಂದ್ಯಗಳನ್ನು ಅರ್ಧಕ್ಕೆ ಮೊಟಕುಗೊಳಿಸಿರುವುದರಿಂದ ಐಸಿಸಿ ಈ ನಿರ್ಧಾರಕ್ಕೆ ಬಂದಿತ್ತು. ಯುವ ಮತ್ತು ಅನುಭವಿ ಆಟಗಾರ್ತಿಯರನ್ನು ಹೊಂದಿರುವ ತಂಡ ಭರವಸೆಯಲ್ಲಿದೆ.

ಪಾಕಿಸ್ತಾನ: ವಿಶ್ವಕಪ್ ಟೂರ್ನಿಯಲ್ಲಿ ಈ ಹಿಂದೆ ನಾಲ್ಕು ಬಾರಿ ಆಡಿರುವ ಪಾಕಿಸ್ತಾನ ಮೂರು ಬಾರಿ ಪಾಯಿಂಟ್ ಪಟ್ಟಿಯ ಕೊನೆಯಲ್ಲಿತ್ತು. 2009ರಲ್ಲಿ ಐದನೇ ಸ್ಥಾನ ಗಳಿಸಿರುವುದು ಈ ತಂಡದ ಗರಿಷ್ಠ ಸಾಧನೆ. ಈಚೆಗೆ ಮಗುವಿಗೆ ಜನ್ಮ ನೀಡಿರುವ ನಾಯಕಿ ಬಿಸ್ಮಾ ಮರೂಫ್ ತಂಡವನ್ನು ಸೆಮಿಫೈನಲ್ ತಲುಪಿಸುವ ಭರವಸೆಯಲ್ಲಿದ್ದಾರೆ.

ಬಾಂಗ್ಲಾದೇಶ: ಈ ತಂಡಕ್ಕೆ ಇದು ಮೊದಲ ವಿಶ್ವಕಪ್ ಟೂರ್ನಿ. ಈ ತಂಡ ಕೂಡ ಏಕದಿನ ರ‍್ಯಾಂಕಿಂಗ್ ಆಧಾರದಲ್ಲಿ ಮುಖ್ಯ ಸುತ್ತಿಗೆ ಪ್ರವೇಶ ಪಡೆದುಕೊಂಡಿದೆ. ಟೂರ್ನಿಯಲ್ಲಿ ಗಮನಾರ್ಹ ಸಾಧನೆ ಮಾಡುವುದು ತಂಡದ ಉದ್ದೇಶ.

ನಾಯಕ ರೋಹಿತ್‌ಗೆ ಮೊದಲ 'ಟೆಸ್ಟ್'

ಭಾರತಕ್ಕೆ ಕರುಣರತ್ನೆ ಬಳಗದ ಸವಾಲು: ವಿರಾಟ್‌ಗೆ 'ಶತಕ', ಲಂಕೆಗೆ 'ತ್ರಿಶತಕ'

ಪ್ರಜಾವಾಣಿ ವಾರ್ತೆ

ಮೊಹಾಲಿ: ಸಮಕಾಲೀನ ಕ್ರಿಕೆಟ್ ಕ್ಷೇತ್ರದ ಮಹಾನ್ ಸಾಧಕರಲ್ಲಿ ಪ್ರಮುಖರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರಿಗೆ ಶುಕ್ರವಾರ ಶ್ರೀಲಂಕಾ ವಿರುದ್ಧ ಆರಂಭವಾಗಲಿರುವ ಟೆಸ್ಟ್ ಪಂದ್ಯವು ಮೈಲುಗಲ್ಲಾಗಲಿದೆ.

ರೋಹಿತ್ ನಾಯಕರಾಗಿ ಟೆಸ್ಟ್ ತಂಡವನ್ನು ಮುನ್ನಡೆಸುವ ಚೊಚ್ಚಲ ಸವಾಲು ಇದಾಗಲಿದ್ದು, ಕೊಹ್ಲಿಗೆ 100ನೇ ಪಂದ್ಯವಾಗಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ಅತ್ಯಂತ ಯಶಸ್ವಿ ನಾಯಕರಲ್ಲಿ ಒಬ್ಬರಾಗಿರುವ ವಿರಾಟ್ ಹೋದ ತಿಂಗಳು ದಕ್ಷಿಣ ಆಫ್ರಿಕಾ ಟೆಸ್ಟ್ ಸರಣಿ ನಂತರ ನಾಯಕತ್ವ ಬಿಟ್ಟುಕೊಟ್ಟಿದ್ದರು.

ಸೀಮಿತ ಓವರ್‌ಗಳ ತಂಡಗಳ ನಾಯಕರಾಗಿದ್ದ ರೋಹಿತ್ ಅವರಿಗೇ ಟೆಸ್ಟ್ ತಂಡದ ಹೊಣೆಯನ್ನೂ ಬಿಸಿಸಿಐ ನೀಡಿದೆ. ಅಷ್ಟೇನೂ ಬಲಾಢ್ಯವಲ್ಲದ ಲಂಕಾ ತಂಡದ ವಿರುದ್ಧ ಜಯದ ಆರಂಭ ಮಾಡಲು ರೋಹಿತ್‌ಗೆ ಇದು ಉತ್ತಮ ಅವಕಾಶ.

ಆದರೆ, ತಮ್ಮ 'ಶತಕ'ದ ಪಂದ್ಯದಲ್ಲಿ ವಿರಾಟ್ ಮೂರಂಕಿ ಮೊತ್ತ ಗಳಿಸುವರೇ ಎಂಬ ಕುತೂಹಲ ಈಗ ಗರಿಗೆದರಿದೆ. ಏಕೆಂದರೆ, ಕಳೆದ ಎರಡು ವರ್ಷಗಳಿಂದ ಅವರ ಬ್ಯಾಟ್‌ನಿಂದ ಒಂದೂ ಶತಕ ದಾಖಲಾಗಿಲ್ಲ. ನಾಯಕತ್ವದ ಭಾರ ಕಳೆದುಕೊಂಡು ನಿರಾಳರಾಗಿರುವ ಅವರಿಂದ ರನ್‌ಗಳ ಮಳೆ ಸುರಿಯುವ ನಿರೀಕ್ಷೆ ಅಭಿಮಾನಿಗಳಲ್ಲಿದೆ.

ಶುಭಮನ್ ಗಿಲ್‌ಗೆ ಅವಕಾಶ: ಈ ಸರಣಿಯಲ್ಲಿ ಅನುಭವಿ ಟೆಸ್ಟ್ ಪರಿಣತ ಚೇತೇಶ್ವರ್ ಪೂಜಾರ ಮತ್ತು ಅಜಿಂಕ್ಯ ರಹಾನೆಅವರನ್ನುಆಯ್ಕೆಮಾಡಲಾಗಿಲ್ಲ. ಅದರಿಂದಾಗಿ ಮೂರನೇ ಕ್ರಮಾಂಕದಲ್ಲಿ ಶುಭಮನ್ ಗಿಲ್ ಮತ್ತು ಐದನೇ ಕ್ರಮಾಂಕದಲ್ಲಿ ಹನುಮವಿಹಾರಿ ಆಡುವ ಬಗ್ಗೆ ಈಗಾಗಲೇ ರೋಹಿತ್ ತಿಳಿಸಿದ್ದಾರೆ. ಮಯಂಕ್ ಅಗರವಾಲ್ ಮತ್ತು ರೋಹಿತ್ ಇನಿಂಗ್ಸ್ ಆರಂಭಿಸುವರು. ಶ್ರೇಯಸ್ ಅಯ್ಯರ್‌ಗೆ ಸ್ಥಾನ ಸಿಗುವುದು ಅನುಮಾನ. ರಿಷಭ್ ಪಂತ್ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಫಿಟ್ ಆಗಿರುವುದರಿಂದ ಬ್ಯಾಟಿಂಗ್ ಬಲ ಹೆಚ್ಚಿದೆ. ಒಂದೊಮ್ಮೆ ಆರ್. ಅಶ್ವಿನ್ ಕೂಡ ಫಿಟ್ ಆದರೆ, ಮೊಹಾಲಿ ಅಂಗಳದಲ್ಲಿ ಆಫ್‌ಸ್ಪಿನ್ ರಂಗೇರುವುದು ಖಚಿತ. ಈ ಹಿಂದೆಯೂ ಇಲ್ಲಿ ನಡೆದಿದ್ದ ಟೆಸ್ಟ್‌ಗಳಲ್ಲಿ ಅಶ್ವಿನ್ ಮತ್ತು ಜಡೇಜ ಎದುರಾಳಿ ತಂಡಗಳಿಗೆ ದುಃಸ್ವಪ್ನವಾಗಿದ್ದರು.

ಮರಳಿದ ಡಿಕ್ವೆಲಾ: ಬಯೋಬಬಲ್ ನಿಯಮ ಉಲ್ಲಂಘನೆಗಾಗಿ ಒಂದು ವರ್ಷದ ನಿಷೇಧ ಶಿಕ್ಷೆ ಪೂರೈಸಿರುವ ನಿರೋಷನ್ ಡಿಕ್ವೆಲಾ ಲಂಕಾ ತಂಡಕ್ಕೆ ಮರಳಿದ್ದಾರೆ. ಕುಶಾಲ ಮೆಂಡಿಸ್ ಸ್ನಾಯುಸೆಳೆತದ ಸಮಸ್ಯೆಯಿಂದ ಚೇತರಿಸಿಕೊಂಡಿಲ್ಲ. ಆದ್ದರಿಂದ ಕೈಬಿಡಲಾಗಿದೆ ಎಂದು ಲಂಕಾ ತಂಡದ ನಾಯಕ ದಿಮುತ ಕರುಣರತ್ನೆ ತಿಳಿಸಿದ್ದಾರೆ.

'ಆಟಗಾರರು ಉತ್ತಮವಾಗಿ ಸಿದ್ಧತೆ ಮಾಡಿಕೊಂಡಿದ್ದಾರೆ. ಭಾರತ ತಂಡಕ್ಕೆ ಕಠಿಣ ಸವಾಲೊಡ್ಡುವಲ್ಲಿ ಯಶಸ್ವಿಯಾಗುತ್ತೇವೆ' ಎಂದು ದಿಮುತ ವಿಶ್ವಾಸ ವ್ಯಕ್ತಪಡಿಸಿದರು.

ರೋಹಿತ್ ಶರ್ಮಾ

ತಂಡಗಳ ಬಲಾಬಲ	
ಪಂದ್ಯ	44
ಭಾರತ ಜಯ	20
ಶ್ರೀಲಂಕಾ ಜಯ	7
ಡ್ರಾ	17

ಅಂಕಿ ಸಂಖ್ಯೆ: ಎಚ್.ಆರ್. ಗೋಪಾಲಕೃಷ್ಣ

ದಿಮುತ ಕರುಣರತ್ನೆ (ಶ್ರೀಲಂಕಾ ನಾಯಕ ಟೆಸ್ಟ್)	
ಪಂದ್ಯ	74
ಇನಿಂಗ್ಸ್	143
ರನ್	5454
ಶ್ರೇಷ್ಠ	244
ಶತಕ	13
ದ್ವಿಶತಕ	1
ಅರ್ಧಶತಕ	27

ವಿರಾಟ್ ಕೊಹ್ಲಿ (ಟೆಸ್ಟ್ ಸಾಧನೆ)	
ಪಂದ್ಯ	99
ಇನಿಂಗ್ಸ್	168
ರನ್	7962
ಶ್ರೇಷ್ಠ	254
ಶತಕ	27
ದ್ವಿಶತಕ	7
ಅರ್ಧಶತಕ	28

ರೋಹಿತ್ ಶರ್ಮಾ (ಟೆಸ್ಟ್)	
ಪಂದ್ಯ	43
ಇನಿಂಗ್ಸ್	74
ರನ್	3047
ಶ್ರೇಷ್ಠ	212
ಶತಕ	8
ದ್ವಿಶತಕ	1
ಅರ್ಧಶತಕ	14

ವಿರಾಟ್ ಕೊಹ್ಲಿ

ಶ್ರೀಲಂಕಾ ತಂಡಕ್ಕೆ 300ನೇ ಟೆಸ್ಟ್

ಪ್ರವಾಸಿ ಶ್ರೀಲಂಕಾ ತಂಡಕ್ಕೆ ಮೊಹಾಲಿಯ ಪಂದ್ಯವು 300ನೇ ಟೆಸ್ಟ್ ಆಗಿದೆ. 'ಈ ಪಂದ್ಯದಲ್ಲಿ ನಾಯಕತ್ವ ವಹಿಸುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಜಯದೊಂದಿಗೆ ಈ ಪಂದ್ಯವನ್ನು ಅವಿಸ್ಮರಣೀಯ ಗೊಳಿಸಿಕೊಳ್ಳುವುದು ನಮ್ಮ ಗುರಿ' ಎಂದು ಲಂಕಾ ತಂಡದ ನಾಯಕ ದಿಮುತ ಕರುಣರತ್ನೆ ಹೇಳಿದ್ದಾರೆ.

'ವಿರಾಟ್ 100ನೇ ಟೆಸ್ಟ್ ಆಡುತ್ತಿರುವುದು ಸಂತಸದ ವಿಷಯ. ಈ ಸಂದರ್ಭದಲ್ಲಿ ಮೈದಾನಕ್ಕೆ ಪ್ರೇಕ್ಷಕರ ಪ್ರವೇಶಕ್ಕೆ ಬಿಸಿಸಿಐ ಅನುಮತಿ ಕೊಟ್ಟಿರುವುದು ಒಳ್ಳೆಯ ನಿರ್ಧಾರ' ಎಂದು ದಿಮುತ ಹೇಳಿದರು.

ದಿಮುತ ಕರುಣರತ್ನೆ

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಮಯಂಕ್ ಅಗರವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ರಿಷಭ್ ಪಂತ್ (ವಿಕೆಟ್‌ಕೀಪರ್), ಹನುಮವಿಹಾರಿ, ಆರ್. ಅಶ್ವಿನ್, ರವೀಂದ್ರ ಜಡೇಜ, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಜಯಂತ್ ಯಾದವ್, ಶ್ರೇಯಸ್ ಅಯ್ಯರ್, ಕೋನಾ ಭರತ್ (ವಿಕೆಟ್‌ಕೀಪರ್), ಉಮೇಶ್ ಯಾದವ್, ಸೌರಭ್ ಕುಮಾರ್, ಪ್ರಿಯಾಂಕ್ ಪಾಂಚಾಲ್.

ಶ್ರೀಲಂಕಾ: ದಿಮುತ ಕರುಣಾರತ್ನೆ (ನಾಯಕ), ಧನಂಜಯ ಡಿಸಿಲ್ವಾ, ಚರಿತಾ ಅಸ್ಲಾಂಕಾ, ದುಶ್ಮಂತ ಚಾಮೀರಾ, ದಿನೇಶ್ ಚಾಂಡಿಮಲ್, ಏಂಜೆಲೊ ಮ್ಯಾಥ್ಯೂಸ್, ನಿರೋಷನ್ ಡಿಕ್ವೆಲ್ಲಾ, ಲಸಿತ್ ಎಂಬುಲದೆನಿಯಾ, ವಿಶ್ವ ಫರ್ನಾಂಡೊ, ಸುರಾಂಗ ಲಕ್ಮಲ್, ಲಹಿರು ತಿರಿಮನ್ನೆ, ಲಹಿರು ವಾಂಡರ್ಸೆ, ಪ್ರವೀಣ ಜಯವಿಕ್ರಂ, ಚಾಮಿಕಾ ಕರುಣರತ್ನೆ

ಪಂದ್ಯ ಆರಂಭ: ಬೆಳಿಗ್ಗೆ 9.30; ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

'ಟೆಸ್ಟ್ ಯಶಸ್ಸಿನ ಶ್ರೇಯ ಕೊಹ್ಲಿಗೆ ಸಲ್ಲಬೇಕು'

ಮೊಹಾಲಿ (ಪಿಟಿಐ): ಟೆಸ್ಟ್ ಕ್ರಿಕೆಟ್ ತಂಡವಾಗಿ ಭಾರತವು ಉನ್ನತ ಸ್ಥಾನದಲ್ಲಿದೆ. ಇದರ ಶ್ರೇಯ ಸಂಪೂರ್ಣವಾಗಿ ವಿರಾಟ್ ಕೊಹ್ಲಿಗೇ ಸಲ್ಲಬೇಕು ಎಂದು ನಾಯಕ ರೋಹಿತ್ ಶರ್ಮಾ ಹೇಳಿದರು. ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿರಾಟ್ ಮಾಡಿರುವ ಶ್ರೇಷ್ಠ ಕೆಲಸವನ್ನು ಮುಂದುವರಿಸುವ ಪ್ರಯತ್ನ ನನ್ನದು. ಉತ್ತಮ ಆಟಗಾರರನ್ನು ಗುರುತಿಸಿ ತಂಡವನ್ನು ಕಣಕ್ಕಿಳಿಸುವುದೇ ಮುಖ್ಯ ಕೆಲಸ. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಶ್ರೇಯಾಂಕದಲ್ಲಿ ನಾವಿನ್ನೂ ಅಗ್ರಸ್ಥಾನದಲ್ಲಿಲ್ಲ. ಮುಂಬರುವ ಸರಣಿಗಳಲ್ಲಿ ಈ ಸಾಧನೆ ಮಾಡುವ ವಿಶ್ವಾಸವಿದೆ' ಎಂದರು.

'ವಿರಾಟ್ ನಾಯಕತ್ವದಲ್ಲಿ 2018ರಲ್ಲಿ ಆಸ್ಟ್ರೇಲಿಯಾದಲ್ಲಿ ಸರಣಿ ಜಯದ ಸಾಧನೆಯನ್ನು ಮರೆಯಲಾದೀತೇ? ಅದೊಂದು ಐತಿಹಾಸಿಕ ವಿಜಯ.

'ನೂರು ಟೆಸ್ಟ್ ಆಡುತ್ತೇನೆಂದುಕೊಂಡಿರಲಿಲ್ಲ'

ಮೊಹಾಲಿ (ಪಿಟಿಐ): 'ಭಾರತ ತಂಡದಲ್ಲಿ ನೂರು ಟೆಸ್ಟ್ ಪಂದ್ಯಗಳನ್ನು ಆಡುತ್ತೇನೆ ಎಂದು ಅಂದುಕೊಂಡಿರಲಿಲ್ಲ. ಇದೊಂದು ಸುದೀರ್ಘ ಪಯಣ. ಇದಕ್ಕಾಗಿ ಕೃತಜ್ಞನಾಗಿದ್ದೇನೆ' ಎಂದು ವಿರಾಟ್ ಕೊಹ್ಲಿ ಹೇಳಿದ್ದಾರೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ವಿರಾಟ್ ಸಂತಸ ಹಂಚಿಕೊಂಡಿದ್ದಾರೆ.

'ಇದೊಂದು ಸುಸಂದರ್ಭ. ನನ್ನ ಕುಟುಂಬ, ಕೋಚ್‌ಗೆ ಕೃತಜ್ಞ. ಅವರೆಲ್ಲರೂ ಈಗ ನನ್ನ ಬಗ್ಗೆ ಹೆಮ್ಮೆ ಮತ್ತು ಸಂತಸಪಡುತ್ತಿದ್ದಾರೆ' ಎಂದಿದ್ದಾರೆ.

100ರ ಕ್ಲಬ್‌ನಲ್ಲಿರುವ ಭಾರತದ ಆಟಗಾರರು			
ಆಟಗಾರ	ಪಂದ್ಯ	ಸುನಿಲ್ ಗವಾಸ್ಕರ್	125 ಪಂದ್ಯ
ಸಚಿನ್ ತೆಂಡೂಲ್ಕರ್	200 ಪಂದ್ಯ	ದಿಲೀಪ್ ವೆಂಗಸರ್ಕಾರ್	116 ಪಂದ್ಯ
ರಾಹುಲ್ ದ್ರಾವಿಡ್	164 ಪಂದ್ಯ	ಸೌರವ್ ಗಂಗೂಲಿ	113 ಪಂದ್ಯ
ವಿವಿಎಸ್ ಲಕ್ಷ್ಮಣ್	134 ಪಂದ್ಯ	ಇಶಾಂತ್ ಶರ್ಮಾ	105 ಪಂದ್ಯ
ಅನಿಲ್ ಕುಂಬ್ಳೆ	132 ಪಂದ್ಯ	ವೀರೇಂದ್ರ ಸೆಹ್ವಾಗ್	104 ಪಂದ್ಯ
ಕಪಿಲ್ ದೇವ್	131 ಪಂದ್ಯ	ಹರ್ಭಜನ್ ಸಿಂಗ್	103 ಪಂದ್ಯ

ರಣಜಿ ಟ್ರೋಫಿ ಕ್ರಿಕೆಟ್: ಸಿದ್ಧಾರ್ಥ್ ಅಮೋಘ ಬ್ಯಾಟಿಂಗ್

ದೇವದತ್ತ ಚೊಚ್ಚಲ ಶತಕ

ಪ್ರಜಾವಾಣಿ ವಾರ್ತೆ

ಚೆನ್ನೈ: ಇಲ್ಲಿಯ ಎಸ್‌ಎಸ್‌ಎನ್ ಕಾಲೇಜು ಮೈದಾನದಲ್ಲಿ ಗುರುವಾರ ಇಡೀ ದಿನ ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರದ್ದೇ ಪಾರುಪತ್ಯ.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಮೂರನೇ ಪಂದ್ಯದಲ್ಲಿ ಎಡಗೈ ಬ್ಯಾಟರ್ ಚೊಚ್ಚಲ ಶತಕ ದಾಖಲಿಸಿದರು. ಕೆ.ವಿ. ಸಿದ್ಧಾರ್ಥ್ ಜೊತೆಗೆ ದ್ವಿಶತಕದ ಜೊತೆಯಾಟವನ್ನೂ ಆಡಿದರು. ಇದರಿಂದಾಗಿ ಪುದುಚೇರಿ ವಿರುದ್ಧದ ಪಂದ್ಯದ ಮೊದಲ ದಿನವೇ ಕರ್ನಾಟಕವು 90 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 293 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ದೇವದತ್ತ (ಬ್ಯಾಟಿಂಗ್ 161, 277ಎ) ಮತ್ತು ನಾಯಕ ಮನೀಷ್ ಪಾಂಡೆ (ಬ್ಯಾಟಿಂಗ್ 21) ಕ್ರೀಸ್‌ನಲ್ಲಿದ್ದಾರೆ.

ಟಾಸ್ ಗೆದ್ದ ಪುದುಚೇರಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ದಿನದಾಟದ ಆರಂಭದಲ್ಲಿ ಬೌಲರ್‌ಗಳ ಸ್ನೇಹಿಯಂತೆ ಕಂಡ ಪಿಚ್‌ನಲ್ಲಿ ಸಮರ್ಥ್ ಮತ್ತು ದೇವದತ್ತ ತಾಳ್ಮೆಯಿಂದ ಆಡಿದರು. 14 ಓವರ್‌ಗಳಲ್ಲಿ 28 ರನ್‌ಗಳನ್ನು ಮಾತ್ರ ಗಳಿಸಿದರು. ಅಶಿತ್ ಎಸೆತವನ್ನು ಆಡುವ ಭರದಲ್ಲಿ ಸಮರ್ಥ್ ಔಟಾದರು. ಎರಡನೇ ಪಂದ್ಯದಲ್ಲಿ ಶತಕ ಬಾರಿಸಿದ್ದ ಕರುಣ್ ನಾಯರ್ ಕೂಡ ಕಾಲೂರಲು ಅಶಿತ್ ಬಿಡಲಿಲ್ಲ. 19ನೇ ಓವರ್‌ನಲ್ಲಿ ಕರುಣ್ ವಿಕೆಟ್ ಗಳಿಸಿದರು.

ಈ ಹಂತದಲ್ಲಿ ಜೊತೆಗೂಡಿದ ದೇವದತ್ತ ಮತ್ತು ಸಿದ್ಧಾರ್ಥ್ ಇನಿಂಗ್ಸ್‌ನ ಚಿತ್ರಣವನ್ನೇ ಬದಲಿಸಿದರು. ಅವಕಾಶ ಸಿಕ್ಕಾಗ ಬೌಂಡರಿಗಳನ್ನು ಗಳಿಸಿದರು. ಇದರಿಂದಾಗಿ ಸ್ಕೋರ್ ಬೋರ್ಡ್‌ನಲ್ಲಿ ನಿರಂತರವಾಗಿ ರನ್‌ಗಳು ಹರಿದುಬಂದವು. ಮೂರನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 223 ರನ್ ಸೇರಿಸಿದರು. ಅದಕ್ಕಾಗಿ 357 ಎಸೆತಗಳನ್ನು ಆಡಿದರು. ಇದರಲ್ಲಿ ದೇವದತ್ತ ಅವರದ್ದು 132 ರನ್‌ಗಳ ಕಾಣಿಕೆ. ದೇವದತ್ತ ಬ್ಯಾಟಿಂಗ್ ಭರಾಟೆಗೆ ಪುದುಚೇರಿಯ ಬೌಲರ್ ಸಾಗರ್ ಉದೇಶಿ ದುಬಾರಿಯಾದರು. ಅವರ ಬೌಲಿಂಗ್‌ನಲ್ಲಿ ದೇವದತ್ತ 50 ರನ್‌ಗಳನ್ನು ಸೂರೆ ಮಾಡಿದರು.

ಆದರೆ ಸಾಗರ್ ಛಲ ಬಿಡಲಿಲ್ಲ. ಚಹಾ ವಿರಾಮದ ನಂತರ ಸಿದ್ಧಾರ್ಥ್ ವಿಕೆಟ್ ಗಳಿಸಿ ಕೇಕೆ ಹಾಕಿದರು. ಪಾರಸ್ ಡೋಗ್ರಾ ಪಡೆದ ಅಮೋಘ ಕ್ಯಾಚ್‌ಗೆ ಸಿದ್ಧಾರ್ಥ್ ಔಟಾದರು. ಆದರೆ ದೇವದತ್ತ ಅವರ ಆಟಕ್ಕೆ ತಡೆಯೊಡ್ಡಲು ಪುದುಚೇರಿ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಅವರು ಪಾಂಡೆ ಜೊತೆಗೆ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 31 ರನ್ ಗಳಿಸಿದ್ದಾರೆ.

ಕರ್ನಾಟಕದ ದೇವದತ್ತ ಪಡಿಕ್ಕಲ್–ಪ್ರಜಾವಾಣಿ ಸಂಗ್ರಹ ಚಿತ್ರ

ಸ್ಕೋರ್ ಕಾರ್ಡ್

ಕರ್ನಾಟಕ 3ಕ್ಕೆ293 (90 ಓವರ್‌ಗಳಲ್ಲಿ)
ಸಮರ್ಥ್ ಸಿ ಕಾರ್ತಿಕ್ ಬಿ ಅಶಿತ್ 11 (51ಎ, 4X1), ದೇವದತ್ತ ಬ್ಯಾಟಿಂಗ್ 161 (277ಎ, 4X20, 6X2), ಕರುಣ್ ಸಿ ಅರವಿಂದ್ ಬಿ ಅಶಿತ್ 6 (13ಎ), ಸಿದ್ಧಾರ್ಥ್ ಸಿ ಡೋಗ್ರಾ ಬಿ ಉದೇಶಿ 85 (168ಎ, 4X11), ಮನೀಷ್ ಬ್ಯಾಟಿಂಗ್ 21 (33ಎ, 6X1)
ಇತರೆ (ವೈಡ್ 3, ನೋಬಾಲ್ 2, ಬೈ 4) 9
ವಿಕೆಟ್ ಪತನ: 1–28 (ಸಮರ್ಥ್; 14.5), 2–39 (ಕರುಣ್ ನಾಯರ್; 18.4), 3–262 (ಕೆ.ವಿ. ಸಿದ್ಧಾರ್ಥ್; 77.6)
ಬೌಲಿಂಗ್: ಸುಬೋಧ್ ಭಾಟಿ 16–2–61–0, ಸಾಗರ್ ತ್ರಿವೇದಿ 19–5–48–0, ಅಶಿತ್ 15–3–37–2, ಸಾಗರ್ ಉದೇಶಿ 31–4–102–1, ಪವನ್ ದೇಶಪಾಂಡೆ 7–0–33–0, ಡಿ. ರೋಹಿತ್ 2–0–8–0

ಡಿವೈಇಎಸ್, ಮಲ್ಲಸಜ್ಜನ ಜಯಭೇರಿ

ಬೆಂಗಳೂರು: ಮಂಡ್ಯದ ಡಿವೈಇಎಸ್ ವಸತಿ ನಿಲಯ ಮತ್ತು ಧಾರವಾಡದ ಮಲ್ಲಸಜ್ಜನ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳು ಗುರುವಾರ ಇಲ್ಲಿ ಆರಂಭವಾದ ಮಾತೃಕಪ್ ಬ್ಯಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ಕಂಠೀರವ ಕ್ರೀಡಾಂಗಣದಲ್ಲಿ ಆರಂಭವಾದ ಟೂರ್ನಿಯಲ್ಲಿ ಮಂಡ್ಯದ ಡಿವೈಇಎಸ್ ತಂಡವು 36–23ರಿಂದ ದಾವಣಗೆರೆಯ ಮರ್ಚಂಟ್ಸ್ ವಿರುದ್ಧ ಜಯಿಸಿತು.

ಮಂಡ್ಯದ ಮಂದಾರ (18), ದೀಪಶ್ರೀ (10) ಮತ್ತು ದಾವಣಗೆರೆಯ ಸೃಷ್ಟಿ (10) ಮಿಂಚಿದರು.

ಇನ್ನೊಂದು ಪಂದ್ಯದಲ್ಲಿ ಧಾರವಾಡದ ಮಲ್ಲಸಜ್ಜನ ತಂಡವು 60–48 ರಿಂದ ಎಂಎನ್‌ಕೆ ರಾವ್ ಪಾರ್ಕ್ ವಿರುದ್ಧ ಗೆದ್ದಿತು. ಮಲ್ಲಸಜ್ಜನ ತಂಡದ ದೀಪಿಕಾ (21) ಮತ್ತು ಚಂದ್ರಾ (10) ಉತ್ತಮವಾಗಿ ಆಡಿದರು. ಎಂಎನ್‌ಕೆ ತಂಡದ ಸಾಯಿಪರ್ಣ 15 ಅಂಕಗಳನ್ನು ಗಳಿಸಿದರು.

ಇನ್ನುಳಿದ ಪಂದ್ಯಗಳಲ್ಲಿ; ಸದರ್ನ್ ಬ್ಲ್ಯೂಸ್ (ರಮ್ಯಾ 31, ಮಿಹಾ 13) 64–52ರಿಂದ ಪಟ್ಟಾಭಿರಾಮನಗರ (ಮನಸ್ವಿ 10) ವಿರುದ್ಧ; ವಿದ್ಯಾನಗರದ ಡಿವೈಇಎಸ್(ಮಾನಸ 22, ಭೂಮಿಕಾ 19) 54–38ರಿಂದ ಭಾರತ್ ಎಸ್‌ಯು (ಲಾವಣ್ಯ 15, ಸುರಭಿ 13) ವಿರುದ್ಧವೂ; ಮೈಸೂರಿನ ಡಿವೈಇಎಸ್ ಕ್ರೀಡಾ ವಸತಿ ನಿಲಯ (ಯಶಸ್ವಿನಿ 23, ಮೇಘನಾ 19) 59–20 ರಿಂದ ಮೈಸೂರು ಬಿಸಿ (ಚಿನ್ಮಯಾ 8) ವಿರುದ್ಧವೂ; ಮೌಂಟ್ ಕ್ಲಬ್ (ರೋಶನಿ 21, ಕೃತಿಕಾ 20) 53–41ರಿಂದ ಬಿ.ಸಿ. ಕ್ಲಬ್ (ಖುತಿಕಾ 14, ಪ್ರಶಿತಾ 11) ವಿರುದ್ಧ; ಬೀಗಲ್ಸ್ ಬಿಸಿ (ಚಂದನ 12, ಮೇಖಲಾ ಗೌಡ 11) 43–25ರಿಂದ ಐಬಿಬಿಸಿ (ಸುನಯನಾ 9) ವಿರುದ್ಧ; ಜಯಿಸಿತು.

ಶುಕ್ರವಾರ ಪಂದ್ಯಗಳ ಆರಂಭ: ಮಧ್ಯಾಹ್ನ 2.30ರಿಂದ

ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಟೂರ್ನಿಗೆ ಚಾಲನೆ

ಕರ್ನಾಟಕ ತಂಡಗಳ ಶುಭಾರಂಭ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಕರ್ನಾಟಕದ ಪುರುಷ ಹಾಗೂ ಮಹಿಳಾ ತಂಡಗಳು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಹಾಗೂ ಬಾಲ್ ಬ್ಯಾಡ್ಮಿಂಟನ್ ಭಾರತ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಮೊದಲ ದಿನವಾದ ಗುರುವಾರ ಶುಭಾರಂಭ ಮಾಡಿವೆ.

ಪುರುಷರ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಕರ್ನಾಟಕ ತಂಡ ಮಹಾರಾಷ್ಟ್ರ ವಿರುದ್ಧ 35-18, 35-21ರಲ್ಲಿ ಗೆಲುವು ದಾಖಲಿಸಿತು. ಮಹಿಳಾ ವಿಭಾಗದಲ್ಲಿ ಕೂಡ ಮಹಾರಾಷ್ಟ್ರವನ್ನು ಕರ್ನಾಟಕ ತಂಡ 35-14, 35-14 ಅಂತರದಲ್ಲಿ ಜಯ ಗಳಿಸಿತು.

ಪುರುಷರ ವಿಭಾಗದ ಇತರ ಪಂದ್ಯಗಳ ಫಲಿತಾಂಶ: ಭಾರತೀಯ ರೈಲ್ವೆ ತಂಡಕ್ಕೆ ಮುಂಬೈ ವಿರುದ್ಧ 35-13, 35-23ರಲ್ಲಿ, ತಮಿಳುನಾಡು ತಂಡಕ್ಕೆ ಚತ್ತೀಸ್‌ಗಢ ವಿರುದ್ಧ 35-28, 33-17ರಲ್ಲಿ, ತೆಲಂಗಾಣಕ್ಕೆ ಆಂಧ್ರ ಪ್ರದೇಶ ವಿರುದ್ಧ 35-22, 35-22ರಲ್ಲಿ, ಚಂಡೀಗಢಕ್ಕೆ ಅಸ್ಸಾಂ ವಿರುದ್ಧ 35-18, 35-30ರಲ್ಲಿ, ದೆಹಲಿಗೆ ಮಧ್ಯಪ್ರದೇಶ ವಿರುದ್ಧ 35-25, 35-22ರಲ್ಲಿ, ಕೆನರಾ ಬ್ಯಾಂಕ್ ತಂಡಕ್ಕೆ ಜಮ್ಮು ಕಾಶ್ಮೀರ ವಿರುದ್ಧ 35-12, 35-22ರಲ್ಲಿ, ಒಡಿಶಾಗೆ ಉತ್ತರ ಪ್ರದೇಶ ವಿರುದ್ಧ 35-09, 35-15ರಲ್ಲಿ, ರಾಜಸ್ಥಾನಕ್ಕೆ ಪಂಜಾಬ್ ವಿರುದ್ಧ 35-24, 35-29ರಲ್ಲಿ, ಬಿಹಾರಕ್ಕೆ ಹಿಮಾಚಲ ವಿರುದ್ಧ 35-09, 35-25ರಲ್ಲಿ, ಕೆನರಾ ಬ್ಯಾಂಕ್‌ಗೆ ಉತ್ತರ ಪ್ರದೇಶ ವಿರುದ್ಧ 35-08, 35-21ರಲ್ಲಿ ಗೆಲುವು.

ಮಹಿಳಾ ವಿಭಾಗದಲ್ಲಿ ತಮಿಳು ನಾಡು ತಂಡಕ್ಕೆ ರಾಜಸ್ಥಾನ ವಿರುದ್ಧ 35-14, 35-10ರಲ್ಲಿ, ಚತ್ತೀಸ್‌ಗಢಕ್ಕೆ ಬಿಹಾರ ವಿರುದ್ಧ 35-29, 35-32ರಲ್ಲಿ, ಆಂಧ್ರಪ್ರದೇಶಕ್‌ಎ ತೆಲಂಗಾಣ ವಿರುದ್ಧ 35-16, 35-16ರಲ್ಲಿ, ಕೇರಳಕ್ಕೆ ಮಧ್ಯಪ್ರದೇಶದ ವಿರುದ್ಧ 35-09, 35-02ರಲ್ಲಿ, ಪಂಜಾಬ್‌ಗೆ ಉತ್ತರಪ್ರದೇಶ ವಿರುದ್ಧ 35-12, 35-19ರಲ್ಲಿ, ಬಿಹಾರ್‌ಗೆ ರಾಜಸ್ಥಾನ ವಿರುದ್ಧ 35-33, 35-31ರಲ್ಲಿ, ಹರಿಯಾಣಕ್ಕೆ ತ್ರಿಪುರ ವಿರುದ್ಧ 35-27, 35-20ರಲ್ಲಿ, ಮಹಾರಾಷ್ಟ್ರಕ್ಕೆ ತೆಲಂಗಾಣ ವಿರುದ್ಧ 35-29, 35-22ರಲ್ಲಿ, ಪುದುಚೇರಿಗೆ ಚಂಡೀಗಢ ವಿರುದ್ಧ 35-07, 35-15ರಲ್ಲಿ ಜಯ.

ಐಎಸ್‌ಎಲ್: ಸೆಮಿಗೆ ಎಟಿಕೆಎಂಬಿ ತಂಡ

ಫತೋರ್ಡ (ಪಿಟಿಐ): ರಾಯ್ ಕೃಷ್ಣ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಚೆನ್ನೈಯಿನ್ ಎಫ್‌ಸಿಯನ್ನು ಮಣಿಸಿದ ಎಟಿಕೆ ಮೋಹನ್ ಬಾಗನ್ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು. ಗುರುವಾರ ರಾತ್ರಿ ನಡೆದ ಪಂದ್ಯ ದಲ್ಲಿ ಚೆನ್ನೈಯಿನ್ ಎಫ್‌ಸಿಯನ್ನು ಮಣಿಸಿದ ತಂಡ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಜೆಮ್ಶೆಡ್‌ಪುರ ಮತ್ತು ಹೈದರಾಬಾದ್ ಎಫ್‌ಸಿ ತಂಡಗಳ ಜೊತೆ ಅಗ್ರ ಮೂರರಲ್ಲಿ ಸ್ಥಾನ ಗಳಿಸಿತು.

ಶುಕ್ರವಾರ ಜೆಮ್ಶೆಡ್‌ಪುರ ಎಫ್‌ಸಿ ಮತ್ತು ಒಡಿಶಾ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ.

ರಾಯ್ ಕೃಷ್ಣ

ವಿಶ್ವಕಪ್ ಶೂಟಿಂಗ್: ಭಾರತಕ್ಕೆ ಚಿನ್ನ

ಕೈರೊ (ಪಿಟಿಐ): ಶ್ರೀನಿವೇತಾ, ಇಶಾ ಸಿಂಗ್ ಮತ್ತು ರುಚಿತಾ ವೈನರ್ಕರ್ ಅವರಿದ್ದ ಭಾರತ ತಂಡವು ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನ ಮಹಿಳೆಯರ 10 ಮೀಟರ್ಸ್ ಪಿಸ್ತೂಲು ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು. ಪ್ರಶಸ್ತಿ ಸುತ್ತಿನಲ್ಲಿ ಭಾರತ ತಂಡವು 16 ಪಾಟ್ ಗಳಿಸಿತು. ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಒಲಿದ 3ನೇ ಪದಕ ಇದು. 2 ಚಿನ್ನ ಮತ್ತು 1 ಬೆಳ್ಳಿ ಪದಕ ಭಾರತದ ಖಾತೆಯಲ್ಲಿದೆ.

ಜರ್ಮನಿಯ ಆಂದ್ರೆಯಾ ಕ್ಯಾಥರಿನಾ ಹೆಕ್ನರ್, ಸಾಂದ್ರಾ ರೀಜ್ ಮತ್ತು ಕೆರಿನಾ ವಿಮ್ಮರ್ ಅವರ ತಂಡವು ಬೆಳ್ಳಿ ಪದಕ ಪಡೆಯಿತು. ಒಲಿಂಪಿಯನ್ ಸೌರಭ್ ಚೌಧರಿ, ಗೌರವ್ ರಾಣಾ ಮತ್ತು ಉಚಗಣವಿ ಕೇದಾರಲಿಂಗ ಬಾಲಕೃಷ್ಣ ಅವರ ತಂಡವು ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್ ತಂಡ ವಿಭಾಗದಲ್ಲಿ ಕಂಚಿನ ಪದಕ ಕೈತಪ್ಪಿಸಿಕೊಂಡಿತು.

ಹಾಕಿ ಆಟಗಾರ ವಿಲಿಯಂ ನಿಧನ

ಬೆಂಗಳೂರು: ರಾಜ್ಯ ಹಾಕಿ ತಂಡವನ್ನು ಪ್ರತಿನಿಧಿಸಿದ್ದ ವಿಲಿಯಂ ಕನಕರಾಜ್ (83) ಅವರು ಗುರುವಾರ ನಿಧನರಾದರು. 60 ಮತ್ತು 70ರ ದಶಕದಲ್ಲಿ ಕರ್ನಾಟಕ ತಂಡದ ಪ್ರಮುಖ ಆಟಗಾರ ಆಗಿದ್ದ ಅವರು ಎಲ್‌ಆರ್‌ಡಿಇ ತಂಡದಲ್ಲೂ ಆಡಿದ್ದರು. ನಿವೃತ್ತಿ ನಂತರ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

ಡೇವಿಸ್ ಕಪ್: ಭಾರತ–ಡೆನ್ಮಾರ್ಕ್ ಮುಖಾಮುಖಿ ಇಂದು

ರೋಹನ್, ರಾಮ್ ಮೇಲೆ ನಿರೀಕ್ಷೆ

ನವದೆಹಲಿ (ಪಿಟಿಐ): ತವರಿನಂಗಳದ ಲಾಭ ಪಡೆಯುವ ಉತ್ಸಾಹದಲ್ಲಿರುವ ಭಾರತ ತಂಡವು ಶುಕ್ರವಾರ ಆರಂಭವಾಗಲಿರುವ ಡೇವಿಸ್ ಕಪ್ ವಿಶ್ವ ಗುಂಪಿನ ಪ್ಲೇ ಆಫ್ ಪಂದ್ಯದಲ್ಲಿ ಡೆನ್ಮಾರ್ಕ್ ತಂಡವನ್ನು ಎದುರಿಸಲಿದೆ.

ಚೆಂಡು ಕೆಳಮಟ್ಟದಲ್ಲಿ ಪುಟಿದೇಳುವ ಹುಲ್ಲಿನಂಕಣದಲ್ಲಿ ಹಣಾಹಣಿ ನಡೆಯಲಿದೆ. ನಾಯಕ ರೋಹಿತ್ ರಾಜಪಾಲ್ ಬಳಗವು ಡೆನ್ಮಾರ್ಕ್ ತಂಡದ ವಿರುದ್ಧ ಜಯಿಸುವ ವಿಶ್ವಾಸದಲ್ಲಿದೆ. ಪ್ರತಿಭಾವಂತ ಆಟಗಾರ ಯೂಕಿ ಭಾಂಬ್ರಿ ಮರಳಿರುವುದು ತಂಡದ ಬಲ ಹೆಚ್ಚಿದೆ. ಮೊಣಕಾಲಿನ ಗಾಯದಿಂದಾಗಿ ಕಳೆದ ನಾಲ್ಕು ವರ್ಷಗಳಿಂದ ಅವರು ಪಂದ್ಯಗಳನ್ನು ಆಡಿರಲಿಲ್ಲ. ಈ ವರ್ಷ ಅವರು ಕಣಕ್ಕೆ ಮರಳಿದ್ದಾರೆ. ರಾಮಕುಮಾರ್ ರಾಮನಾಥನ್, ಡಬಲ್ಸ್‌ನಲ್ಲಿ ಕನ್ನಡಿಗ ರೋಹನ್ ಬೋಪಣ್ಣ ಮತ್ತು ದಿವಿಜ್ ಶರಣ್ ಅವರ ಮೇಲೆ ನಿರೀಕ್ಷೆಯ ಭಾರವಿದೆ.

ಯೂಕಿ ಭಾಂಬ್ರಿ

'ಕಳೆದ 20 ವರ್ಷಗಳಿಂದ ನಾನು ಡಬಲ್ಸ್ ಪಂದ್ಯಗಳಲ್ಲಿ ಹಲವಾರು ಆಟಗಾರರೊಂದಿಗೆ ಜೊತೆಯಾಗಿ ಆಡಿದ್ದೇನೆ. ಅದರಿಂದಾಗಿ ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳುವುದು ಸುಲಭವಾಗಿದೆ. ಅಲ್ಲದೇ ಉತ್ತಮ ಫಲಿತಾಂಶ ಕೊಡಲು ಇದು ಮುಖ್ಯ' ಎಂದು 41 ವರ್ಷದ ರೋಹನ್ ಹೇಳಿದರು. 1984ರಲ್ಲಿ ಅರ್ಹಾಸ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ ಜಯಿಸಿತ್ತು. ಅದರ ನಂತರ ಇದೇ ಮೊದಲ ಬಾರಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಪ್ರವಾಸಿ ತಂಡದಲ್ಲಿ 824ನೇ ಶ್ರೇಯಾಂಕದ ಕ್ರಿಸ್ಟಿಯನ್ ಸಿಗ್ಸ್‌ಗಾರ್ಡ್ ಮತ್ತು 305ನೇ ಶ್ರೇಯಾಂಕದ ಮಿಕೇಲ್ ಟಾರ್ಪೆಗಾರ್ಡ್ ಭಾರತ ತಂಡಕ್ಕೆ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಇಂದಿನ ಪಂದ್ಯಗಳು

ರಾಮಕುಮಾರ್ ರಾಮನಾಥನ್ ವಿರುದ್ಧ ಕ್ರಿಸ್ಟಿಯನ್ ಸಿಗ್ಸ್‌ಗಾರ್ಡ್; ಯೂಕಿ ಭಾಂಬ್ರಿ ವಿರುದ್ಧ ಮಿಕೈಲ್ ಟಾರ್ಪೆಗಾರ್ಡ್

ಆರಂಭ: ಬೆಳಿಗ್ಗೆ 11

ಶನಿವಾರದ ಪಂದ್ಯಗಳು

ರೋಹನ್ ಬೋಪಣ್ಣ–ದಿವಿಜ್ ಶರಣ್ ವಿರುದ್ಧ ಜೋನಸ್ ಇಂಗಿಲ್ಸ್‌ಬ್‌ನ್–ಫ್ರೆಡರಿಕ್ ನೀಲ್ಸನ್; ರಾಮಕುಮಾರ್ ರಾಮನಾಥನ್ ವಿರುದ್ಧ ಮಿಕೈಲ್ ಟಾರ್ಪೆಗಾರ್ಡ್; ಯೂಕಿ ಭಾಂಬ್ರಿ ವಿರುದ್ಧ ಕ್ರಿಸ್ಟಿಯನ್ ಸಿಗ್ಸ್‌ಗಾರ್ಡ್

ಐತಿಹಾಸಿಕ ಸರಣಿ: ಇಂದಿನಿಂದ ರಾವಲ್ಪಿಂಡಿಯಲ್ಲಿ ಮೊದಲ ಹಣಾಹಣಿ

ಆಸ್ಟ್ರೇಲಿಯಾ–ಪಾಕ್ ಟೆಸ್ಟ್‌ಗೆ ಮಳೆ ಆತಂಕ

ರಾವಲ್ಪಿಂಡಿ (ಎಪಿ): ಶುಕ್ರವಾರದಿಂದ ಐತಿಹಾಸಿಕ ಟೆಸ್ಟ್ ಸರಣಿ ಆಡಲು ಸಿದ್ಧವಾಗಿರುವ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ತಂಡಗಳನ್ನು ಈಗ ಗಾಯದ ಸಮಸ್ಯೆ, ಕೋವಿಡ್ ಪ್ರಕರಣಗಳು ಮತ್ತು ಹವಾಮಾನ ವೈಪರಿತ್ಯ ಕಾಡುತ್ತಿವೆ.

ಪಾಕಿಸ್ತಾನ ತಂಡದಲ್ಲಿ ವೇಗಿ ಹ್ಯಾರಿಸ್ ರವೂಫ್ ಮತ್ತು ಆಸ್ಟ್ರೇಲಿಯಾ ತಂಡದ ಸ್ಪಿನ್ ಬೌಲಿಂಗ್ ಸಲಹೆಗಾರ ಫವಾದ್ ಅಹಮದ್ ಅವರಿಗೆ ಕೋವಿಡ್ ಖಚಿತವಾಗಿದೆ. ಮುಂದಿನ ಐದು ದಿನಗಳವರೆಗೆ ಅವರು ಪ್ರತ್ಯೇಕವಾಸದಲ್ಲಿರುವರು.

ಪಾಕ್ ತಂಡದ ವೇಗಿ ಹಸನ್ ಅಲಿ ಮತ್ತು ಆಲ್‌ರೌಂಡರ್ ಫಾಹೀಮ್ ಅಶ್ರಫ್ ಈಚೆಗೆ ಪಾಕಿಸ್ತಾನ್ ಸೂಪರ್ ಲೀಗ್ ಟೂರ್ನಿಯಲ್ಲಿ ಗಾಯಗೊಂಡಿದ್ದರು. ಆದ್ದರಿಂದ ಟೆಸ್ಟ್‌ಗೆ ಅಲಭ್ಯರಾಗಿದ್ದಾರೆ.

ಬಾಬರ್ ಆಜಂ ಮತ್ತು ಪ್ಯಾಟ್ ಕಮಿನ್ಸ್ ಸರಣಿಯ ಟ್ರೋಫಿ ಬಿಡುಗಡೆ ಮಾಡಿದರು –ಎಎಫ್‌ಪಿ ಚಿತ್ರ

ಗುರುವಾರ ರಾವಲ್ಪಿಂಡಿಯಲ್ಲಿ ಮಳೆ ಸುರಿದ ಕಾರಣ ಉಭಯ ತಂಡಗಳ ಆಟಗಾರರು ಹೋಟೆಲ್‌ನಿಂದ ಹೊರ ಬೀಳಲಿಲ್ಲ.

ಪಂದ್ಯ ಕೊನೆಯ ಮೂರು ದಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯ ಮೂಲಗಳು ತಿಳಿಸಿವೆ. ಇದರಿಂದಾಗಿ ಪಂದ್ಯವು ಸುಸೂತ್ರವಾಗಿ ನಡೆಯುವುದು ಅನುಮಾನ ಎನ್ನಲಾಗಿದೆ.

1998ರ ನಂತರ ಆಸ್ಟ್ರೇಲಿಯಾ ಇದೇ ಮೊದಲ ಸಲ ಪಾಕಿಸ್ತಾನಕ್ಕೆ ಸರಣಿ ಆಡಲು ಬಂದಿಳಿದಿದೆ. ಭಾನುವಾರ ಇಲ್ಲಿಯ ಪಿಂಡಿ ಕ್ರಿಕೆಟ್ ಮೈದಾನದಲ್ಲಿ ಅಭ್ಯಾಸ ನಡೆಸಿತ್ತು.

'ಇಲ್ಲಿಯ ಪಿಚ್ ವೇಗಿಗಳಿಗೆ ಹೆಚ್ಚು ನೆರವು ನೀಡುವಂತೆ ಕಾಣುತ್ತಿಲ್ಲ. ಆದ್ದರಿಂದ ಇಬ್ಬರು ಸ್ಪಿನ್ನರ್‌ಗಳನ್ನು ಆಡಿಸುವುದು ಸೂಕ್ತವೆನಿಸುತ್ತಿದೆ. ಪಂದ್ಯ ಆರಂಭದ ದಿನದ ಬೆಳಿಗ್ಗೆ ನಿರ್ಧರಿಸಲಾಗುವುದು' ಎಂದು ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿದ್ದಾರೆ. ಈ ಸರಣಿಗೆ ಬೆನೊ–ಖಾದಿರ್ ಟ್ರೋಫಿ ಕ್ರಿಕೆಟ್ ಟೂರ್ನಿ ಎಂದು ಹೆಸರಿಸಲಾಗಿದೆ.

'ನಮ್ಮ ತಂಡದಲ್ಲಿರುವ ಅಜರ್, ಫವಾದ್ ಮತ್ತು ರಿಜ್ವಾನ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಆಸ್ಟ್ರೇಲಿಯಾ ತಂಡದ ಬೌಲಿಂಗ್ ಪಡೆಗೆ ದಿಟ್ಟ ಉತ್ತರ ನೀಡುವ ವಿಶ್ವಾಸವಿದೆ' ಎಂದು ನಾಯಕ ಬಾಬರ್ ಆಜಂ ಹೇಳಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 10.30
ನೇರಪ್ರಸಾರ: ಸೋನಿ ನೆಟ್‌ವರ್ಕ್

ಉಕ್ರೇನ್ ಮೇಲೆ ಆಕ್ರಮಣಕ್ಕೆ ಅಸಮಾಧಾನ; ರೇಸ್ ವಾಹನ ಚಾಲಕರಿಂದಲೂ ಆಕ್ರೋಶ

ಗ್ರ್ಯಾನ್‌ಪ್ರಿ: ರಷ್ಯಾ ಆತಿಥ್ಯಕ್ಕೆ ಕೊಕ್

ಪ್ಯಾರಿಸ್ (ಎಎಫ್‌ಪಿ): ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾದಲ್ಲಿ ಗ್ರ್ಯಾನ್ ಪ್ರಿ ಆಯೋಜಿಸದೇ ಇರಲು ಫಾರ್ಮುಲಾ ಒನ್ ನಿರ್ಧರಿಸಿದೆ. ಆಯೋಜಕರಿಂದ ಒಪ್ಪಂದವನ್ನು ವಾಪಸ್ ಪಡೆದುಕೊಳ್ಳಲಾಗಿದ್ದು ಇನ್ನು ಮುಂದೆ ಆ ದೇಶದಲ್ಲಿ ಚಾಂಪಿಯನ್‌ಷಿಪ್ ಇರುವುದಿಲ್ಲ ಎಂದು ಗುರುವಾರ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

2014ರಲ್ಲಿ ರಷ್ಯಾದಲ್ಲಿ ಮೊದಲ ಗ್ರ್ಯಾನ್ ಪ್ರಿ ಆಯೋಜಿಸಲಾಗಿತ್ತು. ಅಂದಿನಿಂದ ಈ ವರೆಗೆ ಸೋಚಿಯ ಬ್ಲ್ಯಾಕ್ ಸೀ ರೆಸಾರ್ಟ್ ಆವರಣದಲ್ಲಿ ರೇಸ್ ನಡೆಯುತ್ತಿತ್ತು. 2023ರ ಸ್ಪರ್ಧೆ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆಸಲು ನಿರ್ಧರಿಸಲಾಗಿತ್ತು. ಚಾಲಕರ ಸಮ್ಮತಿ ಇಲ್ಲದ ಕಾರಣ ಈ ವರ್ಷ ಸ್ಪರ್ಧೆಯನ್ನು ಫಾರ್ಮುಲಾ ಒನ್ ಈಗಾಗಲೇ ರದ್ದು ಮಾಡಿತ್ತು.

ಹಾಲಿ ಚಾಂಪಿಯನ್ ಮ್ಯಾಕ್ಸ್ ವರ್ಸ್ಟಾಪನ್ ಮತ್ತು ನಾಲ್ಕು ಬಾರಿಯ ಚಾಂಪಿಯನ್ ಸೆಬಾಸ್ಟಿಯನ್ ವೆಟೆಲ್ ಅವರು ರೇಸ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಎಂದು ಈಗಾಗಲೇ ತಿಳಿಸಿದ್ದಾರೆ.

ಸೋಚಿಯಲ್ಲಿ 2021ರಲ್ಲಿ ನಡೆದ ರಷ್ಯನ್ ಗ್ರ್ಯಾನ್‌ಪ್ರಿಯ ಅಭ್ಯಾಸದ ವೇಳೆ ವಾಹನಗಳು ಮುನ್ನುಗ್ಗಿದ ಪರಿ –ಎಎಫ್‌ಪಿ ಚಿತ್ರ

‘ನನ್ನ ವೈಯಕ್ತಿಕ ಅಭಿಪ್ರಾಯವೇನೆಂದರೆ ನಾನು ಅಲ್ಲಿಗೆ ಹೋಗುವುದು ಮತ್ತು ಆ ದೇಶದಲ್ಲಿ ರೇಸ್‌ನಲ್ಲಿ ಪಾಲ್ಗೊಳ್ಳುವುದು ಸರಿಯೇ ಅಲ್ಲ’ ಎಂದು ಜರ್ಮನಿಯ ಸೆಬಾಸ್ಟಿಯನ್ ವೆಟೆಲ್ ಹೇಳಿದ್ದಾರೆ.

ರಷ್ಯಾದಲ್ಲಿ ರೇಸ್ ಆಯೋಜಿಸಲು ಪ್ರಮುಖ ಕಾರಣರಾದ ಮಾಜಿ ಫಾರ್ಮುಲಾ ಒನ್ ಮುಖ್ಯಸ್ಥ ಬರ್ನಿ ಎಕ್ಲೆಸ್ಟೋನ್ ಅವರು ಈ ತೀರ್ಮಾನದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ’ರಷ್ಯಾದಲ್ಲಿ ಯುದ್ಧ ನಡೆಯುತ್ತಿಲ್ಲ. ಆದ್ದರಿಂದ ಅಲ್ಲಿ ಸ್ಪರ್ಧೆಗಳನ್ನು ಆಯೋಜಿಸಿದರೆ ಯಾವುದೇ ತೊಂದರೆ ಇಲ್ಲ. ಹೀಗಿರುವಾಗ ರದ್ದು ಮಾಡಲು ನಿರ್ಧರಿಸಿರುವುದು ತಿಳಿಗೇಡಿತನ’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

‘ರಷ್ಯಾಗೆ ಈ ರೀತಿಯಲ್ಲಿ ಬುದ್ಧಿ ಕಲಿಸಲು ಪ್ರಯತ್ನಿಸಿದರೆ ಅದು ವಿಫಲ ಯತ್ನ. ಯಾಕೆಂದರೆ ರಷ್ಯಾ ಅಧ್ಯಕ್ಷರು ರೇಸ್ ಬಗ್ಗೆ ತಲೆಕೆಡಿಸಿಕೊಳ್ಳುವುದೇ ಇಲ್ಲ’ ಎಂದು ಅವರು ಹೇಳಿದ್ದಾರೆ.

ರಷ್ಯಾ ಚಾಲಕರಿಗೂ ಸಂಕಟ?: ಫಾರ್ಮುಲಾ ಒನ್ ರೇಸ್‌ನಲ್ಲಿ ಪಾಲ್ಗೊಳ್ಳುವ ರಷ್ಯಾದ ಚಾಲಕರಿಗೂ ಭವಿಷ್ಯದಲ್ಲಿ ಸಂಕಟ ಕಾದಿದೆ ಎನ್ನಲಾಗಿದೆ. ಅಮೆರಿಕದ ತಂಡ ಹಾಸ್‌ನ ರಷ್ಯಾ ಚಾಲಕ ನಿಕಿತಾ ಮಜೆಪಿನ್ ಮತ್ತು ಪ್ರಶಸ್ತಿಯ ಪ್ರಾಯೋಜಕರಾದ ಉರಲ್ಕಲಿ ಸಂಸ್ಥೆಯ ಮೇಲೆ ಕೆಂಗಣ್ಣು ಬೀಳುವ ಸಾಧ್ಯತೆ ಇದೆ. ಉರಲ್ಕಲಿ ಸಂಸ್ಥೆಯ ನಿರ್ದೇಶಕರಲ್ಲಿ ಒಬ್ಬರಾದ ಡಿಮಿಟ್ರಿ ಮಜೆಪಿನ್ ಅವರು ನಿಕಿಟಾ ಅವರ ತಂದೆ.

ರಷ್ಯಾದ ಧ್ವಜವನ್ನು ಪ್ರದರ್ಶಿಸದೇ ಮತ್ತು ಅಲ್ಲಿನ ರಾಷ್ಟ್ರಗೀತೆಯನ್ನು ಮೊಳಗಿಸದೇ ನಿಕಿತಾ ಮಜೆಪಿನ್‌ಗೆ ಪಾಲ್ಗೊಳ್ಳಲು ಅವಕಾಶ ಸಿಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಚಾಂಪಿಯನ್ಸ್ ಲೀಗ್ ಫೈನಲ್ ಪಂದ್ಯವನ್ನು ಸೇಂಟ್ ಪೀಟರ್ಸ್‌ಬರ್ಗ್‌ನಿಂದ ಬೇರೆ ದೇಶಕ್ಕೆ ವರ್ಗಾಯಿಸಲು ಯುರೋಪ್ ಫುಟ್‌ಬಾಲ್ ಫೆಡರೇಷನ್ ಈಗಾಗಲೇ ನಿರ್ಧರಿಸಿದೆ.

ಉಕ್ರೇನ್ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷ ವಲೇರಿ ಶುಸ್ಕೆವಿಚ್ (ಎಡ) ಅವರು ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷ ಆ್ಯಂಡ್ರ್ಯೂ ಪಾರ್ಸನ್ಸ್ ಅವರೊಂದಿಗೆ ಗುರುವಾರ ಮಾತುಕತೆ ನಡೆಸಿದರು –ಎಎಫ್‌ಪಿ ಚಿತ್ರ

ರಷ್ಯಾ, ಬೆಲಾರಸ್‌ಗೆ ನಿಷೇಧ

ಬೀಜಿಂಗ್ (ರಾಯಿಟರ್ಸ್): ಶುಕ್ರವಾರದಿಂದ ಇದೇ ತಿಂಗಳ 13ರ ವರೆಗೆ ನಡೆಯಲಿರುವ ಚಳಿಗಾಲದ ಪ್ಯಾರಾಲಿಂಪಿಕ್ಸ್‌ನಲ್ಲಿ ರಷ್ಯಾ ಮತ್ತು ಬೆಲಾರಸ್ ಅಥ್ಲೀಟ್‌ಗಳಿಗೆ ನಿಷೇಧ ಹೇರಲಾಗಿದೆ. ಉಕ್ರೇನ್ ಮೇಲೆ ಆಕ್ರಮಣ ಮಾಡಿರುವುದಕ್ಕೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (ಐಪಿಸಿ) ತಿಳಿಸಿದೆ.

ಉಕ್ರೇನ್ ಮೇಲೆ ನಡೆಯುತ್ತಿರುವ ಆಕ್ರಮಣಕ್ಕೆ ಬೆಲಾರಸ್ ಪೂರ್ಣಪ್ರಮಾಣದಲ್ಲಿ ಬೆಂಬಲ ನೀಡಿದೆ. ಆದ್ದರಿಂದ ಅಲ್ಲಿನ ಕ್ರೀಡಾಪಟುಗಳಿಗೂ ಅವಕಾಶ ನಿರಾಕರಿಸಲಾಗಿದೆ ಎಂದು ತಿಳಿಸಲಾಗಿದೆ. ಈ ಎರಡು ದೇಶಗಳಿಗೆ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಐಪಿಸಿ ಬುಧವಾರ ಅವಕಾಶ ನೀಡಿತ್ತು. ಕ್ರೀಡಾಪಟುಗಳು ಆಕ್ರಮಣಕಾರಿಗಳಲ್ಲ ಎಂದು ಅದು ಅಭಿಪ್ರಾಯಪಟ್ಟಿತ್ತು.

‘ಇತರ ದೇಶಗಳ ರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿಗಳು ಐಪಿಸಿ ನಿರ್ಧಾರವನ್ನು ವಿರೋಧಿಸಿ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳದೇ ಇರುವುದಾಗಿ ಹೇಳಿದ್ದವು. ಹೀಗಾಗಿ ಎರಡು ದೇಶಗಳಿಗೆ ಅವಕಾಶ ನೀಡದೇ ಇರಲು ತೀರ್ಮಾನಿಸಲಾಯಿತು’ ಎಂದು ಐಪಿಸಿ ಅಧ್ಯಕ್ಷ ಆ್ಯಂಡ್ರ್ಯೂ ಪಾರ್ಸನ್ಸ್ ಹೇಳಿದ್ದಾರೆ.

ಅಂಧ ಮಹಿಳೆಯರ ಕ್ರಿಕೆಟ್: ಸೆಮಿಫೈನಲ್‌ಗೆ ಕರ್ನಾಟಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹ್ಯಾಟ್ರಿಕ್‌ಗೆಲುವಿನೊಂದಿಗೆ ಕರ್ನಾಟಕ ತಂಡ ಇಂಡಸ್ ಬ್ಯಾಂಕ್ ಆಯೋಜಿಸಿರುವ ಅಂಧ ಮಹಿಳೆಯರ ರಾಷ್ಟ್ರೀಯ ಚುಟುಕು ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದೆ.

ನಗರದ ನಿರ್ಮಾಣ್ ಕ್ರಿಕೆಟ್ ಅಕಾಡೆಮಿ ಮೈದಾನದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಕೇರಳವನ್ನು ಕರ್ನಾಟಕ 10 ವಿಕೆಟ್‌ಗಳಿಂದ ಮಣಿಸಿತು. ನಾಲ್ಕರ ಘಟ್ಟದ ಪಂದ್ಯದಲ್ಲಿ ಆತಿಥೇಯರು ಆಂಧ್ರವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಒಡಿಶಾ ಮತ್ತು ದೆಹಲಿ ತಂಡಗಳು ಮುಖಾಮುಖಿಯಾಗಲಿವೆ.

ಸಂಕ್ಷಿಪ್ತ ಸ್ಕೋರು: ಕೇರಳ ಮಹಿಳೆಯರು: 15 ಓವರ್‌ಗಳಲ್ಲಿ 7ಕ್ಕೆ 52 (ಜಮ್ಮೀಲಾ 15, ದೀಪಿಕಾ 2ಕ್ಕೆ1); ಕರ್ನಾಟಕ ಮಹಿಳೆಯರು: 4.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 52 (ಗಂಗಾ ಔಟಾಗದೆ 35, ದೀಪಿಕಾ 17).